005.1
9237

ಪ್ರಕಾಶಕರು :
ಮನೋಹರ ಘಾಣೇಕರ, ಬಿ. ಎ., ಬಿ. ಕಾಂ.
ಸಮಾಜ ಪುಸ್ತಕಾಲಯ, ಧಾರವಾಡ

ಪ್ರಥಮ ಮುದ್ರಣ : ೧೯೪೭
ಸಮಾಜ ಪುಸ್ತಕಾಲಯದಿಂದ
ಹೊಸ ಸಂಸ್ಕರಣ : ೧೯೭೨

005.1
9237

© ಜಿ. ಪಿ. ಹಳಕಟ್ಟಿ

ಬೆಲೆ : ೪.೫೦ ( ಉತ್ತಮ ಪ್ರತಿ ರೂ. ೬.೦೦ )

ಮುದ್ರಕರು :
ರವೀಂದ್ರ ಘಾಣೇಕರ, ಬಿ. ಎ., ಎಲ್. ಪಿ. ಟಿ.
ಪ್ರತಿಭಾ ಮುದ್ರಣ, ಧಾರವಾಡ

# ಪ್ರಥಮ ಮುದ್ರಣದ ಪ್ರಸ್ತಾವನೆ

ನಾವು ಈಗ ‘ ಶಿವಾನುಭವ ಶಬ್ದಕೋಶ ’ ಎಂಬ ಹೆಸರಿನ ಈ ಗ್ರಂಥವನ್ನು ಸಿದ್ಧಗೊಳಿಸಿ ವಾಚಕರೆದುರಿಗೆ ಇಟ್ಟದ್ದೇವೆ. ಶಿವಾನುಭವ ಶಾಸ್ತ್ರದಲ್ಲಿ ಉಪಯೋಗಿಸಲ್ಪಡುವ ಶಬ್ದಗಳ ಅರ್ಥವನ್ನು ಸಂಕ್ಷಿಪ್ತವಾಗಿ ಬರೆಯುವುದೇ ನಮ್ಮ ಉದ್ದೇಶವಾಗಿರುತ್ತದೆ. ವಚನಕಾರರು ಕೆಲವೊಂದು ವಿಷಯವನ್ನು ತೆಗೆದುಕೊಂಡು ಕ್ರಮಯುಕ್ತವಾಗಿ ಅದನ್ನು ನಿರೂಪಿಸುತ್ತ ಹೋಗುವುದಿಲ್ಲ. ಅವರ ವಚನಗಳು ಅವರಿಗೆ ಸ್ಫೂರ್ತಿಯುಂಟಾದಾಗ ಬರೆದವುಗಳಿರುತ್ತವೆ. ಆದ್ದರಿಂದ ಅವರು ವಿವೇಚಿಸುವ ವಿಷಯಗಳ ಮುಖ್ಯ ಭಾವವು ವಾಚಕರಿಗೆ ತಿಳಿದಿರುತ್ತದೆಂದು ಭಾವಿಸಿ ಅವರು ಅವುಗಳನ್ನು ರಚಿಸುವುದುಂಟು. ಆದರೆ ಈಗಿನ ಕಾಲದಲ್ಲಿ ವಚನಕಾರರ ಅಭಿಪ್ರಾಯಗಳು ಬಹು ಜನರಿಗೆ ಅಪರಿಚಿತವಿರುತ್ತವೆ. ಆದಕಾರಣ ವಚನಗಳ ಅರ್ಥವು ಅವರಿಗೆ ಸರಿಯಾಗಿ ಆಗುವುದಿಲ್ಲ. ವಚನಗಳ ಅರ್ಥವು ತಮಗೆ ತಿಳಿಯುವುದಿಲ್ಲೆಂಬ ಆಕ್ಷೇಪಗಳು ಯಾವಾಗಲೂ ಮಾಡಲ್ಪಡುತ್ತಿರುವುದರಿಂದ ಇಂಥವರಿಗೆ ಉಪಯೋಗವಾಗಬೇಕೆಂದು ನಾವು ಈ ಗ್ರಂಥವನ್ನು ಸಿದ್ಧಪಡಿಸಿದ್ದೇವೆ.

ವೀರಶೈವ ಮತವು ಕೆಲವೊಂದು ವಿಶಿಷ್ಟ ಸ್ವರೂಪವನ್ನು ಹೊಂದಿರುತ್ತದೆ. ಅದಕ್ಕೆ ‘ ಶಿವಾನುಭವ ಶಾಸ್ತ್ರ ’ ಅಥವಾ ‘ಷಟ್‌ಸ್ಥಲ ಸಿದ್ಧಾಂತ’ ಎಂಬ ಹೆಸರು ಬಂದಿದೆ. ಅದು ಆಗಂತುಕವಾಗಿ ಉಂಟಾದ ಧರ್ಮವಲ್ಲ. ಅನೇಕ ವಿದ್ವಾಂಸರು ಮತ್ತು ಶಿವಾನುಭವಿಗಳು ಅದರ ಸಲುವಾಗಿ ದುಡಿದಿರುತ್ತಾರೆ. ಆದ್ದರಿಂದ ಅದರಲ್ಲಿ ಅನೇಕ ಅಂಗೋಪಾಂಗಗಳುಂಟಾಗಿ ಅದು ಒಂದು ವಿಶಿಷ್ಟ ಧರ್ಮ ಮತ್ತು ವಾಙ್ಮಯದ ಸ್ವರೂಪವನ್ನು ಹೊಂದಿದೆ. ಇದರಲ್ಲಿ ವಿಶಿಷ್ಟಾರ್ಥವುಳ್ಳ ಅಸಂಖ್ಯ ಶಬ್ದಗಳು ಬಂದಿರುತ್ತವೆ. ಆದರೆ ಈಚೆಗೆ ಈ ಶಾಸ್ತ್ರದ ಅಭ್ಯಾಸವು ನಿಂತು ಹೋಗಿರುವುದರಿಂದ ಈ

[illegible]



ಉತ್ತರಾರ್ಧ ಇವುಗಳೇ ಇರುತ್ತವೆ. ಇವುಗಳಲ್ಲಿ ೨ನೇ ಭಾಗದಲ್ಲಿ ಷಟ್‌ಸ್ಥಲಸಿದ್ಧಾಂತದ ಮಹತ್ವದ ಮೂಲ ವಚನ ಗ್ರಂಥಗಳಿವೆ. ೩ನೇ ಭಾಗದ ಪೂರ್ವಾರ್ಧದಲ್ಲಿ ಗುರು, ಲಿಂಗ, ಜಂಗಮಗಳ ವಿವೇಚನೆಯು ಇದೆ. ಇದರ ಉತ್ತರ ಭಾಗದಲ್ಲಿ ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳ ನಿರೂಪಣೆ ಇದೆ. ಈ ಭಾಗವು ಇನ್ನೂ ಪ್ರಕಟವಾಗಿಲ್ಲ. ಈ ಗ್ರಂಥಗಳ ಮರ್ಮಗಳನ್ನು ತಿಳಿಯಲಪೇಕ್ಷಿಸುವವರು ಈ ಶಿವಾನುಭವ ಶಬ್ದಕೋಶವನ್ನು ಮೊದಲು ಓದಿನೋಡತಕ್ಕದ್ದು. ಆಮೇಲೆ ಬೇರೆ ಬೇರೆ ವಿಷಯಗಳ ವಿಸ್ತೃತ ಭಾವವನ್ನು ಆ ಮೂಲ ಗ್ರಂಥಗಳಲ್ಲಿಯೇ ತಿಳಿದುಕೊಳ್ಳತಕ್ಕದ್ದು. ಅಂದರೆ ಈಗಿನ ಗ್ರಂಥವು ವಚನಶಾಸ್ತ್ರಸಾರದ ಭಾಗಗಳನ್ನು ತಿಳಿಯಲು ಒಂದು ಕೈಪಿಡಿಯೆಂದು ಭಾವಿಸಿ ವಾಚಕರು ಇದರ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ.

ಪುಸ್ತಕದ ಆರಂಭದಲ್ಲಿ ನಾವು ವಿಷಯಾನುಕ್ರಮಣಿಕೆಯನ್ನು ಕೊಟ್ಟಿದ್ದೇವೆ. ಅದು ಅತ್ಯಂತ ಸಾಮಾನ್ಯ ಸ್ವರೂಪದ್ದಿದೆ. ಆದರ ಸಹಾಯದಿಂದ ವಾಚಕರು ಕೆಲವೊಂದು ವಿಷಯವನ್ನು ತೆಗೆದುಕೊಂಡು ಮೊದಲು ಓದತ-ಕ್ಕದ್ದು. ಓದುತ್ತ ಹೋಗುವಲ್ಲಿ ಆದಕ್ಕೆ ಸಂಬಂಧಿಸಿದ ಬೇರೆ ವಿಷಯಗಳನ್ನು ಅವರು ತಿಳಿಯಲಪೇಕ್ಷಿಸಿದರೆ, ಪುಸ್ತಕದ ಅಂತ್ಯದಲ್ಲಿ ಕೊಟ್ಟಿರುವ ಶಬ್ದಾನುಕ್ರಮಣಿಕೆ ( Index ) ಯನ್ನು ನೋಡಿ ಆದರ ಸಹಾಯದಿಂದ ಗ್ರಂಥದ ಬೇರೆ ಭಾಗಗಳಲ್ಲಿಯ ವಿಷಯಗಳನ್ನು ಹುಡುಕಿ ಅವಲೋಕಿಸಬೇಕು. ಅವುಗಳನ್ನೂ ವಚನಶಾಸ್ತ್ರಸಾರದ ಆಯಾ ಭಾಗಗಳಲ್ಲಿಯ ವಿಸ್ತೃತ ನಿರೂಪಣೆಗಳನ್ನೂ ನೋಡಿದಲ್ಲಿ ಷಟ್‌ಸ್ಥಲ ಶಾಸ್ತ್ರದ ಸಾಮಾನ್ಯ ಸ್ವರೂಪ ವಾಚಕರಿಗೆ ಗೊತ್ತಾಗುವುದೆಂದು ನಾವು ಭಾವಿಸಿದ್ದೇವೆ.

ವಿಜಾಪುರ
ತಾ|| ೧೬-೬-೧೯೪೩

ಫ. ಗು. ಹಳಕಟ್ಟಿ
ಗ್ರಂಥಕರ್ತ

# ಅನುಕ್ರಮಣಿಕೆ

***

[ ಈ ಅನುಕ್ರಮಣಿಕೆಯಲ್ಲಿ ವಿಷಯಗಳ ಸ್ಥೂಲ ನಿರ್ದೇಶ ಮಾತ್ರ ಇದೆ ]


| ವಿಷಯಗಳು | ಗುಂಪುಗಳು |
|---|---|
| ೧. ಜಗತ್ತಿನ ಆವಿರ್ಭಾವ .... .... | ೧–೩೫ |
| ೨. ದೇಹದ ವಿವರಣೆಗಳು .... .... | ೩೬–೪೮ |
| ೩. ಷಟ್‌ಸ್ಥಲಗಳು .... .... | ೫೧–೬೮ |
| ೪. ಮೂವತ್ತಾರು ಸ್ಥಲಗಳು .... .... | ೬೯–೮೭ |
| ೫. ಸ್ಥಲವಿಭೇದಗಳು .... .... | ೮೮–೯೫ |
| ೬. ಏಕೋತ್ತರ ಶತಸ್ಥಲಗಳು .... .... | ೯೬–೧೦೮ |
| ೭. ಆಚಾರ ಸಂಬಂಧದ ವಿಷಯಗಳು .... | ೧೦೯–೧೨೪ |
| ೮. ಗುರುಲಿಂಗಜಂಗಮಗಳು .... .... | ೧೨೫–೧೩೭ |
| ೯. ಪಾದೋದಕ ಪ್ರಸಾದಗಳು .... .... | ೧೩೮–೧೬೮ |
| ೧೦. ವಿಭೂತಿ .... .... | ೧೬೯–೧೭೩ |
| ೧೧. ರುದ್ರಾಕ್ಷಿ .... .... | ೧೭೪–೧೭೭ |
| ೧೨. ಮಂತ್ರ ವಿಷಯಗಳು .... .... | ೧೭೮–೨೭೦ |
| ೧೩. ಜಪವಿಷಯಗಳು .... .... | ೨೭೧–೨೯೮ |
| ೧೪. ಮಿಶ್ರಾರ್ಪಣ ವಿಷಯಗಳು .... .... | ೨೯೯–೩೦೫ |
| ೧೫. ಪಂಚೀಕರಣ .... .... | ೩೦೬–೩೧೪ |
| ೧೬. ಮಾರ್ಗಕ್ರಿಯೆಗಳು ಮತ್ತು ಮೀರಿದ ಕ್ರಿಯೆಗಳು | ೩೧೮–೩೫೩ |
| ೧೭. ಪೂಜಾರ್ಚನೆಯ ವಿಧಿವಿಧಾನಗಳು ... .... | ೩೫೪–೩೮೮ |
| ೧೮. ವಿವಿಧ ವಿಷಯಗಳು ... .... | ೩೮೯–೪೦೩ |


# ಶಿವಾನುಭವ ಶಬ್ದಕೋಶ

# ಶಿವಾನುಭವ ಶಬ್ದಕೋಶ

( ವಚನಶಾಸ್ತ್ರದಲ್ಲಿ ವಿಶೇಷಾರ್ಥವುಳ್ಳ ಪಾರಿಭಾಷಿಕ ಶಬ್ದಗಳು ಅನೇಕ ಬರುವುದುಂಟು. ಅವುಗಳ ಭಾವವು ವಾಡಿಕೆಯಾಗಿ ಜನರಿಗೆ ಅಪರಿಚಿತವಾಗಿರುತ್ತದೆ. ವಚನಗಳ ಅರ್ಥವು ತಿಳಿಯದಿರಲಿಕ್ಕೆ ಇದೊಂದು ಮುಖ್ಯ ಕಾರಣವಾಗಿರುತ್ತದೆ. ಆದ್ದರಿಂದ ಇಂಥ ಕಠಿಣ ಶಬ್ದಗಳನ್ನು ಆಯ್ದು ಅವುಗಳ ಅರ್ಥವನ್ನು ವಿವರಿಸುವ ಒಂದು ಕೋಶವನ್ನು ಸಿದ್ಧಪಡಿಸಬೇಕೆಂದು ಬಹುಜನರ ಕೋರಿಕೆ ಇರುವುದು ನಮಗೆ ಕಂಡುಬಂದಿರುತ್ತದೆ. ಆದುದರಿಂದ 'ಶಿವಾನುಭವ ಶಬ್ದಕೋಶ' ಎಂಬ ಹೆಸರನ್ನಿಟ್ಟು ಇಂಥ ಒಂದು ಕೋಶವನ್ನು ಸಿದ್ಧಪಡಿಸಲೆಣಿಸಿ ನಾವು ಈ ಪ್ರಯತ್ನವನ್ನು ಈಗ ಆರಂಭಿಸಿದ್ದೇವೆ. ವಚನಶಾಸ್ತ್ರದಲ್ಲಿ ಬೇರೆ ಬೇರೆ ಸಂದರ್ಭಗಳ ಪ್ರಕಾರ ಶಬ್ದಗಳಿಗೆ ಭಿನ್ನ ಭಿನ್ನ ಅರ್ಥಗಳಿರುತ್ತವೆ. ಅವುಗಳೆಲ್ಲವನ್ನು ಒಳಕೊಳ್ಳುವಂತೆ ಕೋಶವನ್ನು ರಚಿಸುವುದು ಬಹು ದುಸ್ತರವಾದದ್ದು ಆದರೆ ವಾಚಕರು ಇದರಲ್ಲಿ ನಮಗೆ ಸಹಕರಿಸಿದಲ್ಲಿ ಸರಿಯಾಗಿ ಈ ಕಾರ್ಯವು ಜರುಗಬಹುದೆಂದು ನಾವು ಎಣಿಸಿದ್ದೇವೆ ಈ ಕೋಶವು ಸದ್ಯಕ್ಕೆ ಪೂರ್ಣ ವಿವರಣೆಯುಳ್ಳದ್ದೆಂದು ಯಾರೂ ಭಾವಿಸಕೂಡದು. ಇದರಲ್ಲಿ ದೋಷಗಳಿದ್ದರೆ ವಾಚಕರು ಅವುಗಳನ್ನು ನಮ್ಮ ಲಕ್ಷ್ಯಕ್ಕೆ ಆವಶ್ಯವಾಗಿ ತರಬೇಕೆಂದು ನಮ್ಮ ವಿನಂತಿ ಇದೆ.

—ಸಂಪಾದಕ )

೧. **ಬಯಲು, ನಿರವಯ, ಶೂನ್ಯ**: ಇವು ಮೂರು ಪರ್ಯಾಯ ಶಬ್ದಗಳು. ಅವೆಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಜಗತ್ತು ಪ್ರಕಟವಾಗದ ಸ್ಥಿತಿಯನ್ನು ವಚನಕಾರರು ಬಯಲೆಂತಲೂ, ಶೂನ್ಯವೆಂತಲೂ, ನಿರವಯವೆಂತಲೂ ಕರೆಯುತ್ತಾರೆ. ಜಗತ್ತಿನಲ್ಲಿ ಇಂದ್ರಿಯಗಳಿಗೆ ಗೋಚರವಾಗುವ ಗುಣ, ಕ್ರಿಯೆ, ಶಕ್ತಿ ಮೊದಲಾದವು ಈ ಕಾಲದಲ್ಲಿ

[illegible] ವೇದಾಂತಿಗಳ ಶಬ್ದದಿಂದ ಕರೆಯಬಹುದು.

೨. ಬ್ರಹ್ಮಾಂಡ, ಜಗತ್ತು : ಬಯಲು ಪ್ರಕಟವಾಗಲು. ಅದು ಬ್ರಹ್ಮಾಂಡ, ಜಗತ್ತು ಈ ಶಬ್ದಗಳಿಂದ ಕರೆಯಲ್ಪಡುತ್ತದೆ. ಇದು ಅನೇಕ ತರದ ಜೀವರಾಶಿಗಳನ್ನು ಒಳಗೊಂಡಿರುತ್ತದೆ.

೩. ಪಿಂಡ, ಅಂಗ, ಶರೀರ, ದೇಹ : ಇವೆಲ್ಲವೂ ಪರ್ಯಾಯ ಶಬ್ದಗಳೆಂದು ಹೇಳಬಹುದು. ಆದರೆ ಉಪಯೋಗದಲ್ಲಿ ದೇಹ ಈ ಶಬ್ದವು ವಾಡಿಕೆಯಾಗಿ ಮನುಷ್ಯನಿಗೆ ಮಾತ್ರ ಅನ್ವಯಿಸುತ್ತದೆ. ಉಳಿದ ಮೂರು ಶಬ್ದಗಳು ಅದಕ್ಕೂ ಹೆಚ್ಚು ವ್ಯಾಪಕಾರ್ಥವುಳ್ಳವಾಗಿವೆ. ಅಂದರೆ ಮನುಷ್ಯನಿಗಷ್ಟೇ ಅಲ್ಲ ಇತರ ವಸ್ತುಗಳಿಗೂ ಅವು ಅನ್ವಯಿಸುತ್ತವೆ. ಬ್ರಹ್ಮಾಂಡ ಎಂಬುದು ಜಗತ್ತನ್ನೆಲ್ಲ ನಿರ್ದೇಶಿಸುತ್ತದೆ. ಆದರೆ ಪಿಂಡ ಈ ಶಬ್ದವು ಜಗತ್ತಿನಲ್ಲಿರುವ ಪ್ರತ್ಯೇಕ ವಸ್ತುವನ್ನು ನಿರ್ದೇಶಿಸುತ್ತದೆ. ಶರೀರ ಮತ್ತು ಅಂಗ ಇವು ಪರ್ಯಾಯ ಶಬ್ದಗಳಾಗಿವೆ. ಅವು ಇಂದ್ರಿಯಗಳಿಗೆ ಗೋಚರವಾಗುವಂಥವುಗಳು, ಕ್ರಿಯಾಯುಕ್ತವಾದವುಗಳು, ಜೀವಮಯವಾದವು



ಗಳು ಅಂಗ ಇದನ್ನು ಜೀವ ಎಂತಲೂ ಆಗಿಂದಾಗ್ಗೆ ಹೇಳುವುದುಂಟು.

೪. ಕ್ರಿ, ಕ್ರಿಯೆ, ಮಾಟ: ಮನುಷ್ಯನ ಕಾರ್ಯಗಳು ಈ ಶಬ್ದಗಳಿಂದ ಕರೆಯಲ್ಪಡುತ್ತವೆ. ಇವೆಲ್ಲವೂ ಪರ್ಯಾಯ ಶಬ್ದಗಳು. 'ಮಾಡು' ಎಂಬ ಧಾತುವಿನಿಂದ 'ಮಾಟ' ಈ ಶಬ್ದವು ಬಂದಿದೆ. ವಚನಕಾರರು ಈ ಶಬ್ದವನ್ನು ಕ್ರಿಯೆ ಈ ಅರ್ಥದಲ್ಲಿ ಉಪಯೋಗಿಸುತ್ತಾರೆ. ಹಾಗೆಯೇ ಅವರು ಕ್ರಿಯೆ ಈ ಶಬ್ದದ ಬದಲು 'ಕ್ರಿ' ಎಂದು ಸಂಕ್ಷೇಪವಾಗಿಯೂ ಆಗಿಂದಾಗ್ಗೆ ಉಪಯೋಗಿಸುವುದುಂಟು.

೫. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳು: ಇವು ಶರೀರದಲ್ಲಿ ಮಾಡಲ್ಪಟ್ಟ ಮೂರು ವಿಭಾಗಗಳಾಗಿವೆ. ಇವುಗಳು ತನುತ್ರಯಗಳೆಂತಲೂ ಕರೆಯಲ್ಪಡುತ್ತವೆ. ಇವುಗಳ ವ್ಯಾಖ್ಯೆಗಳು ವಚನಶಾಸ್ತ್ರಸಾರ ಭಾಗ ೨, ಪುಟ ೧೧೧ ರಲ್ಲಿ ಕೊಡಲ್ಪಟ್ಟಿವೆ. ಪಂಚಭೂತಗಳಿಂದಾದ ಬಾಹ್ಯ ಶರೀರವೇ ಸ್ಥೂಲಶರೀರವು. ಇದು 'Physical body' ಎಂದು ಹೇಳಬಹುದು. ಜ್ಞಾನೇಂದ್ರಿಯ, ಪಂಚ ವಿಷಯಗಳು, ವಾಯು ಪಂಚಕಗಳು, ಮನ, ಬುದ್ಧಿ ಇವುಗಳುಳ್ಳದೇ ಸೂಕ್ಷ್ಮ ಶರೀರವು. ಇದು "Mental body" ಎಂದು ಹೇಳಬಹುದು. 'ಕಾರಣ ಶರೀರ'ವು ಮೂಲಾತ್ಮವುಳ್ಳದು. ಉಳಿದ ಶರೀರಗಳಲ್ಲಿ ಅದು ಚೈತನ್ಯವನ್ನು ಉಂಟು ಮಾಡುವಂತಹದು. ಉಳಿದ ಶರೀರಗಳಲ್ಲಿ ಆಗುವ ಅನುಭವಗಳನ್ನೆಲ್ಲ ಅದು ತನ್ನಲ್ಲಿ ಸಂಗ್ರಹಿಸಿಕೊಳ್ಳುತ್ತದೆ. ಮತ್ತು ಅವುಗಳಿಗೆ ಬೇಕಾದ ಕಾಲದಲ್ಲಿ ಅದರ ಉಪಯೋಗವನ್ನು—ಅಂದರೆ ಅನುಭವವನ್ನು ಒದಗಿಸಿ ಕೊಡುತ್ತದೆ. ಅದು "Causal body" ಎಂದು ಹೇಳಬಹುದು, ಸ್ಥೂಲ ಶರೀರದಲ್ಲಿ ಕ್ರಿಯೆಯು ಗೋಚರವಾಗುವಂಥ ಸ್ವರೂಪದಲ್ಲಿರುತ್ತದೆ. ಸೂಕ್ಷ್ಮ ಶರೀರದಲ್ಲಿ ಮನಸ್ಸು ಬಹು ಪ್ರಬಲವಾದದ್ದು. ಆದರೆ ಕಾರಣ ಶರೀರದಲ್ಲಿ ಜ್ಞಾನವು ಸಂಗ್ರಹಿಸಲ್ಪಡುವುದುಂಟು. ಅದು 'Sub-conscious body' ಎಂದು ಹೇಳಬಹುದು.

ಗಳಾಗಿವೆ. ಆ ವಚನಗಳನ್ನು ಓದಿ, ತಿಳಿದು, ನಡೆಯುವುದೇ ಶಿವಾನುಭವವೆನಿಸಿಕೊಳ್ಳುತ್ತದೆ.

**೮. ಮಾರ್ಗ ಕ್ರಿ, ಮೀರಿದ ಕ್ರಿ :** ಕ್ರಿಯೆಗಳಲ್ಲಿ ಎರಡು ವಿಧಗಳಿವೆ. ಸ್ಥೂಲ ಶರೀರದಲ್ಲಿ ಮಾಡುವ ಕ್ರಿಯೆಗಳು ಮಾರ್ಗ ಕ್ರಿಗಳು. ಇವುಗಳು ಸಾಮಾನ್ಯ ಜ್ಞಾನವುಳ್ಳವರಿಗೆ ತಕ್ಕವುಗಳಾಗಿರುತ್ತವೆ. ಇವು ಸ್ಥೂಲಾಚರಣೆಗಳು. ಆದರೆ ಅನುಭವದಿಂದ ಮರ್ಮವನ್ನು ತಿಳಿದುಕೊಂಡು ಅಂತರಂಗದಲ್ಲಿ ಅವುಗಳನ್ನು ದೃಢಪಡಿಸಿಕೊಂಡು ಆಚರಿಸಿದ್ದಾದರೆ, ಅವು ಮೀರಿದ ಕ್ರಿಗಳು. ಅವು ಅಂತರಂಗದ ಆಚರಣೆಗೆ ಸಂಬಂಧಿಸುತ್ತವೆ. ಭಕ್ತ, ಮಾಹೇಶ್ವರ, ಪ್ರಸಾದಿ ಸ್ಥಲಗಳಲ್ಲಿಯ ಆಚರಣೆಗಳು ಮಾರ್ಗಕ್ರಿಯೆಗಳೆಂತಲೂ, ಪ್ರಾಣಲಿಂಗಿ, ಶರಣ, ಐಕ್ಯ ಈ ಸ್ಥಲಗಳಲ್ಲಿಯ ಆಚರಣೆಗಳು ಮೀರಿದ ಕ್ರಿಯೆಗಳೆಂತಲೂ ಹೇಳಲ್ಪಡುತ್ತವೆ.

**೯. ಮಾಯೆ, ಮಾಯಾಶಕ್ತಿ :** ಮನುಷ್ಯನಲ್ಲಿ ಕೆಡಕುಮಾರ್ಗವನ್ನು ಕೈಕೊಳ್ಳುವ ಪ್ರವೃತ್ತಿಯು ಇರುತ್ತದೆ. ಇದಕ್ಕೆ ಮಾಯೆಯೇ ಕಾರಣವು. ಅದೊಂದು ಶಕ್ತಿ ಎಂತಲೂ ಭಾವಿಸಲ್ಪಡುತ್ತದೆ. ಶುದ್ಧಾದ್ವೈತಿಗಳಲ್ಲಿ ಮಾಯೆಗೆ ಒಂದು ವಿಶೇಷಾರ್ಥವಿದೆ ಜಗತ್ತು ಸುಳ್ಳೆಂದು ಅವರು ಹೇಳುತ್ತಾರೆ. ಇದೇ ಅವರ ಪ್ರಕಾರ ಮಾಯೆಯು. ಆದರೆ ಜಗತ್ತು ಸುಳ್ಳೆಂದು ವೀರಶೈವರು ಭಾವಿಸುವುದಿಲ್ಲ. ಅದಕ್ಕೆ ಅಸ್ತಿತ್ವವಿದೆ ಎಂದು ಅವರು ಭಾವಿಸುತ್ತಾರೆ. ಕ್ರಿಯೆಗಳಲ್ಲಿ ಕೆಡಕು ಮತ್ತು ಒಳ್ಳೆಯದು ಹೀಗೆ ಇರುವುದು ಕಂಡುಬರುತ್ತದೆ. ಕೆಡಕುತನಕ್ಕೆ ಪ್ರೇರಣೆ ಮಾಡುವಂತಹದೇ ಮಾಯೆಯು. ವೀರಶೈವನು ಇದನ್ನು ಮೊದಲು ದೂರಮಾಡಬೇಕು. ಇದನ್ನು ದೂರಮಾಡಿದಲ್ಲಿ ಅವನು ಲಿಂಗಧಾರಣೆಗೆ ಅರ್ಹನಾಗುತ್ತಾನೆ. ವಚನಕಾರರು ಸಂಸಾರ ಹೇಯಸ್ಥಲ, ಮಾಯಾವಿಡಂಬನಸ್ಥಲ ಎಂದು ಒಂದು ಸ್ಥಲವನ್ನು ಕಲ್ಪಿಸಿ, ಮನುಷ್ಯನು ಈ ಮಾಯೆಯಿಂದ ದೂರಾಗಬೇಕೆಂದು ಮೊದಲು ಉಪದೇಶಿಸುವುದುಂಟು.

**೧೦. ಸಂಸಾರ :** ಸಂಸಾರವು ಮಾಯಾಮಯವಾದದ್ದೆಂದು ವಚನಕಾರರು ಅದನ್ನು ವರ್ಣಿಸುತ್ತಾರೆ. ಅದು ತ್ಯಾಜ್ಯವೆಂತಲೂ

ಅವರು ಹೇಳುವುದುಂಟು. ಆದರೆ ಅದು ಕೆಡಕಿನ ಕಡೆಗೆ ಒಯ್ಯುತ್ತಿದ್ದರೆ ಮಾತ್ರ ಅದನ್ನು ತ್ಯಜಿಸಬೇಕು. ಹೀಗೆ ಅವರು ಹೇಳುವಲ್ಲಿ ಹೆಂಡಿರು, ಮಕ್ಕಳು, ಬಂಧು-ಬಳಗ, ಸ್ನೇಹಿತರು ಇವರನ್ನು ಬಿಟ್ಟುಬಿಡಬೇಕೆಂದು ಅವರ ಅಭಿಪ್ರಾಯವಲ್ಲ. ಇವರೊಡನೆ ಇದ್ದರೂ ಕೂಡ, ಮೋಕ್ಷ ಹೊಂದಲು ಶಕ್ಯವಿದೆಯೆಂದು ಅವರ ಅಭಿಪ್ರಾಯವಿರುತ್ತದೆ. ಆದುದರಿಂದ ಇವರು ತ್ಯಾಜ್ಯರಲ್ಲ. ಅವರ ದೃಷ್ಟಿಯಲ್ಲಿ ಸಂಸಾರವೆಂದರೆ ವಿಷಯಲಂಪಟತನವು. ಇದು ಮಾತ್ರ ತ್ಯಾಜ್ಯವು. ವಿಷಯಾಸಕ್ತನಾಗದೆ ಸದ್ಗುಣವುಳ್ಳವನಾಗಿ ಆಚರಿಸಿದ್ದಾದರೆ ಇದು ಮನುಷ್ಯನನ್ನು ಉಚ್ಚಸ್ಥಾನಕ್ಕೆ ಒಯ್ಯುತ್ತದೆ. ಸಂಸಾರದಲ್ಲಿದ್ದರೂ ಹೀಗೆ ಆಚರಿಸಬೇಕೆಂದು ವಚನಕಾರರು ಸಂಸಾರಹೇಯಸ್ಥಲದಲ್ಲಿ ಉಪದೇಶಿಸುತ್ತಾರೆ.

೧೧. **ನಾದ, ಬಿಂದು, ಕಲೆಗಳು** : ಶೂನ್ಯ ಅಥವಾ ಬಯಲು ಇದರಲ್ಲಿ ಮೊದಲು ನಾದವು ಉತ್ಪನ್ನವಾಗುತ್ತದೆ. ಜಗತ್ತು ಉಂಟಾಗಬೇಕೆಂಬ ಅಭಿಲಾಷೆಯೇ ಇದಕ್ಕೆ ಕಾರಣವು. ಈ ಅಭಿಲಾಷೆಯೇ ಚಿತ್ತುವೆನಿಸಿಕೊಳ್ಳುತ್ತದೆ. ನಾದವೆಂದರೆ ಒಂದು ಬಗೆಯ ಅಲುಗಾಡುವಿಕೆಯು (Vibration). ಈ ಅಲುಗಾಡುವಿಕೆಯಿಂದ ಬಿಂದುವು ಉದಯವಾಗುತ್ತದೆ. ಬಿಂದುವು ವಸ್ತುವೆಂದು ಹೇಳಬಹುದು. ಅದು ಸ್ಥೂಲವು. ಅದರಲ್ಲಿ ನಾದವಿದೆ. ಈ ನಾದವು ಈ ಬಿಂದುವಿಗೆ ಚೈತನ್ಯಕೊಡುತ್ತದೆಯೆಂದು ಹೇಳಬಹುದು. ಇವೆರಡೂ ಪರಸ್ಪರಾವಲಂಬಿಗಳು. ಅವು ಒಂದನ್ನೊಂದು ಬಿಟ್ಟು ಪ್ರಕಟವಾಗಲಾರವು. ಇವೆರಡೂ ಪ್ರಕಟವಾದ ಕೂಡಲೆ ಕಲೆಯು ಆ ವಸ್ತುವಿನಲ್ಲಿ ಉತ್ಪನ್ನವಾಗುತ್ತದೆ. ಈ ಕಲೆಯ ಮೂಲಕವಾಗಿಯೇ ವಸ್ತುವಿನ ಗುಣ, ರೂಪ ಮೊದಲಾದವುಗಳು ತೋರುತ್ತವೆ. ಈ ನಾದ, ಬಿಂದು, ಕಲೆಗಳೆಲ್ಲವೂ ಯಾವಾಗಲೂ ಒಟ್ಟುಗೂಡಿ ವ್ಯವಹರಿಸುತ್ತವೆ. ಆದರೆ ಅವು ಮೂಲಚಿತ್ತುವಿನಲ್ಲಿ ಬೆರೆತಿರುತ್ತವೆ. ಈ ನಾಲ್ಕು ಕೂಡಿದಲ್ಲ ಒಂದು ಪದಾರ್ಥವಾಗುತ್ತದೆ. ಮೂಲ ಚಿತ್ತುವಿನ ಮೇಲೆಯೇ ಪದಾರ್ಥಗಳ ವೈಶಿಷ್ಟ್ಯವು ಅವಲಂಬಿಸಿದೆ. ಪದಾರ್ಥಗಳ ವೈಶಿಷ್ಟ್ಯದ ವ್ಯವಹರಣೆಯು ನಾದ, ಬಿಂದು, ಕಲೆಗಳ ಮುಖಾಂತರವಾಗಿಯೇ ನಡೆಯು—



ತ್ತದೆ. ಜಗತ್ತಿನಲ್ಲೆಲ್ಲ ಈ ನಾದ, ಬಿಂದು, ಕಲೆಗಳು ಪಸರಿಸಿರುತ್ತವೆ. ಅವಿಲ್ಲದೆ ಜಗತ್ತು ನಡೆಯಲಾರದು. ಅವು ಸಣ್ಣದರಲ್ಲಿಯೂ ದೊಡ್ಡದರಲ್ಲಿಯೂ ಇರುತ್ತವೆ. ಆದರೆ ಪದಾರ್ಥಗಳ ಭಿನ್ನತೆಗಳು ಅಥವಾ ವೈಶಿಷ್ಟ್ಯಗಳು ಮೂಲ ಚಿತ್ತುವಿನ ಮೇಲೆಯೇ ಅವಲಂಬಿಸಿರುತ್ತವೆ. (ಹೆಚ್ಚಿನ ವಿವರಣೆಗೋಸ್ಕರ ವಚನಶಾಸ್ತ್ರ ಸಾರ-ಭಾಗ ೨-ಸೃಷ್ಟಿಯ ರಚನೆ ಈ ವಿಷಯದಲ್ಲಿ ಹೇಳಿದ ವಚನಗಳನ್ನು ಮತ್ತು ಅನುಬಂಧ ೧ (ಅ) ನೋಡಬೇಕು.)

೧೨. **ಶಕ್ತಿ** : ಜಗತ್ತಿನಲ್ಲಿ ಮತ್ತು ಜಗತ್ತಿನ ಪ್ರತಿಯೊಂದು ಪದಾರ್ಥದಲ್ಲಿ ಶಕ್ತಿಯ (energy) ಇದೆ. ಕೆಲವೊಂದು ಪರಿಸ್ಥಿತಿಯಲ್ಲಿ ಬಯಲಿನಲ್ಲಿ ಅದು ಪ್ರಕಟವಾಗುತ್ತದೆ. ಆಗ ಅದನ್ನು ಚೈತನ್ಯವೆಂದು ಹೇಳುತ್ತೇವೆ. ಮೊದಲು ಬಯಲು ಸ್ಥಿತಿಯಲ್ಲಿ ಅದು ತೋರುವುದಿಲ್ಲ. ಅದು ಗುಪ್ತವಾಗಿರುತ್ತದೆ. ಆದರೂ ಅದು ಇರುತ್ತದೆ. ಅದು ಜೀವದ ಮೂಲಕ ಜಗತ್ತಿನಲ್ಲಿ ಪ್ರವಹಿಸುತ್ತದೆ. ಈ ಶಕ್ತಿಯ ಮೂಲಕವಾಗಿಯೇ ಜೀವದ ಅಸ್ತಿತ್ವವನ್ನು ಕಂಡು ಹಿಡಿಯುತ್ತೇವೆ. ಜಗತ್ತಿನ ವ್ಯಾಪಾರಗಳು ಅದರ ಮೂಲಕವಾಗಿಯೇ ನಡೆಯುತ್ತವೆ. ಶಕ್ತಿಯು ಸರಿಯಾದ ಮತ್ತು ಯೋಗ್ಯವಾದ ಹಾದಿಯಿಂದ ನಡೆಯತಕ್ಕದ್ದು. ಅಂದರೆ ಅದರಿಂದ ಪ್ರಯೋಜನವುಂಟು. ಮತ್ತು ತನಗೂ ಜಗತ್ತಿಗೂ ಹಿತವಿದೆ. ಆದರೆ ಅದು ಸರಿಯಾದ ಹಾದಿಯಿಂದ ಹೋಗದಿದ್ದರೆ, ಅದರಿಂದ ಕೇಡುಂಟು. ಆದ್ದರಿಂದ ವಚನಕಾರರು ಶಕ್ತಿಯಲ್ಲಿ ಎರಡು ವಿಭಾಗಗಳನ್ನು ಮಾಡುತ್ತಾರೆ. ಒಂದು ಕೆಡಕು ಮತ್ತೊಂದು ಒಳ್ಳೆಯದು. ವಚನಕಾರರು ಷಟ್‌ಸ್ಥಲಗಳ ಪ್ರಕಾರ ತಮ್ಮ ವಿಷಯಗಳನ್ನು ವಿವೇಚಿಸುವುದುಂಟು. ಆದ್ದರಿಂದ ಅವರು ಶಕ್ತಿಯಲ್ಲಿ ಇವುಗಳಿಗನುಸರಿಸಿ ಆರು ಪ್ರಕಾರಗಳನ್ನು ಮಾಡಿದ್ದಾರೆ. ಅವು ಯಾವುವೆಂದರೆ— (೧) ಚಿತ್ ಶಕ್ತಿ (೨) ಪರಾಶಕ್ತಿ (೩) ಆದಿಶಕ್ತಿ (೪) ಇಚ್ಛಾಶಕ್ತಿ (೫) ಜ್ಞಾನಶಕ್ತಿ (೬) ಕ್ರಿಯಾಶಕ್ತಿ. ಶಕ್ತಿಯು ಪ್ರಕಟವಾಗಲಿಕ್ಕೆ ಯಾವಾಗಲೂ ಅದಕ್ಕೆ ಅಂಗವು ಬೇಕು. ಅಂದರೆ ಅದಕ್ಕೆ ಒಂದು ಸ್ಥೂಲವಾದ ಶರೀರವು ಬೇಕು. ವಿದ್ಯುಲ್ಲತೆಯು ಜಗತ್ತಿನಲ್ಲೆಲ್ಲ ತುಂಬಿದೆ. ಆದರೆ ಅದು ಪ್ರಕಟವಾಗಲಿಕ್ಕೆ ಒಂದು ತಂತಿಯು ಬೇಕು.

ಹಾಗೆಯೇ ಶಕ್ತಿಯು ಪ್ರಕಟವಾಗಬೇಕಾದರೆ ಒಂದು ಅಂಗವು ಬೇಕು. ಅಂಗದಲ್ಲಿ ಈ ಶಕ್ತಿಯು ಪ್ರವಹಿಸಿದ ಕೂಡಲೆ ಅದರಿಂದ ಕ್ರಿಯೆಗಳಾಗುತ್ತವೆ. ಈ ಅಂಗದಲ್ಲಿ ಅಥವಾ ಶರೀರದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಭೇದಗಳಿವೆ. ಆ ಶರೀರಗಳಲ್ಲೆಲ್ಲ ಈ ಶಕ್ತಿಯು ತೋರುತ್ತದೆ. ಹೀಗೆ ತೋರಿದ ಕೂಡಲೆ ಆ ಶರೀರಗಳ ಗುಣಧರ್ಮಗಳು ಅದರ ಮೂಲಕ ಪ್ರಕಟವಾಗುತ್ತವೆ. ಈ ಶಕ್ತಿಯು ಮನುಷ್ಯನಲ್ಲಷ್ಟೇ ಅಲ್ಲ, ಜಗತ್ತಿನಲ್ಲೆಲ್ಲ ಪಸರಿಸಿರುತ್ತದೆ. ಅದ್ದರಿಂದ ಜಗತ್ತು ಶಕ್ತಿವಿಶಿಷ್ಟವಾಗಿರುತ್ತದೆಯೆಂದು ಹೇಳಲ್ಪಡುತ್ತದೆ.

೧೩. ಭಕ್ತಿ : ಶಕ್ತಿಯು ಸರಿಯಾದ ಮಾರ್ಗದಿಂದ ಪ್ರವಹಿಸಿದಲ್ಲಿ ಅದು ಭಕ್ತಿ ಎಂದು ಹೇಳಲ್ಪಡುತ್ತದೆ. ಯಾಕೆಂದರೆ ಈ ಭಕ್ತಿಯು ಶ್ರೇಷ್ಠ ಶಕ್ತಿ ಇದೆ. ಷಟ್‌ಸ್ಥಲಗಳ ಪ್ರಕಾರ ಭಕ್ತಿಯು ಆರು ವಿಧವಾಗಿರುತ್ತದೆ. ಆ ವಿಧಗಳು ಯಾವುವೆಂದರೆ — (೧) ಶ್ರದ್ಧಾಭಕ್ತಿ (೨) ನಿಷ್ಠಾಭಕ್ತಿ (೩) ಅವಧಾನಭಕ್ತಿ (೪) ಅನುಭಾವಭಕ್ತಿ (೫) ಸುಜ್ಞಾನಭಕ್ತಿ (೬) ಸಮರಸಭಕ್ತಿ. ವಚನಕಾರರು ಭಕ್ತಿಗೆ ಒಂದು ವ್ಯಾಪಕಾರ್ಥವನ್ನು ಕೊಟ್ಟಿದ್ದಾರೆ. ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗ ಎಂದು ಹಿಂದಿನ ಧರ್ಮಶಾಸ್ತ್ರಕಾರರು ಹೇಳುವುದುಂಟು. ಆದರೆ ಅವರು ಹೇಳುವ ಈ ಭಕ್ತಿಮಾರ್ಗವು ವಚನಕಾರರ ಪ್ರಕಾರ ಶ್ರದ್ಧಾಭಕ್ತಿ ಮತ್ತು ನಿಷ್ಠಾಭಕ್ತಿ ಇವುಗಳಲ್ಲಿ ಮಾತ್ರ ಬರುತ್ತದೆ. ವಚನಕಾರರು ಈ ಪ್ರಕಾರ ಭಕ್ತಿಗೆ ವ್ಯಾಪಕಾರ್ಥ ಕೊಟ್ಟಿದ್ದಾರೆ. ಸರಿಯಾದ ಅಂದರೆ ಒಳ್ಳೆಯ ರೀತಿಯಿಂದ ನಡೆಯಿಸಿಕೊಂಡು ಹೋಗುವ ಯಾವ ಮಾರ್ಗವಾದರೂ ಕೂಡ ಭಕ್ತಿ ಎಂದು ಭಾವಿಸಿ ಅವರು ವಿವೇಚಿಸುತ್ತಾರೆ. ಜ್ಞಾನವು ಸರಿಯಾದ ಮಾರ್ಗದಿಂದ ಪ್ರವಹಿಸುತ್ತ ಪರಮಾತ್ಮನೆಡೆಗೆ ಮನುಷ್ಯನನ್ನು ಒಯ್ಯುತ್ತದೆ. ಅದೂ ಕೂಡ 'ಸುಜ್ಞಾನಭಕ್ತಿ' ಎಂದು ವಚನಕಾರರು ತಮ್ಮ ಷಟ್‌ಸ್ಥಲ ವಿವೇಚನೆಯಲ್ಲಿ ಹೇಳುತ್ತಾರೆ.

೧೪. ಪ್ರವೃತ್ತಿ : ಶಕ್ತಿಯು ಸರಿಯಾದ ಮಾರ್ಗದಿಂದ ಹೋದದ್ದಾದರೆ ಮಾತ್ರ ಅದರ ಮೂಲಕ ಮನುಷ್ಯನ ಗುಣಗಳು ವಿಕಾಸ ಹೊಂ-



ದುತ್ತವೆ. ಉದಾಹರಣಾರ್ಥವಾಗಿ ಚಿಕ್ಕಂದಿನಲ್ಲಿ ಮಕ್ಕಳ ಬುದ್ಧಿಯು ಪ್ರಕಟವಾಗಿರುವುದಿಲ್ಲ. ಆದರೆ ಮುಂದೆ ಅದು ಬೆಳವಣಿಗೆಯನ್ನು ಹೊಂದುತ್ತ ಹೋಗುತ್ತದೆ. ಇದು ಅವರ ಪ್ರವೃತ್ತಿಯು. ಇಂಥ ಪ್ರವೃತ್ತಿಯ ಮೂಲಕವೇ ಮನುಷ್ಯನಲ್ಲಿ ಪರಿಪೂರ್ಣತೆಯು ಕ್ರಮೇಣ ಉಂಟಾಗುತ್ತ ಹೋಗುತ್ತದೆ. ಆಗ ಅವನ ಮನಸ್ಸು, ಬುದ್ಧಿ, ಚಿತ್ತವೃತ್ತಿ ಮೊದಲಾದವುಗಳೂ ಅವನ ಸ್ಥೂಲ. ಸೂಕ್ಷ್ಮ ಕಾರಣ ಶರೀರಗಳೂ ಉಚ್ಚ ಸ್ಥಿತಿಯನ್ನು ಹೊಂದುತ್ತ ಹೋಗುತ್ತವೆ. ವಚನಕಾರರು ತಾವು ಹೇಳುವ ಷಟ್‌ಸ್ಥಲಗಳ ಆಚರಣೆಗಳಂತೆ ನಡೆದದ್ದಾದರೆ ಈ ಪ್ರವೃತ್ತಿಯು ಉಂಟಾಗುತ್ತದೆಂದು ಅವರ ಅಭಿಪ್ರಾಯ. ಇದಕ್ಕೆ ಇಂಗ್ಲಿಷದಲ್ಲಿ Evolution ಎಂದು ಹೇಳಬಹುದು.

೧೫. ನಿವೃತ್ತಿ : ಪ್ರವೃತ್ತಿಯು ಪರಿಪೂರ್ಣತೆಯನ್ನು ಹೊಂದಿದ ಬಳಿಕ ನಿವೃತ್ತಿಯು ತಲೆದೋರುತ್ತದೆ ಇದಕ್ಕೆ ಇಂಗ್ಲೀಷದಲ್ಲಿ involution ಎಂದು ಹೇಳಬಹುದು. ಆಗ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿ ಪರಸ್ಪರ ಏಕರೂಪತೆಯು ಉಂಟಾಗುತ್ತದೆ. ಅಂದರೆ ಸ್ಥೂಲ ಶರೀರದ ಮೇಲಿನ ಪರಿಣಾಮಗಳು ಕೂಡಲೆ ಸೂಕ್ಷ್ಮ ಶರೀರದ ಮೇಲೆ ಮತ್ತು ಕಾರಣ ಶರೀರಗಳ ಮೇಲೆ ಆಗುತ್ತವೆ. ಕಾರಣ ಶರೀರದಿಂದ ಹೊರಟ ಚೈತನ್ಯವು ಕೂಡಲೆ ಸೂಕ್ಷ್ಮ ಮತ್ತು ಸ್ಥೂಲ ಶರೀರಗಳ ಮೇಲೆ ಆಗುತ್ತದೆ. ಈ ಸ್ಥಿತಿಯಲ್ಲಿ ಮನುಷ್ಯನ ಕ್ರಿಯೆಗಳು ಸರಿಯಾಗಿ ನಡೆಯುತ್ತವೆ. ಅವನಲ್ಲಿ ಕ್ಲೇಶ, ದುಃಖ ಮೊದಲಾದವುಗಳು ಉಂಟಾಗಲಾರವು. ಆಗ ಅವನ ವ್ಯಾಪಾರಗಳು ಒಂದರಲ್ಲಿ ಒಂದು ಬೆರೆತು ಕಡೆಗೆ ಅವನು ಪರಮಾತ್ಮನಲ್ಲಿ ಅಥವಾ ನಿರವಯದಲ್ಲಿ ಬೆರೆತು ಹೋಗುತ್ತಾನೆ. (ವಚನಶಾಸ್ತ್ರಸಾರ ಭಾಗ ೨, ಪುಟ ೩೩೦ ರಿಂದ ೩೩೮ ನೋಡಿರಿ.)

೧೬. ಲಿಂಗ : ಅಂಗದಲ್ಲಿ ಶಕ್ತಿ ಇದೆ. ಈ ಶಕ್ತಿಯ ಮೂಲಕವೇ ಅಂಗದ ವ್ಯಾಪಾರಗಳು ನಡೆಯುತ್ತವೆ. ಈ ಶಕ್ತಿಯ ಮೂಲಕವೇ ಜೀವನು ವ್ಯವಹರಿಸುತ್ತಾನೆ. ಅವನ ಈ ಶಕ್ತಿಯು ಸರಿಯಾದ ಮಾರ್ಗದಿಂದ ನಡೆದಲ್ಲಿ ಆ ಮಾರ್ಗವು ಭಕ್ತಿಯುಕ್ತವಾದುದೆಂದು ಹೇಳಲ್ಪಡುವು-

ದುಂಟು. ಇಂಥ ಭಕ್ತಿಯುಕ್ತ ಕಾರ್ಯಗಳ ಮೂಲಕವೇ ಈ ಶಕ್ತಿಯಲ್ಲಿ ಲಿಂಗವು ತಲೆದೋರುತ್ತದೆ. ಆಗ ಪ್ರಕಟವಾದ ಲಿಂಗದ ವಶದಿಂದ ಹೀಗೆ ಇಂಥ ಅಂಗವು ಚಲನೆಹೊಂದುತ್ತದೆ. ಆದ್ದರಿಂದ ಲಿಂಗವೆಂದರೆ (Spiritual energy) ಎಂದು ಹೇಳಬಹುದು. ಅದು ಪರಮಾತ್ಮನ ಅಂಶವೇ ಇರುತ್ತದೆ. ಮುಂದೆ ಭಕ್ತಿಯು ಅಂಗದಲ್ಲಿ ಹೆಚ್ಚುತ್ತ ಹೋದಲ್ಲಿ ಲಿಂಗದ ಪ್ರಜ್ವಲನೆಯಾದರೂ ಹೆಚ್ಚುತ್ತ ಹೋಗುತ್ತದೆ. ಹೀಗೆ ಮನುಷ್ಯನಲ್ಲಿ ಪ್ರಗತಿ ತಲೆದೋರುತ್ತದೆ. ಅದು ಬೆಳೆಯುತ್ತ ಹೋದಲ್ಲಿ ಜೀವನು ಕಡೆಗೆ ಪರಮಾತ್ಮನಲ್ಲಿ ಅಥವಾ ನಿರವಯದಲ್ಲಿ ಅಥವಾ ಶೂನ್ಯದಲ್ಲಿ ಬೆರೆತು ಹೋಗುತ್ತಾನೆ. ಇದೇ ಲಿಂಗಾಂಗಸಾಮರಸ್ಯವು ಅಥವಾ ಮೋಕ್ಷವು ಅಥವಾ ಐಕ್ಯವು ಅಥವಾ ಶಿವೈಕ್ಯವು, ಲಿಂಗೈಕ್ಯ ಸ್ಥಿತಿಯು. ವಚನಕಾರರು ಈ ಲಿಂಗ ವಿಕಾಸದ ಬಗ್ಗೆ ತಮ್ಮ ವಿಚಾರಗಳನ್ನು ಷಟ್‌ಸ್ಥಲಕ್ಕೆ ಅನುಸರಿಸಿ ಹೇಳುತ್ತಾರೆ. ಆದ್ದರಿಂದ ಲಿಂಗದಲ್ಲಿ ಅವರು ಆರು ವಿಭಾಗಗಳನ್ನು ಮಾಡುತ್ತಾರೆ. ಅವು ಯಾವುವೆಂದರೆ... (೧) ಆಚಾರಲಿಂಗ (೨) ಗುರುಲಿಂಗ (೩) ಶಿವಲಿಂಗ (೪) ಜಂಗಮಲಿಂಗ (೫) ಪ್ರಸಾದಲಿಂಗ (೬) ಮಹಾಲಿಂಗ. ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿವೆಯಷ್ಟೆ? ಅವುಗಳಿಗನುಸರಿಸಿಯೂ ಲಿಂಗದಲ್ಲಿ ಮೂರು ವಿಭಾಗಗಳನ್ನು ಮಾಡುತ್ತಾರೆ. ಆಗ ಅದಕ್ಕೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂದು ಅನುಕ್ರಮವಾಗಿ ಹೆಸರುಗಳಿವೆ. ಇಷ್ಟಲಿಂಗಕ್ಕೆ ಕ್ರಿಯಾಲಿಂಗವೆಂಬ ಹೆಸರೂ ಇದೆ. ಈ ಇಷ್ಟಲಿಂಗವು ಕ್ರಿಯೆಗೆ ಸಂಬಂಧಪಡುತ್ತದೆ. ಪ್ರಾಣಲಿಂಗವು ಮನಸ್ಸಿಗೆ ಸಂಬಂಧಪಡುತ್ತದೆ. ಭಾವಲಿಂಗವು ಜ್ಞಾನಕ್ಕೆ ಸಂಬಂಧಪಡುತ್ತದೆ. ಈ ಕಡೆಯ ಲಿಂಗಕ್ಕೆ ಜ್ಞಾನಲಿಂಗ, ಸುಜ್ಞಾನಲಿಂಗ ಅಥವಾ ತೃಪ್ತಿಲಿಂಗ ಎಂಬ ಹೆಸರುಗಳೂ ಉಂಟು. ವೀರಶೈವನು ತನ್ನಲ್ಲಿಯೇ ಈ ಲಿಂಗವನ್ನರಿಯತಕ್ಕದ್ದು. ಆದ್ದರಿಂದ ಬಾಹ್ಯಲಿಂಗಗಳು ಅಂದರೆ ಸ್ಥಾವರ ಲಿಂಗಗಳು ಅವನಿಗೆ ಅರ್ಹವಾದುವಲ್ಲ. ಲಿಂಗದ ವಿವೇಚನೆಯಲ್ಲಿ ಯಾವತರದ ಅಶ್ಲೀಲ ವಿಚಾರಗಳನ್ನೂ ವಚನಕಾರರು ಪ್ರಕಟಮಾಡುವುದಿಲ್ಲ. ಅಷ್ಟಾವರಣಗಳಲ್ಲಿ ಲಿಂಗವೆಂಬ ಹೆಸರು ಬರುವದುಂಟು. ಅದು ಪರಮಾತ್ಮನ ಗುರುತು ( Symbol ) ಮಾತ್ರ ಇರು



ತ್ತದೆ. ಅದಕ್ಕೆ ಇಷ್ಟಲಿಂಗವೆಂಬ ಹೆಸರು. ಆದರೆ ಅದರ ಅಲ್ಲಿಯ ವಿವೇಚನೆಗಳು ಕೇವಲ ಆಚಾರಕ್ಕೆ ಸಂಬಂಧಿಸುತ್ತವೆ. ಆದರೆ ೬ ಸ್ಥಲಗಳು ಮತ್ತು ೩ ಸ್ಥಲಗಳು ಯಾವಾಗಲೂ ತಾತ್ವಿಕ ವಿವೇಚನೆಗೆ ಸಂಬಂಧಪಟ್ಟವು. ಆದ್ದರಿಂದ ಅಲ್ಲಿ ಲಿಂಗದ ವಿಚಾರಗಳನ್ನು ಷಟ್‌ಸ್ಥಲದ ತತ್ವಗಳಿಗನುಸರಿಸಿ ವಚನಕಾರರು ತಾತ್ವಿಕವಾಗಿ ನಿರೂಪಿಸುವುದುಂಟು.

೧೬. **ಸ್ಥಲಗಳು** : ಸ್ಥಲ ಇದು ವೀರಶೈವ ಗ್ರಂಥಗಳಲ್ಲಿ ಕಂಡುಬರುವ ವಿಶಿಷ್ಟ ಶಬ್ದವಾಗಿದೆ. ವೀರಶೈವರು ತಮ್ಮ ವಿಷಯ ವಿವೇಚನೆಯನ್ನು ಕೆಲವೊಂದು ಸ್ಥಲವನ್ನನುಸರಿಸಿ ಮಾಡುವುದುಂಟು. ಅವರು ಮನುಷ್ಯನಲ್ಲಿರುವ ಗುಣಗಳು, ಇಂದ್ರಿಯಗಳು, ಶಕ್ತಿಗಳು ಇವೇ ಮೊದಲಾದವುಗಳಲ್ಲಿ ಅನೇಕ ವಿಭಾಗಗಳನ್ನು ಮಾಡುತ್ತಾರೆ. ಈ ಪ್ರಕಾರ ಮಾಡಿ ಅವರು ಅವುಗಳನ್ನು ಕೆಲವೊಂದು ಸ್ಥಳಕ್ಕೆ ಸಂಬಂಧಿಸುತ್ತಾರೆ. ಹೀಗೆ ಸಂಬಂಧಿಸುವಲ್ಲಿ ಅವರು ಅವುಗಳಲ್ಲಿರುವ ಕೆಲವು ವಿಶಿಷ್ಟ ಗುಣಗಳನ್ನು ಕಂಡು ಹಿಡಿಯಬೇಕಾಗುತ್ತದೆ. ಹೀಗೆ ಕಂಡುಹಿಡಿದು ಅವುಗಳ ವಿವೇಚನೆ ಮಾಡುವಲ್ಲಿ ಅವು ಇಂಥದೊಂದು ಸ್ಥಳಕ್ಕೆ ಸಂಬಂಧಿಸಿರುತ್ತವೆಂದು ಹೇಳುತ್ತಾರೆ. ಈ ರೀತಿ ಅವರು ವಿವೇಚನೆ ಮಾಡುವುದರಿಂದ ವೀರಶೈವಧರ್ಮಕ್ಕೆ ಒಂದು ಸಿದ್ಧಾಂತದ ಸ್ವರೂಪು ಪ್ರಾಪ್ತವಾಗಿದೆ. ಉದಾ:— ಅವರು ಮೊದಲು ಅಂಗ-ಲಿಂಗಸ್ಥಲಗಳೆಂದು ಎರಡು ವಿಭಾಗಗಳು, ಆ ಮೇಲೆ ಅವುಗಳಲ್ಲಿ ಮೂರು ವಿಭಾಗಗಳು, ಆ ಮೇಲೆ ಅವುಗಳಲ್ಲಿ ಆರು. ಹದಿನೆಂಟು, ಮೂವತ್ತಾರು, ಇನ್ನೂರು ಹದಿನಾರು ಹೀಗೆ ಅನೇಕ ವಿಭಾಗಗಳನ್ನು ಮಾಡುವುದುಂಟು. ಈ ವಿಭಾಗಗಳೆಲ್ಲ ಅವರು ಸ್ಥಲಗಳೆಂದು ಹೇಳುತ್ತಾರೆ. ಆಯಾ ಸ್ಥಲಗಳಿಗೆಲ್ಲ ವಿಶಿಷ್ಟ ಹೆಸರುಗಳಿವೆ. ಆದರೂ ಒಂದು ವಿಭಾಗದೊಳಗಿನ ಗುಣಗಳು, ಎರಡನೆಯ ವಿಭಾಗಗಳಲ್ಲಿಯೂ ಆಗಿಂದಾಗ್ಗೆ ಕಂಡುಬರುವುದುಂಟು. ಆದರೂ ಒಂದು ವಿಭಾಗದಲ್ಲಿಯ ವಿಶಿಷ್ಟ ಗುಣಗಳ ಮೇಲೆ ಅವರು ಹೀಗೆ ತಮ್ಮ ಸ್ಥಲಗಳನ್ನು ವಿಂಗಡಿಸುವದುಂಟು. ಉದಾ:— ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ , ಕಾರಣ ಶರೀರಗಳಿವೆ. ಅವುಗಳಿಗನುಸರಿಸಿ ಮೊದಲು ೩ ಸ್ಥಲ, ಆ ಮೇಲೆ ೬ ಸ್ಥಲಗಳು ನಿರ್ಮಿಸಲ್ಪಟ್ಟಿವೆ. ಈ ಆರು ಸ್ಥಲಗಳಲ್ಲಿ ಮೊದಲನೆಯ ಭಕ್ತ,

ಮಾಹೇಶ್ವರ ಸ್ಥಲಗಳು ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಇವೆರಡರಲ್ಲಿಯ ಮಾಹೇಶ್ವರ ಸ್ಥಲದಲ್ಲಿ ಕೆಲವಂಶದಿಂದ ಅದರ ಹಿಂದಿನ ಮತ್ತು ಮುಂದಿನ ಸ್ಥಲದ ಗುಣಗಳೂ ಬಂದಿರಬಹುದು. ಯಾಕಂದರೆ ಅದು ಭಕ್ತಸ್ಥಲ ಮತ್ತು ಪ್ರಸಾದಿಸ್ಥಲ ಇವೆರಡಕ್ಕೆ ಮಧ್ಯವರ್ತಿಯಾಗಿದೆ. ಆದ್ದರಿಂದ ಈ ಸ್ಥಲಗಳ ವಿವೇಚನೆಯಲ್ಲಿ ಸ್ಪಷ್ಟ ಭೇದಗಳು ತೋರುವುದಿಲ್ಲ. ಆದರೂ ಆಯಾ ಸ್ಥಲಗಳಲ್ಲಿ ಅವುಗಳ ಮುಖ್ಯ ಗುಣಗಳನ್ನು ಕಂಡುಹಿಡಿಯತಕ್ಕದ್ದು. ಇದರಿಂದ ವೀರಶೈವ ವಚನಕಾರರ ವಾಙ್ಮಯದಲ್ಲಿ ಅನೇಕ ಸ್ಥಲಗಳು ಉತ್ಪನ್ನವಾಗಿವೆ ಅವುಗಳ ಪರಸ್ಪರ ಸಂಬಂಧವನ್ನು ವಿಷಯ ವಿವರಣೆಯ ಪ್ರಕಾರ ಕಂಡುಹಿಡಿಯಬೇಕಾಗುತ್ತದೆ.

೧೮. **ಶಿವ, ಪರವಸ್ತು, ನಿಜ, ತತ್ವ, ನಿಜತತ್ವ, ಶಿವತತ್ವ, ಪರತತ್ವ, ಪರಶಿವ, ತತ್ವಸ್ವರೂಪು, ನಿರಾಲಂಬ, ಅನಿರ್ವಾಚ್ಯ, ನಿರಾಳ, ಸುರಾಳ, ಪರಬ್ರಹ್ಮವಸ್ತು, ಪರಮಾತ್ಮ :** ಈ ಶಬ್ದಗಳೆಲ್ಲವೂ ಪರಮಾತ್ಮ ಅಥವಾ ದೇವರ ದ್ಯೋತಕವಾಗಿವೆ. ಪರಮಾತ್ಮನು ಯಾವ ಸ್ವರೂಪವುಳ್ಳವನಾಗಿದ್ದಾನೆಂಬುದನ್ನು ಅವು ವ್ಯಕ್ತಮಾಡುತ್ತವೆ. ಹಿಂದೂ ಧರ್ಮದ ಮೇರೆಗೆ ಪರಮಾತ್ಮನು ನಿರಾಕಾರನಾಗಿದ್ದಾನೆ. ಆದರೆ ಹಿಂದುಗಣ ಅವನಿಗೆ ಅನೇಕ ತರದ ರೂಪಗಳು ಕಲ್ಪಿಸಲ್ಪಟ್ಟವು. ಆದರೆ ಇವುಗಳನ್ನು ಶಿವಶರಣರು ಅಲ್ಲಗಳೆದಿದ್ದಾರೆ. ಪರಮಾತ್ಮನು ಆಕಾರ ರಹಿತನಾಗಿದ್ದಾನೆಂಬುದೇ ಅವರ ಅಭಿಪ್ರಾಯವು. ಶಿವ ಎಂಬ ಶಬ್ದದಿಂದ ಪರಮಾತ್ಮನನ್ನು ಅವರು ಸಾಮಾನ್ಯವಾಗಿ ಕರೆಯುವುದುಂಟು. ಆದರೆ ಅವನು ಜಗತ್ತಿನಲ್ಲಿ ಕಾಣುವಂಥ ಒಂದು ಬಗೆಯ ವಸ್ತುವಲ್ಲವೆಂಬುದನ್ನು ತಿಳುಪಲಿಕ್ಕೆ ಅವನು ಪರವಸ್ತು ಎಂದು ಸಂಬೋಧಿಸಿದ್ದಾರೆ. ಅವನು ಮಾಯಾರಹಿತನೆಂದು ಹೇಳಲು, 'ನಿಜ' ಎಂಬ ಶಬ್ದವನ್ನು ಅವರು ಉಪಯೋಗಿಸುತ್ತಾರೆ. ಅವನು ಸತ್ಯನು, ಸುಳ್ಳಲ್ಲ ಎಂಬುದನ್ನು ಸಹ ತೋರಿಸಲು ಈ ನಿಜ ಎಂಬ ಶಬ್ದವನ್ನೇ ಉಪಯೋಗಿಸುತ್ತಾರೆ. ಅವನನ್ನು 'ತತ್ವ' ಎಂತಲೂ ಕರೆದಿದ್ದಾರೆ. ಜಗತ್ತಿನ ವ್ಯಾಪಾರಗಳಲ್ಲೆಲ್ಲ ಯಾವುದು ಅಂತರ್ಭೂತವಾಗಿ ಅವುಗಳನ್ನು ಪ್ರೇರೇಪಿಸುತ್ತದೋ ಅದೇ ತತ್ವವೆಂದು ಹೇಳಬಹುದು. ಇಂಥ ಈ ತತ್ವವನ್ನು ಅನುಸರಿಸಿಯೇ ಈ ಜಗತ್ತು ನಡೆದಿರುತ್ತದೆ ಈ ತತ್ವವೇ ಶಿವನು ಅಥವಾ ದೇವರು ಎಂಬ



ಭಾವವು ವಚನಕಾರರ ವಚನಗಳಲ್ಲಿ ದೃಗ್ಗೋಚರವಾಗುತ್ತದೆ. ಅದರಿಂದ ದೇವರನ್ನು ನಿಜತತ್ವ, ಶಿವತತ್ವ ಎಂತಲೂ ಕರೆದಿದ್ದಾರೆ. ಹಾಗೆಯೇ ಪರತತ್ವವೆಂತಲೂ ಕರೆದಿದ್ದಾರೆ. ಅಂದರೆ ದೃಶ್ಯ ಪದಾರ್ಥಗಳಿಗೆ ಸಂಬಂಧಿಸಿದ ತತ್ವವು ಯಾವುದಿದೆಯೋ ಅದು ಸ್ಥೂಲತತ್ವವೆಂದು ಎನ್ನಿಸಿಕೊಳ್ಳುವದರಿಂದ, ಇಂಥ ಸ್ಥೂಲ ತತ್ವಕ್ಕೆ ಯಾವುದು ಮೇಲಿನದೋ ಯಾವುದು ಅತ್ಯಂತ ಸೂಕ್ಷ್ಮವಾದುದೋ ಅದೇ ಶಿವನೆಂದು ಅವರು ಹೇಳುತ್ತಾರೆ. ಈ ಭಾವದಿಂದ ಅವನು ಪರತತ್ವನೆಂತಲೂ ಹೇಳಿದ್ದಾರೆ. ಸಾಮಾನ್ಯ ಜನರಲ್ಲಿ ಶಿವನೆಂದರೆ ಪಂಚಮುಖನು, ತ್ರಿನೇತ್ರನು, ವೃಷಭವಾಹನನು, ಸರ್ಪಭೂಷಣನು— ಇವೇ ಮೊದಲಾದ ಅಭಿಪ್ರಾಯಗಳು ಇರುತ್ತವೆ. ಆದರೆ ಇವೆಲ್ಲ ಪೌರಾಣಿಕ ಕಲ್ಪನೆಗಳು. ಈ ವಿಚಾರಗಳನ್ನು ಶಿವಶರಣರು ಒಪ್ಪಿಕೊಳ್ಳುವುದಿಲ್ಲ. ಇದನ್ನು ತಿಳುಹಲು, ಪರಶಿವನೆಂತಲೂ ಅವರು ಪರಮಾತ್ಮನನ್ನು ಕರೆದಿದ್ದಾರೆ. ಅಂದರೆ ಇಂಥ ಶಿವನಿಗಿಂತಲೂ ಮೇಲಿನವನು ಅಥವಾ ಸೂಕ್ಷ್ಮನೆಂದು ಅವರ ಅಭಿಪ್ರಾಯವು. ಅವನು ನಿರಾಲಂಬನೆಂತಲೂ ಹೇಳಿದ್ದಾರೆ. ಎಂದರೆ ಅವನಿಗೆ ಯಾವ ಆಧಾರಗಳಿಲ್ಲ, ಆದರೆ ಅವನೇ ಎಲ್ಲರಿಗೂ ಆಧಾರನು ಎಂಬರ್ಥವಿದೆ. ಅವನು ನಿರಾಳನೆಂತಲೂ ಹೇಳಿದ್ದಾರೆ. ಅಂದರೆ ಸ್ವಚ್ಛವಾದ, ತಿಳಿಯಾದ ವಸ್ತುವು ಎಂಬ ಅರ್ಥವು. ಬ್ರಹ್ಮ, ಪರಬ್ರಹ್ಮ, ಪರಬ್ರಹ್ಮವಸ್ತು ಈ ಶಬ್ದಗಳು ಉಪನಿಷತ್ತುಗಳು ಮತ್ತು ಬೇರೆ ವೇದಾಂತ ಗ್ರಂಥಗಳಲ್ಲಿವೆ. ಅವು ಶಿವಶರಣರ ವಾಕ್ಯಗಳಲ್ಲಿಯೂ ಕೂಡ ಬರುತ್ತವೆ. ಆದರೆ ಅವರು ಅವುಗಳನ್ನು ಅಷ್ಟು ವಿಪುಲವಾಗಿ ಉಪಯೋಗಿಸುವುದಿಲ್ಲ. ಆದರೆ ಈ ಶಬ್ದಗಳು ಅವರ ದೃಷ್ಟಿಯಿಂದ ಸಮಾನಾರ್ಥವುಳ್ಳವುಗಳಾಗಿವೆ. ವಚನಕಾರರಲ್ಲಿ ಶಿವ, ಪರಶಿವ, ದೇವರು ಎಂಬುದು ಶೂನ್ಯ ಸ್ಥಿತಿಗಳ ತರುವಾಯ ಪ್ರಕಟವಾಗುವುದೆಂಬ ಅಭಿಪ್ರಾಯವಿದೆ. ಶೂನ್ಯ ಸ್ಥಿತಿಯಲ್ಲಿ ನಾಲ್ಕು ಬಗೆಗಳಿವೆ ( ಮುಂದೆ ೨೦ನೇ ನಂಬರು ನೋಡಿರಿ ). ಇವುಗಳ ತರುವಾಯ ಈ ಪರಶಿವನು ಪ್ರಕಟನಾಗುತ್ತಾನೆ. ಆಗ ಅವನು ಶರಣ, ಜಂಗಮ ಎಂಬ ಶಬ್ದಗಳಿಂದಲೂ ಅನೇಕ ವಚನಗಳಲ್ಲಿ ಸಂಬೋಧಿಸಲ್ಪಟ್ಟಿದ್ದುಂಟು. ಮೊದಲು ಶರಣನು ಉದಯನಾಗುವನೆಂದು ವಚನಕಾರರು ಹೇಳುತ್ತಾರೆ. ಒಮ್ಮೊಮ್ಮೆ

ಅವರು ಜಂಗಮನ ವರ್ಣನೆ ಮಾಡುವಲ್ಲಿಯೂ ಜಂಗಮನು ಜಗದ್ಭರಿತನಾಗುತ್ತಾನೆಂದು ಅನೇಕ ವಿಶೇಷಣಗಳಿಂದ ಅತ್ಯಂತ ಭಾವನಾಮಯವಾಗಿ ಹೇಳುವುದೂ ಉಂಟು. ಆಗ ಪರಶಿವ ಎಂಬ ಅಭಿಪ್ರಾಯದಿಂದ ಈ ಶಬ್ದಗಳನ್ನು ಅವರು ಉಪಯೋಗಿಸುತ್ತಾರೆ. ಸಾಂಖ್ಯಶಾಸ್ತ್ರದಲ್ಲಿ, ಪುರುಷ, ಪ್ರಕೃತಿ ಎಂಬ ಶಬ್ದಗಳಿವೆ. ಈ ಶಬ್ದಗಳನ್ನು ಸಹ ವಚನಕಾರರೂ ಉಪಯೋಗಿಸುವುದುಂಟು. ಆದರೆ ಈ ಶಬ್ದಗಳು ಅಂದರೆ (೧) ಪುರುಷ-ಮತ್ತು ಪರಶಿವ, (೨) ಪ್ರಕೃತಿ ಮತ್ತು ಅಂಗ ಇವೆರಡೂ ಗುಂಪುಗಳು ಸಮಾನಾರ್ಥವುಳ್ಳವು. ಆದರೆ ಪ್ರಕೃತಿ, ಪುರುಷ ಈ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರುವುದಿಲ್ಲ; ಕ್ವಚಿತ್ತಾಗಿ ಬರುತ್ತವೆ. ಬಸವನು ತನ್ನ ಕೆಲವು ವಚನಗಳಲ್ಲಿ ಪರಮಾತ್ಮನನ್ನು ಪುರುಷ ಎಂಬ ಹೆಸರಿನಿಂದಲೂ ಕರೆದಿದ್ದಾನೆ. ಉದಾಹರಣಾರ್ಥವಾಗಿ,

"ಸಹಸ್ರ ಶೀರ್ಷನಾದಿ ಪುರುಷನು, ತ್ರಿಪಾದೂರ್ಧ್ವ ಪುರುಷನೊಬ್ಬ ಪುರುಷನು, ಉದಸ್ಮುಖನೊಬ್ಬ ಪುರುಷನು, ಉದಯ ಪುರುಷನೊಬ್ಬ ಪುರುಷನು, ವಿರಾಟ್ ಪುರುಷನೊಬ್ಬ ಪುರುಷನು" ಇತ್ಯಾದಿ.

೧೯. **ಚಿತ್, ಮೂಲಚಿತ್ತು, ಚಿದ್ಬ್ರಹ್ಮಾಂಡ, ಚಿದ್ರೂಪ, ಚಿತ್ ಸ್ವರೂಪು, ಚಿನ್ಮಯ, ಜ್ಞಾನಚಿತ್ತು** : ಶೂನ್ಯ ಸ್ಥಿತಿಗಳಾದ ಬಳಿಕ ಚಿತ್ತು ಉದ್ಭವಿಸುತ್ತದೆ. ಆಗ ಅದು ಮೂಲಚಿತ್ತುವೆಂತಲೂ ಹೇಳಲ್ಪಡುತ್ತದೆ. ಜ್ಞಾನ ಚಿತ್ತುವೆಂತಲೂ ಅದಕ್ಕೆ ಬೇರೆ ಹೆಸರು ಇದೆ. ಒಮ್ಮೊಮ್ಮೆ ಬರೀ ಚಿತ್ತುವೇತಲೂ ಅದಕ್ಕೆ ಅನ್ನುವುದುಂಟು. ಆದರೆ ಈ ಮೂಲಚಿತ್ತುವಿನಕ್ಕಿಂತಲೂ ಸ್ಥೂಲತರವಾದುದು ಈ ಚಿತ್ತು. ಈ ಎರಡೂ ಶಬ್ದಗಳು ವಚನಗಳಲ್ಲಿರುವುದು ತೋರಿಬರುತ್ತದೆ. ಆದ್ದರಿಂದ ಮೂಲಚಿತ್ತು ಯಾವುದು, ಚಿತ್ತು ಯಾವುದು ಎಂಬುದನ್ನು ಸಂದರ್ಭಾನುಸಾರವಾಗಿ ಕಂಡು ಹಿಡಿಯಬೇಕು. ಪರಮಾತ್ಮನಲ್ಲಿ ಲೀಲೆಯುಂಟಾಗಲು ಈ ಮೂಲ ಚಿತ್ತು ಉಗಮಿಸುತ್ತದೆ. ಈ ಲೀಲೆಯೆಂದರೆ ಜಗತ್ತು ಹುಟ್ಟಿಸಬೇಕೆಂಬ ಒಂದು ಬಗೆಯ ಅಪೇಕ್ಷೆ ಅಥವಾ ನೆನಹು ಎಂದು ಹೇಳಬಹುದು. ಈ ಮೂಲಚಿತ್ತು ಎಲ್ಲ ಪದಾರ್ಥಗಳಲ್ಲಿ ಅವ್ಯಕ್ತವಾಗಿ ವಾಸಿಸುತ್ತದೆ. ಆ ಮೇಲೆ ಅದರೊಳಗಿಂದ ನಾದಬಿಂದುಕಲೆಗಳು ಪ್ರಕಟವಾಗುತ್ತವೆ. ಅವಾದರೂ



ಆಗ ಚಿತ್‌ಸ್ವರೂಪು ಅಂದರೆ ಅತ್ಯಂತ ಸೂಕ್ಷ್ಮತರ ಸ್ಥಿತಿಯಲ್ಲಿರುತ್ತವೆ ಅವುಗಳಿಗೆ ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳೆಂಬ ಹೆಸರುಗಳು ಇವೆ. ಅವುಗಳೊಡನೆ ಮೂಲ ಚಿತ್ತು ಬೆರೆಯಲು ಓಂಕಾರರೂಪವಾದ ಪ್ರಣವವು ಉತ್ಪನ್ನವಾಗುತ್ತದೆ. ಅದೇ ಮಹಾಲಿಂಗವೆನಿಸಿಕೊಳ್ಳುತ್ತದೆ. ಈ ಮೂಲ ಚಿತ್ತುವಿನ ಮುಂದಿನ ಸ್ವರೂಪಿಗೆ ಬರೇ ಚಿತ್ತು ಎಂಬ ಹೆಸರಿದೆ. ಅದು ಪುನಃ ನಾದ ಬಿಂದು ಕಲೆಗಳೊಡನೆ ಕೂಡಲು ಈ ದೃಶ್ಯ ಜಗತ್ತು ತಲೆದೋರುತ್ತದೆ. ಹೀಗೆ ತಲೆದೋರಿದ ಜಗತ್ತಿನಲ್ಲಿ ಶಕ್ತಿಯು ವ್ಯವಹರಿಸಹತ್ತುತ್ತದೆ. ಈ ಶಕ್ತಿಯಲ್ಲಿ ಅನೇಕ ಪ್ರಕಾರಗಳಿರುತ್ತವೆ. ಹೀಗೆ ಇವೆಲ್ಲವೂ ಮೊದಲು ಮೂಲ ಚಿತ್ತುವಿನಿಂದಲೇ ಹೊರಟಿರುತ್ತವೆ. ಈ ಮೂಲ ಚಿತ್ತು ಓಂಕಾರದ ಮೂಲಕ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿರುತ್ತದೆ. ಅದನ್ನು ಈ ಸ್ಥಿತಿಯಲ್ಲಿ (ether) ಎಂದು ಆಧುನಿಕ ವಿಜ್ಞಾನಶಾಸ್ತ್ರದ ಶಬ್ದದಿಂದ ಕರೆಯಬಹುದು. ಚಿದ್ಬ್ರಹ್ಮಾಂಡ, ಚಿದ್ರೂಪು, ಚಿತ್‌ಸ್ವರೂಪು ಚೈತನ್ಯಸ್ವರೂಪು, ಎಂದು ಹೇಳಿಸಿಕೊಳ್ಳುವುಗಳೆಲ್ಲವೂ ಈ ಮೂಲಚಿತ್ತುವಿನಿಂದ ಕೂಡಿಕೊಂಡಿವೆ. ಈ ಮೂಲ ಚಿತ್ತು ಅವುಗಳಲ್ಲಿ ಬೆರೆತು ಪ್ರಕಾಶಿಸದೆ ಇದ್ದಲ್ಲಿ ಅವು ತೋರಲಾರವು. ಅದುದರಿಂದ ಮೂಲಚಿತ್ತು ಪರಮಾತ್ಮನ ಪ್ರಕಾಶವೆಂದು ಆಗಿಂದಾಗ್ಗೆ ವಚನಗಳಲ್ಲಿ ವರ್ಣಿಸಲ್ಪಡುವುದುಂಟು. ಅದು ಬೆಳತು ಎಂತಲೂ ಹೇಳುತ್ತಾರೆ. ಆಗ ಅದನ್ನು ಚಿತ್‌ಪ್ರಕಾಶವೆಂತಲೂ ಕರೆಯುತ್ತಾರೆ. ಚಿದಾನಂದವೆಂತಲೂ ಹೇಳುತ್ತಾರೆ. ನೆನಹು ಎಂತಲೂ ಒಮ್ಮೊಮ್ಮೆ ಕರೆಯುವುದುಂಟು. ಅಂದರೆ ಈ ಮೂಲಚಿತ್ತುವು ಅತ್ಯಂತ ಆನಂದಮಯವಾದದ್ದು, ಅತ್ಯಂತ ಪ್ರಕಾಶಮಾನವಾದದ್ದು, ಅತ್ಯಂತ ಜ್ಞಾನಮಯವಾದದ್ದು ಎಂದು ಅದರ ಅತ್ಯುತ್ಕೃಷ್ಟತೆಯನ್ನು ವಚನಕಾರರು ವರ್ಣಿಸುತ್ತಾರೆ. ಆದರೆ ಇಂಥ ಶಬ್ದಗಳನ್ನು ಉಪಯೋಗಿಸುವಲ್ಲಿ ವಚನಕಾರರು ಸೃಷ್ಟಿಯಲ್ಲಿ ಕಾಣುವಂಥ ಈ ಗುಣಗಳೇ ಮೂಲಚಿತ್ತುವೆಂದು ಭಾವಿಸಬಾರದು. ಸಾಮಾನ್ಯ ಜನರಿಗೆ ತಿಳಿಯುವ ಉದ್ದೇಶದಿಂದ ಆನಂದ, ಪ್ರಕಾಶ ಇವೇ ಮೊದಲಾದ ಶಬ್ದಗಳನ್ನು ಅವರು ಉಪಯೋಗಿಸುತ್ತಾರೆ. ಆದರೆ ನಿಜವಾಗಿ ಮೂಲಚಿತ್ತು ಆಕಾರ ರಹಿತವಾದದ್ದು, ನಿಷ್ಕ್ರಿಯೆಯುಳ್ಳದ್ದು, ಆಗಮ್ಯವಾದದ್ದು ಇದೆ.

೨೦. (ಅ) ನಿಶ್ಶೂನ್ಯ; (ಬ) **ಸರ್ವಶೂನ್ಯ, ಮಹಾಶೂನ್ಯ;**
**ಸರ್ವಶೂನ್ಯನಿರಾಲಂಬ;** (ಕ) **ಶೂನ್ಯಲಿಂಗ (ಡ) ನಿಃಕಲಲಿಂಗ:**
ವಚನಕಾರರು ಶೂನ್ಯದಲ್ಲಿ ಕೆಲವು ವಿಭಾಗಗಳನ್ನು ಮಾಡುತ್ತಾರೆ. ಅನ
ಲ್ಲವೂ ಏನೂ ಇಲ್ಲದಂಥ ಸ್ಥಿತಿಗಳು. ಅವುಗಳಲ್ಲಿ ನಾಲ್ಕು ಮುಖ್ಯವಾದವು
ಗಳು. ಸರ್ವಶೂನ್ಯ, ಮಹಾಶೂನ್ಯ, ಸರ್ವಶೂನ್ಯ ನಿರಾಲಂಬ ಇವೆಲ್ಲವು
ಗಳೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಇದರ ತರುವಾಯ ಶೂನ್ಯ
ಲಿಂಗವು ಉದ್ಭವಿಸುತ್ತದೆ. ಆದರ ತರುವಾಯ ನಿಃಕಲಲಿಂಗವು ಉದ್ಭವಿ
ಸುತ್ತದೆ. ಈ ಕಡೆಯ ಎರಡೂ ಸ್ಥಿತಿಗಳೂ ಕೂಡ ಶೂನ್ಯವಿರುತ್ತವೆ. ಆದರೆ
ನಿಃಕಲಲಿಂಗದಕ್ಕಿಂತಲೂ ಹೆಚ್ಚು ಶೂನ್ಯವಾದದ್ದು ಶೂನ್ಯಲಿಂಗವು. ಈ
ಶೂನ್ಯಲಿಂಗಕ್ಕಿಂತಲೂ ಹೆಚ್ಚು ಶೂನ್ಯವಾದುದು ಸರ್ವಶೂನ್ಯನಿರಾಲಂಬವೆ
ಎಂದು ಭಾವಿಸಬೇಕು. ಇವೆಲ್ಲವೂ ಮನುಷ್ಯನ ಇಂದ್ರಿಯಗಳಿಗೆ ಮತ್ತು
ವಿಚಾರಕ್ಕೆ ನಿಲುಕದಂಥವು ಇರುತ್ತವೆ. ವಚನಕಾರರು ಈ ಮೂರು
ಸ್ಥಿತಿಗಳನ್ನು ದಾಟಿದರೂ ಮತ್ತೂ ಇಲ್ಲ ಎಂಬುದನ್ನು ಸೂಚಿಸುವುದಕ್ಕೋ-
ಸ್ಕರ ನಿಶ್ಶೂನ್ಯವೆಂತಲೂ ನಾಲ್ಕನೆಯದಾಗಿ ಒಮ್ಮೊಮ್ಮೆ ಹೇಳುವುದುಂಟು.
ವಚನಕಾರರು ಯಾವುದೂ ಇಲ್ಲ, ಇಲ್ಲ, ಇಲ್ಲ, ಎಂದು ಹೇಳುತ್ತ ಈ ಎಲ್ಲ
ಸ್ಥಿತಿಗಳನ್ನು ವರ್ಣಿಸುತ್ತ ಹೋಗುತ್ತಾರೆ. ಅವು ಅನಿರ್ವಾಚ್ಯ ಅಂದರೆ
ಹೇಳಲು ಬಾರದಂಥವು ಎಂತಲೂ, ನಿರಾಲಂಬ ಎಂದರೆ ಆಶ್ರಯವಿಲ್ಲದೆ
ಸ್ವತಂತ್ರವಾಗಿ ಇರುವಂಥವೆಂತಲೂ ಅವರು ಹೇಳುವುದುಂಟು.

೨೧. **ಮೋಕ್ಷ, ಮುಕ್ತಿ, ಸಾಮರಸ್ಯ, ಐಕ್ಯ, ಲಿಂಗಾಂಗ**
**ಸಾಮರಸ್ಯ, ಕೈವಲ್ಯ, ಅದ್ವೈತ, ಸಮರಸ, ಸಮರಸಭಾವ:**

ಪರಮಾತ್ಮನು ಮನುಷ್ಯನಿಂದ ಬೇರೆಯಾದ ಒಂದು ವಸ್ತುವಿದ್ದಾನೆ
ಎಂಬ ಕಲ್ಪನೆಯು ಜನರಲ್ಲಿರುತ್ತದೆ. ಆದ್ದರಿಂದ ಮನುಷ್ಯನ ಅಂತಿಮ
ಧ್ಯೇಯವು ಅವನನ್ನು ಭಜಿಸಿ ಅವನ ಪ್ರೀತಿಯನ್ನು ಸಂಪಾದಿಸಿ ಅವನ ಸನ್ನಿ
ಧಾನದಲ್ಲಿ ಇರುವುದಿದೆಂದು ಭಾವಿಸುತ್ತಾರೆ. ಬೇರೆ ಕೆಲವರು ಅವನಲ್ಲಿ
ಬೆರೆತು ಹೋಗುವುದಿರುತ್ತದೆಂದು ಭಾವಿಸುತ್ತಾರೆ ಅಂದರೆ ತಾನು ಮತ್ತು
ಪರಮಾತ್ಮ ಇವೆರಡೂ ವಸ್ತುಗಳು ಬೇರೆ ಇವೆ ಎಂದು ಅವರ ವಿಚಾರಗಳಿದ್ದ
ಹಾಗಾಯಿತು. ಆದರೆ ವೀರಶೈವರಲ್ಲಿ ಇಂಥ ವಿಚಾರಗಳಿಲ್ಲ. **ಪರಮಾತ್ಮನು**



ಜಗತ್ತಿನಲ್ಲೆಲ್ಲ ಹರಡಿರುತ್ತಾನೆ. ಹಾಗೆಯೇ ಅವನು ತನ್ನಲ್ಲಿಯೂ ಕೂಡ
ಇದ್ದಾನೆ ಎಂದು ಅವರು ತಿಳಿದಿರುತ್ತಾರೆ. ಆದರೆ ಅವನು ಇನ್ನೂ ಅವನಲ್ಲಿ
ಪ್ರಕಟವಾಗಿರುವುದಿಲ್ಲ. ಆದ್ದರಿಂದ ಅವನನ್ನು ಮನುಷ್ಯನು ತನ್ನಲ್ಲಿ ಪ್ರಕ
ಟಮಾಡಿಕೊಳ್ಳಬೇಕು. ಹೀಗ ಪರಮಾತ್ಮನು ತನ್ನಲ್ಲಿ ಪ್ರಕಟವಾಗುವಂತೆ
ಮನುಷ್ಯನ ವರ್ತನೆ ಇರಬೇಕು. ಇಂಥ ವರ್ತನೆಯಿಂದ ಮನುಷ್ಯನ
ಶಕ್ತಿಗಳು ವಿಕಾಸಹೊಂದುವುವು. ಅಂದರೆ ಅವುಗಳಲ್ಲಿ ಲಿಂಗದ ಕಳೆಯು
ಸ್ಥಾಪನೆ ಹೊಂದುವುದು. ಮನುಷ್ಯನ ಶುದ್ಧ ವೃತ್ತಿಗಳು ಸ್ಥಿರಗೊಂಡ
ಹಾಗೆ ಲಿಂಗವೂ ಕೂಡ ಅವನ ಮನ. ವಚನ, ಕಾಯಗಳಲ್ಲಿ ನೆಲೆಸುವುದು.
ಇದೇ ಲಿಂಗದ ನಡೆ, ಲಿಂಗದ ನುಡಿ, ಎಂದು ವಚನಕಾರರು ಹೇಳುವ
ದುಂಟು. ವೀರಶೈವರು ಕೈಲಾಸ, ವೈಕುಂಠ, ಸ್ವರ್ಗ. ಇಂಥ ಯಾವುದೋ
ಒಂದು ಸ್ಥಲದಲ್ಲಿ ಪರಮಾತ್ಮನು ವಾಸಿಸುತ್ತಾನೆ ಎಂದು ಭಾವಿಸಿಲ್ಲ ಅವರ
ಪ್ರಕಾರ ಪಾರ್ವತೀ, ಷಣ್ಮುಖ, ಗಣಪತಿ, ಇವರೆಲ್ಲರೂ ಕಾಲ್ಪನಿಕ ದೇವತೆ
ಗಳು. ಅವೆಲ್ಲವೂ ಪೌರಾಣಿಕ ಕಾಲದಲ್ಲಿ ಜನರು ಕಲ್ಪಿಸಿದವುಗಳಿವೆ.
ವೀರಶೈವರು ಅವುಗಳನ್ನು ನಂಬಬಾರದು. ವೀರಶೈವರಲ್ಲಿ ಪರಮಾತ್ಮನ
ವಿಷಯವಾಗಿ ಇಂಥ ಕಲ್ಪನೆಗಳಿರುವುದರಿಂದ ಅವರು ದೇವಾಲಯಗಳನ್ನು
ನಂಬುವುದಿಲ್ಲ. ಅವರಿಗೆ ತಮ್ಮ ದೇಹವೇ ದೇವಾಲಯವು. ಈ ಅಭಿಪ್ರಾಯದ
ವಚನಗಳು ಅವರಲ್ಲಿ ಹೇರಳವಾಗಿ ದೊರಕುತ್ತವೆ. ಆಕಾಶದಲ್ಲಿ ಇಂದ್ರ
ಧನುಸ್ಸು ಉತ್ಪನ್ನವಾಗಿ ಅದು ಅಲ್ಲಿಯೇ ಅಡಗುವಂತೆ, ಶಿವತತ್ವದಲ್ಲಿ
ಮನುಷ್ಯನು ಉಗಮಹೊಂದಿ ಅಲ್ಲಿಯೇ ಅವನು ಕಡೆಗೆ ಲಯವಾಗು
ತ್ತಾನೆ. ಇದೇ ಸಾಮರಸ್ಯವು ಅಥವಾ ಮೋಕ್ಷವು. ಮನುಷ್ಯನು ತನ್ನ
ಈ ಧ್ಯೇಯವನ್ನು ತಾನೇ ಸಾಧಿಸಿಕೊಳ್ಳತಕ್ಕದ್ದು. ಅದು ಅವನ ಪ್ರಯ
ತ್ನದಿಂದಲೇ ಜರುಗಬೇಕು. ಹೊರಗಿನವರು ಅವನಿಗೆ ಕೇವಲ ಮಾರ್ಗ
ದರ್ಶಕರಾಗಿದ್ದಾರೆ. ಅವನು ಹೀಗೆ ನಡೆಯುತ್ತ ಹೋದಲ್ಲಿ ಅವನ ಎಲ್ಲ
ಶಕ್ತಿಗಳು ವಿಕಾಸಹೊಂದುತ್ತವೆ. ಈ ವಿಕಾಸವೇ ಲಿಂಗಪ್ರಾಪ್ತಿ ಎಂದೆನಿ
ಸಿಕೊಳ್ಳುತ್ತದೆ. ಆಗ ಈ ಲಿಂಗವು ಅವನ ಚಕ್ರಗಳಲ್ಲಿ ಮತ್ತು ಅವನ ಶಕ್ತಿ
ಗಳಲ್ಲಿ ವ್ಯವಹರಿಸಹತ್ತುತ್ತದೆ. ಇದರಿಂದ ವೀರಶೈವರಲ್ಲಿ ಸಮರಸಾಚರ
ಣೆಯು ಇದೆ. ಅವರಲ್ಲಿ ಭಿನ್ನಾಚಾರವಿಲ್ಲ. ಎಂದರೆ ತನ್ನಲ್ಲಿ ಲಿಂಗವಿದೆ,

ಎಂಬ ಭಾವನೆಯಿಂದಲೇ ಮನುಷ್ಯನು ತನ್ನ ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡಬೇಕು. ಅಂದರೆ ಅವನಲ್ಲಿ ಅದ್ವೈತಾಚಾರ ಉಂಟು. ಹೀಗೆ ಮನುಷ್ಯನು ಮೆಲ್ಲ ಮೆಲ್ಲನೆ ಏರುತ್ತ ಮೋಕ್ಷವನ್ನು ಹೊಂದಬೇಕು. ಇದೇ ಮುಕ್ತಿಯು, ಸಾಮರಸ್ಯವು, ಐಕ್ಯತೆಯು, ಕೈವಲ್ಯವು, ಲಿಂಗಾಂಗ ಸಾಮರಸ್ಯವು, ಸಮರಸವು, ಸಮರಸಭಾವವು. ಇವೆಲ್ಲವೂ ಪರ್ಯಾಯ ಶಬ್ದಗಳಾಗಿವೆ.

**೨೨. ಮಹಾಲಿಂಗ, ಪರಂಜ್ಯೋತಿರ್ಲಿಂಗ, ಜ್ಯೋತಿರ್ಲಿಂಗ:** ಶೂನ್ಯ ಸ್ಥಿತಿಗಳ ತರುವಾಯ ಮಹಾಲಿಂಗವು ಉದ್ಭವಿಸುತ್ತದೆ. ಇದು ಓಂಕಾರವೆಂಬ ಪ್ರಣವ ಸ್ವರೂಪವು. ತೇಜೋಮೂರ್ತಿಯಾಗಿದೆ ಅದು ಜಗತ್ತಿನಲ್ಲೆಲ್ಲ ತುಂಬಿಕೊಂಡಿದೆ ಅಣುವಿಗೆ ಅಣುವಾಗಿದೆ ಮಹತ್ತಿಗೆ ಮಹತ್ತಾಗಿದೆ. ಸಂಪೂರ್ಣ ಚೈತನ್ಯಮಯವಾಗಿದೆ. ಸರ್ವವ್ಯಾಪಕವಾಗಿದೆ. ಅಖಂಡವಾಗಿದೆ. ಇದು ಶೂನ್ಯಸ್ಥಿತಿ ಮತ್ತು ಜಗತ್ತು ಪ್ರಕಟವಾಗಿ ಸ್ಥಿತಿ ಇವುಗಳ ನಡುವಿನದೆಂದು ಹೇಳಬಹುದು. ಇಲ್ಲಿಂದಲೇ ದೃಶ್ಯ ಜಗತ್ತಿನ ಉದಯವು. ಇದು ಗೋಲಕಾಕಾರವೆಂದು ವರ್ಣಿಸಲ್ಪಡುತ್ತದೆ.

**೨೩. ಸಾದಾಖ್ಯಗಳು:** ಇವು ಮೇಲೆ ಸಂಖ್ಯೆ ೨೨ ನೆಯದರಲ್ಲಿ ವಿವರಿಸಿದ ಮಹಾಲಿಂಗದೊಳಗಿಂದ ಉದ್ಭವಿಸುತ್ತವೆ. ಮಹಾಲಿಂಗದಲ್ಲಿ ಜಗತ್ತು ಇನ್ನೂ ಪ್ರಕಟವಾಗಿರುವುದಿಲ್ಲ. ಆದರೆ ಪ್ರಕಟವಾಗಲು ಬೇಕಾಗುವ ಪರಿಸ್ಥಿತಿಯು ಅದರೊಳಗುಂಟಾಗಿರುತ್ತದೆ. ಈ ಮಹಾಲಿಂಗದೊಳಗಿಂದ ಸಾದಾಖ್ಯಗಳು ಜಗತ್ತಿನಲ್ಲಿ ಕ್ರಮೇಣ ತೋರಹತ್ತುತ್ತವೆ. ಈ ಸಾದಾಖ್ಯಗಳಲ್ಲಿ ಜಗತ್ತು ಪ್ರಕಟವಾಗಲು ಬೇಕಾಗುವ ಸಾಧನ ಸಾಮಗ್ರಿಗಳೆಲ್ಲ ಹೊರಪಡುತ್ತವೆ. ದೃಶ್ಯ ಪದಾರ್ಥಗಳಿಗೆಲ್ಲ ಬೇಕಾಗುವ ಸಾಮಗ್ರಿಗಳು ಸ್ವಾಭಾವಿಕವಾಗಿ ಅಸಂಖ್ಯವಾಗಿರುತ್ತವೆ. ಯಾಕಂದರೆ ಒಂದೊಂದು ಪದಾರ್ಥಕ್ಕೆ ಅನೇಕ ಬಗೆಯ ಸಾಮಗ್ರಿಗಳು ಬೇಕು. ಹೀಗೆ ಇಂಥ ಪದಾರ್ಥಗಳು ಅಗಣಿತವಾಗಿದ್ದರೂ ಕೂಡ ಅವುಗಳಿಗೆ ಬೇಕಾಗುವ ವಸ್ತುಗಳಲ್ಲಿ ವಚನಕಾರರು ಐದೇ ಮುಖ್ಯ ವರ್ಗಗಳನ್ನು ಮಾಡುವುದುಂಟು. ಇವುಗಳೆಲ್ಲವೂ ಐದು ಸಾದಾಖ್ಯಗಳಲ್ಲಿಯೇ ಇರುತ್ತವೆ. ಈ ಸಾದಾಖ್ಯಗಳು



ಮಹಾ ಸಾದಾಖ್ಯ, ಶಿವಸಾದಾಖ್ಯ, ಅಮೂರ್ತಿ ಸಾದಾಖ್ಯ, ಮೂರ್ತಿ ಸಾದಾಖ್ಯ, ಕರ್ತೃ ಸಾದಾಖ್ಯ, ಕರ್ಮ ಸಾದಾಖ್ಯ ಎಂದು ಇವೆ. ಅವು ಅನುಕ್ರಮವಾಗಿ ಒಂದರ ತರುವಾಯ ಒಂದು ಹೊರಡುತ್ತವೆ. ಮಹಾ ಸಾದಾಖ್ಯದಲ್ಲಿ ಹೊರಪಡುವ ಸಾಮಗ್ರಿಗಳು ಅತ್ಯಂತ ಸೂಕ್ಷ್ಮವಾದವುಗಳು. ಆ ಮೇಲೆ ಕ್ರಮವಾಗಿ ಹೊರಹೊರಡುವ ಸಾದಾಖ್ಯಗಳೊಳಗಿಂದ ಕ್ರಮೇಣ ಹೆಚ್ಚು ಹೆಚ್ಚು ಸ್ಥೂಲತರವಾದ ಸಾಮಗ್ರಿಗಳು ಉಂಟಾಗುತ್ತವೆ. ಈ ಸಾಮಗ್ರಿಗಳೆಂದರೆ ಶಕ್ತಿಗಳು, ಪಂಚಮಹಾಭೂತಗಳು, ಕಲೆಗಳು, ಪ್ರಣವಗಳು, ತತ್ವಗಳು ಇವೇ ಮುಖ್ಯವಾದವುಗಳಿರುತ್ತವೆ. ಇವುಗಳಲ್ಲಿ ಆವ ಆವವು, ಆವ ಆವ ಸಾದಾಖ್ಯಗಳಲ್ಲಿ ಪ್ರಕಟವಾಗುತ್ತವೆಂಬುದನ್ನು ವಚನಕಾರರು ತಮ್ಮ ವಚನಗಳಲ್ಲಿ ವಿವರಿಸುತ್ತಾರೆ. ಉದಾಹರಣಾರ್ಥವಾಗಿ, ಮಹಾಲಿಂಗವು ಓಂಕಾರ ಸ್ವರೂಪವಾಗಿರುತ್ತದೆ. ಈ ಓಂಕಾರದಿಂದ ಬೇರೆ ೫ ಪ್ರಣವಾಕ್ಷರಗಳು ಉಂಟಾಗುತ್ತವೆ. ಈ ಅಕ್ಷರಗಳಿಂದ ಪಂಚಕಲೆಗಳು ಉದ್ಭವಿಸುತ್ತವೆ. ಈ ಕಲೆಗಳಲ್ಲಿ ಪಂಚಶಕ್ತಿಗಳು ಪ್ರಕಟವಾಗುತ್ತವೆ. ಪಂಚಭೂತಗಳು ಒಂದು ಬಗೆಯ ಶಕ್ತಿಗಳಿದ್ದು ಇವು ಕೂಡ ಇವುಗಳೊಳಗಿಂದ ಹೊರಡುತ್ತವೆ. ಇವೆಲ್ಲವೂ ಜಗತ್ತು ನಿರ್ಮಾಣವಾಗಲು ಬೇಕಾಗುವ ಸಾಧನಸಾಮಗ್ರಿಗಳೇ ಇರುತ್ತವೆ. ಇವುಗಳೆಲ್ಲ ಕ್ರಮವಾಗಿ ಮೇಲೆ ಹೇಳಿದ ಪಂಚ ಸಾದಾಖ್ಯಗಳಲ್ಲಿ ತಲೆದೋರುತ್ತವೆ. ಮೊದಲಿನ ಮೂರು ಸಾದಾಖ್ಯಗಳಾದ ಮಹ, ಶಿವ, ಅಮೂರ್ತಿ ಇವು ಅತ್ಯಂತ ಸೂಕ್ಷ್ಮವಾದವುಗಳು. ಮುಂದಿನ ಮೂರು ಸಾದಾಖ್ಯಗಳಾದ ಮೂರ್ತಿ, ಕರ್ತೃ, ಕರ್ಮ ಇವು ಹೆಚ್ಚಿಗೆ ಸ್ಥೂಲವಾದವುಗಳು. ಇವುಗಳು ಲಿಂಗಗಳ ಪ್ರಕಾಶಗಳೆಂತಲೂ ಹೇಳಲ್ಪಡುತ್ತವೆ. ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಈ ಲಿಂಗಗಳ ಪ್ರಕಾಶವೇ ಸಾದಾಖ್ಯಗಳೆಂತಲೂ ವರ್ಣಿಸಲ್ಪಡುವುದುಂಟು.

ಈ ಸಾದಾಖ್ಯಗಳು ಶಿವಾಗಮಗಳಲ್ಲಿ ಉಲ್ಲೇಖವಾಗಿರುತ್ತವೆ ವಚನಕಾರರು ಅವುಗಳನ್ನೇ ತಮ್ಮ ವಚನಗಳಲ್ಲಿ ಪ್ರತಿಪಾದಿಸುತ್ತಾರೆ ಈ ಸಾದಾಖ್ಯಗಳು ಬ್ರಹ್ಮಾಂಡದಲ್ಲಿರುವಂತೆಯೇ ವ್ಯಕ್ತಿಯಲ್ಲಿಯೂ ಅಂದರೆ ಪಿಂಡಾಂಡಗಳಲ್ಲಿಯೂ ಇರುತ್ತವೆ. ಆಗ ಅವುಗಳ ವಿವರಣೆಯನ್ನು ಪಟ್ಟಿ

ಸ್ಥಲಾತ್ಮಕವಾಗಿ ವಚನಕಾರರು ಮಾಡುವುದುಂಟು. ಅವುಗಳು ಆ ಸ್ಥಲ, ಚಕ್ರ, ಲಿಂಗ ಈ ಮೊದಲಾದ ಶಬ್ದಗಳಿಂದ ವಿವೇಚಿಸಲ್ಪಡುತ್ತವೆ. ಆದರೆ ಸಾದಾಖ್ಯ ಈ ಶಬ್ದವನ್ನು ವಿಶ್ವಕ್ಕೆ ಸಂಬಂಧಿಸಿ ವಚನಕಾರರು ತಮ್ಮ ವಚನಗಳಲ್ಲಿ ಬಹುತರವಾಗಿ ನಿರೂಪಿಸುವುದುಂಟು.

೨೪. **ಪ್ರಣವ** : ಪ್ರಣವವು ಅಂದರೆ ಓಂಕಾರವು ಇದು ಮೇಲೆ ಸಂಖ್ಯೆ ೨೨ ಇದರಲ್ಲಿ ಹೇಳಿದಂತೆ ಮಹಾಲಿಂಗವಾಗಿರುತ್ತದೆ. ಮೇಲೆ ೧೧ ನೆಯದರಲ್ಲಿ ನಾದ, ಬಿಂದು, ಕಲೆಗಳು ವಿವರಿಸಲ್ಪಟ್ಟಿವೆ. ಇವುಗಳು ದೃಶ್ಯ ಪದಾರ್ಥಗಳಿಗೆ ಕಾರಣವಾದವುಗಳು. ಇವುಗಳ ಅತ್ಯಂತ ಆರಂಭದ ಸ್ವರೂಪಗಳು ಅಂದರೆ ಚಿತ್‌ಸ್ವರೂಪಗಳು. ಇವುಗಳು ಚಿನ್ನಾದ, ಚಿದ್ಬಿಂದು, ಚಿತ್ಕಲೆಗಳೇ— ಇದ್ದು ಅವು ಅನುಕ್ರಮವಾಗಿ ಅಕಾರ, ಉಕಾರ, ಮಕಾರಗಳೆಂದು ಹೇಳಲ್ಪಡುತ್ತವೆ. ಇವುಗಳಿಗೆ ಬೀಜಾಕ್ಷರಗಳೆಂಬ ಹೆಸರೂ ಇದೆ. ಇವುಗಳೊಡನೆ ಮೂಲಚಿತ್ತು ( ಮೇಲೆ ಸಂಖ್ಯೆ ೧೯ ನೋಡಿರಿ ) ಬೆರೆತೊಡನೆಯೇ ಓಂಕಾರವು ಅಂದರೆ ಪ್ರಣವವು ಉದ್ಭವಿಸುತ್ತದೆ. ಆದುದರಿಂದ ಅ, ಉ, ಮ ಇವುಗಳ ಬೆರಿಕೆಯೇ ಓಂಕಾರವೆಂದು ಹೇಳಲ್ಪಡುತ್ತದೆ. ನಾದ, ಬಿಂದು, ಕಲೆಗಳು ಜಗತ್ತಿನಲ್ಲೆಲ್ಲ ವ್ಯವಹರಿಸುತ್ತವೆಂದು ಹೇಳಿದ್ದರಿಂದ ಈ ಅ ಉ ಮ ಅಕ್ಷರಗಳಿಂದ ಕೂಡಿದ ಓಂಕಾರವು ಅಥವಾ ಮೂಲ ಪ್ರಣವವಾದರೂ ಈ ಜಗತ್ತಿನಲ್ಲೆಲ್ಲ ತುಂಬಿಕೊಂಡಿರುತ್ತದೆ. ಅದು ಅತ್ಯಂತ ಸೂಕ್ಷ್ಮವಾದುದರಿಂದ ಸ್ಥೂಲ ಶರೀರಿಯಾದ ಮಾನವನ ಶ್ರೋತ್ರಕ್ಕೆ ಕೇಳಬರುವುದಿಲ್ಲ. ಹಾಗೆ ಕೇಳಬರದಿದ್ದರೂ ಅದು ವಿಶ್ವವನ್ನು ಆವರಿಸಿದೆ. ಈ ಅ, ಉ, ಮ ಅಕ್ಷರಗಳು ಬೀಜಾಕ್ಷರಗಳೆಂಬ ಹೆಸರಿನಿಂದ ಹೇಳಲ್ಪಡುವುವಲ್ಲದೆ ಅವು ಅನುಕ್ರಮವಾಗಿ ರುದ್ರ, ಈಶ್ವರ, ಸದಾಶಿವ, ಎಂಬ ಅಧಿದೇವತೆಗಳ ಸ್ಥಾನಗಳೆಂತಲೂ ಹೇಳಲ್ಪಡುವುದುಂಟು. ಅಲ್ಲದೆ ಅವು ಅನುಕ್ರಮವಾಗಿ ಬ, ಸ, ವ, ಈ ಮೂರು ಅಕ್ಷರಗಳಿಂದ ಸಹ ಉಚ್ಚರಿಸಲ್ಪಡುವುದುಂಟು. ಆಗ ಇವಾದರೂ ಪ್ರಣವಾಕ್ಷರ ಅಥವಾ ಬೀಜಾಕ್ಷರಗಳೆಂದು ವಚನಕಾರರು ಹೇಳಿರುವರು. ಆದರೆ ಇಲ್ಲಿ ಬಸವ ಎಂದರೆ ಬಿಜ್ಜಳನ ಮಂತ್ರಿಯಾದ ಬಸವನು ಎಂಬ ಭಾವವಿರದೆ ಯಾವ ಅ, ಉ, ಮ ಬೀಜಾಕ್ಷರಗಳನ್ನು ಉಚ್ಚರಿಸುವಲ್ಲಿ ಯಾವ ಭಾವವಿರಬೇಕೋ, ಆ



ಭಾವವೇ ಮುಖ್ಯವಾಗಿದ್ದುಕೊಂಡು ಈ ಮೂರು ಬ, ಸ, ವ ಅಕ್ಷರಗಳನ್ನು ಉಚ್ಚರಿಸಿದಲ್ಲಿ ಪರಿಣಾಮದಲ್ಲಿ ಮೂಲ ಅ, ಉ, ಮ ಈ ಬೀಜಾಕ್ಷರಗಳಷ್ಟೇ ಇವಾದರೂ ಪರಿಣಾಮಕಾರಿಗಳು ಮತ್ತು ಅರ್ಥಬೋಧಕವಾದವುಗಳು ಎಂದು ತಿಳಿಯಬೇಕು.

೨೫. **ಷಟ್‌ಸ್ಥಲ ಬ್ರಹ್ಮಮೂರ್ತಿಗಳು** : ಒಂದೊಂದು ಸಾದಾಖ್ಯಕ್ಕೆ ಒಬ್ಬೊಬ್ಬ ಅಧಿದೇವತೆಗಳಿರುತ್ತಾರೆ. ಪರಶಿವನ ಸ್ವರೂಪಗಳೇ ಇವರು ಎಂದು ಹೇಳಬಹುದು. ಸಾದಾಖ್ಯಗಳಲ್ಲಿ ಹೊರಡುವ ಶಕ್ತಿಗಳು, ತತ್ವಗಳು, ಮೊದಲಾದವುಗಳನ್ನು ನಿಯಂತ್ರಣ ಮಾಡುವ ಕಾರ್ಯವನ್ನು ಈ ಅಧಿದೇವತೆಗಳು ಮಾಡುತ್ತಾರೆ. ಅವರ ಹೆಸರುಗಳು ಅನುಕ್ರಮವಾಗಿ (೧) ಪರಬ್ರಹ್ಮ ಅಥವಾ ಪರಶಿವ (೨) ವಿಜ್ಞಾನಬ್ರಹ್ಮ (೩) ಬ್ರಹ್ಮಾನಂದ ಬ್ರಹ್ಮ (೪) ಕಲಾಬ್ರಹ್ಮ (೫) ಪಿಂಡಬ್ರಹ್ಮ (೬) ಮೂರ್ತಿಬ್ರಹ್ಮ ಎಂದು ಇರುತ್ತವೆ. ಆದರೆ ಈ ಶಬ್ದಗಳನ್ನು ವಚನಕಾರರು ಬಹಳ ಉಪಯೋಗಿಸುವುದಿಲ್ಲ. ಇವುಗಳ ಬದಲು ಅವರು ಉಪಯೋಗಿಸುವ ಶಬ್ದಗಳು ಅನುಕ್ರಮವಾಗಿ (೧) ಪರಶಿವ, ಅಥವಾ ಶರಣ, ಅಥವಾ ಜಂಗಮ ಅಥವಾ ಆತ್ಮ (೨) ಸದಾಶಿವ (೩) ಶಿವ (೪) ರುದ್ರ (೫) ವಿಷ್ಣು (೬) ಬ್ರಹ್ಮ ಇವುಗಳು ಇರುತ್ತವೆ. ಇವುಗಳಲ್ಲಿ ಬ್ರಹ್ಮನು ಉತ್ಪತ್ತಿಗೆ ಕರ್ತನು, ವಿಷ್ಣುವು ರಕ್ಷಿಸುವುದಕ್ಕೆ ಕರ್ತನು, ರುದ್ರನು ಸಂಹಾರಕ್ಕೆ ಕರ್ತನು, ಈಶ್ವರನು ತಿರೋಧಾನಕ್ಕೆ ಕರ್ತನು, ಸದಾಶಿವನು ಅನುಗ್ರಹಕ್ಕೆ ಕರ್ತನು. ಈ ಮೇರೆಗೆ ಭಾವಿಸಲ್ಪಟ್ಟಿವೆ. ಸೃಷ್ಟಿಯ ಕಾರ್ಯಗಳಲ್ಲಿ ಈ ಎಲ್ಲ ಕಾರ್ಯಗಳು ಬೇಕೇಬೇಕು. ಈ ಬ್ರಹ್ಮರು ಅಥವಾ ಅಧಿದೇವತೆಗಳು ಸೃಷ್ಟಿಯ ಪ್ರಕಟನೆಯ ಕಾರ್ಯದಲ್ಲಿ ಸಂಗತೆಯನ್ನು ಉಂಟುಮಾಡಲು ಕಾರಣೀಭೂತರಾಗಿದ್ದಾರೆ. ಶಿವಶರಣರು ಈ ಹೆಸರುಗಳ ಬದಲು ಬೇರೆ ರೀತಿಯ ಹೆಸರುಗಳನ್ನು ಉಪಯೋಗಿಸುವುದೂ ಉಂಟು. ಪರಶಿವನಿಗೆ ಪಂಚಮುಖಗಳೆಂದು ಹೇಳಲ್ಪಡುವವಷ್ಟೇ. ಅವರು ಈ ಪಂಚಬ್ರಹ್ಮದ ಬದಲು ಈ ಮುಖಗಳ ಹೆಸರುಗಳನ್ನೇ ಉಪಯೋಗಿಸುತ್ತಾರೆ. ಆ ಮುಖಗಳು ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಇವುಗಳು ಇರುತ್ತವೆ. ಪರಶಿವನು ಈ ತನ್ನ ಮುಖಗಳ ಮುಖಾಂತರವಾ-

ಗಿಯೇ ಜಗತ್ತಿನ ನಾನಾವಿಧ ಕಾರ್ಯಗಳನ್ನು ನಡೆಸುವವೆಂದು ಅ ವಚನಗಳು ಹೇಳುತ್ತವೆ. ಆದರೆ ಶಿವನ ಪಂಚಮುಖೋತ್ಪನ್ನವಾದ ಈ ಹೆಸರುಗಳು ನಾವು ಈ ಬಗ್ಗೆ ಇಲ್ಲಿಯೇ ಮೇಲೆ ಹೇಳಿದ ಬೇರೆ ಹೆಸರುಗಳಿಂ ಭಿನ್ನವಾದುವಲ್ಲ.

೨೬. ಷಡಧ್ವಗಳು : ಅಧ್ವಗಳೆಂದರೆ ಮಾರ್ಗಗಳು. ಆರು ಮಾರ್ಗಗಳಿರುವುದರಿಂದ ಷಡಧ್ವಗಳೆಂದೆನಿಸಿಕೊಳ್ಳುತ್ತವೆ. ಅವು ಮಂತ್ರಾಧ್ವ, ಪದಾಧ್ವ, ವರ್ಣಾಧ್ವ, ಭುವನಾಧ್ವ, ತತ್ವಾಧ್ವ ಮತ್ತು ಕಲಾಧ್ವ ಎಂದಿರುತ್ತವೆ. ಹಿಂದೆ ಸೃಷ್ಟಿ ಎಂಬಲ್ಲಿ ಸಮಾಖ್ಯಗಳ ವಿವರಣೆ ಇರುತ್ತದಷ್ಟೆ. ಇವುಗಳು ಪ್ರಕಟವಾಗುವಲ್ಲಿ ವಿಶ್ವದಲ್ಲಿ ಒಂದು ಸಂಚಲನೆಯುಂಟಾಗುತ್ತದೆ. ಈ ಸಂಚಲನೆಯು ಯಾವ ಮಾರ್ಗಗಳಿಂದ ಪ್ರವಹಿಸುತ್ತದೋ ಅವು ಅಧ್ವಗಳೆನಿಸಿಕೊಳ್ಳುತ್ತವೆ. ಈ ಅಧ್ವಗಳ ಮೂಲಕವೇ ಸಂಚಲನೆಗಳು ಅಂದರೆ ಶಕ್ತಿ ಮೊದಲಾದವುಗಳು ಜಗತ್ತಿನಲ್ಲೆಲ್ಲ ವ್ಯವಸ್ಥಿತವಾಗಿ ಪ್ರವಹಿಸುತ್ತವೆ. ಅಧ್ವರಿಂದ ವಿಶ್ವವು ಪ್ರಕಟವಾಗಲು ಅವು ಸಹಾಯಕಾರಿಗಳಾಗಿವೆ. ಕಂಬಿಗಳ ಮೂಲಕ ಎಂಜಿನು ರೇಲ್ವೆ ಡಬ್ಬಿಗಳನ್ನು ಮುಂದುವರಿಸುತ್ತ ಹೇಗೆ ಹೋಗುತ್ತದೋ ಹಾಗೆಯೇ ಅಧ್ವಗಳೆಂಬ ಕಂಬಿಗಳ ಮೂಲಕ ಜಗತ್ತು ಮುಂದುವರಿಯುತ್ತದೆ. ಇವುಗಳ ಜ್ಞಾನದಿಂದ ಮನುಷ್ಯನಿಗೆ ಪ್ರಗತಿಯ ದ್ವಾರವು ತೋರುತ್ತದೆ. ಮತ್ತು ಅವನ ಮಾಯೆಯು ದೂರಾಗುತ್ತದೆ ಮಂತ್ರಾಧ್ವ, ಪದಾಧ್ವ, ವರ್ಣಾಧ್ವಗಳು ನಾದಾತ್ಮಕವಾಗಿವೆ. ಭುವನಾಧ್ವ, ತತ್ವಾಧ್ವ, ಕಲಾಧ್ವಗಳು ಬಿಂದುರೂಪವಾಗಿರುತ್ತವೆ. ಐವತ್ತೆರಡಕ್ಷರಗಳೇ ವರ್ಣಾಧ್ವ. ಈ ವರ್ಣಗಳ ಮೂಲಕ ಪದಗಳು ಉಂಟಾಗುತ್ತವೆ. ಇವೇ ಪದಾಧ್ವ. ಈ ಪದಗಳ ಮೂಲಕ ಮಂತ್ರಗಳು ಉತ್ಪನ್ನವಾಗುತ್ತವೆ. ಇವೇ ಮಂತ್ರಾಧ್ವವರ್ಗ. ಪದಗಳನ್ನೊಳಕೊಂಡ ಮಂತ್ರಗಳು ಎಲ್ಲೆಲ್ಲಿಯೂ ತುಂಬಿವೆ. ಭುವನಾಧ್ವಗಳು ೨೨೪ ಇವೆ. ಅವು ಬ್ರಹ್ಮಾಂಡದಲ್ಲೆಲ್ಲ ಪಸರಿಸಿವೆ. ತತ್ವಾಧ್ವ ೩೬ ಇವೆ. ಇವುಗಳು ವ್ಯಕ್ತ ಜಗತ್ತಿನ ಕಾರ್ಯಗಳಿಗೆ ಕಾರಣವಾಗುತ್ತವೆ. ಕಲಾಧ್ವಗಳು ಐದು ಇದ್ದು ಅವು ಪದಾರ್ಥಗಳಲ್ಲಿ ಬೆರೆತು ಅನೇಕ ತರದ ಪರಿಣಾಮಗಳನ್ನುಂಟು ಮಾಡುತ್ತವೆ. ಈ ಎಲ್ಲ



ಅಧ್ವಗಳ ಮೂಲಕವಾಗಿಯೇ ವಿಶ್ವದ ವ್ಯವಹಾರಗಳು ನಡೆಯುತ್ತವೆ. ಇವು ಬ್ರಹ್ಮಾಂಡದಲ್ಲಿರುವಂತೆಯೇ ಪಿಂಡಾಂಡ ಅಂದರೆ ವ್ಯಕ್ತಿಯಲ್ಲಿಯೂ ಇರುತ್ತವೆ. ಅವುಗಳ ಶುದ್ಧತೆಯ ಮೇಲೆ ಮನುಷ್ಯನ ಪ್ರಗತಿಯು ಅವಲಂಬಿಸಿರುತ್ತದೆ. ಇವುಗಳ ವಿವರಣೆಗಳು ಶಿವಸಿದ್ಧಾಂತಗಳ ಗ್ರಂಥಗಳಲ್ಲಿ ಹೆಚ್ಚಾಗಿ ಬರುತ್ತವೆ. ದ್ರಾವಿಡ ಶೈವರು ಇವುಗಳಿಗೆ ಬಹಳ ಮಹತ್ವ ಕೊಟ್ಟಿರುತ್ತಾರೆ. ಆದರೆ ವಚನಕಾರರು ತಮ್ಮ ಷಟ್‌ಸ್ಥಲಗಳ ನಿರೂಪಣೆಯಲ್ಲಿ ಇವುಗಳ ತತ್ವಗಳನ್ನು ಅವುಗಳಲ್ಲಿ ಸೇರ್ಪಡೆ ಮಾಡುತ್ತಾರೆ ಇದರಲ್ಲಿ ಅವರು ಶಿವಸಿದ್ಧಾಂತಿಗಳ ವಿವೇಚನೆಯಲ್ಲಿ ಕೆಲಮಟ್ಟಿಗೆ ಬದಲಾವಣೆಗಳನ್ನು ಮಾಡಿದ್ದು ಕಂಡುಬರುತ್ತದೆ. ಈ ವಿಷಯಗಳು ವಚನಶಾಸ್ತ್ರಸಾರ ಭಾಗ ೩. ಅನುಬಂಧ ೨ ಇದರಲ್ಲಿ ಹೆಚ್ಚಾಗಿ ನಿರೂಪಿಸಲ್ಪಟ್ಟಿವೆ.

೨೭. ಪಂಚಮಹಾಭೂತಗಳು : ಇವು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಎಂಬವುಗಳು ಇವೆ. ಇವು ನಮಗೆ ಪ್ರತ್ಯಕ್ಷ ಕಾಣುವ ಮಣ್ಣು, ನೀರು, ಬೆಂಕಿ, ಗಾಳಿ, ಮುಗಿಲು ಎಂದು ತಿಳಿಯಬಾರದು. ಅವುಗಳಿಗೆ ಈ ಅರ್ಥವು ಶಿವಾನುಭವ ಶಾಸ್ತ್ರದಲ್ಲಿಲ್ಲ. ಜಗತ್ತಿನಲ್ಲಿರುವ ಎಲ್ಲ ವಸ್ತುಗಳಿಗೆ ವಿಶಿಷ್ಟ ಕ್ರಿಯೆಗಳು, ಗುಣಧರ್ಮ ಕರ್ಮಗಳು ಇರುವವಷ್ಟೇ. ಅವುಗಳನ್ನುಂಟು ಮಾಡಲು ಯಾವ ತತ್ವಗಳು ಕಾರಣವಾಗುತ್ತವೋ ಅವುಗಳಲ್ಲಿ ವಚನಕಾರರು ೫ ವಿಭಾಗಗಳನ್ನು ಮಾಡಿ ಅವುಗಳು ಪೃಥ್ವೀ ತತ್ವ, ಅಪ್ಪು ತತ್ವ, ಅಗ್ನಿ ತತ್ವ, ವಾಯುತತ್ವ, ಆಕಾಶತತ್ವ ಇವುಗಳಿಂದ ಉಂಟಾಗುವವೆಂದು ಹೇಳುವುದುಂಟು. ಉದಾ:— ಪೃಥ್ವಿಗೆ ಭಾರತಳೆಯುವುದು, ಅಪ್ಪುವಿಗೆ ದ್ರವದಿಂದ ಮುದ್ದೆ ಮಾಡುವುದು, ಅಗ್ನಿಗೆ ಸುಡುವುದು, ವಾಯುವಿಗೆ ಸ್ಥಳಾಂತರ ಮಾಡುವುದು, ಆಕಾಶಕ್ಕೆ ಚರಿಸುವುದಕ್ಕೆ ತೆರವುಗುಡುವುದು, ಹೀಗೆ ಗುಣಗಳಿವೆಯೆಂದು ಅವರು ಹೇಳುತ್ತಾರೆ. ಈ ಗುಣಗಳೆಲ್ಲ ಜಗತ್ತಿನಲ್ಲಯ ಪದಾರ್ಥಗಳಲ್ಲೆಲ್ಲ ಹೆಚ್ಚು ಕಡಿಮೆ ಪ್ರಮಾಣಗಳಿಂದ ಇರುತ್ತವೆ. ಅಲ್ಲದೆ ಪೃಥ್ವಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಿವೆ. ಅಪ್ಪುವಿಗೆ ಶಬ್ದ, ಸ್ಪರ್ಶ, ರೂಪ, ರಸ ಎಂದು ೪ ಗುಣಗಳಿವೆ. ಅಗ್ನಿಗೆ ಶಬ್ದ, ಸ್ಪರ್ಶ, ರೂಪು ಮಾತ್ರಗಳಿವೆ. ವಾಯುವಿಗೆ ಶಬ್ದ ಸ್ಪರ್ಶಗಳಿವೆ. ಆಕಾಶಕ್ಕೆ ಶಬ್ದ ಮಾತ್ರವಿದೆ. ಇವುಗಳ ನಾನಾವಿಧ ಮಿಶ್ರ

ಣಗಳಿಂದ ವಿಧವಿಧವಾದ ಗುಣ ಧರ್ಮಗಳು ಪದಾರ್ಥಗಳಲ್ಲಿ ಉಂಟಾಗುತ್ತವೆ. ಇವೆಲ್ಲವುಗಳು ಈ ಪಂಚಮಹಾಭೂತಗಳ ಮೂಲಕವಾಗಿಯೆ ಉತ್ಪನ್ನವಾಗುತ್ತವೆಂದು ವಚನಕಾರರು ಬಗೆಯುತ್ತಾರೆ. ಆದ್ದರಿಂದ ಯಾವಯಾವ ವಸ್ತುಗಳಲ್ಲಿ ಯಾವ ಯಾವ ಗುಣಗಳಿರುತ್ತವೋ ಅವೆಲ್ಲವೂ ಆ ಗುಣಗಳಿಗೆ ಸಂಬಂಧಿಸಿದ ಮಹಾಭೂತಗಳಿಂದ ಉಂಟಾಗುತ್ತವೆಂದು ತಿಳಿಯಲ್ಪಟ್ಟಿದೆ. ಒಂದು ವಸ್ತುವಿನಲ್ಲಿ ಅನೇಕ ತರದ ಗುಣಗಳಿರಬಹುದು. ಈ ಎಲ್ಲ ಗುಣಗಳಿಗೆ ಕಾರಣವಾದವುಗಳು ಈ ಪಂಚ ಮಹಾಭೂತಗಳೇ ಇರುತ್ತವೆ. ಆದರೆ ಇವುಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಪರಸ್ಪರ ಕೂಡುವುದರಿಂದ ಪದಾರ್ಥಗಳ ವೈಶಿಷ್ಟ್ಯಗಳು ಉಂಟಾಗುತ್ತವೆ. ಉದಾ:— ಒಂದು ಪದಾರ್ಥವು ಅತ್ಯಂತ ಬಿಸಿಸು, ಮತ್ತೊಂದು ಅದಕ್ಕಿಂತ ಕಡಿಮೆ ಬಿಸಿಸು, ಅಥವಾ ಪ್ರವಾಹಿ, ಅಥವಾ ಉಗೆ ರೂಪುಳ್ಳದ್ದು ಇರಬಹುದು. ಪಂಚಮಹಾ ಭೂತಗಳು ಬೇರೆ ಬೇರೆ ಪ್ರಮಾಣಗಳಿಂದ ಆಯಾ ವಸ್ತುಗಳಲ್ಲಿ ಪರಸ್ಪರ ಕೂಡುವುದರಿಂದ ಈ ವಿವಿಧತೆಯು ಅವುಗಳಲ್ಲಿ ಉಂಟಾಗುತ್ತದೆ. ಈ ಪಂಚಮಹಾಭೂತಗಳು ಪಂಚಸಾದಾಖ್ಯಗಳಲ್ಲಿಯೇ ಅನುಕ್ರಮವಾಗಿ ಹುಟ್ಟುತ್ತವೆ. ಅಥವಾ ಅವೇ ಭಾವವುಳ್ಳ ಶಿವನ ಪಂಚ ಮುಖಗಳಿಂದಲೂ ಹುಟ್ಟುತ್ತವೆಂದು ಹೇಳಲ್ಪಡುವುದುಂಟು.

೨೮. **ಪಂಚೀಕರಣ :** ಪಂಚಮಹಾಭೂತಗಳಲ್ಲಿಯ ಪ್ರತಿಯೊಂದು ತತ್ವವು ಈ ಎಲ್ಲ ಐದು ತತ್ವಗಳಲ್ಲಿ ಕೂಡುತ್ತದೆ. ಉದಾ:— ಪೃಥ್ವಿಯಲ್ಲಿ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ತತ್ವಗಳು ಕೂಡುತ್ತವೆ. ಅಪ್ಪು ತತ್ವದಲ್ಲಿ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ತತ್ವಗಳು ಕೂಡುತ್ತವೆ. ಹೀಗೆ ಕೂಡುವುದರಿಂದ ಮನುಷ್ಯನ ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ವಾಯುಗಳು, ಪಂಚವಿಷಯಗಳು, ಕರಣಚತುಷ್ಟಯಗಳು ಹುಟ್ಟುತ್ತವೆ. ಇದಕ್ಕೆ ಮಹಾಭೂತಗಳ ಪಂಚೀಕರಣವೆಂದು ಹೆಸರಿರುತ್ತದೆ. ಪೃಥ್ವಿಯ ಪಂಚೀಕೃತಿ, ಉದಕದ ಪಂಚೀಕೃತಿ, ಅಗ್ನಿಯ ಪಂಚೀಕೃತಿ, ವಾಯುವಿನ ಪಂಚೀಕೃತಿ, ಆಕಾಶದ ಪಂಚೀಕೃತಿ, ಎಂದು ಹೇಳಲ್ಪಡುವುದುಂಟು. ಒಂದೊಂದು ಪಂಚೀಕೃತಿಯಲ್ಲಿ ಮನುಷ್ಯನ ಅವಯವಗಳೂ, ಇಂದ್ರಿಯಗಳೂ, ಅವನ ಕರಣಗಳೂ ಉಂಟಾಗುತ್ತವೆ. ಪೃಥ್ವಿಯ



ಪಂಚೀ ಕೃತಿಯಿಂದ ಪಾಯು, ಗಂಧ, ಘ್ರಾಣೇಂದ್ರಿಯ, ಪ್ರಾಣವಾಯು, ಅಹಂಕಾರ ಇವು ಹುಟ್ಟುತ್ತವೆ. ಉದಕದ ಪಂಚೀಕೃತಿಯಿಂದ ಗುಹ್ಯೇಂದ್ರಿಯ ರಸ, ಜಿಹ್ವೇಂದ್ರಿಯ ಅಪಾನವಾಯು, ಚಿತ್ತ, ಇವು ಹುಟ್ಟುತ್ತವೆ. ಅಗ್ನಿಯ ಪಂಚೀಕೃತಿಯಿಂದ ಪಾದೇಂದ್ರಿಯ, ರೂಪು, ನೇತ್ರೇಂದ್ರಿಯ, ಉದಾನವಾಯು ಬುದ್ಧಿ ಇವುಗಳು ಹುಟ್ಟುತ್ತವೆ. ವಾಯುವಿನ ಪಂಚೀಕೃತಿಯಿಂದ ಪ್ರಾಣೇಂದ್ರಿಯ, ಸ್ಪರ್ಶನ, ತ್ವಗಿಂದ್ರಿಯ, ವ್ಯಾನವಾಯು, ಮನಸ್ಸು ಹುಟ್ಟುತ್ತವೆ. ಆಕಾಶದ ಪಂಚೀ ಕೃತಿಯಿಂದ ವಾಗಿಂದ್ರಿಯ, ಶಬ್ದ, ಶ್ರೋತ್ರೇಂದ್ರಿಯ, ಸಮಾನವಾಯು, ಜ್ಞಾತೃತತ್ವ ಇವುಗಳು ಉಂಟಾಗುತ್ತವೆ.

೨೯. **ತತ್ವಗಳು :** ಇವು ೩೬ ಇವೆ. ಇವುಗಳ ಜ್ಞಾನದಿಂದ ಮನುಷ್ಯನು ತಾನಾರೆಂಬುದನ್ನು ಅರಿತು ತನ್ನ ಅಂತಃಶಕ್ತಿಗಳನ್ನು ಬೆಳಿಸಿಕೊಂಡು ಸಾಮರಸ್ಯವನ್ನು ಹೊಂದುವನು. ೩೬ ತತ್ವಗಳಲ್ಲಿ ೨೫ ತತ್ವಗಳಿದ್ದು ಅವುಗಳ ಜ್ಞಾನದಿಂದ ಮನುಷ್ಯನು ತನ್ನನ್ನು ತಾನು ತಿಳಿಯಲು ಶಕ್ತನಾಗುತ್ತಾನೆ. ಇವು ಐದು ಕರ್ಮೇಂದ್ರಿಯಗಳು ಐದು ಜ್ಞಾನೇಂದ್ರಿಯಗಳು ಐದು ಪ್ರಾಣಾದಿವಾಯುಗಳು ಐದು ಶಬ್ದಾದಿ ವಿಷಯಗಳು ನಾಲ್ಕು ಚಿತ್ತ ಮನ ಬುದ್ಧಿ ಅಹಂಕಾರಗಳು ಮತ್ತು ಜೀವನು ೧ ಹೀಗೆ ೨೫ ತತ್ವಗಳಿವೆ. ಇವುಗಳಿಗೆ ಆತ್ಮ ತತ್ವಗಳೆಂದು ಹೆಸರು. ಇವುಗಳನ್ನು ಅರಿತಾಗಲೇ ಮನುಷ್ಯನು ತಾನು ಹೇಗೆ ಆಚರಿಸಬೇಕೆಂಬುದನ್ನು ತಿಳಿಯುತ್ತಾನೆ. ಇವುಗಳಲ್ಲದೆ ಲಿಂಗ ತತ್ವಗಳು ೧೦ ಇವೆ. ಇವುಗಳಿಗೆ ವಿದ್ಯಾತತ್ವಗಳೆಂತಲೂ ಹೆಸರು ಇದೆ. ಇವು ಪಂಚ ಸಾದಾಖ್ಯಗಳು ಮತ್ತು ಪಂಚ ಕಲೆಗಳು ಇವೆ. ಪಂಚ ಸಾದಾಖ್ಯಗಳು ಹಿಂದೆ ಸಂಖ್ಯೆ ೨೩ರಲ್ಲಿ ಹೇಳಲ್ಪಟ್ಟವೆ. ಪಂಚಕಲೆಗಳು ಮುಂದೆ ಸಂಖ್ಯೆ ೩೦ ರಲ್ಲಿ ಹೇಳಲ್ಪಡುವುವು. ಇವುಗಳ ಜ್ಞಾನದ ಮೂಲಕವೇ ಮನುಷ್ಯನು ಉತ್ಕ್ರಾಂತಿಯನ್ನು ಹೇಗೆ ಹೊಂದಬೇಕೆಂಬುದು ತಿಳಿಯುತ್ತದೆ. ಕಲೆಗಳು ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠೆ, ನಿವೃತ್ತಿ ಇವುಗಳು ಇರುತ್ತವೆ. ಇವುಗಳಿಗೆ ತೂರ್ಯ ತತ್ವಗಳೆಂತಲೂ ಬೇರೊಂದು ಹೆಸರು ಇದೆ. ಇವೆಲ್ಲಕ್ಕೆ ಉತ್ತರವಾಗಿ ಶಿವ ತತ್ವವು ಇದೆ. ಮನುಷ್ಯನು ಈ ೧೦ ತತ್ವಗಳ ಸಹಾಯದಿಂದಲೂ ಕೂಡ ಶಿವತತ್ವದಲ್ಲಿ ಬೆರೆಯಬೇಕು. ಇದೇ ಲಿಂಗಾಂಗ ಸಾಮರಸ್ಯವು. ಬೆರೆಯುವ

ಕ್ರಮವು ಹೇಗೆಂದರೆ:— ನಿವೃತ್ತಿ ಕಲೆಯನ್ನು ಹೊಂದಿ ವಾಗಾದಿ ಕರ್ಮೇ ದ್ರಿಯಗಳು ಕರ್ಮಸಾದಾಖ್ಯವನ್ನು ಒಡಗೂಡಬೇಕು. ಆಗ ಪೃಥ್ವಿ ತತ್ವವು ಬಯಲಾಗುತ್ತದೆ. ಪ್ರತಿಷ್ಠಾ ಕಲೆಯನ್ನು ಹೊಂದಿ ಶಬ್ದ. ಷಿ ಯಗಳು ಐದು ಕರ್ತೃ ಸಾದಾಖ್ಯವನ್ನು ಕೂಡಿದಲ್ಲಿ ಅಪ್ಪುತತ್ವ ಬಯಲ ಗುತ್ತದೆ. ವಿದ್ಯಾಕಲೆಯನ್ನು ಹೊಂದಿ ಶ್ರೋತ್ರಾದಿ ಜ್ಞಾನೇಂದ್ರಿಯಗ ಮೂರ್ತಿಸಾದಾಖ್ಯವನ್ನು ಕೂಡಿದಲ್ಲಿ ತೇಜತತ್ವವು ಬಯಲಾಗುತ್ತದೆ ಶಾಂ ಕಲೆಯನ್ನು ಹೊಂದಿ ಪ್ರಾಣಾದಿ ವಾಯುಗಳು ಅಮೂರ್ತಿ ಸಾದಾಖ್ಯವನ್ ಒಡಗೂಡಿದಲ್ಲಿ ವಾಯು ತತ್ವವು ಬಯಲಾಗುತ್ತದೆ. ಶಾಂತ್ಯಾತೀತ ಕ ಯನ್ನು ಕೂಡಿ ಮನ ಬುದ್ಧಿ ಚಿತ್ತ ಅಹಂಕಾರ ಜೀವಗಳು ಶಿವಸಾದಾ ವನ್ನು ಕೂಡಿದಲ್ಲಿ ಆಕಾಶತತ್ವ ಬಯಲಾಗುತ್ತದೆ. ಹೀಗೆ ೨೫ ತತ್ವಗ ಲಿಂಗೈಕ್ಯವಾದಲ್ಲಿ ಆ ಲಿಂಗತತ್ವಗಳು ಹನ್ನೊಂದು ತಾವು ಪರಸ್ಪರ ಕೂ ಕೊಂಡು ಹೋಗುವವು. ಹೀಗೆ ಕೂಡಿದಲ್ಲಿ ಸರ್ವಶೂನ್ಯ ಸ್ಥಿತಿಯು ಪ್ರಾಪ್ತ ವಾಗುವದು.

೩೦. ಕಲೆಗಳು : ಇವು ಐದು ಇವೆ. ಅವು ಯಾವುವೆಂದರೆ ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ. ಮತ್ತು ನಿವೃತ್ತಿ. ಅಲ್ಲದೆ ಶಾಂತ್ಯಾತೀತೋತ್ತರ ಎಂತಲೂ ಬೇರೊಂದು ಕಲೆಯನ್ನು ಹೇಳುವುದುಂಟು ಅದು ಓಂಕಾರ ರೂಪವಾದ ಮಹಾಲಿಂಗದಲ್ಲಿ ಶೂನ್ಯಸ್ಥಿತಿಯಲ್ಲಿರುತ್ತದೆ ಆದ್ದರಿಂದ ಅದನ್ನು ಬಿಟ್ಟು ಪಂಚಕಲೆಗಳೆಂತಲೇ ಹೇಳುವ ವಾಡಿಕೆಯ ಉಂಟು. ನಾದ ಬಿಂದು ಕಲೆಗಳು ಮೂಲಚಿತ್ತುವಿನೊಡನೆ ಕೂಡಿಕೊಂಡ ಪ್ರಣವವಾಗುತ್ತದಷ್ಟೇ (ಸಂಖ್ಯೆ ೨೪ ಪ್ರಣವ ನೋಡಿರಿ. ) ಈ ಪ್ರಣವ ದಲ್ಲಿ 'ಯ, ವ, ಶಿ, ಮ, ನ ಎಂಬ ಮಂತ್ರಾಕ್ಷರಗಳು ಕ್ರಮೇಣ ಉತ್ಪನ್ನ ವಾಗುತ್ತವೆ. 'ಯ' ಇದು ಅತ್ಯಂತ ಸೂಕ್ಷ್ಮವು. ಮುಂದೆ ಅದರ ಸ್ಥೂಲ ರೂಪಗಳು ಕ್ರಮೇಣ ವ, ಶಿ, ಮ, ನ ಎಂದು ಇರುತ್ತವೆ. ಈ ಪಂಚಾ ಕ್ಷರಗಳಿಂದ ಶಾಂತ್ಯಾತೀತ, ಶಾಂತಿ, ವಿದ್ಯಾ, ಪ್ರತಿಷ್ಠಾ ಮತ್ತು ನಿವೃತ್ತಿ ಈ ಕಲೆಗಳು ಅನುಕ್ರಮವಾಗಿ ಉದಯವಾಗುತ್ತವೆ. ಈ ಐದು ಕಲೆ ಳಿಂದ ಐದು ಶಕ್ತಿಗಳು ಅಂದರೆ ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನ ಶಕ್ತಿ ಮತ್ತು ಕ್ರಿಯಾಶಕ್ತಿ ಇವುಗಳು ಉದಯವಾಗುತ್ತವೆ. ಈ ಐದು



ಶಕ್ತಿಗಳೇ ಜಗತ್ತಿನ ದೃಶ್ಯ ಪದಾರ್ಥಗಳನ್ನು ಉಂಟು ಮಾಡುತ್ತವೆ. ಈ ಪ್ರಕಾರ ಇವೆಲ್ಲವುಗಳ ಕ್ರಮವಿರುತ್ತದೆ. ಅಂದರೆ ಮೂಲಪ್ರಣವದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಪ್ರಣವಾಕ್ಷರಗಳಲ್ಲಿ ಜಗತ್ತಿಗೆ ಕಾರಣವಾಗಿ- ರುವ ಕಲೆಗಳೂ ಶಕ್ತಿಗಳೂ ಹುದುಗಿರುತ್ತವೆ. ಹೀಗೆ ಈ ಎಲ್ಲಕ್ಕೆ ಮೂಲ ಆಧಾರವಾದವುಗಳು ಮಂತ್ರಗಳೇ- ನಿವೃತ್ತಿಕಲೆಯ ಕಾರ್ಯವು ಜಗತ್ತಿನ ಪ್ರಗತಿಯು ಆಗುವಲ್ಲಿ ಅದನ್ನು ಪರಮಾತ್ಮನತ್ತ ಒಯ್ಯುವುದು ಇರುತ್ತದೆ. ಅಂದರೆ ಮಾಲಿನ್ಯವನ್ನು ತೊಳೆಯುವುದೇ ಅದರ ಕಾರ್ಯವು. ಪ್ರತಿಷ್ಠಾ ಕಲೆಯ ಕಾರ್ಯವು ಪ್ರಗತಿಯಲ್ಲಿ ಸ್ಥಿರತೆಯನ್ನುಂಟು ಮಾಡುವುದು ಇದೆ. ಶಾಂತಿ, ಶಾಂತ್ಯಾತೀತ ಇವುಗಳು ಜಗತ್ತಿನ ಕಾರ್ಯಗಳಲ್ಲಿ ಶಾಂತಿಯನ್ನು ಅಂದರೆ ಯಾವ ತರದ ಅವ್ಯವಸ್ಥಿತ ಚಲನೆಯನ್ನುಂಟು ಮಾಗೊಡದೆ ಅವು ಗಳನ್ನು ನಿಧಾನವಾಗಿ ಸರಿಯಾದ ಮಾರ್ಗದಿಂದ ಒಯ್ಯುವ ಕಾರ್ಯಗ ಳನ್ನು ಮಾಡುತ್ತವೆ ಈ ಕಲೆಗಳಿಗನುಸಾರವಾಗಿ ಆಯಾ ಶಕ್ತಿಗಳೂ ಉಂಟಾಗುತ್ತವೆ. ಹೀಗೆ ಉಂಟಾದ ಶಕ್ತಿಗಳು ಉಚ್ಚತರದ ಕಾರ್ಯಗಳಲ್ಲಿ ತೊಡಗಿಸುವಂಥವು ಇರುತ್ತವೆ ನಿವೃತ್ತಿಯಲ್ಲಿ ಕ್ರಿಯಾಶಕ್ತಿ, ಪ್ರತಿಷ್ಠೆಯಲ್ಲಿ ಜ್ಞಾನಶಕ್ತಿ, ವಿದ್ಯೆಯಲ್ಲಿ ಇಚ್ಛಾಶಕ್ತಿ, ಶಾಂತಿಯಲ್ಲಿ ಆದಿಶಕ್ತಿ. ಶಾಂತ್ಯಾ ತೀತೆಯಲ್ಲಿ ಪರಾಶಕ್ತಿ, ಇವುಗಳು ಉದ್ಭವಿಸುತ್ತವೆ. ಶಾಂತ್ಯಾತೀತೋತ್ತರೆ ಯಲ್ಲಿ ಚಿತ್‌ಶಕ್ತಿಯು ಇರುತ್ತದೆ. ಅದೇ ಮಹಾಲಿಂಗವು, ಅಥವಾ ಮೂಲ ಪ್ರಣವವು. ಈ ಕಲೆಗಳು, ಶಕ್ತಿಗಳು, ನ, ಮ, ಶಿ, ವಾ, ಯ ಎಂಬ ಪ್ರಣವಾಕ್ಷರಗಳೊಳಗಿಂದಲೇ ವ್ಯಕ್ತವಾಗುತ್ತವೆ. ಮನುಷ್ಯನು ಇವುಗಳನ್ನು ತಿಳಿದುಕೊಂಡು ಆಚರಿಸಿದಲ್ಲಿ ಅವನಲ್ಲಿ ಆಚಾರಲಿಂಗ, ಗುರುಲಿಂಗ, ಶಿವ- ಲಿಂಗಜಂಗ, ಮಲಿಂಗ, ಪ್ರಸಾದಲಿಂಗಎಂಬಲಿಂಗಗಳು ಕ್ರಮೇಣ ಬೆಳಗಹತ್ತು ತ್ತವೆ. ಈ ಲಿಂಗಗಳ ಅಂತಿಮ ಸ್ಥಿತಿಯು ಮಹಾಲಿಂಗವೇ ಇರುತ್ತದೆ. ಮನುಷ್ಯನು ಅದರಲ್ಲಿ ಬೆರೆತಲ್ಲಿ ಶೂನ್ಯ ಸ್ಥಿತಿಯೊಳಗೆ ಹೋಗುತ್ತಾನೆ.

೩೧. ಸಂಜ್ಞೆಗಳು : ಇವು ಐದು ಇವೆ. ಅವು ೧ ಪರ. ೨ ಗೂಢ. ೩ ಶರೀರಸ್ಥ. ೪ ಲಿಂಗಕ್ಷೇತ್ರ. ೫ ಅನಾದಿ ಈ ಪ್ರಕಾರ ಇರುತ್ತವೆ. ಪರಮಾತ್ಮನ ಇರವು ಹೇಗಿರುತ್ತದೆಂಬುದನ್ನು ಇವುಗಳು ವಿವರಿಸುತ್ತವೆ.

(೧) ಪರಮಾತ್ಮನು 'ಪರ' ಎಂದರೆ ಸೃಷ್ಟಿಸಲ್ಪಟ್ಟ ಎಲ್ಲ ವಸ್ತುಗ ಮೀರಿದವನೆಂಬ ಅರ್ಥವು. ಅಂದರೆ ಅವೆಲ್ಲವುಗಳಿಗೂ ಮಿಗಿಲಾದವ ಅವನು ವಿಚಾರಕ್ಕೆ ಮೀರಿದವನು, ಮನುಷ್ಯನ ಇಂದ್ರಿಯಗಳಿಗೆ ಅಗೋ ಚರನು ಇದ್ದಾನೆ (೨) ಅವನು ಗೂಢನಾಗಿರುತ್ತಾನೆ. ಅಂದರೆ ಅವ ಪ್ರಕಟವಾಗಿ ಅಥವಾ ಪ್ರತ್ಯಕ್ಷವಾಗಿ ಮನುಷ್ಯನಿಗೆ ಕಾಣಿಸಿಕೊಳ್ಳ ಯಾಕೆಂದರೆ ಅವನಿಗೆ ಆಕಾರವಿಲ್ಲ, ಮತ್ತು ಯಾವ ತರಹದ ಅವಯ ಇಲ್ಲ. (೩) ಹೀಗಿದ್ದರೂ ಅವನು ಪದಾರ್ಥಗಳಲ್ಲಿ, ಚರಾಚರ ವಸ್ತು ಲ್ಲೆಲ್ಲ ಇದ್ದಾನೆ. ಅಂದರೆ ಅವನಿಗೆ ವಾಸಿಸಲು ಯಾವದೇ ಒಂದು ವಿಶಿ ಸ್ಥಾನವಿಲ್ಲ. ಅವನು ಸರ್ವ ವ್ಯಾಪಿಯು. ಆದ್ದರಿಂದ ಅವನು ಎಲ್ಲವುಗ ಲ್ಲಿಯೂ ಇರುತ್ತಾನೆ. ಆದ್ದರಿಂದ ಅವನು ಶರೀರಸ್ಥನೆಂದು ಹೇಳಲ್ಪ ದ್ದಾನೆ. (೪) ಅವನು ಹೀಗೆ ಶರೀರಸ್ಥನಾಗಿದ್ದರೂ ಪದಾರ್ಥಗಳಲ್ಲಿ ಅವನ ಲಿಂಗ ರೂಪನಾಗಿ ಇದ್ದಾನೆ. ಆ ರೀತಿಯಾಗಿದ್ದುಕೊಂಡು ಎಲ್ಲವುಗಳಿ ಪ್ರೇರಕನಾಗಿ ವರ್ತಿಸುತ್ತಾನೆ. ಅಂದರೆ ಅವನು ಪ್ರತ್ಯಕ್ಷವಾಗಿ ಪ್ರಾಣಿ ಳಂತೆ ಕಾರ್ಯಗಳನ್ನು ಮಾಡುವುದಿಲ್ಲ. ಅವನು ಮಾಡುವುದಿದ್ದರೆ ಲಿಂಗಚೈತನ್ಯ ಮೂಲಕ ಮನುಷ್ಯನ ಅಥವಾ ಪದಾರ್ಥಗಳ ವ್ಯವಹರಣೆ ಕಾರಣನಾಗುತ್ತಾನೆ ಈ ವ್ಯವಹರಣೆಯು ಯೋಗ್ಯ ಮಾರ್ಗದಲ್ಲಿದ್ದರೆ ಅದ ಲಿಂಗವಶದಿಂದ ಉಂಟಾದುದೆಂದು ತಿಳಿಯಬೇಕು. ಇಲ್ಲದಿದ್ದರೆ ಅದು ಮಾಯಾ ವಶವಾದುದು. ಆದ್ದರಿಂದ ಅವನು ಲಿಂಗಕ್ಷೇತ್ರನೆಂದು ಹೇಳಲ್ಪಡುತ್ತಾನೆ (೫) ಪರಮಾತ್ಮನು ಅನಾದಿಯಾಗಿದ್ದಾನೆ ಅಂದರೆ ಅವನಿಗೆ ಆದಿ ಎಂದ ಹುಟ್ಟು ಎಂಬುದಿಲ್ಲ. ಹುಟ್ಟು ಇಲ್ಲದ್ದರಿಂದ ಅವನಿಗೆ ಅಂತ್ಯ ಎಂದರೆ ಮ ಣವೂ ಇಲ್ಲ. ಹೀಗೆ ಈ ಐದು ಗುಣಗಳಿಂದ ಅವನನ್ನು ನಾವು ಗುರುತಿ ಬೇಕು. ಈ ಗುರುತುಗಳಿಗೆ ಸಂಜ್ಞೆ ಎಂಬ ಹೆಸರು.

೩೨. **ಲಕ್ಷಣಗಳು** : ಇವು ಐದು ಇವೆ. ಅವು ೧ ಸತ್ ೨ ಚಿತ್ ೩ ಆನಂದ ೪ ನಿತ್ಯ ೫ ಪರಿಪೂರ್ಣ ಈ ಪ್ರಕಾರ ಇರುತ್ತವೆ. ಇವು ಪರ ಮಾತ್ಮನ ಸ್ವರೂಪವನ್ನು ಹೇಳುತ್ತವೆ. (೧) ಪರಮಾತ್ಮನು ಸತ್ ಸ್ವರೂ ಪನಾಗಿದ್ದಾನೆ. ಅಂದರೆ ಅವನಿಗೆ ಅಸ್ತಿತ್ವವು ಇದೆ. ನಾಸ್ತಿಕರು ಪರಮಾ ತ್ಮನು ಇಲ್ಲೆಂದು ಪ್ರತಿಪಾದಿಸುತ್ತಾರೆ. ಆದರೆ ವೀರಶೈವರು ಪರಮಾತ್ಮನ



ಇಲ್ಲೆಂದು ಪ್ರತಿಪಾದಿಸುತ್ತಾರೆ. ಆದರೆ ವೀರಶೈವರು ಪರಮಾತ್ಮನು ಇದ್ದಾನೆಂದು ಭಾವಿಸುವದುಂಟು. (೨) ಪರಮಾತ್ಮನು ಚಿತ್‌ಸ್ವರೂಪನಾಗಿದ್ದಾನೆ. ಚಿತ್ ಎಂದರೆ ಚೈತನ್ಯವು. ಇದು ಇಡೀ ಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿರುತ್ತದೆ. ಇದಕ್ಕೆ ಚಿತ್ ಶಕ್ತಿ ಎಂತಲೂ ಹೆಸರಿದೆ. (೩) ಪರಮಾತ್ಮನು ಆನಂದ ಸ್ವರೂಪನು. ಇಲ್ಲಿ ಆನಂದವೆಂದರೆ ಜ್ಞಾನ ಅಥವಾ ಅರಿವು ಎಂದು ತಿಳಿಯಬೇಕು. ಇದಕ್ಕೆ ಚ್ಯುತಿಯು ಅಥವಾ ಕೊರತೆಯು ಇಲ್ಲ. ಈ ಆನಂದವು ಜ್ಞಾನ, ಅರಿವು, ಬೆಳಗು, ಸಾಮರಸ್ಯ, ಪ್ರಕಾಶ, ಪರಸುಖ, ಪ್ರಭೆ, ಜ್ಞಾನಾನಂದ ಈ ಮೊದಲಾದ ಶಬ್ದಗಳಿಂದಲೂ ಕರೆಯಲ್ಪಡುವುದುಂಟು. ಈ ಆನಂದವು ಮನುಷ್ಯನ ಇಂದ್ರಿಯಾನಂದಕ್ಕೆ ನಿಲುಕದಂಥಾದ್ದು. (೪) ಪರಮಾತ್ಮನು ನಿತ್ಯನಾಗಿದ್ದಾನೆ. ಅಂದರೆ ಅವನು ನಾಶರಹಿತನು. ಅವನಿಗೆ ಮರಣವಿಲ್ಲ. (೫) ಅವನು ಪರಿಪೂರ್ಣನಾಗಿದ್ದಾನೆ. ಜಗತ್ತಿನಲ್ಲಿಯ ಮಿಕ್ಕ ವಸ್ತುಗಳೆಲ್ಲವೂ ಅಪೂರ್ಣವಾದವುಗಳು. ಅವುಗಳಲ್ಲಿ ಅವುದಾದರೊಂದು ಕೊರತೆಯು ಇದ್ದೇ ಇರುತ್ತದೆ. ಇಂಥ ಕೊರತೆಯು ಪರಮಾತ್ಮನಲ್ಲಿರುವುದಿಲ್ಲ.

೩೩. **ಪ್ರಣಮಗಳು** : ನ, ಮ, ಶಿ, ವಾ, ಯ ಇವು ಪ್ರಣಮಗಳೆಂದು ಹೇಳಲ್ಪಡುತ್ತವೆ. ಅವು ಓಂಕಾರದಿಂದ ಉದ್ಭವಿಸುತ್ತವೆ, ಇವು ಜಗತ್ತಿನಲ್ಲಿಯ ಎಲ್ಲ ಪದಾರ್ಥಗಳಲ್ಲೆಲ್ಲ ತುಂಬಿವೆ. ಓಂಕಾರವು ಆಯಾ ಪದಾರ್ಥಗಳ ಪ್ರಗತಿಯ ಮೇರೆಗೆ ಈ ಪಂಚ ಪ್ರಣಮಗಳ ಮೂಲಕ ಜಗತ್ತನ್ನು ಆವರಿಸಿರುತ್ತದೆ. ಇವುಗಳು ಪದಾರ್ಥಗಳಲ್ಲಿ ಅವುಗಳ ವಿಶಿಷ್ಟ ಚೈತನ್ಯವನ್ನು ಉಂಟುಮಾಡುತ್ತವೆ. ನ, ಮ, ಶಿ, ವಾ, ಯ, ಇವುಗಳಲ್ಲಿ ನ ಕಾರಕ್ಕಿಂತಲೂ ಮ ಕಾರವು ಹೆಚ್ಚು ಸೂಕ್ಷ್ಮವು. ಮ ಕಾರಕ್ಕಿಂತಲೂ ಶಿ ಕಾರವು, ಶಿ ಕಾರಕ್ಕಿಂತಲೂ ವ ಕಾರವು, ವ ಕಾರಕ್ಕಿಂತಲೂ ಯ ಕಾರವು ಹೆಚ್ಚು ಹೆಚ್ಚು ಸೂಕ್ಷ್ಮತರವಾಗಿ ಇರುತ್ತವೆ. ಈ ಪ್ರಣಮಗಳು ಆಯಾ ಪದಾರ್ಥಗಳ ವಿಶೇಷ ಶಕ್ತಿಗೆ ಮತ್ತು ಕಾರ್ಯಗಳಿಗೆ ಕಾರಣಗಳಾಗಿರುತ್ತವೆ.

ಓಂಕಾರಕ್ಕೆ ಮೂಲ ಪ್ರಣಮವೆಂತಲೂ ಉಳಿದ ಐದು ಪ್ರಣಮಗಳಿಗೆ ಬರೇ ಪ್ರಣಮಗಳೆಂತಲೂ ಪ್ರಣಮಾಕ್ಷರಗಳೆಂತಲೂ ಹೆಸರುಗಳಿವೆ. ವೀರ-

ಶೈವರಲ್ಲಿ ಈ ಪ್ರಣವುಗಳ ಮೂಲಕ ಅನೇಕ ಬಗೆಯ ಜಪಗಳುಂಟಾಗಿ
ಅವುಗಳ ಜಪಗಳನ್ನು ಮಾಡುವಲ್ಲಿ ಆ ಪ್ರಣವುಗಳ ಅರ್ಥವನ್ನು ತಿಳಿ
ಕೊಂಡು ಜಪಮಾಡುವುದನ್ನು ಗೊತ್ತುಮಾಡಿಕೊಳ್ಳಬೇಕು. ಹೀಗೆ ಜ
ಸಿದಲ್ಲಿ ಅವು ಪರಿಣಾಮಕಾರಿಗಳು. ಆ ಅರ್ಥಗಳು ಆಯಾ ಪ್ರಣವ
ಗಳಲ್ಲಿ ಗರ್ಭಿತವಾಗಿದ್ದು, ಅವುಗಳ ರೀತಿಯನ್ನು ಗುರುಮುಖದಿಂದ ಅ
ಯಬೇಕೆಂಬ ಸಾಂಪ್ರದಾಯವಿದೆ.

ಈ ಪ್ರಣವುಗಳು ಪಂಚಸಾದಾಖ್ಯಗಳನ್ನು ಸೂಚಿಸುತ್ತವೆ. ಜಗತ್ತಿ
ಆರಂಭದಲ್ಲಿ ಈ ಸಾದಾಖ್ಯಗಳಲ್ಲಿ ಉತ್ಪನ್ನವಾಗುವ ಶಕ್ತಿ ಮೊದಲಾದ
ಗಳಿಗೆ ಈ ಪ್ರಣವುಗಳೇ ಮೂಲಕಾರಣಗಳು. ಜಗತ್ತಿನಲ್ಲಿದ್ದಂತೆಯೇ
ದೇಹದಲ್ಲಿಯೂ ಕೂಡ ಇವು ಇರುತ್ತವೆ. ಇವು ಅಲ್ಲಿ ಇರುವ ಮುಖ್ಯ
ಸ್ಥಾನಗಳೆಂದರೆ ಷಟ್ ಚಕ್ರಗಳು. ಅವುಗಳಲ್ಲಿದ್ದುಕೊಂಡು ಅವು ಮನು
ಷ್ಯನ ವ್ಯಾಪಾರಗಳಿಗೆ ಪ್ರೇರಣೆಮಾಡುತ್ತವೆ. ಪ್ರಣವುಗಳ ಮೂಲಕ ಈ
ವ್ಯಾಪಾರಗಳು ಸನ್ಮಾರ್ಗದಲ್ಲಿ ಸಾಗುತ್ತವೆ. ಹೀಗೆ ಸನ್ಮಾರ್ಗದಲ್ಲಿ ಹೋ
ದ್ದಾದರೆ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾ
ಲಿಂಗ, ಮಹಾಲಿಂಗ ಇವುಗಳು ಆಯಾ ಚಕ್ರಗಳಲ್ಲಿ ಬೆಳಗಹತ್ತುತ್ತವೆ.
ಈ ಪ್ರಣವುಗಳನ್ನು ಸರಿಯಾಗಿ ಧ್ಯಾನಿಸಿದಲ್ಲಿ ಈ ಲಿಂಗಗಳು ಆಯಾ ಚಕ್ರ
ಗಳಲ್ಲಿ ದೃಢಪಡುತ್ತವೆ. ಆದರೆ ಭಕ್ತಿ ಪೂರ್ವಕವಾಗಿ ಮತ್ತು ಅವುಗ
ಅರ್ಥಗಳನ್ನು ತಿಳಿದುಕೊಂಡು ಅವುಗಳನ್ನು ಧ್ಯಾನಿಸತಕ್ಕದ್ದು. ಈ
ತರದ ಧ್ಯಾನವು ಶಿವಯೋಗಕ್ಕೆ ಮುಖ್ಯ ಸಾಧನವು.

'ಓಂ. ನಮಃಶಿವಾಯ' ಇದು ಷಡಕ್ಷರ ಮಂತ್ರವೆಂದು ಹೇಳಲ್ಪಡು
ತ್ತದೆ. ಮೂಲ ಪ್ರಣವುವನ್ನು ಬಿಟ್ಟು ಉಚ್ಚರಿಸಿದರೆ, ಅದು ಪಂಚಾ
ಕ್ಷರೀ ಮಂತ್ರವೆಂದೆನಿಸಿಕೊಳ್ಳಲ್ಪಡುತ್ತದೆ. ಓಂಕಾರವು ಅವ್ಯಕ್ತವಾದುದು.
ಆದರೂ ಆದರ ಭಾರವನ್ನಿಟ್ಟುಕೊಂಡು ಅದನ್ನು ಉಚ್ಚರಿಸಿದಲ್ಲಿ ಅದು ಷ
ಕ್ಷರ ಮಂತ್ರವಾಗುವುದು. ದೀಕ್ಷಾ ಕಾಲದಲ್ಲಿ ಈ ಮಂತ್ರವನ್ನು ಗುರುವ
ಉಪದೇಶಿಸುತ್ತಾನೆ. ಹೀಗೆ ಉಪದೇಶಿಸಿ ಅವನು ಮಂತ್ರದ ಅರ್ಥ
ವನ್ನೂ ತಿಳಿಸಿ ಕೊಡುವನು. ಅದನ್ನು ದೀಕ್ಷೆ ಹೊಂದುವವನು ತಿಳಿದು



ಕೊಂಡು ಅದರಂತೆ ಆಚರಿಸತಕ್ಕದ್ದು. ಈ ಆಚರಣೆಯೇ ಶಿವಯೋಗಕ್ಕೆ ಮುಖ್ಯಾಂಗವಾಗಿರುತ್ತದೆ. ಆದ್ದರಿಂದ ವೀರಶೈವರಲ್ಲಿ ಈ ಪಂಚಾಕ್ಷರೀ ಮಂತ್ರದ ಮಹತ್ವವು ಬಹಳವಿರುತ್ತದೆ. ಎಲ್ಲ ಮಂತ್ರಗಳ ಸಾರವೆಂತಲೂ ಅದು ಹೇಳಲ್ಪಡುತ್ತದೆ.

ಪ್ರಣವುಗಳು ಪರಶಿವನ ಪಂಚಮುಖಗಳ ದ್ಯೋತಕಗಳಾಗಿವೆ. ದೀಕ್ಷೆ, ಲಗ್ನ, ಮೊದಲಾದ ಕಾಲಗಳಲ್ಲಿ ಪಂಚಕಲಶಗಳನ್ನು ಸ್ಥಾಪಿಸುವುದುಂಟಷ್ಟೇ. ಆಗ ಅವು ಪರಶಿವನ ಪಂಚ ಮುಖಗಳೆಂದು ಭಾವಿಸಲ್ಪಡುತ್ತವೆ. ಆಗ ಈ ಪ್ರಣವುಗಳು ಆಯಾ ಸ್ಥಾನಗಳಲ್ಲಿ ಸ್ಥಾಪಿಸಲ್ಪಡುವುದುಂಟು.

ಪ್ರಣವುಗಳು ದೇಹದಲ್ಲಿಯೂ ಕೂಡ ಸ್ಥಾಪಿಸಲ್ಪಡುತ್ತವೆ. ಇಂದ್ರಿಯಗಳಲ್ಲಿಯೂ ಅವುಗಳು ಸ್ಥಾಪಿಸಲ್ಪಡುವುದುಂಟು. ವೀರಶೈವರಲ್ಲಿ ಉದ್ಧರಣೆಗಳೆಂಬವುಗಳಿವೆ. ಅವು ಷಟ್‌ಸ್ಥಲ ಶಾಸ್ತ್ರ ತತ್ವ ಬೋಧಕಗಳಾಗಿರುತ್ತವೆ. ಅವುಗಳಲ್ಲಿ ಪ್ರಣವುಗಳ ಮೂಲಕವಾಗಿಯೇ ಈ ತತ್ವಗಳು ಹೇಳಲ್ಪಟ್ಟಿರುತ್ತವೆ.

೩೪. ಆತ್ಮ: ಎಲ್ಲ ಶರೀರಗಳಲ್ಲಿ ಆತ್ಮನು ಪ್ರತ್ಯೇಕವಾಗಿ ವಾಸಿಸುತ್ತಾನೆ. ಈ ಆತ್ಮನು ಪರಶಿವನ ಅಂಶವೇ ಇರುತ್ತದೆ. ಅದು ಪರಶಿವನಿಂದ ಉಗಮವಾಗಿ ಸೃಷ್ಟ ಪದಾರ್ಥಗಳಲ್ಲೆಲ್ಲ ಇದ್ದರೂ ಕಾಣದಂತಿರುತ್ತದೆ. ಮನುಷ್ಯನು ಮಾಯಾವಶನಾದಲ್ಲಿ ಪರಶಿವನ ಪೂರ್ಣ ಸ್ಥಿತಿಯು ಈ ಆತ್ಮನಲ್ಲಿ ತೋರಲಾರದು. ಆದರೆ ಮನುಷ್ಯನು ಸನ್ಮಾರ್ಗಿಯಾದಲ್ಲಿ ಪರಶಿವನ ಜ್ಯೋತಿಯು ಲಿಂಗ ರೂಪವಾಗಿ ಮನುಷ್ಯನಲ್ಲಿ ಕಾಣಹತ್ತುವುದು. ಆಗ ಆತ್ಮನು ಪ್ರಕಟವಾಗಹತ್ತುವನು. ಜಡ ಪದಾರ್ಥಗಳಲ್ಲಿ ಈ ಪ್ರಗತಿಯು ಅತ್ಯಲ್ಪವಾದುದು. ಆದರೆ ಉಚ್ಚತರದ ಪ್ರಾಣಿ ಜಾತಿಗಳಲ್ಲಿ ಈ ಆತ್ಮನ ಪರಿಸ್ಥಿತಿಯು ಹೆಚ್ಚುವಿಕೆಯನ್ನು ಹೊಂದುತ್ತ ಹೋಗುತ್ತದೆ. ಹೀಗೆ ಆತ್ಮನು ಶಿವಾಂಶಿಕನಾಗಿರುತ್ತಾನೆ. ಅವನು ಪರಮಾತ್ಮನಿಗೆ ಸಂಬಂಧಪಟ್ಟವನು. ಆದರೆ ಶರೀರದಲ್ಲಿ ಮನಸ್ಸು, ಬುದ್ಧಿ, ಇಂದ್ರಿಯಗಳು ಪ್ರಾಣ ಇವುಗಳಲ್ಲಿ ಅವನನ್ನು ಗುರುತಿಸಲಿಕ್ಕೆ ಬಾರದಿದ್ದರೂ ಇವೆಲ್ಲವುಗಳು ಅವನಿಗೆ

ಸಂಬಂಧಿಸಿಕೊಂಡು ತಮ್ಮ ತಮ್ಮ ಕ್ರಿಯೆಗಳನ್ನು ಮಾಡುತ್ತವೆ. ಆತ್ಮನು ಸಾಯುವುದಿಲ್ಲ ಅವನು ಮರಣರಹಿತನಾದವನು. ಅವನು ಕಡೆಗೆ ಪರಶಿವನಲ್ಲಿಯೇ ಅಡಗುವನು. ಆ ವರೆಗೆ ಅವನು ಜನ್ಮಾಂತರಗಳನ್ನು ಎತ್ತುತ್ತ ಹೋಗುತ್ತಾನೆ.

**೩೫. ಆತ್ಮತ್ರಯಗಳು :** ಇವು ಜೀವಾತ್ಮ, ಅಂತರಾತ್ಮ ಮತ್ತು ಪರಮಾತ್ಮಗಳೆಂದು ಇರುತ್ತವೆ. (೧) ಜೀವಾತ್ಮನು ಸಂಸಾರದಿಂದ ತುಂಬಿಕೊಂಡವನು. ಇದರಲ್ಲಿಯೇ ಅವನು ತೊಳಲಿ ಬಳಲಿ ಕಷ್ಟ ಪಡುತ್ತಾನೆ. ತಾನಾರೆಂಬುದನ್ನು ಅವನು ಅರಿಯನು. ತಾಮಸ ಭಾವಕ್ಕೆ ಒಳಗಾಗಿ ವ್ಯವಹರಿಸುತ್ತಾನೆ. (೨) ಆದರೆ ಅಂತರಾತ್ಮನು ಜೀವಾತ್ಮನಕ್ಕಿಂತಲೂ ಉಚ್ಚಸ್ಥಿತಿಯನ್ನು ಹೊಂದಿದವನು. ತಾಮಸ ಸ್ವಭಾವವನ್ನು ಬಹು ಮಟ್ಟಿಗೆ ತೊಲಗಿಸಿದವನು ತೊಲಗಿಸಿದರೂ ಕೂಡ ಸಂಸಾರವನ್ನು ಸಂಪೂರ್ಣವಾಗಿ ಬಿಟ್ಟವನಲ್ಲ ಒಂದು ವೇಳೆ ಅದನ್ನು ಬಿಡದಿದ್ದರೂ ಕೂಡ ಅದರಲ್ಲಿ ಇಲ್ಲದ ಹಾಗೆ ಇರುತ್ತಾನೆ. ಯಾಕಂದರೆ ಪರಮಾತ್ಮನ ಅರಿವು ಅವನಲ್ಲಿ ಉಂಟಾಗಿರುತ್ತದೆ ಆತನು ಆತ್ಮ ವಿವೇಕಿಯು. ಹೀಗೆ ಅಂತರಾತ್ಮನ ಸ್ಥಿತಿಯು ಇರುತ್ತದೆ. (೩) ಪರಮಾತ್ಮನು ಈ ಅಂತರಾತ್ಮನಕ್ಕಿಂತಲೂ ಉಚ್ಚತರದ ಸ್ಥಿತಿಯನ್ನು ಹೊಂದಿರುತ್ತಾನೆ. ಅವನು ಕಾರಣ ಶರೀರಿಯಾಗಿ ಅಲ್ಲಿ ಪ್ರಕಟತರ ಲಿಂಗ ಸ್ಥಿತಿಯನ್ನು ಹೊಂದಿ ಶರೀರದ ಎಲ್ಲ ವ್ಯಾಪಾರಗಳಲ್ಲಿ ಲಿಂಗ ಚೈತನ್ಯವನ್ನು ಉಂಟುಮಾಡಲು ಶಕ್ತನಾಗಿರುತ್ತಾನೆ. ಅವನು ನಿಃಕಲನು. ಯಾಕಂದರೆ ಅವನಲ್ಲಿ ಜ್ಞಾನವು ನಿರ್ಧಾರವಾಗಿರುತ್ತದೆ. ಅವನು ಇಹಲೋಕದ ಮತ್ತು ಪರಲೋಕದ ಸಕಲ ಸಂಸ್ಕೃತಿಗಳನ್ನು ತೊಡಗಿಸಿದವನು.

ಜೀವಾತ್ಮನಿಗೆ ಬಹಿರಂಗ ಸ್ಥಿತಿಯು ಮಾತ್ರ ಇದೆ. ಆದರೆ ಅಂತರಾತ್ಮನಿಗೆ ಅಂತರಂಗ ಸ್ಥಿತಿಯು ಇದೆ. ಇವುಗಳ ಪ್ರಗತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲೆಲ್ಲ ಉಚ್ಚತರದ ಸ್ಥಿತಿಯನ್ನು ಐದಿಸುತ್ತಾನೆ. ಜೀವಾತ್ಮ ಅಂತರಾತ್ಮರು ಪರಸ್ಪರಾವಲಂಬಿಗಳಾಗಿದ್ದಾರೆ. ಇವುಗಳ ಶ್ರೇಷ್ಠತರ ಸ್ಥಿತಿಯ ಮೂಲಕವೇ ಪರಮಾತ್ಮನು ಮನುಷ್ಯನಲ್ಲಿ ತೋರುತ್ತಾನೆ.



ಜೀವಾತ್ಮ ಅಂತರಾತ್ಮ ಪರಮಾತ್ಮರ ಪ್ರಗತಿ ಎಂದರೆ ಸ್ಥೂಲ, ಕಾರಣ, ಶರೀರಗಳಲ್ಲಿ ಅನುಕ್ರಮವಾಗಿ ಸಂಬಂಧಿಸಿದ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಇವುಗಳು ಪ್ರಕಟವಾಗುವುದೇ ಇರುತ್ತದೆ. ಇವೆಲ್ಲವು ಪ್ರಕಟ ಹೊಂದಿದ ಕೂಡಲೆ ಆತ್ಮನು ಪರಶಿವನಲ್ಲಿ ಬೆರೆಯುವನು. ಇದೇ ಲಿಂಗಾಂಗ ಸಾಮರಸ್ಯವು.

**೩೬. ಕೋಶಗಳು :** ಇವು ಅನ್ನಮಯಕೋಶ, ಪ್ರಾಣಮಯ ಕೋಶ, ಮನೋಮಯಕೋಶ, ವಿಜ್ಞಾನಮಯ ಕೋಶ, ಮತ್ತು ಆನಂದಮಯ ಕೋಶ- ಎಂದಿರುತ್ತವೆ. (೧) ಸ್ಥೂಲ ದೇಹವೇ ಅನ್ನಮಯ ಕೋಶವೆನಿಸಿಕೊಳ್ಳುತ್ತದೆ. ಅನ್ನದಿಂದ ಇದು ಪುಷ್ಟಿಯನ್ನು ಹೊಂದುತ್ತದೆ. (೨) ಶರೀರದಲ್ಲಿ ಜ್ಞಾನೇಂದ್ರಿಯಗಳೂ, ಕರ್ಮೇಂದ್ರಿಯಗಳೂ ಉಂಟು. ಇವುಗಳ ಮೂಲಕ ಅದರ ವ್ಯಾಪಾರಗಳು ನಡೆಯುತ್ತವೆ. ಈ ಇಂದ್ರಿಯಗಳ ಮೂಲಕ ಮನುಷ್ಯನಿಗೆ ಮುಟ್ಟಿದರೆ ತಿಳಿಯುತ್ತದೆ. ಕರೆದರೆ ಅವನಿಗೆ ಕೇಳುತ್ತದೆ. ಶರೀರದಲ್ಲಿ ಪ್ರಾಣವಿದೆಯೆಂಬುದಕ್ಕೆ ಈ ವ್ಯಾಪಾರಗಳೇ ಚಿಹ್ನವು. ಇದೇ ಪ್ರಾಣಮಯ ಕೋಶವು. (೩) ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರಗಳೆಂಬುವು ಇವೆ. ಇವುಗಳ ವ್ಯಾಪಾರವೇ ಮನೋಮಯ ಕೋಶವು. (೪) ಮೇಲೆ ವಿವರಿಸಿದ ಕೋಶಗಳ ಮೂಲಕ ಮನುಷ್ಯನು ನಿರ್ಧರಿಸುತ್ತಾನೆ, ತಿಳಿಯುತ್ತಾನೆ, ಪದಾರ್ಥಗಳ ನಿಜ ಸ್ವರೂಪವನ್ನು ಗ್ರಹಿಸುತ್ತಾನೆ. ಇದೇ ವಿಜ್ಞಾನಮಯ ಕೋಶವು. (೫) ಆದರೆ ಈ ಎಲ್ಲ ವ್ಯಾಪಾರಗಳು ಅಳಿದು ಹೋಗಿ ಬಾಹ್ಯವೇನೂ ತೋರದೆ ಇರಲು ಮನುಷ್ಯನಲ್ಲಿ ನಿಜ ಸುಖವು ತಲೆದೋರುತ್ತದೆ. ಇದು ಶಾಶ್ವತವಾದುದು ಇದೇ ಆನಂದಮಯಕೋಶವು. ಮನುಷ್ಯನ ಪ್ರಗತಿಯು ಈ ಎಲ್ಲ ಕೋಶಗಳಲ್ಲಿ ಉಂಟಾಗಬೇಕು. ಆದರೆ ಮನುಷ್ಯನ ಆಚರಣೆಗಳ ಪ್ರಕಾರ ಈ ಸ್ಥಿತಿಯು ಕ್ರಮೇಣ ಜರಗುತ್ತದೆ. ಅದು ಪೂರ್ಣತೆಯನ್ನು ಹೊಂದಿದ ಕೂಡಲೆ ಅವನಲ್ಲಿ ಶಾಶ್ವತ ಸುಖವು ತಲೆದೋರುತ್ತದೆ.

**೩೭. ಶಕ್ತಿಗಳು :** ಇವು ಕ್ರಿಯಾಶಕ್ತಿ, ಜ್ಞಾನ ಶಕ್ತಿ, ಇಚ್ಛಾ ಶಕ್ತಿ, ಆದಿಶಕ್ತಿ, ಪರಾಶಕ್ತಿ ಮತ್ತು ಚಿತ್‌ಶಕ್ತಿ ಎಂದು ಆರು ಇರು

ತ್ತವೆ. ಮಿದುಳಿನಿಂದ ಬರುವ ಚಲನೆಗಳು ಈ ಚಕ್ರಗಳಿಗೆ ಮೊದಲು ಬ
ತ್ತವೆ. ಮಿದುಳಿನಲ್ಲಿರುವ ಬ್ರಹ್ಮಚಕ್ರವು ಆಧಾರಸ್ವಾಧಿಷ್ಠಾನಚಕ್ರಗಳ
ಶಿಖ ಚಕ್ರವು ಮಣಿಪೂರಕ, ಅನಾಹತ ಚಕ್ರಗಳಿಗೆ ಮತ್ತು ಪಶ್ಚಿ
ಚಕ್ರವು ವಿಶುದ್ಧಿ, ಆಜ್ಞಾ ಚಕ್ರಗಳಿಗೆ ಪ್ರತ್ಯಕ್ಷ ಸಂಬಂಧಪಡುತ್ತವೆ. ಮಿ
ಳಿನಲ್ಲಿ ಉತ್ಪನ್ನವಾಗುವ ಈ ಚಲನೆಗಳು ಆಯಾ ಚಕ್ರಗಳ ದ್ವಾರಾ ಬೇ
ಬೇರೆ ಅವಯವಗಳಿಗೆ ಪಸರಿಸುತ್ತವೆ. ಹೀಗೆ ಚಕ್ರಗಳು ಶಕ್ತಿಯನ್ನು ವ್ಯ
ಸ್ಥೆಗೊಳಿಸುವ ಕಾರ್ಯಮಾಡುತ್ತವೆ.

ಈ ಚಕ್ರಗಳಿಗೆ ಅನುಕ್ರಮವಾಗಿ ೪, ೬, ೧೦, ೧೨, ೧೬, ೨ ದಳ
ಳಿವೆ. ಈ ದಳಗಳಲ್ಲಿ ೫೦ ಅಕ್ಷರಗಳಿರುತ್ತವೆ. ಆಧಾರಚಕ್ರದ ದಳಗಳಲ್ಲಿ ವ,
ಷ, ಸ ಅಕ್ಷರಗಳು, ಸ್ವಾಧಿಷ್ಠಾನದ ದಳಗಳಲ್ಲಿ ಬ ಭ ಯ ರ ಲ ಅಕ್ಷರಗಳು
ಮಣಿಪೂರಕದಲ್ಲಿ ಡ ಢ ಣ ತ ಥ ದ ಧ ನ ಪ ಫ ಅಕ್ಷರಗಳು, ಅನಾಹ
ಚಕ್ರದಲ್ಲಿ, ಕ ಖ ಗ ಘ ಙ ಚ ಛ ಜ ಝ ಞ ಟ ಠ ಅಕ್ಷರಗಳು, ವಿಶುದ್ಧಿ
ಚಕ್ರದಲ್ಲಿ, ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ
ಅಂ ಅಃ ಅಕ್ಷರಗಳು ಇವೆ. ಭ್ರೂಮಧ್ಯಲ್ಲಿರುವ ಆಜ್ಞಾ ಚಕ್ರದಲ್ಲಿ ೨ ದಳ
ಗಳಿವೆ. ಅವುಗಳಲ್ಲಿ ಹಂ ಸಂ ಎಂಬ ಅಕ್ಷರಗಳು ಇವೆ. ಬ್ರಹ್ಮಚಕ್ರವ
ಸಹಸ್ರದಳವುಳ್ಳದ್ದು. ಅದು ಸಹಸ್ರಾಕ್ಷರ ಅನಂತ ವೇದನೆಗಳನ್ನೊಳಕೊಂ
ಡಿದೆ. ಮಸ್ತಕಾಗ್ರದಲ್ಲಿರುವ ಶಿಖಾಚಕ್ರಕ್ಕೆ ೩ ದಳಗಳು ಇವೆ. ಪಶ್ಚಿಮ
ಚಕ್ರದಲ್ಲಿ ಒಂದು ದಳವಿದೆ. ಈ ಯಾವತ್ತು ಚಕ್ರಗಳಲ್ಲಿ ಶಕ್ತಿಗಳಿಗೆ ಕಾರ-
ಣವಾದ ಪ್ರಣವಾಕ್ಷರಗಳಿರುತ್ತವೆ. ಆಧಾರಚಕ್ರದಲ್ಲಿ ನಕಾರವು ಸ್ವಾಧಿಷ್ಠಾ
ನದಲ್ಲಿ ಮಕಾರವು, ಮಣಿಪೂರಕದಲ್ಲಿ ಶಿಕಾರವು, ಅನಾಹತದಲ್ಲಿ ವಕಾರವು,
ವಿಶುದ್ಧಿಯಲ್ಲಿ ಯಕಾರವು, ಆಜ್ಞೆಯಲ್ಲಿ ಓಂಕಾರವು ಇರುತ್ತವೆ.
ಬ್ರಹ್ಮಚಕ್ರದಲ್ಲಿ ಬಕಾರವು, ಶಿಖಾಚಕ್ರದಲ್ಲಿ ಕ್ಷಕಾರವು, ಪಶ್ಚಿಮ ಚಕ್ರದಲ್ಲಿ
ಹಕಾರವು ಇರುತ್ತವೆ. ಈ ಪ್ರಣವಾಕ್ಷರಗಳ ಮೂಲಕವೇ ಮಿದುಳಿನ
ಚಲನೆಗಳು ಸ್ನಾಯುಗಳೊಳಗಿಂದ ಶರೀರದಲ್ಲಿ ಸಂಚರಿಸುತ್ತವೆ. ಅವು
ಶಕ್ತಿಗಳ ರೂಪದಲ್ಲಿ ತೋರುತ್ತವೆ. ೫೦ ಅಕ್ಷರಗಳಿಗೆ ಮೂಲವಾ-
ಗಿ... ಚಕ್ರದಲ್ಲಿರುವ ಓಂಕಾರವೇ ಇರುತ್ತದೆ. ಮಿದುಳಿನಲ್ಲಿ

ಅರಿವೇ ಗುರು
ಕ್ರಮಾಂಕ..........
ಶಿವಬಸವ ನಗರ
005.1-9237



ಉಂಟಾಗುವ ಚಲನೆಗಳು ಈ ಪ್ರಣವಾಕ್ಷರಗಳ ಮೂಲಕ ನಾಡಿಗಳ ದ್ವಾರಾ ಶರೀರದಲ್ಲಿರುವ ಆಯಾ ಚಕ್ರಗಳಿಗೆ ತಲುಪಿ ಅಲ್ಲಿಂದ ಶರೀರದ ಆಯಾ ಅವಯವಗಳ ಕಡೆಗೆ ಹರಿದುಹೋಗುತ್ತವೆ.

ಯೋಗಾಭ್ಯಾಸಿಗಳು ಚಕ್ರಗಳ ಜ್ಞಾನವನ್ನು ಮಾಡಿಕೊಳ್ಳಬೇಕು. ಹೀಗೆ ಮಾಡಿಕೊಂಡು ಅವುಗಳನ್ನು ಲಿಂಗಸಾಧನೆಯ ಮೂಲಕ ಉತ್ತೇಜನಗೊಳಿಸಬೇಕು. ಈ ರೀತಿಯನ್ನು ವೀರಶೈವರು ಒಪ್ಪಿಕೊಂಡಿದ್ದಾರೆ. ಹೀಗೆ ಮಾಡಿದಲ್ಲಿ ಮನುಷ್ಯನಿಗೆ ಸಿದ್ಧಿಗಳು ಪ್ರಾಪ್ತವಾಗುವುವು. ಆದರೆ ಲಿಂಗನಿಷ್ಠರಾದ ವೀರಶೈವರು ಈ ಸಿದ್ಧಿಗಳನ್ನು ಮಾಡಕೂಡದು. ಅವರು ಚಕ್ರಗಳ ಮೂಲಕ ಹರಿಯುವ ನಾನಾಬಗೆಯ ಶಕ್ತಿಗಳನ್ನು ಲಿಂಗ-ಮುಖವನ್ನಾಗಿ ಮಾಡಿ ತಮ್ಮ ಕ್ರಿಯೆಗಳನ್ನು ಮಾಡತಕ್ಕದ್ದು. ಶಿವಯೋಗಿಗಳಿಗೂ ಇತರ ಯೋಗಿಗಳಿಗೂ ಇರುವ ಭೇದವು ಇದೇ ಆಗಿದೆ. ಶಿವಯೋಗಿಯು ಆಯಾ ಚಕ್ರಗಳಲ್ಲಿ ಆಯಾ ಲಿಂಗಗಳನ್ನು ಬರಮಾಡಿಕೊಳ್ಳತಕ್ಕದ್ದು. ಈ ರೀತಿಯನ್ನು ಅವನು ಷಟ್‌ಸ್ಥಲಾಚರಣೆ, ಅಷ್ಟಾವರಣಗಳು ಇವುಗಳ ಮೂಲಕ ಸಾಧಿಸತಕ್ಕದ್ದು. ಕಷ್ಟಕರವಾದ ಹಠಯೋಗ ಮೊದಲಾದವುಗಳ ಮೂಲಕವಲ್ಲ. ಹೀಗೆ ಲಿಂಗಮುಖ ಮಾಡಿದಲ್ಲಿ ಆಧಾರದಲ್ಲಿ ಆಚಾರಲಿಂಗವು, ಸ್ವಾಧಿಷ್ಠಾನದಲ್ಲಿ ಗುರುಲಿಂಗವು, ಮಣಿ-ಪೂರಕದಲ್ಲಿ ಶಿವಲಿಂಗವು, ಅನಾಹತದಲ್ಲಿ ಜಂಗಮಲಿಂಗವು, ವಿಶುದ್ಧಿಯಲ್ಲಿ ಪ್ರಸಾದಲಿಂಗವು, ಆಜ್ಞೆಯಲ್ಲಿ ಮಹಾಲಿಂಗವು ನೆಲೆಗೊಳ್ಳುತ್ತದೆ. ಬ್ರಹ್ಮರಂಧ್ರದಲ್ಲಿ ನಿಷ್ಕಲ ಲಿಂಗವು, ಶಿಖಿಯಲ್ಲಿ ನಿಶ್ಶೂನ್ಯಲಿಂಗವು, ಪಶ್ಚಿಮದಲ್ಲಿ ನಿರಂಜನಲಿಂಗವು ಪ್ರಕಟವಾಗುವುವು. ಈ ಲಿಂಗಗಳ ಪ್ರಕಾಶದಿಂದ ಕರ್ಮೇಂದ್ರಿಯ ಜ್ಞಾನೇಂದ್ರಿಯ ಮೊದಲಾದವುಗಳ ಕ್ರಿಯೆಗಳು ಶರೀರದಲ್ಲಿ ನಡೆಯುವುವು.

ಈ ಲಿಂಗವು ಸಾಧನೆಗೋಸ್ಕರ ಹಿಂದೆ ಹೇಳಿದಂತೆ ಷಟ್‌ಸ್ಥಲದ ಆಚರಣೆಯು ಮನುಷ್ಯನಿಗೆ ಅವಶ್ಯವಾದುದು. ಆದರ ಆಚರಣೆಗಳ ಮೇರೆಗೆ ಅವನು ಜಗತ್ತಿನಲ್ಲಿಯ ತನ್ನ ವ್ಯಾಪಾರಗಳನ್ನು ನಿರ್ವಹಿಸತಕ್ಕದ್ದು. ಅವುಗಳಂತೆಯೇ ಅವನು ಸಾಧನೆಗಳನ್ನು ಮಾಡತಕ್ಕದ್ದು. ಈ ಸಾಧನೆಗೆ ಅಷ್ಟಾ

ವರಣಗಳು ಸಹಾಯಕಾರಿಗಳು. ಅಷ್ಟಾವರಣಗಳಲ್ಲಿ ಗುರುಲಿಂಗಜಂಗ
ಗಳು ಮುಖ್ಯವಾದವುಗಳು. ಇವುಗಳ ಸಾಧನೆಯನ್ನು ಸಾಧಿಸತಕ್ಕದ್ದು
ಇವುಗಳನ್ನು ಅವನು ಅನುಕ್ರಮವಾಗಿ ಇಷ್ಟ, ಪ್ರಾಣ, ಭಾವಲಿಂಗ
ಮೂಲಕ ತನ್ನಲ್ಲಿ ಸಾಧಿಸತಕ್ಕದ್ದು. ಇಷ್ಟಲಿಂಗದಿಂದ ಗುರುವನ್ನೂ
ಪ್ರಾಣಲಿಂಗದಿಂದ ಲಿಂಗವನ್ನೂ, ಭಾವಲಿಂಗದಿಂದ ಜಂಗಮವನ್ನೂ ಸಾ
ಸತಕ್ಕದ್ದು. ಗುರುಕೊಟ್ಟದ್ದೇ ಇಷ್ಟಲಿಂಗವು. ಈ ಇಷ್ಟಲಿಂಗದ ಧ್ಯಾ
ದಿಂದ ಹೃದಯಕಮಲದಲ್ಲಿದ್ದ ಪ್ರಾಣಲಿಂಗವು ಅರಳುತ್ತದೆ. ಈ ಹೃದ
ಕಮಲದಲ್ಲಿ ಜೀವನು ವಾಸವಾಗಿರುತ್ತಾನೆ. ಅವನು ಪ್ರಾಣಲಿಂಗದೊ
ಡನೆ ಬೆರೆಯಲು ಭಾವಲಿಂಗವು ಪ್ರಜ್ವಲಿಸಹತ್ತುತ್ತದೆ. ಇದು ಹಣೆಗ
ನಲ್ಲಿದೆ ಅದು ಓಂಕಾರ ರೂಪವಾದುದು. ಅದುವೆ ಆಜ್ಞಾಚಕ್ರ
ಈ ಭಾವಲಿಂಗದಿಂದ ಮುಂದೆ ಮಿದುಳಿನಲ್ಲಿ ತ್ರಿವೇಣೀ ಸಂಗಮವಿದ
ಅಲ್ಲಿಗೆ ಹೋಗತಕ್ಕದ್ದು. ಅದು ಸಂಗಮ ಕ್ಷೇತ್ರವೆಂತಲೂ ಹೇಳಲ್ಪ
ತ್ತದೆ. ಅಲ್ಲಿ ಎಡಕ್ಕೆ ಬಲಕ್ಕೆ ಎರಡು ದಾರಿಗಳಿವೆ. ಅವುಗಳಲ್ಲಿ ಹೋಗದೆ ಮ
ಮಾರ್ಗವನ್ನು ಹಿಡಿಯಬೇಕು. ಅದು ಬಹು ಸೂಕ್ಷ್ಮವಾದುದು. ಅ
ತಲೆವಾಗಿಲವೆಂತಲೂ ಹೇಳಲ್ಪಡುವುದು. ಅಲ್ಲಿಂದ ಮುಂದೆ ಹೋಗು
ನಿಷ್ಕಲಲಿಂಗವು ತೋರುವದು. ಅದು ನಿರುಪಾಧಿಕಜ್ಯೋತಿಯು. ನಿರಾ
ಲಿಂಗವು ಅದನ್ನು ಪೂಜೆಮಾಡಬೇಕು. ಅಂದರೆ ಪರಶಿವನಲ್ಲಿ ಬೆರೆಯು
ತ್ತಾನೆ. ಇದನ್ನು ಸಾಧಿಸುವುದೇ ಶಿವಯೋಗವು.

ಈ ಸಾಧನೆಯನ್ನು ಯೋಗ್ಯ ಆಸನ, ಪ್ರಾಣಾಯಾಮ, ಮತ್ತು
ಲಿಂಗಧ್ಯಾನದಿಂದ ಸಾಧಿಸಬೇಕು. ಲಿಂಗಪೂಜೆಯನ್ನು ಈ ಧ್ಯೇಯವನ್ನಿ
ಟ್ಟುಕೊಂಡು ಭಕ್ತನು ನಿತ್ಯ ಆಚರಿಸಬೇಕು. ಆದ್ದರಿಂದ ವೀರಶೈವ
ಲಿಂಗಪೂಜೆಯು ಆ ಶಿವಯೋಗಕ್ಕೆ ಸಾಧಕವಾಗಿದೆ.

ವೀರಶೈವರು ಈ ಪ್ರಕಾರ ಯೋಗಾಭ್ಯಾಸದ ಮುಖ್ಯ ತತ್ವಗಳನ್ನು
ಸ್ವೀಕರಿಸಿದ್ದಾರೆ. ಆದರೆ ಸಾಧನೆಯಲ್ಲಿ ಹಠಯೋಗಿಗಳ ಕ್ಲೇಶಕರವಾ
ಮಾರ್ಗವನ್ನು ಅವರು ಕೈಕೊಳ್ಳುವುದಿಲ್ಲ. ಅಂದರೆ ಇಂದ್ರಿಯಗಳನ್ನು
ಕ್ಲೇಶಪಡಿಸಬಾರದು. ಅಥವಾ ನಿರ್ಜನ ಪ್ರದೇಶಗಳಿಗೆ ಹೋಗಬಾರದು.
ನಿತ್ಯದ ತನ್ನ ಆಚರಣೆಗಳನ್ನು ಷಟ್‌ಸ್ಥಲಶಾಸ್ತ್ರದ ತತ್ವಗಳಂತೆ ಜರು



ಸಬೇಕು. ಈ ಷಟ್‌ಸ್ಥಲದ ಆಚರಣೆಗಳಂತೆ ನಡೆದರೆ ಚಕ್ರಗಳಲ್ಲಿ ಲಿಂಗ ಜ್ಯೋತಿಯು ತಾನಾಗಿಯೇ ಬೆಳಗಹತ್ತುತ್ತದೆ. ಈ ಆಚರಣೆಗಳಾವವೆಂಬುದು ವಚನಶಾಸ್ತ್ರಸಾರ ಭಾಗ ೨, ಪುಟ ೧೬೩ರಲ್ಲಿ ಹೇಳಲ್ಪಟ್ಟಿದೆ. ಇದು 'ಶಬ್ದಕೋಶ' ಮಾತ್ರ ಇರುವುದರಿಂದ ಅವುಗಳನ್ನು ಇಲ್ಲಿ ಸವಿಸ್ತಾರವಾಗಿ ನಿರೂಪಿಸುವುದು ಅನಾವಶ್ಯಕವು.

ಈ ರೀತಿಯಾಗಿ ವರ್ಣಿಸಿದಲ್ಲಿ ಲಿಂಗಾಂಗ ಸಾಮರಸ್ಯವು ಪ್ರಾಪ್ತವಾಗುತ್ತದೆ. ಇದರಲ್ಲಿ ಶುದ್ಧ ನೈತಿಕಾಚಾರ, ವೀರಶೈವಾಚರಣೆಗಳು, ಮಂತ್ರಗಳ ಮೂಲಕ ಧ್ಯಾನ, ಇವೇ ಮೊದಲಾವುಗಳು ಮುಖ್ಯವಾಗಿರುತ್ತವೆ. ಇವುಗಳಿಂದ ಮನುಷ್ಯನು ಲಿಂಗ ಶರೀರಿಯಾಗುವನು. ಆಗ ಆಯಾ ಚಕ್ರಗಳಲ್ಲಿ ಲಿಂಗವು ಬೇರೆ ಬೇರೆ ರೂಪದಿಂದ ಬೆಳಗಹತ್ತುವದು. ವಿಶ್ವವೆಲ್ಲ ಲಿಂಗಮಯವಾಗಿ ತೋರಹತ್ತುವದು ಮತ್ತು ಕಡೆಗೆ ಪರಶಿವನಲ್ಲಿ ಬೆರೆಯುವನು.

ಈ ಚಕ್ರಗಳಿಗೆ ವರ್ಣಗಳಿವೆ. ಅವು ಅನುಕ್ರಮವಾಗಿ ಪೀತವರ್ಣ, ಶ್ವೇತವರ್ಣ, ಹರಿತವರ್ಣ, ಮಾಂಜಿಷ್ಟವರ್ಣ, ಕಪೋತವರ್ಣ, ಮಾಣಿಕ್ಯವರ್ಣ, ಇವುಗಳಿವೆ. ಕಡೆಯ ೩ ಚಕ್ರಗಳಿಗೆ ಜ್ಯೋತಿರ್ವರ್ಣ, ಮಹಾಜ್ಯೋತಿರ್ವರ್ಣ, ಅಗಣಿತ ಮಹಾಜ್ಯೋತಿರ್ವರ್ಣ ಇವುಗಳಿವೆ.

ಈ ಚಕ್ರಗಳಿಗೆ ಅಧಿದೇವತೆಗಳಿದ್ದಾರೆ. ಅವರು ಅನುಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ. ಮಹೇಶ್ವರ ಇವರು ಇರುವರು. ಮತ್ತು ಕಡೆಯ ಮೂರು ಚಕ್ರಗಳಲ್ಲಿ ಪರಮೇಶ್ವರ, ಸರ್ವೇಶ್ವರ ಮತ್ತು ಮಹಾದೇವ ಎಂದು ಹೇಳಲ್ಪಡುತ್ತಾರೆ.

ಈ ಚಕ್ರಗಳು ಸಾದಾಖ್ಯಗಳೆಂತಲೂ ಹೇಳಲ್ಪಡುತ್ತವೆ. ಅವು ಅನುಕ್ರಮವಾಗಿ ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ ಮತ್ತು ಮಹಾಸಾದಾಖ್ಯಗಳು ಮತ್ತು ಕಡೆಯ ಸಾದಾಖ್ಯಗಳು ಅಗಮ್ಯ, ಅಗೋಚರ, ಅಪ್ರಮಾಣವೆಂದಿವೆ.

ಆತ್ಮನ ವಿಕಾಸವೂ ಅದರಂತೆಯೇ ಹೆಚ್ಚುತ್ತ ಹೋಗುತ್ತದೆ. ವಿಕಾಸ ಹೊಂದಿದ ಹಾಗೆ ಆತ್ಮನು ಅನುಕ್ರಮವಾಗಿ ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಎಂದು ಹೇಳಲ್ಪ

ಡುತ್ತಾನೆ. ಮತ್ತು ಕಡೆಯ ಮೂರು ಆತ್ಮನ ಸ್ಥಿತಿಗಳು ಮಹಾ
ದಿವ್ಯಾತ್ಮ, ಮತ್ತು ಚಿನ್ಮಯಾತ್ಮ ಎಂದು ಹೇಳಲ್ಪಡುತ್ತವೆ.

ಈ ಚಕ್ರಗಳಿಗೆ ಆಕೃತಿಗಳೂ ಉಂಟು. ಅವು ಯಾವುವೆಂದರೆ ಕ
ಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ದರ್ಪ
ಕೃತಿ, ಜ್ಯೋತಿರಾಕೃತಿ- ಇವುಗಳಿವೆ. ಮತ್ತು ಕಡೆಯ ಚಕ್ರಗಳಿಗೆ ಅ
ಕ್ರಮವಾಗಿ ನಿಷ್ಕಳಾಕೃತಿ, ನಿಶ್ಶೂನ್ಯಾಕೃತಿ, ನಿರಂಜನಾಕೃತಿ ಎಂಬ ಹೆಸ
ಗಳಿವೆ.

ಕಲೆಗಳು ಇವೆ. ಅವು ಯಾವುವೆಂದರೆ, ನಿವೃತ್ತಿ, ಪ್ರತಿಷ್ಠಾ, ವಿದ್ಯ
ಶಾಂತಿ, ಶಾಂತ್ಯಾತೀತ, ಶಾಂತ್ಯಾತೀತೋತ್ತರ ಇವು ಇವೆ. ಕಡೆಯವುಗ
ಅನುಕ್ರಮವಾಗಿ ಅನಾದಿ, ನಿರ್ಮಾಯ ಅನಿರ್ವಾಚ್ಯ ಎಂಬವುಗಳಿವೆ.

ಆಯಾ ಚಕ್ರಗಳನ್ನು ಒಳಕೊಂಡ ಹಾಗೆ ಶಿವಯೋಗಿಗೆ ನಾದಗ
ಕೇಳಿಸುತ್ತವೆ. ಅನುಕ್ರಮವಾಗಿ ಭ್ರಮರ, ವೇಣು, ಘಂಟಾ, ಭೇ
ಮೇಘ ಮತ್ತು ಪ್ರಣವ ಇವುಗಳು ಮತ್ತು ಕಡೆಯ ಮೂರು ನಾದಗ
ದಿವ್ಯನಾದ, ಸಿಂಹನಾದ ಮತ್ತು ಮಹಾನಾದ ಎಂದು ಇವೆ.

ಆದರೆ ಮೇಲೆ ಹೇಳಿದ ಕಲೆಗಳು, ಪ್ರಣವಾಕ್ಷರಗಳು, ಪಂಚಾಕ್ಷ
ಗಳು, ಚಕ್ರಗಳು, ಚಕ್ರಗಳಿಗೆ ಸಂಬಂಧಿಸಿದ ದಳಗಳು, ದಳಗಳಲ್ಲಿರು
ಅಕ್ಷರಗಳು, ವರ್ಣಗಳು, ಬೆಳಕುಗಳು, ಆಕೃತಿಗಳು, ನಾದಗಳು ಅ
ದೇವತೆಗಳು, ಇವುಗಳನ್ನು ಶರೀರದಲ್ಲಿ ಹುಡುಕಲಿಕ್ಕೆ ಹೋದರೆ ಅ
ದೊರೆಯಲಾರವು. ಅಲ್ಲಿ ಬರೇ ರಕ್ತ, ಮಾಂಸ ಇವುಗಳೇ ಕಾಣಬ
ವದು ನಿಶ್ಚಯವು ಇವುಗಳನ್ನು ಕಾಣಲಿಕ್ಕೆ, ಮುಟ್ಟಲಿಕ್ಕೆ, ಕೇಳಲಿ
ಅಂತರ್ಜ್ಞಾನವೇ ಬೇಕು. ಈ ಜ್ಞಾನವು ಆತ್ಮನಿಗೆ ಸಂಬಂಧಿಸಿರುತ್ತ
ಪ್ರಯೋಗದಿಂದ ಅಥವಾ ಅನುಭಾವದಿಂದ ಅಥವಾ ಪರಿಣಾಮದಿ
ಅವುಗಳನ್ನು ಮನುಷ್ಯನು ತಿಳಿಯಬೇಕು. ಆದರೆ ಮುಂದೆ ಹೇಳತ
ನಾಡಿಗಳು ಮತ್ತು ವಾಯುಗಳು ಇವುಗಳಿಗಿಂತಲೂ ಹೆಚ್ಚಿಗೆ ಸ್ಥೂಲವ
ಗಿರುತ್ತವೆ. ಅವುಗಳ ಕ್ರಿಯೆಗಳಾದರೂ ಹೆಚ್ಚಿಗೆ ಸ್ಥೂಲಕರವಾದವುಗಳು

೩೯. **ನಾಡಿಗಳು :** ನಾಡಿಗಳು ದೇಹದಲ್ಲೆಲ್ಲ ಪಸರಿಸಿರುತ್ತವ
ಅವು ಜೀರ್ಣವಾದ ಅರಳೆಯ ಪರ್ಣದಂತೆ ಇರುತ್ತವೆಂದು ವಚನಕಾರ
ವರ್ಣಿಸುವುದುಂಟು. ಅವು ಅಸಂಖ್ಯಾತವಾಗಿವೆ. ಆದರೂ ಅವುಗಳ



ಮುಖ್ಯವಾದವುಗಳು ೭೨ ಸಾವಿರ. ಅವುಗಳಲ್ಲಿ ೧೫೦೦ ನಾಡಿಗಳು ಕಾರಣ
ನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೭೦೦ ನಾಡಿಗಳು ಮುಖ್ಯ
ವಾದವುಗಳು. ಅವುಗಳಲ್ಲಿ ೧೦೦ ನಾಡಿಗಳು ಮುಖ್ಯ ನಾಡಿಗಳು. ಅವು
ಗಳಲ್ಲಿ ೫೦ ನಾಡಿಗಳು ಪ್ರಧಾನವಾದವುಗಳು. ಅವುಗಳಲ್ಲಿ ೨೮ ನಾಡಿ
ಗಳು ಪ್ರಯೋಜನನಾಡಿಗಳೆಂದು ಹೇಳಲ್ಪಡುತ್ತವೆ. ಅವುಗಳಲ್ಲಿ ೧೦
ನಾಡಿಗಳು ಅತ್ಯಧಿಕವಾದವುಗಳು. ಅವು ಈಡಾ, ಪಿಂಗಳ, ಸುಷುಮ್ನಾ
ಗಾಂಧಾರಿ, ಹಸ್ತಿ, ಜಿಹ್ವೆ, ಪೂಷ, ಪಯಸ್ವಿನೀ, ಲಕುಹ, ಅಲಂಬು,
ಶಂಕಿನೀ ಹೀಗೆ ಇವೆ. ಇವುಗಳಲ್ಲಿ ಈಡಾ, ಪಿಂಗಳ, ಸುಷುಮ್ನಾಗಳೇ
ಅತ್ಯಂತ ಬೀಜನಾಡಿಗಳೆಂದು ಭಾವಿಸಲ್ಪಟ್ಟಿರುತ್ತವೆ. ಈ ನಾಡಿಗಳ ಕ್ರಿಯೆ
ಗಳು ಶರೀರದಲ್ಲಿರುವ ನರಗಳೊಳಗಿಂದ ( Nerves ) ನಡೆಯುತ್ತವೆ.
ಶರೀರವು ಉಸುರಾಡಿಸುವುದು, ನಿರೀಕ್ಷಿಸುವುದು, ಕೇಳುವುದು, ಹಸಿವೆ
ಯಾಗುವುದು, ಆಹಾರದಿಂದ ಅದಕ್ಕೆ ಶಾಂತಿಯಾಗುವುದು ಇವು ಅತ್ಯಂತ
ಆವಶ್ಯವಾದವುಗಳಷ್ಟೇ. ಇವು ಈ ನಾಡಿಗಳ ಮೂಲಕವೇ ಚಲನೆ
ಹೊಂದುತ್ತವೆ. ಈಡಾ ಇದು ನಾಸಾಪುಟದ ಎಡಭಾಗ. ಅದು ವಾಯು
ವನ್ನು ಹೊರಗೆ ಹಾಕುತ್ತದೆ. ಪಿಂಗಳ ಇದು ನಾಸಾಪುಟದ ಬಲ
ಭಾಗ. ಇದು ವಾಯುವನ್ನು ಒಳಕ್ಕೆ ಎಳೆದುಕೊಳ್ಳುತ್ತದೆ. ಸುಷುಮ್ನಾವು
ಇವುಗಳಿಗೆ ಮಧ್ಯವಾಗಿದ್ದುಕೊಂಡು ತಲೆ ಮಿದುಳಿನಲ್ಲಿ ಪ್ರವೇಶಿಸುತ್ತದೆ.
ಅದು ವಾಯುವನ್ನು ಕುಂಭದಂತೆ ತಡೆಯುತ್ತದೆ. ಗಾಂಧಾರೀ ಇದು
ಎಡದ ನೇತ್ರ. ನಿದ್ರಾವ್ಯಸನಕ್ಕೆ ಕಾರಣವಾಗಿದೆ. ಪೂಷ ಇದು ಬಲದ
ಕರ್ಣ. ನಾದಾದಿ ಶಬ್ದಗಳನ್ನು ಕೇಳಿಸುತ್ತದೆ. ಪಯಸ್ವಿನೀ ಇದು
ಎಡದ ಕರ್ಣ. ವಾದ್ಯಾದಿಗಳನ್ನು ಕೇಳಿಸುತ್ತದೆ. ಲಕುಹ ಇದು ಗುದ
ದಲ್ಲಿದ್ದು ದೇಹದ ಭಾರಣೆಯನ್ನು ಹೊರುತ್ತದೆ. ಅಲಂಬು ಇದು ಮೇಢ್ರ
ದಲ್ಲಿದ್ದು ಕ್ಷುಧಾದಿಗಳನ್ನು ಉಂಟು ಮಾಡುತ್ತದೆ. ಶಂಕಿನೀ ಇದು
ನಾಭಿಯಲ್ಲಿದ್ದು ಕ್ಷುಧಾದಿಗಳನ್ನು ಉಪಶಮನ ಮಾಡುತ್ತದೆ. ಇವುಗ
ಳಿಗೂ ಬೇರೆ ಬೇರೆ ಅಧಿದೇವತೆಗಳು ಇರುತ್ತಾರೆ. ಇವುಗಳಲ್ಲಿ ಸುಷುಮ್ನಾ
ನಾಡಿಯ ಮಹತ್ವವು ವಿಶೇಷವಿದೆ. ಅದು ಗುದಸ್ಥಾನದಿಂದ ಬೆನ್ನೆಲು

ವಿನ ನಡುವೆ ತಂತಿಯಂತೆ ಕಪಾಲ ಪರಿಯಂತರ ಉದ್ದವಾಗಿ ಇರುತ್ತದೆ. ಇದಕ್ಕೆ ಬಲಗಡೆ ಇರುವುದು ಪಿಂಗಳ ನಾಡಿ. ಅದು ಸಹ ಕಪಾಲ ಪ ಯಂತರ ಬಂದು ಅಲ್ಲಿಂದ ಮಿದುಳಿನಲ್ಲಿ ಸೂರ್ಯ ಮಂಡಲವನ್ನು ವ್ಯಾಪಿಸಿಕೊಂಡು ಬಲಮೂಗಿನಿಂದ ಹೊರಟು ಹೋಗುತ್ತದೆ. ಈಡೆ ಸುಷುಮ್ನ ನಾಡಿಯ ಎಡಗಡೆಯಿಂದ ಮೂಲಾಧಾರದಿಂದ ಕಪಾಳಪ ಯಂತರ ಹೋಗಿ ಮಿದುಳಿನಲ್ಲಿ ಚಂದ್ರಮಂಡಲವನ್ನು ವ್ಯಾಪಿಸಿರುತ್ತದೆ. ಅದರ ಮೂಲಕ ಎಡಮೂಗಿನಿಂದ ಉಸಿರು ಹೊರಟು ಹೋಗುತ್ತದೆ. ಸುಷುಮ್ನ ನಾಡಿಯ ಅಗ್ನೇಯದಲ್ಲಿ ಸೂಕ್ಷ್ಮವಾದ ರಂಧ್ರವಿರುತ್ತದೆ. ಅದೆ ಬ್ರಹ್ಮರಂಧ್ರ. ಈ ಸುಷುಮ್ನ ನಾಡಿಯನ್ನು ಚೈತನ್ಯಗೊಳಿಸುವುದರಿಂ ಮನುಷ್ಯನ ಯೋಗಸಾಮರ್ಥ್ಯವು ಹೆಚ್ಚುವುದು. ಆಸನ ಮತ್ತು ಪ್ರಾಣ ಯಾಮ ಇವುಗಳೊಡನೆ ಕೂಡಿದ ಯೋಗ ಸಾಧನೆಯಿಂದ ಈ ನಾಡಿಯ ಉತ್ತೇಜಿತವಾಗುವುದು. ಒಂಭತ್ತು ವಿಧ ಚಕ್ರಗಳಿಗೂ ಈ ನಾಡಿಗಳಿಗ ನಿಕಟ ಸಂಬಂಧವಿರುತ್ತದೆ. ಚಕ್ರಗಳೊಳಗಿಂದ ಹೊರಡುವ ಶಕ್ತಿಗಳ ಅತ್ಯಂತ ಸೂಕ್ಷ್ಮ ಸ್ಥಿತಿಯಲ್ಲಿದ್ದು ಅವು ನಾಡಿಗಳ ಮೂಲಕವೇ ಶರೀ ದಲ್ಲಿ ಪ್ರಕಟವಾಗುತ್ತವೆ. ಆದ್ದರಿಂದ ಈ ನಾಡಿಗಳನ್ನು ಬಲಪಡಿಸಿ ಅವು ಳನ್ನು ಅಂಕಿತದಲ್ಲಿಟ್ಟುಕೊಳ್ಳತಕ್ಕದ್ದು. ಇದರಿಂದ ಶರೀರದ ಬಾಹ್ಯ ಕ್ರಿಯೆಗಳೂ ಚಕ್ರಗಳೂ ಪರಸ್ಪರವಾಗಿ ಸುವ್ಯವಸ್ಥೆಯಿಂದ ನಡೆಯುವುವ

೪೦. ವಾಯುಗಳು : ಇವು ಪ್ರಾಣ, ಅಪಾನ, ವ್ಯಾನ ಉದಾನ, ಸಮಾನ, ಮತ್ತು ನಾಗ; ಕೂರ್ಮ, ಕೃಕರ, ದೇವದತ್ತ ಧನಂಜಯ ಎಂದು ಹತ್ತು ಇವೆ. ಮೊದಲಿನ ಐದು ಪ್ರಾಣವಾಯುಗ ಳೆಂದು ಹೇಳಲ್ಪಡುತ್ತವೆ. ಈ ಎಲ್ಲ ವಾಯುಗಳು ಶರೀರದ ರಕ್ಷಣೆಗೋ- ಸ್ಕರ ಆವಶ್ಯಕವಾದವುಗಳು. ಇವಿಲ್ಲದಿದ್ದರೆ ಮನುಷ್ಯನು ಮೃತನಾಗು ತ್ತಾನೆ. ಮನುಷ್ಯನು ಉಸಿರಾಡಿಸುವುದು, ಶರೀರದಲ್ಲಿಯ ಕಶ್ಮಲಗಳನ್ನು ಹೊರದೂಡುವುದು, ಅನ್ನವನ್ನು ಜೀರ್ಣಿಸಿ ಅದು ಶರೀರದಲ್ಲೆಲ್ಲ ಹಂಚಿಹೋ ಗುವಂತೆ ಮಾಡುವುದು—ಇವೇ ಮೊದಲಾದ ಕಾರ್ಯಗಳು ದೇಹಪುಷ್ಟಿಗೆ ಅವಶ್ಯವಾದವುಗಳು. ಶರೀರದಲ್ಲಿ ಉಗಮ ಹೊಂದುವ ಆಯಾ ಶಕ್ತಿಗಳು ನಾಡಿಗಳ ಮುಖಾಂತರ ನರಗಳಲ್ಲಿ ಪಸರಿಸುತ್ತಲೂ ಮುಂದೆ ಈ ವಾಯು



ಗಳ ಮೂಲಕ ಶರೀರದ ಆಯಾ ಭಾಗಗಳಲ್ಲಿ ಚಲನೆಗಳನ್ನುಂಟುಮಾಡು ತ್ತಲೂ ಇರುತ್ತವೆ. ಈ ವಾಯುಗಳು ಚೈತನ್ಯವನ್ನುಂಟು ಮಾಡಿದ ಕೂಡಲೆ ಮೇಲ್ಕಂಡ ಕ್ರಿಯೆಗಳು ಜರುಗುತ್ತವೆ.

ಪ್ರಾಣವಾಯುವು ಎಲ್ಲ ನಾಡಿಗಳನ್ನು ಸುತ್ತಿಕೊಂಡು ಮೂಲಾಧಾರ ದಲ್ಲಿ ಹೊರಟು ನಾಭಿಚಕ್ರವನ್ನು ತಾಕಿ, ಈಡಾಪಿಂಗಳದಲ್ಲಿ ಹೋಗಿ ಕಪಾಳದಲ್ಲಿ ಸುತ್ತಿಕೊಂಡು ಅಲ್ಲಿಂದ ಮೂಗಿನಿಂದ ಹೊರಟು ಉಃಶ್ವಾಸ ನಿಃಶ್ವಾಸವನ್ನುಂಟು ಮಾಡುತ್ತವೆ. ಅಪಾನವಾಯುವು ಗುದಸ್ಥಾನದಲ್ಲಿದ್ದು ದೇಹದಲ್ಲಿಯ ಕಶ್ಮಲಗಳು ಹೊರಗೆ ಹೋಗುವಂತೆ ಮಾಡುತ್ತದೆ. ಮತ್ತು ಅನ್ನ ರಸವ್ಯಾಪ್ತಿಯನ್ನು ಮಾಡುತ್ತದೆ. ವ್ಯಾನವಾಯುವು ಚರ್ಮದಲ್ಲಿದ್ದು ತನ್ನ ಸೋಂಕಿದ್ದನ್ನು ಅರಿಯುವಂತೆ ಮಾಡುತ್ತದೆ. ಅನ್ನವನ್ನು ಭಕ್ಷಿಸು ವಂತೆ ಅದು ಮಾಡಿ ೭೨ ಸಾವಿರ ನಾಡಿಗಳನ್ನು ಸಂಬಂಧಿಸಿಕೊಂಡು ಶರೀರ ವನ್ನು ಅನ್ನಪಾನದಿಂದ ರಕ್ಷಿಸುತ್ತದೆ. ಉದಾನವಾಯು ಕಂಠದಲ್ಲಿದ್ದು ಅನ್ನ ರಸದ ಸ್ಥಾಪನೆ ಮಾಡುತ್ತದೆ. ಅದು ಸ್ವಪ್ನಾವಸ್ಥೆಯನ್ನುಂಟು ಮಾಡು ತ್ತದೆ. ಸೀನುವಂತೆ ಮಾಡುತ್ತದೆ. ಸಮಾನವಾಯು ನಾಭಿಯಲ್ಲಿದ್ದು ಅನ್ನರಸವನ್ನು ರೋಮನಾಳಗಳಲ್ಲಿ ಹಂಚಿಹಾಕುತ್ತದೆ. ನಾಗವಾಯು ದುಃಖ ಮಾಡುವುದನ್ನು ಉಮ್ಮಳಿಸುವುದನ್ನು, ಮಾಡಿಸುತ್ತದೆ. ಕೂರ್ಮ ವಾಯು ಉದರಲಲಾಟದಲ್ಲಿ ಇದ್ದು ಮೋರೆಯನ್ನು ಮೇಲೆ ಕೆಳಗುಮಾಡು ವುದು, ಮನುಷ್ಯನು ನಗುವುದು, ಕಣ್ಣುಗಳನ್ನು ಮುಚ್ಚುವುದು, ತೆರೆಯು ವುದು, ಆಕಳಿಕೆ ಬರುವುದು ಇವುಗಳನ್ನು ಮಾಡಿಸುತ್ತದೆ, ಕೃಕರವಾಯು ನಾಸಿಕಾಗ್ರದಲ್ಲಿದ್ದು ಕ್ಷುಧೆಯನ್ನು ಮಾಡಿಸಿ ಗಮನಾಗಮನವನ್ನು ಮಾಡಿ ಸುತ್ತದೆ. ದೇವದತ್ತವಾಯು ಗುಹ್ಯ ಮತ್ತು ಕಟಿಯಲ್ಲಿದ್ದು ಏಳುವುದು, ಕುಳ್ಳಿರುವುದು, ಮಾತನಾಡುವುದು, ಸುತ್ತಿಕೊಂಡು ಬೀಳುವುದು, ಹೀಗೆ ಚೈತನ್ಯವನ್ನು ಮಾಡಿಸುತ್ತದೆ. ಧನಂಜಯ ವಾಯುವು ಬ್ರಹ್ಮ ರಂಧ್ರ ದಲ್ಲಿದ್ದು ಸಮುದ್ರದಂತೆ ಘೋಷವನ್ನು ಮಾಡಿಸಿ ಮರಣ ಕಾಲದಲ್ಲಿ ಸ್ತಬ್ಧವಾಗುವುದು. ಬಾಹ್ಯದಲ್ಲಿ ಈ ಕಾರ್ಯಗಳಾಗುವುದು ವಾಯುಗ ಳಿಂದಲೇ. ಇಲ್ಲಿ ವಾಯು ಎಂದರೆ ವಾತಾವರಣದಲ್ಲಿ ನಾವು ಉಸುರಾ- ಡಿಸುವ ವಾಯುವೆಂಬ ಅರ್ಥವಲ್ಲ. ಇವುಗಳು ಚಕ್ರಗಳೊಳಗಿಂದ ನಾಡಿಗ

ಳಲ್ಲಿ ಹರಿಯುತ್ತಿರುವ ಚೈತನ್ಯವನ್ನು ಶರೀರದ ಆಯಾ ಭಾಗಗಳಿಗೆ ಒಯ್ಯು
ಸಾಧನಗಳೆಂದು ಹೇಳಬಹುದು.

**೪೧. ಅವಸ್ಥೆಗಳು :** ಜಾಗ್ರತ್, ಸ್ವಪ್ನ, ಸುಷುಪ್ತಿ, ತೂರ್ಯ
ತೂರ್ಯಾತೀತ ಎಂದು ಐದು ಅವಸ್ಥೆಗಳಿರುತ್ತವೆ. ಮನುಷ್ಯನ ಪ್ರಗ
ಯನ್ನು ಇವುಗಳ ಮೂಲಕ ವಿವರಿಸುವ ವಾಡಿಕೆಯುಂಟು. ಮನುಷ್ಯನಿ
ಅಂತರಂಗ ಬಹಿರಂಗವೆಂಬೆರಡು ಇರುತ್ತವೆ. ಇವುಗಳಲ್ಲಿ ಬಹಿರಂಗದ ಕ್ರಿಯೆ
ಗಳು ಜಾಗ್ರಾವಸ್ಥೆಯನ್ನು ಸೂಚಿಸುತ್ತವೆ. ಇದು ಸ್ಥೂಲವು. ಅಂತ
ಗವು ವಿಕಾಸಹೊಂದುವಾಗ ಬಾಹ್ಯಕ್ರಿಯೆಗಳ ಮೇಲಿನ ಲಕ್ಷ್ಯವು ಹೊರಟ
ಹೋಗಿ ಅದು ಜಾಗ್ರತವಾಗುತ್ತದೆ. ಇದು ಸ್ವಪ್ನಾವಸ್ಥೆಯು. ಮುಂ
ಬಾಹ್ಯ ಕ್ರಿಯೆಗಳೂ ಅಂತರಂಗ ಕ್ರಿಯೆಗಳೂ ನಷ್ಟವಾಗಿ ಮನುಷ್ಯನ
ಯಾವಾಗಲೂ ಪರಮಾತ್ಮನ ಧ್ಯಾನದಲ್ಲಿ ಮಗ್ನನಾಗಿರುತ್ತಾನೆ. ಇದು
ಅತ್ಯಂತ ಉಚ್ಚತರ ಸ್ಥಿತಿಯು ಎಂದು ಹೇಳಲ್ಪಡುತ್ತದೆ. ಇದು ಸುಷುಪ್ತ್ಯಾ
ವಸ್ಥೆಯು. ಇದರಲ್ಲಿ ಮನುಷ್ಯನಿಗೆ ನಿಜ ಸುಖವು ತಲೆದೋರುತ್ತದೆ.
ಅವನಿಗೆ ಅಂತರಂಗ ಬಹಿರಂಗವೆಂಬ ಭೇದಗಳು ಉಳಿಯುವುದಿಲ್ಲ. ಇದೇ
ತೂರ್ಯಾವಸ್ಥೆಯು. ಇದರ ಮುಂದೆ ಪ್ರಗತಿಯುಂಟಾದಲ್ಲಿ ಈ ಸುಖವು
ಅಸ್ತಿತ್ವದಲ್ಲಿ ಉಳಿಯುವುದಿಲ್ಲ. ಇದು ತೂರ್ಯಾತೀತಾವಸ್ಥೆಯು.
ಆದರೆ ವೀರಶೈವರು ತಮ್ಮ ಪ್ರಗತಿಯನ್ನು ಈ ರೀತಿಯಾಗಿ ಭಾವಿಸುವು
ದಿಲ್ಲ. ಮೇಲ್ಕಂಡ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರುವುದಿಲ್ಲ.
ವಚನಕಾರರು ಅಂತರಂಗ ಬೇರೆ, ಬಹಿರಂಗ ಬೇರೆ ಎಂದು ಅವುಗಳಲ್ಲಿ
ಭೇದ ಎಣಿಸುವುದಿಲ್ಲ. ಯಾಕಂದರೆ ಅಂತರಂಗದಲ್ಲಿ ಯಾವ ಶಕ್ತಿಗಳು
ವಿಕಾಸ ಹೊಂದುತ್ತವೋ ಅವುಗಳ ಉಪಯೋಗವನ್ನು ಮನುಷ್ಯನು ಬಹಿ
ರಂಗದಲ್ಲಿಯೂ ಕೂಡ ಮಾಡಬೇಕೆಂದು ಅವರ ಮುಖ್ಯ ತತ್ವವಿದೆ. ಅಂದರೆ
ಮನುಷ್ಯನಿಗೆ ಬಹಿರಂಗವನ್ನು ಅಂದರೆ ಬ್ರಾಹ್ಯಕ್ರಿಯೆಗಳನ್ನು ಬಿಡಲಿಕ್ಕೆ ಬರ
ಲಾರದು. ಇಷ್ಟೇ ಅಲ್ಲ, ಈ ಬಹಿರಂಗದ ಕ್ರಿಯೆಗಳ ಸಹಾಯದಿಂದಲೇ
ಅವನು ಅಂತರಂಗದ ಗುಣಗಳನ್ನು ಅಂದರೆ ಇಂದ್ರಿಯ, ಮನಸ್ಸು, ಬುದ್ಧಿ
ಈ ಮೊದಲಾವುಗಳನ್ನು ವಿಕಾಸಮಾಡಿಕೊಳ್ಳತಕ್ಕದ್ದು. ಹೀಗೆ ಅಂತರಂಗ
ಬಹಿರಂಗಗಳು ಪರಸ್ಪರಾವಲಂಬಿಗಳಾಗಿವೆ. ಆದ್ದರಿಂದ ಅವರು ಜಾಗ್ರತ್,



ಸ್ವಪ್ನ, ಸುಷುಪ್ತಿ ಎಂಬ ಅವಸ್ಥೆಗಳಲ್ಲಿ ಭೇದ ಮಾಡುವುದಿಲ್ಲ. ತೂರ್ಯ
ಎಂಬ ಶಬ್ದವನ್ನು ಅವರು 'ಲಿಂಗಸುಖ' ಎಂಬ ಭಾವದಲ್ಲಿ ಆಗಿಂದಾಗ್ಗೆ
ಉಪಯೋಗಿಸುವುದುಂಟು ಇದು ವಚನಗಳಲ್ಲಿ ಬರುತ್ತದೆ. ತೂರ್ಯಾ
ತೀತ ಈ ಶಬ್ದವನ್ನು ಅವರು ಶೂನ್ಯ ಎಂಬ ಅರ್ಥದಲ್ಲಿ ಉಪಯೋಗಿಸುವ
ದುಂಟು. ಆದರೆ ಮನುಷ್ಯನ ವಿಕಾಸವನ್ನು ಅವರು ಮೇಲ್ಕಂಡ ಅವಸ್ಥಾ
ಸೂಚಕ ಶಬ್ದಗಳಿಂದ ಹೇಳುವುದಿಲ್ಲ. ಆದರೆ ಅವರು ಆಚಾರಲಿಂಗ, ಗುರು‐
ಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗ ಈ
ಶಬ್ದಗಳಿಂದ ಹೇಳುವುದುಂಟು. ಮೊದಲಿನ ಮನುಷ್ಯನ ಬಾಹ್ಯ ಕ್ರಿಯೆ
ಗಳ ವಿಕಾಸತೆಯನ್ನು ಅವರು ನಿರ್ದೇಶಿಸುತ್ತಾರೆ. ಮುಂದಿನ ಎರಡು ಶಬ್ದ
ಗಳು ಅಂದರೆ ಶಿವಲಿಂಗ, ಜಂಗಮಲಿಂಗ ಇವುಗಳಿಂದ ಮನುಷ್ಯನ ಅಂತ
ರಂಗದ ವಿಕಾಸತೆಯನ್ನು ಹೇಳುತ್ತಾರೆ. ಮತ್ತು ಕಡೆಯ ಶಬ್ದಗಳಾದ
ಪ್ರಸಾದಲಿಂಗ, ಮಹಾಲಿಂಗ ಇವುಗಳಿಂದ ಮನುಷ್ಯನ ತುರ್ಯಾವಸ್ಥೆಯನ್ನು
ಅವರು ಹೇಳುತ್ತಾರೆ. ಮತ್ತು ಈ ಲಿಂಗಗಳ ತರುವಾಯ ಶೂನ್ಯ ಲಿಂಗ
ಗಳೆಂಬುವಿವೆ. ಇವುಗಳ ಮೂಲಕ ಅವರು ತೂರ್ಯಾತೀತಾವಸ್ಥೆಯನ್ನು
ಹೇಳುತ್ತಾರೆ. ಈ ಪ್ರಕಾರ ಲಿಂಗಶಬ್ದದಿಂದ ಅವರು ಬೇರೆ ಬೇರೆ ಅವಸ್ಥೆ
ಗಳನ್ನು ಸೂಚಿಸುತ್ತಾರೆ.

**೪೨. ಶಾಂಭವಯೋಗ :** ಶಿವನಲ್ಲಿ ಮನಸ್ಸನ್ನು ಏಕಾಗ್ರತೆಯಾ
ಗಿರಿಸುವುದೇ ಶಾಂಭವಯೋಗವೆಂದು ಹೇಳಲ್ಪಡುತ್ತದೆ. ಈ ಮನಸ್ಸು
ಪರಮಾತ್ಮನಲ್ಲಿ ದೃಢಪಡಬೇಕು. ಇದೇ ಈ ಶಾಂಭವಯೋಗದ ಉದ್ದೇ
ಶವಿರುತ್ತದೆ. ಆಗ ತಾನು ನಿಜವಸ್ತುವಲ್ಲ, ಆದರೆ ಶಿವನೇ ನಿಜ
ವಸ್ತುವು ಮತ್ತು ಸತ್ಯನು ಎಂಬ ಭಾವವು ಬಲಿಯಬೇಕು. ಭಕ್ತನು
ಇದರಲ್ಲಿ ಪ್ರಾಣಾಯಾಮವನ್ನು ಆಚರಿಸಿ ಆಸನವನ್ನು ಬಲಿದು ಏಕಾಗ್ರ
ಚಿತ್ತನಾಗಬೇಕು. ಆ ಮೇಲೆ ತನ್ನ ಕರದಲ್ಲಿಯ ಇಷ್ಟಲಿಂಗವನ್ನು ಧ್ಯಾನಿ
ಸಬೇಕು. ಅದು ಅದು ಅರುಹಿನ ಕುರುಹೆಂದು ಅವನು ಅದನ್ನು ಭಾವಿಸಬೇಕು.
ಅಂದರೆ ಈ ಲಿಂಗವು ಚಿಪ್ಘನಲಿಂಗವೆಂತಲೇ ಅವನು ತಿಳಿಯಬೇಕು. ಸಾಧ
ಕನು ಹೀಗೆ ಹೃತ್ಕಮಲದಲ್ಲಿ ಅದನ್ನು ಸರಿಯಾಗಿ ನೆಲೆಗೊಳಿಸಬೇಕು.
ಈ ಕಮಲಕ್ಕೆ ೧೨ ದಳಗಳಿವೆ. ಪೂರ್ವದಳವನ್ನೇರಲು ಗುಣಿಯಾಗಿರು
ವನು. ಅಗ್ನಿದಳವನ್ನೇರಲು ಹಸಿವೆಯಾಗುವುದು. ದಕ್ಷಿಣದಳವನ್ನೇರಿಲು

ಕ್ರೋಧಿಯಾಗುವನು. ನೈಋತ್ಯದಳವನ್ನೇರಲು ಅಸತ್ಯವಂತನಾಗ
ವರುಣದಳವನ್ನೇರಲು ನಿದ್ರೆಗೆಯ್ಯುವನು. ವಾಯುದಳವನ್ನೇರಲು
ಲನಾಗುವನು. ಉತ್ತರ ದಳವನ್ನೇರಲು ಧರ್ಮಿಷ್ಠನಾಗುವನು.
ದಳವನ್ನೇರಲು ಕಾಮಾತುರನಾಗಿರುವನು. ಈ ೮ ದಳಗಳ ಮೇಲೆ
ಡುವ ಜೀವನ ಸ್ಥಿತಿಯನ್ನು ತೊಲಗಿಸಿ ಅದನ್ನು ನಡು ಮ
ತಂದಿರಿಸಲು ಸಂಸಾರ ರಹಿತನಾಗುವನು. ಹೀಗೆ ನೆಲೆಗೊಂಡ
ಆ ಜೀವನಲ್ಲಿ ಲಿಂಗ ಕಳೆಯು ಬೆಳಗುವುದು. ಅದೇ ಪ್ರಾಣಲಿಂಗ
ವುದು. ಆ ಮೇಲೆ ಸಾಧಕನು ಅದನ್ನು ಮಸ್ತಕದಲ್ಲಿರುವ ಕ
ಅಂದರೆ ಭಾವಲಿಂಗದಲ್ಲಿಟ್ಟರೆ ಅದು ಶಾಂಭವಯೋಗವೆಂದೆನಿಸು
ಆಗ ಅರಿವಾತನು ಅರಿವು ಮತ್ತು ಅರಿಯತಕ್ಕ ಪರಶಿವನು,
ಪರಸ್ಪರ ಐಕ್ಯತೆಯುಂಟಾಗುವುದು. ಹಾಗೆಯೇ ನೆನೆವಾತನು,
ಮತ್ತು ನೆನೆಯತಕ್ಕ ಶಿವನು, ಮತ್ತು ನೋಡುವಾತನು,
ಮತ್ತು ನೋಡತಕ್ಕ ವಸ್ತು, ಇವೆಲ್ಲವೂ ಏಕಾಕಾರವಾಗುವುವು.
ಸಾಧಿಸಿದಲ್ಲಿ ಅದೇ ಶಾಂಭವ ಯೋಗವು.

೪೩. **ಮುದ್ರೆಗಳು**: ಇವು ಧ್ಯಾನ ಮುದ್ರೆ, ಖೇಚರ
ಷಣ್ಮುಖಮುದ್ರೆ, ಶಾಂಭವ ಮುದ್ರೆ ಎಂದು ನಾಲ್ಕು ಇರುತ್ತವೆ.
ಪರಮಾತ್ಮ ದರ್ಶನಕ್ಕೆ ಸಹಾಯಕಾರಿಗಳೆಂದು ಭಾವಿಸಲ್ಪ
ಒಬ್ಬನು ಶುಚಿಯಾಗಿ ಒಂದು ಸ್ಥಳದಲ್ಲಿ ಪದ್ಮಾಸನದಲ್ಲಿ ಕುಳಿತು
ಕಾಗ್ರದಲ್ಲಿ ದೃಷ್ಟಿಯನ್ನಿಟ್ಟು ಪಂಚಾಕ್ಷರೀ ಮಂತ್ರಜಪವನ್ನು ಶಿವಾ
ಬುದ್ಧಿಯಿಂದ ಮಾಡುವುದು ಧ್ಯಾನಮುದ್ರೆ ಎಂದೆನಿಸುವುದು.
ಗ್ರದಲ್ಲಿ ನೋಡುತ್ತ ಧ್ಯಾನಾಸಕ್ತನಾದರೆ ಘಂಟೆ, ಶಂಖ, ವೇಣು,
ಮದ್ದಳೆ, ಭೇರಿ, ಮೇಘ ಹೀಗೆ ಅನೇಕ ತೆರನಾದ ನಾದಗಳು ಕೇಳಬರು
ಇದರಲ್ಲಿ ಕಡೆಯ ನಾದವನ್ನು ಕೇಳುತ್ತಲಿರಲು ಪ್ರಣವದ ಮಹಾ
ಯಾಗುವುದು. ಅದರ ಅನುಸಂಧಾನವೇ ಖೇಚರಿ ಮುದ್ರೆ ಎನಿಸುವ
ಪ್ರಾಣಾಯಾಮವನ್ನು ಮಾಡಿ ಆಸನವನ್ನು ಬಲಿದು ಸುಷುಮ್ನಾ
ಸಂಗಡ ಸಹಸ್ರದಳದ ಪರಿಯಂತರ ಬರಲು ಅಲ್ಲಿ ಜ್ಯೋತಿಸ್ವರೂಪ
ನೋಡುವುದು ಷಣ್ಮುಖಮುದ್ರೆ ಎನಿಸುವುದು ಶಾಂಭವ ಮುದ್ರೆ



ದ್ಧ ಮನಸ್ಸುಳ್ಳವನಾಗಿ ನಿಶ್ಚಲ ಚಿತ್ತನಾಗಿರಲು ಕೋಟಿಸೂರ್ಯ
ಪ್ರಕಾಶವಾಗಿ ಹೊಳೆಯುವ ಪರಮಾತ್ಮನನ್ನು ಕಾಣುತ್ತ ಇರುವನು.
ದು ಎಲ್ಲಕ್ಕೂ ಶ್ರೇಷ್ಠವಾದುದೆಂದು ಭಾವಿಸಬೇಕು.

೪೪. **ಶಿವಯೋಗ**: ಅಷ್ಟಾಂಗ ಯೋಗದ ರೀತಿಯಾಗಿ ಈ
ಷಯವನ್ನು ಹೇಳುವುದುಂಟು. ಯಮ, ನಿಯಮ, ಆಸನ, ಪ್ರಾಣಾ
ಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವು ಯೋಗದ
ಅಷ್ಟಾಂಗಗಳಾಗಿವೆ. ಆದರೆ ಶಿವಯೋಗದಲ್ಲಿ ಈ ಅಂಗಗಳಿಗೆ ವೀರ
ಶೈವಾಚಾರಕ್ಕನುಗುಣವಾಗಿ ಕ್ರಿಯೆಗಳು ಹೇಳಲ್ಪಡುವುದುಂಟು. ಈ
ಕ್ರಿಯೆಗಳಂತೆ ಆಚರಿಸಲು ಅದು ಶಿವಯೋಗವೆಂದು ಹೇಳಲ್ಪಡುತ್ತದೆ.
ಅನೃತ, ಹಿಂಸೆ, ಪರಧನ, ಪರಸ್ತ್ರೀ. ಪರನಿಂದೆ ಇವೈದನ್ನು ಬಿಟ್ಟು ಲಿಂಗ
ಪೂಜೆಯನ್ನು ಮಾಡುವುದೇ ಯಮಯೋಗವು. ನಿರಪೇಕ್ಷನಾಗಿ ಶಿವಧರ್ಮ
ದಿಂದ ನಡೆಯುತ್ತ ಪ್ರಣವ ಪಂಚಾಕ್ಷರಿಯ ಜಪಮಾಡುತ್ತ ಅಶುಚಿತ್ವ
ವನ್ನು ಬಿಟ್ಟುಕೊಟ್ಟು ಪಾಪಕ್ಕೆ ಭೀತನಾಗಿ ಶಿವಲಿಂಗಾರ್ಚಕನಾಗಿರು
ವುದೇ ನಿಯಮ ಯೋಗವು. ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ,
ಅರ್ಧ ಚಂದ್ರಾಸನ, ಪರ್ಯಂಕಾಸನ ಇವುಗಳಲ್ಲೊಂದನ್ನು ಸ್ವೀಕರಿಸಿ
ಸ್ಥಿರಚಿತ್ತನಾಗಿ ಶಿವಲಿಂಗಾರ್ಚನೆಯನ್ನು ಮಾಡುವುದು ಆಸನಯೋಗವು.
ಈಡಾ ಪಿಂಗಳದಲ್ಲಿ ಚರಿಸುವ ರೇಚಕ-ಪೂರಕಗಳ ಭೇದವನ್ನು ತಿಳಿದು
ಮನ. ಪವನ-ಪ್ರಾಣಗಳ ಮೇಲೆ ಲಿಂಗವನ್ನು ಸಂಬಂಧಿಸಿ ಅವುಗಳನ್ನು
ಲಿಂಗಸ್ವರೂಪವನ್ನಾಗಿ ಮಾಡಿ ಹೃದಯ ಕಮಲ ಮಧ್ಯದಲ್ಲಿ ಪ್ರಣವವ
ನ್ನುಚ್ಚರಿಸುತ್ತ ಪರಶಿವನ ಧ್ಯಾನದಲ್ಲಿರುವುದೇ ಪ್ರಾಣಾಯಾಮವಾಗಿರು
ವುದು. ಮನುಷ್ಯನು ವಿಷಯಗಳಿಗೆ ಒಳಗಾಗದೆ ಜ್ಞಾನಿಯೂ ಧರ್ಮಿ
ಷ್ಠನೂ ಆಗಿ ಸರ್ವೇಂದ್ರಿಯಗಳನ್ನು ಲಿಂಗಮುಖದಿಂದ ಸಾವಧಾನ
ಮಾಡಿಕೊಂಡಿರುವುದು ಪ್ರತ್ಯಾಹಾರವಾಗಿರುವುದು. ಅಂತರಂಗದ ಶುದ್ಧ
ಪರಮಾತ್ಮ ಲಿಂಗವನ್ನು ಶಿವಲಿಂಗ ಸ್ವರೂಪವನ್ನಾಗಿ ಮಾಡಿ ಕರಸ್ಥಲದ
ಲಿಂಗವೇ ಪರಮಾತ್ಮ ಚಿಹ್ನವೆಂದರಿದು, ಅದನ್ನು ಆರು ಚಕ್ರಗಳಲ್ಲಿ
ಅಂದರೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ,
ಆಜ್ಞೆ, ಇವುಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವ

ಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಾಗಿ ಧ್ಯಾ
ವುದು ಧ್ಯಾನಯೋಗವೆನಿಸುವುದು. ಹೀಗೆ ಧ್ಯಾನಿಸಿದಲ್ಲಿ ಆಯಾ
ಗಳು ಆಯಾ ಚಕ್ರಗಳಲ್ಲಿ ಸ್ಥಾಪ್ಯವಾಗುವುವು. ಇದರಿಂದ ಭಾವ
ಮನ ಮುಖ್ಯವಾದ ಸರ್ವಾಂಗದಲ್ಲಿ ಆ ಲಿಂಗವು ತೊಳಗಿ ಬೆಳಗ
ಆ ಲಿಂಗದೊಡನೆ ಆಚರಣೆಗಳುಂಟಾಗುವುವು. ಇದೇ ಧಾರಣಯೋ
ಈ ಆರು ಲಿಂಗಗಳು ಇಷ್ಟ, ಪ್ರಾಣ, ಭಾವಲಿಂಗದೊಳಗಿನವಿದ್ದು
ಅವುಗಳಲ್ಲಿಯೇ ಬೆರೆದು, ಆ ಮೇಲೆ ಈ ತ್ರಿವಿಧ ಲಿಂಗಗಳನ್ನು ಪ್ರ
ಕಾರ ಮಾಡಿ, ಅಖಂಡ ಪರಿಪೂರ್ಣ ಕೇವಲ ಪರಂಜ್ಯೋತಿ ಸ್ವರೂ
ಗಿರುವ ಮಹಾಲಿಂಗದೊಡನೆ ಸಂಯೋಗವಾಗಬೇಕು. ಇದೇ ಸಮ
ಯೋಗವು. ಇತರ ಯೋಗಗಳಲ್ಲಿ ಈ ತೆರದ ಲಿಂಗ ಸಂಬಂಧವಿರು
ಅವು ಕೇವಲ ಕರ್ಮಕೌಶಲಗಳಾಗಿವೆ. ಆದರೆ ಶಿವಯೋಗಿಯು
ಗುರುವಿತ್ತ ಇಷ್ಟಲಿಂಗವನ್ನು ದೃಷ್ಟಿಯಿಂದ ಗ್ರಹಿಸುವನು. ಹೀಗೆ
ಪ್ರಾಣಲಿಂಗವನ್ನು ತನ್ನ ಮನಸ್ಸಿನಿಂದೆ ದೃಢವಾಗಿ ಹಿಡಿದು
ಭಾವಲಿಂಗವನ್ನು ತನ್ನ ಭಾವದಿಂದ ಅರಿಯುವನು. ಹೀಗೆ ತ್ರಿವಿಧ
ಗಳೊಡನೆ ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು– ತಾ
ಬಯಲಾಗುವನು ಇದಕ್ಕೆ ಯಾವುದು ಸಾಧನವೋ ಅದೇ ಶಿವ
ಗವು

೪೫. ಪಂಚಕರ್ಮೇಂದ್ರಿಯಗಳು : ಇವು ವಾಕ್, ಪ
ಗುದ. ಗುಹ್ಯ ಎಂದು ಐದು ಇವೆ ಇವು ಕ್ರಿಯಾರೂಪವಾಗಿರು
ಇವು ಸ್ವತಂತ್ರವಾಗಿರದೆ ಜೀವನಿಗೆ ಅಧೀನವಾಗಿರುತ್ತವೆ. ಜೀ
ಮನಸ್ಸನ್ನು ಇಂದ್ರಿಯಗಳೊಡನೆ ಬೆರಸಲು ಅವು ವಾಯುವಿನ ಚೈ
ಬಲದಿಂದ ವ್ಯವಹರಿಸುತ್ತವೆ ವಾಗಿಂದ್ರಿಯವು ಮಾತು ಕಥೆಯಾಡು
ಪಾಣೇಂದ್ರಿಯವು ಕೊಡುವುದು, ತೆಗೆದುಕೊಳ್ಳುವುದು, ಹಿಡಿಯು
ಮೊದಲಾದ ಕಾರ್ಯಗಳನ್ನು ಮಾಡುತ್ತದೆ. ಪಾದೇಂದ್ರಿಯವು ಹೋ
ವುದು, ಬರುವುದು ಈ ಮೊದಲಾದ ಕಾರ್ಯಗಳನ್ನು ಮಾಡು
ಗುದೇಂದ್ರಿಯವು ಮಲ ವಿಸರ್ಜನ ಕಾರ್ಯವನ್ನು ಮಾಡುತ್ತದೆ. ಗುಹ್ಯೇ
ದ್ರಿಯವು ಮೈಥುನ ಕಾರ್ಯ ಮಾಡುತ್ತವೆ. ಇವೆಲ್ಲವೂ ಕರ್ಮೇಂದ್ರಿ



ಗಳು. ಗುದಕ್ಕೆ ಪಾಯುವೆಂತಲೂ ಹೆಸರಿದೆ.

೪೬. ಪಂಚಜ್ಞಾನೇಂದ್ರಿಯಗಳು : ಶ್ರೋತ್ರ, ತ್ವಕ್ಕು, ನೇತ್ರ ಜಿಹ್ವೆ, ಘ್ರಾಣ ಇವು ಇವೆ. ಇವುಗಳಿಗೆ ಬುದ್ಧೀಂದ್ರಿಯಗಳೆಂಬ ಹೆಸರೂ ಇದೆ. ಶ್ರೋತ್ರೇಂದ್ರಿಯ ಅಥವಾ ಶ್ರವಣೇಂದ್ರಿಯಕ್ಕೆ ಆಕಾಶತತ್ವವು ಮೂಲ ಚೈತನ್ಯವು. ಶಬ್ದವನ್ನು ಈ ಇಂದ್ರಿಯವು ಗ್ರಹಿಸುತ್ತದೆ. ತ್ವಗಿಂದ್ರಿಯಕ್ಕೆ ವಾಯುತತ್ವವು ಮೂಲ ಚೈತನ್ಯವು. ಇದು ಸ್ಪರ್ಶನ ವಿಷಯವನ್ನುಳ್ಳದ್ದು. ನಯನೇಂದ್ರಿಯಕ್ಕೆ ಅಗ್ನಿತತ್ವವು ಮೂಲ ಚೈತನ್ಯವು. ಇದಕ್ಕೆ ರೂಪು ವಿಷಯವಾಗಿರುತ್ತದೆ ಜಿಹ್ವೇಂದ್ರಿಯಕ್ಕೆ ಅಪ್ಪು ತತ್ವವು ಮೂಲ ಚೈತನ್ಯವು. ಇದು ರಸ ವಿಷಯವನ್ನು ಗ್ರಹಿಸಿ ಸುರುಚಿ ಕುರುಚಿಗಳನ್ನು ಗ್ರಹಿಸುವುದು. ಘ್ರಾಣೇಂದ್ರಿಯಕ್ಕೆ ಪೃಥ್ವಿತತ್ವವು ಮೂಲ ಚೈತನ್ಯವು. ಅಲ್ಲಿ ಗಂಧ ವಿಷಯವಿದ್ದು ಅದು ಸುಗಂಧ-ದುರ್ಗಂಧವನ್ನರಿಯುವುದು.

೪೭. ಪಂಚವಿಷಯಗಳು : ಇವುಗಳಿಗೆ ತನ್ಮಾತ್ರೆಗಳು ಎಂಬ ಹೆಸರೂ ಇದೆ. ಇವು ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳಿರುತ್ತವೆ. ಇವುಗಳು ಅನುಕ್ರಮವಾಗಿ ಶ್ರೋತ್ರೇಂದ್ರಿಯ, ತ್ವಗಿಂದ್ರಿಯ, ನಯನೇಂದ್ರಿಯ, ಜಿಹ್ವೇಂದ್ರಿಯ, ಘ್ರಾಣೇಂದ್ರಿಯ ಇವುಗಳಿಗೆ ಸಂಬಂಧಪಡುತ್ತವೆ.

೪೮. ಕರಣ ಚತುಷ್ಟಯಗಳು : ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳಿರುತ್ತವೆ ಮನಸ್ಸಿಗೆ ವಾಯುವು ಮೂಲ ಚೈತನ್ಯವು. ಮನಸ್ಸು ಸಂಕಲ್ಪ ವಿಕಲ್ಪಗಳನ್ನು ಮಾಡಿಸುತ್ತದೆ. ಬುದ್ಧಿಗೆ ಅಪ್ಪು ಮೂಲ ಚೈತನ್ಯವು. ನಿಶ್ಚೈಸುವುದೇ ಅದರ ಕಾರ್ಯವು. ಚಿತ್ತಕ್ಕೆ ಪೃಥ್ವಿಯೇ ಮೂಲ ಚೈತನ್ಯವು. ಅದು ಸಂಸಾರ ವಿಷಯಕವಾದ ಕಾರ್ಯಗಳನ್ನು ಮಾಡಿಸುತ್ತದೆ. ಅಹಂಕಾರಕ್ಕೆ ಅಗ್ನಿಯೇ ಮೂಲ ಚೈತನ್ಯವು. ಅದು ಅಹಂಭಾವದಿಂದ ಅಹಂಕರಿಸುತ್ತದೆ. ಇವು ನಾಲ್ಕು–ಕರಣ ಚತುಷ್ಟಯಗಳು. ಇವೆಲ್ಲವೂ ಆತ್ಮನಿಗೆ ಸಂಬಂಧಪಟ್ಟವುಗಳಿರುತ್ತವೆ.

೪೯. ತ್ಯಾಗಾಂಗ, ಭೋಗಾಂಗ, ಯೋಗಾಂಗಗಳು : ಇವು ಭಕ್ತನ ಆಚರಣೆಗಳು. ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ಅನುಕ್ರ

ಮವಾಗಿ ಸಂಬಂಧಿಸಿರುತ್ತವೆ. ತ್ಯಾಗಾಂಗ, ಭೋಗಾಂಗ, ಯೋಗಾ
ಳಿಂದ ಈ ಮೂರು ಶರೀರಗಳಲ್ಲಿ ಇಷ್ಟ, ಪ್ರಾಣ, ಭಾವಲಿಂಗಗಳು ಅನುಕ್ರ
ವಾಗಿ ನೆಲೆಗೊಳ್ಳುತ್ತವೆ. ಸಂಸಾರದಲ್ಲಿ ಕೆಡಕಾದುದು ಆವುದೋ ಅ
ಬಿಡುವುದೇ ತ್ಯಾಗಾಂಗವು. ಕೆಡಕಿನ ಕಡೆಗೆ ತನುಗುಣಗಳ ಪ್ರ
ಇರುತ್ತದೆ. ಈ ಪ್ರವೃತ್ತಿಯನ್ನು ತೊಲಗಿಸಿ ಸದಾಚಾರದ ಕಡೆಗೆ ಮ
ಷ್ಯನು ಒಲಿಯಬೇಕು. ಇದೇ ಅವನಲ್ಲಿಯ ತ್ಯಾಗಾಂಗವು. ಲಿಂಗದೊ
ಮನುಷ್ಯನು ತನ್ನ ಎಲ್ಲ ಸುಖಗಳನ್ನು ಭೋಗಿಸುವುದೇ ಭೋಗಾಂ
ಅಂದರೆ ಅವನು ಶಿವಾರ್ಪಣ ಬುದ್ಧಿಯಿಂದ ತನ್ನ ಕೃತ್ಯಗಳನ್ನು ಮ
ಬೇಕು. ಈ ಬಗೆಯ ಅರ್ಪಣದಿಂದ ಅವನು ಶಿವಪ್ರಸಾದವನ್ನು ಪ
ಜಗತ್ತಿನಲ್ಲಿ ವ್ಯವಹರಿಸುತ್ತಾನೆ. ಅವನು ಲಿಂಗಭೋಗೋಪಭೋಗಿ ಎ
ನಿಸಿಕೊಳ್ಳುತ್ತಾನೆ. ಇದೇ ಭೋಗಾಂಗವು. ಮನುಷ್ಯನು ತನ್ನ
ದಲ್ಲಿ ಬೆರೆಯಲು ಅದು ಯೋಗಾಂಗವು. ತ್ಯಾಗಾಂಗ, ಭೋಗಾಂಗಗ
ಮನುಷ್ಯನಲ್ಲಿ ಅವನ ನಿಜವು ಅಳವಡುತ್ತದೆ ಈ ನಿಜದಲ್ಲಿ ಏಕ
ವಾಗಲು ಅದೇ ಯೋಗಾಂಗವೆನಿಸಿಕೊಳ್ಳುತ್ತದೆ.

೫೦. **ಇಷ್ಟ-ಪ್ರಾಣ-ಭಾವಲಿಂಗಗಳು** : ತ್ಯಾಗಾಂಗ, ಭೋಗಾ
ಯೋಗಾಂಗಗಳಿಂದ ಮನುಷ್ಯನ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗ
ಪರಮಾತ್ಮನ ಕಳೆಯು ಪ್ರಜ್ವಲಿಸಹತ್ತುತ್ತದೆ. ಈ ಕಳೆಯೇ ಲಿಂಗ
ಸಿಕೊಳ್ಳುತ್ತದೆ. ಇದೇ ಆ ಮೂರು ಶರೀರಗಳಲ್ಲಿ ಅನುಕ್ರಮವಾಗಿ ಇ
ಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬ ಹೆಸರುಗಳನ್ನು ತಾಳಿ ಪ್ರ
ವಾಗುತ್ತದೆ. ಇಷ್ಟಲಿಂಗವು ಸತ್‌ಕ್ರಿಯಾ ಸ್ವರೂಪುಳ್ಳದ್ದಾಗಿರುತ್ತ
ಈ ಕ್ರಿಯೆಗಳಿಗೆ ಸಾಧನವಾಗಿರುವಂಥವು ಇಂದ್ರಿಯಗಳು. ಈ ಇಂದ್ರಿ
ಗಳಿಗೆ ಚೈತನ್ಯವಾಗಿರುವುದು ಪ್ರಾಣವು. ಈ ಪ್ರಾಣದಲ್ಲಿಯೇ ಪ್ರಾ
ಲಿಂಗವು ನೆಲೆಗೊಳ್ಳುತ್ತದೆ. ಈ ಪ್ರಾಣಲಿಂಗಕ್ಕೆ ಪುನಃ ಮೂಲವಾಗಿ
ವುದು ಭಾವಲಿಂಗವು. ಭ್ರಮೆಗಳು ಮನುಷ್ಯನಲ್ಲಿ ನಷ್ಟವಾಗಿ ಶಿವಾ
ಭವವು ನೆಲೆಗೊಳ್ಳಲು ಈ ಭಾವಲಿಂಗವು ಕಾರಣ ಶರೀರದಲ್ಲಿ ಪ್ರಜ್ವ
ಸಹತ್ತುತ್ತದೆ. ಈ ಪ್ರಕಾರ ಇಷ್ಟಲಿಂಗವು ಅಂಗದಲ್ಲಿ ಅಳವಡುತ್ತ
ಪ್ರಾಣಲಿಂಗವು ಮನದಲ್ಲಿ ಅಳವಡುತ್ತದೆ, ಭಾವಲಿಂಗವು ಭಾವದಲ್ಲಿ



ವಡುತ್ತದೆ. ಅಂದರೆ ಇಷ್ಟಲಿಂಗವು ಬಾಹ್ಯಶರೀರದಲ್ಲಿ ತೋರುತ್ತದೆ. ಪ್ರಾಣಲಿಂಗವು ಪ್ರಾಣದಲ್ಲಿ ತೋರುತ್ತದೆ. ಭಾವಲಿಂಗವು ಇವೆಲ್ಲವುಗ-ಳಿಗೂ ಮೇಲಿರುವ ಕಾರಣ ಶರೀರದಲ್ಲಿ ನೆಲೆಗೊಂಡಿರುತ್ತದೆ.

೫೧. **ಭಕ್ತಿಗಳು** : ಇವು ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಸುಜ್ಞಾನ ಮತ್ತು ಸಮರಸ ಎಂದು ಆರು ವಿಧವಾಗಿವೆ. ಶ್ರದ್ಧೆ ಎಂದರೆ ನಂಬಿಗೆ, ಅಥವಾ ವಿಶ್ವಾಸವು. ದೃಢವಾದ ನಂಬಿಗೆಯೇ ನಿಷ್ಠೆಯಾಗಿದೆ. ವಿಶ್ವಾಸವು ಬಲಿಯಲು ನಿಷ್ಠೆ ಎಂದೆನಿಸಿಕೊಳ್ಳುತ್ತದೆ. ವಿಶ್ವಾಸವುಳ್ಳವನೇ ಭಕ್ತಸ್ಥಲದವನು. ನಿಷ್ಠೆಯುಳ್ಳವನು ಮಹೇಶ್ವರಸ್ಥಲದವನು. ಇವೆರಡೂ ಸ್ಥೂಲ ಶರೀರಕ್ಕೆ ಸಂಬಂಧಿಸಿವೆ. ಮನಸ್ಸಿಗೆ ಸಂಬಂಧಿಸಿದುದು ಅವಧಾನ ಭಕ್ತಿಯು. ಅವಧಾನವೆಂದರೆ ಮನಸ್ಸಿನ ಏಕಾಗ್ರತೆಯು. ಇದು ಪ್ರಸಾದಿಸ್ಥಲಕ್ಕೆ ಸಂಬಂಧಿಸಿದುದು. ಮನಸ್ಸಿನಲ್ಲಿ ಏಕಾಗ್ರತೆಯುಂಟಾ-ಗಲು ಅಂತರಂಗದ ಕ್ರಿಯೆಗಳನ್ನು ಸರಿಯಾಗಿ ಜರುಗಿಸುವ ಯೋಗ್ಯತೆಯುಂಟಾಗುವುದು. ಜೀವನ ಈ ಸ್ಥಿತಿಯೇ ಅನುಭಾವ ಭಕ್ತಿಯು. ಇದು ಪ್ರಾಣಲಿಂಗಿಗೆ ಸಂಬಂಧಿಸಿದುದು. ಇವನಲ್ಲಿ ಅಂತರಂಗ ಬಹಿರಂಗನೆರಡೂ ಪರಸ್ಪರತ್ವವನ್ನು ಹೊಂದಿ ಕಾರ್ಯ ಮಾಡುತ್ತವೆ. ಅವಧಾನ ಭಕ್ತಿ ಮತ್ತು ಅನುಭಾವ ಭಕ್ತಿ ಇವೆರಡೂ ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿದವು. ಸುಜ್ಞಾನ ಭಕ್ತಿ ಮತ್ತು ಸಮರಸಭಕ್ತಿಗಳು ಕಾರಣಶರೀರಕ್ಕೆ ಸಂಬಂಧಿಸಿದವು. ಇವುಗಳಲ್ಲಿ ಸುಜ್ಞಾನ ಭಕ್ತಿಯು ಶರಣಸ್ಥಲಕ್ಕೆ ಸಂಬಂಧಿಸಿರುತ್ತದೆ. ಕಾರ್ಯಗಳ ರೀತಿ, ಅವುಗಳ ಮರ್ಮ ಅಥವಾ ಹದವನ್ನು ಅರಿತು ಮಾಡುವುದೇ ಸುಜ್ಞಾನಭಕ್ತಿ ಎನಿಸಿಕೊಳ್ಳುತ್ತದೆ. ಈ ಭಕ್ತಿಯುಳ್ಳವನು ಪೂರ್ಣ ಅನುಭವವನ್ನು ಹೊಂದಿದವನಿರುತ್ತಾನೆ. ಇವನಲ್ಲಿ ಕ್ರಿಯಾಜ್ಞಾನಗಳ ಭೇದ ಉಳಿಯುವುದಿಲ್ಲ. ಸಮರಸ ಭಕ್ತಿಯು ಐಕ್ಯಸ್ಥಲಕ್ಕೆ ಸಂಬಂಧಿಸಿದುದು. ಇದು ಮನುಷ್ಯನ ಎಲ್ಲ ಶರೀರಗಳಲ್ಲಿ ಉಂಟಾಗುವ ಎಲ್ಲ ತರದ ಅನುಭವಗಳಲ್ಲಿ ಸಾಮರಸ್ಯವನ್ನುಂಟು ಮಾಡುತ್ತದೆ.

೫೨. **ಹಸ್ತಗಳು** : ಇವು ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ಎಂದು ಆರು ಇರುತ್ತವೆ. ಸುಚಿತ್ತವು ಸಂಸಾರ ಲೋಲುಪತೆಯನ್ನು ದೂರಮಾಡಿ ವಿಶ್ವಬಂಧುತ್ವಭಾವವನ್ನುಂಟು

ಮಾಡುತ್ತದೆ. ಇದು ನೈತಿಕಾಚಾರಕ್ಕೆ ಕಾರಣವಾದುದು. ಸು ದ್ಧಿಯು ಮನಸ್ಸಿನ ಚಾಂಚಲ್ಯವನ್ನು ಹೋಗಲಾಡಿಸಿ ತಿಳುವಳಿಕೆಯ ಹುಟ್ಟಿಸುವುದು. ನಿರಹಂಕಾರವು ಅಹಂಭಾವವನ್ನು ಹೋಗಲಾ ಅರ್ಪಣ ಬುದ್ಧಿಯಿಂದ ಆಚರಿಸುವಂತೆ ಮಾಡುವುದು. ಸುಮ ಶುದ್ಧಾಂತಃಕರಣವನ್ನುಂಟುಮಾಡುತ್ತದೆ. ಸುಜ್ಞಾನವು ಇಂದ್ರಿಯ ದುಷ್ಟ ಪ್ರವೃತ್ತಿಗಳನ್ನು ದೂರಮಾಡುತ್ತದೆ. ಲಿಂಗಪ್ರಸಾದವಾಗಿ, ಲಿ ಸಂಸಾರಿಯಾಗಿ ಆಚರಿಸುವಂತೆ ಮಾಡುತ್ತದೆ. ಸದ್ಭಾವವು ಲಿಂಗ ತಾ ಕೂಡಿ ತನ್ನಲ್ಲಿ ಲಿಂಗವು ಕೂಡಿ ತಾನು ಮತ್ತು ಲಿಂಗ ಎಂಬ ಉಭ ಭಾವವಳಿದು ತಾನು ತಾನಾಗಿರುವಂತೆ ಮಾಡುತ್ತದೆ. ಇವೆಲ್ಲವು ಮ ಷ್ಯನಿಗೆ ಹಸ್ತಗಳಂತೆ ಇರುತ್ತವೆ. ಅಂದರೆ ಇವುಗಳ ಸಹಾಯದಿಂ ಅವನು ಆಚರಿಸಿ ಆರು ಸ್ಥಲಗಳ ಪ್ರಕಾರ ಪ್ರಗತಿಯನ್ನು ಹೊಂ ಹೋಗುತ್ತಾನೆ.

೫೩. ಅಂಗಸ್ಥಲಗಳು : ಇವು ಭಕ್ತ, ಮಹೇಶ್ವರ, ಪ್ರಸಾ ಪ್ರಾಣಲಿಂಗಿ, ಶರಣ, ಐಕ್ಯ ಎಂದಿರುತ್ತವೆ. ಇವೇ ಮುಖ್ಯ ಷಟ್ಸ್ ವಿಭೇದಗಳು. ಭಕ್ತನು ವಿಶ್ವಾಸವುಳ್ಳವನು, ನೀತಿವಂತನು, ಸದಾ ರಿಯು. ಮಹೇಶ್ವರನು, ದೃಢಚಿತ್ತನು, ಶೂರನು, ಹಿಡಿದುದನ್ನು ಬಿಡ ವನಲ್ಲ, ವ್ರತನಿಷ್ಠನು, ಧೈರ್ಯವಂತನು, ಏಕಲಿಂಗ ನಿಷ್ಠಾಪರ ಸತ್‌ಶೀಲನು, ಅನ್ಯಾಯವನ್ನು ನಿಗ್ರಹಿಸುವವನು, ಸಾಮರ್ಥ್ಯವಂತ ಕಷ್ಟಗಳನ್ನು ಲೆಕ್ಕಿಸುವವನಲ್ಲ. ಪ್ರಸಾದಿಯು ಆತ್ಮಾರ್ಪಣ ಭಾವದ ವರ್ತಿಸುವವನು, ನಿಷ್ಕಾಮಕರ್ಮಿಯು. ಏಕಾಗ್ರಚಿತ್ತನು, ಅಹಂಕ ವಿರಹಿತನು, ತಾನೆಂಬುದನ್ನು ಬಿಟ್ಟವನು. ಪ್ರಾಣಲಿಂಗಿಯು ಇಂದ್ರಿ ಗಳನ್ನು ಅಂಕಿತದಲ್ಲಿಟ್ಟುಕೊಂಡವನು, ಲಿಂಗದಲ್ಲಿ ಆಸಕ್ತಿಯುಳ್ಳವ ಲಿಂಗದೊಡನೆ ಆಚರಿಸುವವನು, ಪ್ರಾಣವೇ ಲಿಂಗವಾಗಿರುವವನು. ಣನು ಶಿವಾನುಭವವನ್ನು ಹೊಂದಿದವನು, ಲಿಂಗದ ಅರಿವುಳ್ಳವ ಲಿಂಗದ ಪ್ರಕಾಶದಲ್ಲಿಯೇ ಆಚರಿಸುವವನು, ವಿಶ್ವಕುಟುಂಬಿಯಾಗಿ ವನು, ತನ್ನದೆಂಬುದನ್ನು ಸಂಪೂರ್ಣ ತೊರೆದವನು, ವಿನಯಪೂರ್ಣ ಶರಣಭಾವವುಳ್ಳವನು. ಐಕ್ಯನಲ್ಲಿ ಆವ ತರದ ಭೇದಭಾವವೂ ಇರುವು ತಾನೂ, ತನ್ನ ಕ್ರಿಯೆಗಳೂ, ಜಗತ್ತೂ ಇವುಗಳಲ್ಲೆಲ್ಲ ಸಾಮರಸ್ಯ ಭಾ



ಳ್ಳವನಾಗಿರುತ್ತಾನೆ. ಅವನು ಮನುಷ್ಯನ ಶ್ರೇಷ್ಠತ್ವದ ಪರಮಾವಧಿ ಸ್ಥಿತಿಯನ್ನು ಹೊಂದಿರುತ್ತಾನೆ. ಭಕ್ತನಿಗೆ ಕ್ರಿಯೆ. ಮಹೇಶ್ವರನಿಗೆ ನಿಷ್ಠೆಯವು, ಪ್ರಸಾದಿಗೆ ಅರ್ಪಣವು, ಪ್ರಾಣಲಿಂಗಿಗೆ ಯೋಗವು, ಶರಣನಿಗೆ ನಿಬ್ಬೆರಗು, ಐಕ್ಯನಿಗೆ ನಿರ್ಲೇಪವೆಂದು ಬೇರೊಂದು ವಿಧವಾಗಿ ಹೇಳಬಹುದು. ಭಕ್ತನಿಗೆ ಕಿಂಕರತ್ವವು, ಮಹೇಶ್ವರನಿಗೆ ಸಾರಾಸಾರ ವಿಚಾರವು, ಪ್ರಸಾದಿಗೆ ತನುಗುಣಲೋಪವು, ಪ್ರಾಣಲಿಂಗಿಗೆ ಅಂತರ್ಲಕ್ಷ್ಯವು, ಶರಣನಿಗೆ ನಿಸ್ಸಂಗತ್ವವು. ಐಕ್ಯಂಗೆ ಬಯಲು ಎಂತಲೂ ಹೇಳಬಹುದು. ಷಟ್‌ಸ್ಥಲ ಶಾಸ್ತ್ರದಲ್ಲಿ ಈ ಸ್ಥಲಗಳ ವಿಷಯವಾಗಿ ವಿಸ್ತೃತ ವಿವೇಚನೆಗಳಿರುತ್ತವೆ.

೫೪. ಉಪಾಂಗಗಳು : ಇವು ಭಕ್ತಿ, ಕರ್ಮಕ್ಷಯ, ಬುದ್ಧಿ, ವಿಚಾರ, ದರ್ಪಸಂಕ್ಷಯ, ಸಮ್ಯಗ್‌ಜ್ಞಾನ ಎಂದು ಆರು ಇರುತ್ತವೆ. ಭಕ್ತಿ ಮತ್ತು ಕರ್ಮಕ್ಷಯ ಇವು ಸ್ಥೂಲ ಶರೀರಕ್ಕೆ ಸಂಬಂಧವಾದವುಗಳು. ಸೂಕ್ಷ್ಮ ಶರೀರಕ್ಕೆ ಸಂಬಂಧವಾದವುಗಳು ಬುದ್ಧಿ ಮತ್ತು ವಿಚಾರ. ಮತ್ತು ಕಾರಣಶರೀರಕ್ಕೆ ಸಂಬಂಧವಾದವುಗಳು ದರ್ಪಸಂಕ್ಷಯ ಮತ್ತು ಸಮ್ಯಗ್‌ಜ್ಞಾನ. ಇವು ಆರು ಉಪಾಂಗಗಳು ಇವು ವಚನಶಾಸ್ತ್ರದಲ್ಲಿ ಬಹು ಕ್ವಚಿತ್ತಾಗಿ ಉಲ್ಲೇಖಿಸಲ್ಪಡುತ್ತವೆ. ಆದರೆ ಕೆಲವು ಆಗಮ ಗ್ರಂಥಗಳಲ್ಲಿ ಬರುವುದುಂಟು.

೫೫. ಅಂಗಗಳು : ಇವು ಸರ್ವಜ್ಞತಾ, ತೃಪ್ತಿ, ಅನಾದಿಬೋಧ, ಸ್ವತಂತ್ರತಾ, ಅಲುಪ್ತಾಶಕ್ತಿ, ಅನಂತಶಕ್ತಿ ಎಂದು ಆರು ಇವೆ. ಇವು ಮೇಲೆ ಹೇಳಿದ ಉಪಾಂಗಗಳಿಂದ ಆಯಾ ಸ್ಥಲಗಳಲ್ಲಿ ಆಗುವ ಪರಿಣಾಮಗಳೆಂದು ಹೇಳಬಹುದು. ಇವಾದರೂ ವಚನಶಾಸ್ತ್ರ ಗ್ರಂಥಗಳಲ್ಲಿ ಕ್ವಚಿತ್ತಾಗಿ ಬರುತ್ತವೆ. ಆದರೆ ಕೆಲವು ಆಗಮ ಗ್ರಂಥಗಳಲ್ಲಿ ಇವು ಉಲ್ಲೇಖಿಸಲ್ಪಡುವುದುಂಟು. ಭಕ್ತಿಯ ಮೂಲಕ ಸರ್ವಜ್ಞತೆಯು, ಕರ್ಮಕ್ಷಯದ ಮೂಲಕ ಅನಾದಿ ಬೋಧವು, ವಿಚಾರದ ಮೂಲಕ ಸ್ವತಂತ್ರತೆಯು, ದರ್ಪ ಸಂಕ್ಷಯದ ಮೂಲಕ ಅಲುಪ್ತಾಶಕ್ತಿಯು, ಸಮ್ಯಗ್‌ಜ್ಞಾನದ ಮೂಲಕ ಅನಂತಶಕ್ತಿಯು ಮನುಷ್ಯನಲ್ಲಿ ಅಳವಡುತ್ತವೆಂಬ ಭಾವವು ಇವುಗಳಲ್ಲಿದೆ.

**೫೬. ಷಡ್ಲಿಂಗಗಳು :** ಇವು ಆಚಾರಲಿಂಗ, ಗುರುಲಿಂಗ, ಶಿ ಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದಿವೆ. ಇ ಅನುಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ ಇವುಗಳಿಗೆ ಸಂಬಂಧಪಡುತ್ತವೆ. ಅಂದರೆ ಈ ಆರು ಸ್ಥಲಗಳಲ್ಲಿ ಆಯಾ ಲಿಂಗಗಳು ಮನುಷ್ಯನಲ್ಲಿ ಅಳವಡುತ್ತವೆ. ಭಕ್ತಸ್ಥಲದಲ್ಲಿ ಶ್ರದ್ಧಾ ಭಕ್ತಿಯ ಮೂಲಕ ಆಚಾರಲಿಂಗವಳಪಡುತ್ತದೆ. ನೈತಿಕ ಉನ್ನತಿಯೇ ಈ ಆಚಾ ಲಿಂಗವಾಗಿರುತ್ತದೆ. ಆಚಾರಲಿಂಗವು ನಿಷ್ಠೆಯಿಂದ ಒಳಪಡಲು ಅದು ಮಹೇಶ್ವರ ಸ್ಥಲದಲ್ಲಿ ಗುರುಲಿಂಗವೆನಿಸಿಕೊಳ್ಳುತ್ತದೆ. ಅವಧಾನ ಭಕ್ತಿ ಯಿಂದ ಲಿಂಗದಲ್ಲಿ ಮನ ಮಗ್ನವಾಗಲು ಹೃದಯದಲ್ಲಿ ಶಿವಲಿಂಗವು ತೋರುವುದು. ಮುಂದೆ ಆ ಲಿಂಗದೊಡನೆ ವ್ಯವಹರಿಸಲಾಗಿ ಅದು ಚೈತ ನ್ಯಾತ್ಮಕವಾದ ಜಂಗಮಲಿಂಗವು ಮನುಷ್ಯನಲ್ಲೆಲ್ಲ ತಲೆದೋರುವುದು. ಶರಣನಲ್ಲಿ ಪ್ರಸಾದಲಿಂಗವಿರುತ್ತದೆ. ಮತ್ತು ಐಕ್ಯನಲ್ಲಿ ಮಹಾಲಿಂಗವಿ ರುತ್ತದೆ. ಮನುಷ್ಯನಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ ಮತ್ತು ಭಾವಗಳಿರುತ್ತವೆ. ಇವುಗಳಿಂದಲೇ ಮನುಷ್ಯನ ಕ್ರಿಯೆಗಳು ನಡೆಯುತ್ತವೆ. ಲಿಂಗವಶದಿಂದ ಆಚರಿಸುವ ಮನುಷ್ಯನಲ್ಲಿ ಚಿತ್ತಕ್ಕೆ ಆಚಾರ ಲಿಂಗವು, ಬುದ್ಧಿಗೆ ಗುರುಲಿಂಗವು, ಅಹಂಕಾರಕ್ಕೆ ಶಿವಲಿಂಗವು, ಮನಕ್ಕೆ ಜಂಗಮಲಿಂಗವು, ಜ್ಞಾನಕ್ಕೆ ಪ್ರಸಾದಲಿಂಗವು, ಭಾವಕ್ಕೆ ಮಹಾಲಿಂಗವು ಸಂಬಂಧಪಡುತ್ತವೆ. ಆವುದಾನೊಂದು ಕ್ರಿಯೆಯನ್ನು ಮಾಡುವಲ್ಲಿ, ಮನುಷ್ಯನು ಮೊದಲು ಅದಕ್ಕೆ ಎಳಿಸಲ್ಪಡುವನು, ಆ ಮೇಲೆ ಅದಕ್ಕೆ ಮೋಹಿಸಲ್ಪಡುವನು, ಆ ಮೇಲೆ ಅದರಲ್ಲಿ ಕೂಡುವನು, ಕೂಡಿದ ಬಳಿಕ ಅದರಲ್ಲಿ ಸುಖ ಪಡುವನು, ಸುಖ ಪಡೆದು ಪರಿಣಾಮತೆಯನ್ನು ಹೊಂದು ವನು, ಆ ಮೇಲೆ ಆ ವಿಷಯದಲ್ಲಿ ಏಕಾಕಾರ ಹೊಂದುವನು, ಹೀಗೆ ಕ್ರಮವಿದೆ. ಈ ಕಾರ್ಯಗಳೆಲ್ಲ ಆಯಾ ಲಿಂಗಗಳಲ್ಲಿ ಸಂಬಂಧಪಡುತ್ತವೆ. ಎಳಿಸಲ್ಪಡುವುದು ಆಚಾರಲಿಂಗದ ವಿಷಯ. ಎಳಿಸಿ ಮೋಹಿಸುವುದು ಗುರು ಲಿಂಗವಿಷಯ. ಮೋಹಿಸಿ ಕೂಡುವುದು ಶಿವಲಿಂಗ ವಿಷಯ. ಕೂಡಿ ಸುಖ ಬಡುವುದು ಜಂಗಮಲಿಂಗವಿಷಯ. ಸುಖಪಡೆದು ಪರಿಣಾಮಿಸುವುದು ಪ್ರಸಾದ ಲಿಂಗ ವಿಷಯ. ಪರಿಣಾಮಿಸಿ ಏಕಾಕಾರ ಹೊಂದುವದು ಮಹಾ



ಲಿಂಗ ವಿಷಯ. ಶ್ವಾಸೋಚ್ಛ್ವಾಸಕ್ಕೆ ಸಂಬಂಧಿಸಿದ ಈಡಾಪಿಂಗಳನಾಡಿಯ ದೆಸೆಯಿಂದ ಶರೀರದಲ್ಲಿ ಚೈತನ್ಯ ಉಂಟಾಗುವುದರಿಂದ ನಾಸಿಕಕ್ಕೆ ಆಚಾರಲಿಂಗವು. ಗುರುವು ಮಂತ್ರ ಮೂರ್ತಿಯಾಗಿ ಭಕ್ತನಲ್ಲಿ ನೆಲೆಗೊಳ್ಳುತ್ತಾನೆ. ಆದರೆ ಈ ಮಂತ್ರವು ಜಿಹ್ವೆಗೆ ಸಂಬಂಧಪಡುವುದರಿಂದ ಜಿಹ್ವೆಯಲ್ಲಿ ಗುರುಲಿಂಗವು. ಸ್ವಯಂಪ್ರಕಾಶವು ಶಿವಲಿಂಗವು. ಇದು ನೇತ್ರದಲ್ಲಿ ನೆಲೆಸಿರುವುದರಿಂದ ನೇತ್ರಕ್ಕೆ ಶಿವಲಿಂಗವು. ತ್ವಕ್ಕು ಸರ್ವಾಂಗದಲ್ಲಿರುವುದರಿಂದ ಅದರಲ್ಲಿ ಸರ್ವ ವ್ಯಾಪಿಯಾದ ಜಂಗಮಲಿಂಗವಿದೆ. ಶರಣನಿಗೆ ಮಹಾನಾದವೇ ಪ್ರಸಾದವಾದ ಕಾರಣ ಅದು ಶ್ರೋತ್ರಕ್ಕೆ ಸಲ್ಲುತ್ತದೆ. ಆ ಕಾರಣ ಶ್ರೋತ್ರದಲ್ಲಿ ಪ್ರಸಾದಲಿಂಗವಿರುತ್ತದೆ. ಆತ್ಮನಲ್ಲಿ ಮಹಾಲಿಂಗವಿರುತ್ತದೆ ಹೀಗೆ ಷಡ್ಲಿಂಗಗಳು ಮನುಷ್ಯನ ಶರೀರ ಮತ್ತು ಕ್ರಿಯೆಗಳಲ್ಲಿ ಅನೇಕ ವಿಧವಾಗಿ ತಲೆದೋರುತ್ತವೆ.

**೫೭. ತ್ರಿವಿಧ ಆಚಾರಲಿಂಗ :** ಇವು ಸದಾಚಾರ, ನಿಯತಾಚಾರ, ಗಣಾಚಾರ ಎಂದಿವೆ. ಎಲ್ಲ ಜನರು ಅಹುದೆಂಬುದೇ ಸದಾಚಾರವೆಂದು ವಚನಕಾರರ ವ್ಯಾಖ್ಯೆ ಇದೆ. ಕೆಲವೊಂದು ಉದ್ದೇಶ ಅಥವಾ ಧ್ಯೇಯವನ್ನಿಟ್ಟುಕೊಂಡು ಮಾಡುವುದು ನಿಯತಾಚಾರವಾಗಿದೆ. ಕೈಕೊಂಡ ಕಾರ್ಯದಲ್ಲಿ ಎಷ್ಟು ಬಿಕ್ಕಟ್ಟುಗಳು ಬಂದರೂ ಕೂಡ ಅವುಗಳನ್ನು ಎದುರಿಸಿ ಧೈರ್ಯದಿಂದ ಕಾರ್ಯ ಮಾಡುವುದು ಗಣಾಚಾರವು. ಗಣಾಚಾರದಲ್ಲಿ ಮನುಷ್ಯನು ಅವಶ್ಯವಿದ್ದಲ್ಲಿ ವಿರೋಧಿಗಳನ್ನು ಪ್ರತಿಭಟಿಸಲು ಸಿದ್ಧನಾಗಿರಬೇಕು. ಪ್ರಸಂಗ ಬಂದರೆ ತನ್ನ ಪ್ರಾಣವನ್ನು ಕೊಡಲೂ ಸಿದ್ಧನಾಗಿರಬೇಕು.

**೫೮. ತ್ರಿವಿಧ ಗುರುಲಿಂಗ :** ಇವು ದೀಕ್ಷೆ, ಶಿಕ್ಷೆ. ಅನುಭಾವ ಎಂಬಿವೆ. ಆಚರಿಸುವಲ್ಲಿ ತಿಳಿದವರಿಂದ ಮೊದಲು ಹೇಳಿಸಿಕೊಳ್ಳಬೇಕು. ಇದು ದೀಕ್ಷೆ ಎನಿಸುವುದು. ಹೀಗೆ ಹೇಳಿಸಿಕೊಂಡ ಬಳಿಕ ಅದನ್ನು ಮನನ ಮಾಡಬೇಕು. ಇದು ಶಿಕ್ಷೆ ಎನಿಸುವುದು. ಮನನ ಮಾಡಿಕೊಂಡ ಬಳಿಕ ಅದರ ಜ್ಞಾನವು ಆವನಿಗೆ ಆಗುವುದು. ಇದು ಅನುಭಾವವು

**೫೯. ತ್ರಿವಿಧ ಶಿವಲಿಂಗ :** ಇವು ಇಷ್ಟಲಿಂಗ, ಪ್ರಾಣಲಿಂಗ,

ಭಾವಲಿಂಗವೆಂದಿರುತ್ತವೆ. ಕೆಡಕನ್ನು ತ್ಯಜಿಸಿ ಉತ್ತಮವಾದುದು ಅವು ಆದರಂತೆ ವರ್ತಿಸುವುದು ಮನುಷ್ಯನಿಗೆ ಇಷ್ಟಲಿಂಗವು ಸಾಧ್ಯವಾದ ಗುರುತು ಇರುತ್ತದೆ. ಪ್ರಾಣಲಿಂಗವು ತನುಗುಣಗಳನ್ನು ಹೋಗಲಾ ಕೊಂಡು ಆತ್ಮಾರ್ಪಣದಿಂದ ತನ್ನಲ್ಲಿ ಲಿಂಗಗುಣಗಳನ್ನು ಬರಮಾಡಿ ಳ್ಳುವುದು. ಮೂರನೆಯದಾದ ಭಾವಲಿಂಗದಲ್ಲಿ ಲಿಂಗವಲ್ಲದೆ ಬೇರೊಂ ವುದನ್ನೂ ಭಾವಿಸದೆ ಇರುವದು.

೬೦. **ತ್ರಿವಿಧ ಜಂಗಮಲಿಂಗ :** ಇವು ಸ್ವಯಂ, ಚರ, ಪರವೆ ರುತ್ತವೆ. ಸ್ವಯಂ ಎಂದರೆ ತಾನು. ಇಲ್ಲಿ ಭಕ್ತನು ಶ್ರೇಷ್ಠತರಗ ವನಾಗಿ ಸ್ವಾವಲಂಬಿಯಾಗಿ ಆಚರಿಸುವವನು. ಚರವೆಂದರೆ ತ ಸಂಬಂಧಿಸಿದವರನ್ನು ತನ್ನಂತೆ ಮಾಡುವ ಉದ್ದಿಶ್ಯವಾಗಿ ಅವರೊ ವ್ಯವಹರಿಸುವವನು. ಪರವೆಂದರೆ ಯಾವಾಗಲೂ ಅರಿವು ಮುಂ ಆಚರಿಸುವವನು.

೬೧. **ತ್ರಿವಿಧ ಪ್ರಸಾದಲಿಂಗ :** ಇವು ಶುದ್ಧ, ಸಿದ್ಧ, ಪ್ರಸಿದ್ಧವೆಂ ಮೂರು ಇವೆ. ಸದಾಚಾರದಿಂದ ಶುದ್ಧತೆಯನ್ನು ಹೊಂದಿ ಗು ಮುಖದಿಂದ ಎಂದರೆ ಜ್ಞಾನಿಗಳಿಂದ ಮಲತ್ರಯಗಳನ್ನು ಹೇಗೆ ಕಳೆ ಬೇಕೆಂಬುದನ್ನು ತಿಳಿದು ಅದರಂತೆ ಆಚರಿಸಲಾಗಿ ಕೆಡಕಾದುದಾವುದ ಅದು ಕಳೆದು ಹೋಗುತ್ತದೆ. ಹೀಗೆ ದೇಹದಲ್ಲಿಯ ಮಾಲಿನ್ಯವು ಕಳೆ ಹೋಗಿ ಉಳಿದುದೇ (ಶೇಷ) ಶುದ್ಧ ಪ್ರಸಾದವು ಹೀಗೆ ದೇಹದಲ್ಲಿಯ ಅಶು ತೆಯು ಹೋಗುತ್ತಿರಲಾಗಿ ಮನುಷ್ಯನ ಕರಣ ಅಥವಾ ಇಂದ್ರಿಯ ಲ್ಲಿಯ ಮಾಲಿನ್ಯವು ಸಹ ಹೊರಟುಹೋಗಹತ್ತುವುದು. ಆಗ ಅವುಗಳಲ್ಲಿ ಲಿಂಗದ ಗುಣಗಳು ಬಲಗೊಂಡು ತೋರಹತ್ತುವುವು ಹೀಗೆ ಕರಣಗಳಲ್ಲಿ ದುಷ್ಟಪ್ರವೃತ್ತಿಗಳನ್ನು ಹೋಗಲಾಡಿಸಿ ನಂತರ ಉಳಿದುದೇ ಸಿದ್ಧ ಪ್ರಸಾದ ಸಿಕೊಳ್ಳುತ್ತದೆ. ಹೀಗೆ ಸಿದ್ಧ ಪ್ರಸಾದವು ಎಡೆಗೊಳ್ಳಹತ್ತಲು ಜಗತ್ತಿಗೂ ಬಾಹ್ಯದಲ್ಲಿ ಇರುವ ಖಂಡಿತಭಾವ ಅಥವಾ ಭಿನ್ನಭಾವವು ಹೊರ ಹೋಗಿ ಅಭಿನ್ನಭಾವವು ಅಥವಾ ವಿಶ್ವಬಂಧುತ್ವಭಾವವು ಉಂಟಾ ತ್ತದೆ. ಆಗ ತಾನು ಹೊರಗಿನದು ಎಂಬಭಯಭಾವವು ಹೊರ ಹೋಗುತ್ತದೆ. ಇದೇ ಜಂಗಮವನ್ನು ಅಳವಡಿಸಿಕೊಳ್ಳುವುದು. ಹೀ



ಅಭಿನ್ನತೆಯನ್ನು ಹೋಗಲಾಡಿಸಲು ಉಳಿದ ಶೇಷವೇ ಪ್ರಸಿದ್ಧಿ ಪ್ರಸಾದವು. ಇವೆಲ್ಲವೂ ಪ್ರಸಾದಲಿಂಗವೆನಿಸಿಕೊಳ್ಳುತ್ತವೆ. ಮನುಷ್ಯನಲ್ಲಿ ಯಾವುದು ಭೇದವನ್ನುಂಟುಮಾಡುತ್ತದೋ ಅದನ್ನು ಹೋಗಲಾಡಿಸುವುದೇ ಪ್ರಸಾದದ ಕಾರ್ಯವಾಗಿದೆ. ಹೀಗೆ ಹೋಗಲಾಡಿಸಿದ ಬಳಿಕ ಮನುಷ್ಯನ ಕ್ರಿಯೆ, ಕರಣ, ಜ್ಞಾನಗಳಲ್ಲಿ ಯಾವುದು ಉಳಿಯುತ್ತದೋ ಅದೇ ಅನುಕ್ರಮ ವಾಗಿ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳೆಂದೆನಿಸಿಕೊಳ್ಳುತ್ತವೆ.

೬೨. **ತ್ರಿವಿಧ ಮಹಾಲಿಂಗ :** ಇವು ಪಿಂಡಜ, ಅಂಡಜ, ಬಿಂದುಜ ಎಂದಿರುತ್ತವೆ. ಮಹಾಲಿಂಗವು ‘ ಅರಿವು ’ ಇದರ ಒಂದು ಬಗೆಯ ಪ್ರಕಾಶವಾಗುತ್ತದೆ. ತನ್ನ ಸುತ್ತಲಿನ ದೃಶ್ಯ ಪದಾರ್ಥಗಳೇ ಪಿಂಡ, ಜಗತ್ತಿನಲ್ಲಿಯವು ಅಂಡ ಮತ್ತು ಇವುಗಳಿಗೆ ಮೀರಿದವುಗಳೇ ಬಿಂದು. ಹೀಗೆ ಪದಾರ್ಥಗಳಲ್ಲಿ ಮೂರು ವಿಭಾಗಗಳು ಇರುತ್ತವೆ. ಮಹಾಲಿಂಗವು ತನ್ನ ಸುತ್ತಲಿನ ದೃಶ್ಯ ಪದಾರ್ಥಗಳಿಗೆ ಸಂಬಂಧಿಸಿ ತನ್ನಲ್ಲಿ ಅಳವಟ್ಟಲ್ಲಿ ಅದು ಪಿಂಡಜವು. ಇದಕ್ಕೂ ಸೂಕ್ಷ್ಮವಾಗಿರುವ ಜಗತ್ತಿನಲ್ಲೆಲ್ಲ ಸಂಬಂಧಿಸಿಕೊಂಡು ತನ್ನಲ್ಲಿ ಅಳವಡಿಸಲು ಅಂದು ಅಂಡಜವು. ಮುಂದೆ ಈ ಜಗತ್ತಿಗೂ ಕೂಡ ಮೇಲಿರುವ ಮಹತ್ತಿನಲ್ಲಿ ಸಂಬಂಧಿಸಿಕೊಂಡಲ್ಲಿ ಅದು ಬಿಂದುಜವು. ಇಲ್ಲಿ ನಾವು ನಾದ, ಬಿಂದು, ಕಲೆಗಳಲ್ಲಿ ಯಾವುದನ್ನು ಬಿಂದುವೆಂದು ಉಲ್ಲೇಖಮಾಡಿರುತ್ತೇವೆಯೊ ಅದೇ ಈ ಬಿಂದುವಿದೆ. ಈ ಬಿಂದುವಿಗೆ ಸಂಬಂಧಿಸಿಕೊಂಡು ತನ್ನಲ್ಲಿ ಮಹಾಲಿಂಗದ ಪ್ರಕಾಶವು ಎಡೆಗೊಳ್ಳಬೇಕು. ಇದು ಬಿಂದುಜ ಮಹಾಲಿಂಗವು. ಇದು ಐಕ್ಯ ಸ್ಥಿತಿಯಲ್ಲಿರುವವನ ಉತ್ಕೃಷ್ಟ ಸ್ಥಿತಿಯು. ಈ ಬಿಂದುಜ ಸ್ಥಿತಿಯನ್ನು ಹೊಂದಿದ ತರುವಾಯ ಮನುಷ್ಯನು ಶೂನ್ಯದ ಮೂರು ಸ್ಥಿತಿಗಳಲ್ಲಿ ಪ್ರವೇಶ ಹೊಂದಲು ಅರ್ಹನಾಗುತ್ತಾನೆ. ಮತ್ತು ಕಡೆಗೆ ನಿರವಯ ಅಥವಾ ಬಯಲು ಎಂಬುದರಲ್ಲಿ ಅಡಗುತ್ತಾನೆ.

ಹೀಗೆ ಆರು ಅಂಗಗಳಲ್ಲಿ ಹಿಂದೆ ಸಂಖ್ಯೆ ೪೫ರಿಂದ ೬೨ರ ವರೆಗೆ ಪ್ರತಿಯೊಂದರಲ್ಲಿ ಮೂರು ಮೂರು ಭಾಗಗಳಂತೆ ಒಟ್ಟು ವಿಭಾಗಗಳನ್ನು ಷಟ್‌ಸ್ಥಲ ಜ್ಞಾನಿಗಳು ಕಲ್ಪಿಸಿರುತ್ತಾರೆ. ಹೀಗೆಯೇ ಆರು ಅಂಗಸ್ಥಲಗಳಲ್ಲಿ, ಪ್ರತಿಯೊಂದು ಸ್ಥಲದಲ್ಲಿ ಮೂರು ಮೂರರಂತೆ ಒಟ್ಟು ೧೮ ಸ್ಥಲಗಳನ್ನು ಪುನಃ ಮಾಡಿಕೊಳ್ಳುತ್ತಾರೆ. ಅವುಗಳ ವಿವರಣೆ ಏನಂದರೆ:—

೬೩. ತ್ರಿವಿಧ ಭಕ್ತ : ಇವು ಗುರುಭಕ್ತ, ಲಿಂಗಭಕ್ತ, ಜಂ ಭಕ್ತ ಎಂದಿರುತ್ತವೆ. ತನುಕ್ರಿಯೆಯಿಂದ ತನುಮನಧನವನ್ನರ್ಪಿಸುವ ಗುರುಭಕ್ತನು. ಮನಃಕ್ರಿಯೆಯಿಂದ ಇವುಗಳನ್ನರ್ಪಿಸುವವನು ಲಿಂ ಕ್ತನು. ಧನಕ್ರಿಯೆಯಿಂದ ತನುಮನಧನಗಳನ್ನರ್ಪಿಸುವನನು ಜಂ ಭಕ್ತನು. ಇವುಗಳಲ್ಲಿ ಧನಕ್ರಿಯೆಯಿಂದ ಧನವನ್ನು ಅರ್ಪಿಸುವುದೇ ಭ ಅತ್ಯಂತ ಉತ್ಕೃಷ್ಟ ಸ್ಥಿತಿಯನ್ನು ತೋರಿಸುತ್ತದೆ ಸದಾಚಾರವೇ ತನುಕ್ರಿ ಎನಿಸಿಕೊಳ್ಳುತ್ತದೆ. ಅದನ್ನು ಒಳಕೊಂಡು ಅರ್ಪಿಸುವವನೇ ಗುರುಭಕ್ತ ಲಿಂಗಾನುಭಾವಿಯು ಮನಃಕ್ರಿಯೆಯುಳ್ಳವನು. ಹೀಗೆ ಅರ್ಪಣ ಮಾ ವವನೇ ಲಿಂಗಭಕ್ತನು. ತನ್ನದೆಂಬುದೆಲ್ಲವೂ ಧನವೆಂದೆನಿಸಿಕೊಳ್ಳುತ್ತ ಈ ಧನವನ್ನು ಕ್ರಮಾನುಸಾರವಾಗಿ ಅರ್ಪಣ ಮಾಡುವವನು ಜಂ ಭಕ್ತನು. ಈ ಎಲ್ಲ ಕಾರ್ಯಗಳಲ್ಲಿ ಶ್ರದ್ಧಾಭಕ್ತಿಯುಳ್ಳವನಾಗಿರಬೇ ಹೀಗೆ ಭಕ್ತನಲ್ಲಿ ಮೂರು ವಿಧಗಳಿವೆ.

೬೪. ತ್ರಿವಿಧ ಮಹೇಶ್ವರ : ಇವುಗಳು ಇಹಲೋಕ ವೀ ಪರಲೋಕ ವೀರ, ಲಿಂಗ ವೀರ ಎಂದು ಮೂರಿವೆ. ಮಹೇಶ್ವರನು ನಿ ಯುಳ್ಳವನು. ಹಿಡಿದ ಕಾರ್ಯಗಳನ್ನು ಬಿಡುವುದಿಲ್ಲ. ಮರಣವ ಕೂಡ ಲೆಕ್ಕಿಸನು. ನಿಂದಕರನ್ನೂ, ತನ್ನ ಕಾರ್ಯಗಳಲ್ಲಿ ಪ್ರತಿರೋಧಿಸು ರನ್ನೂ ಶಿಕ್ಷಿಸಲು ಸನ್ನದ್ಧನಾಗಿರುವನು. ಇವನು ಇಹಲೋಕ ವೀರ ಮಾನಸಿಕ ಧೈರ್ಯವುಳ್ಳವನಾಗಿ ಧರ್ಮಾರ್ಥ-ಕಾಮ-ಮೋಕ್ಷಗಳನ್ನು ಹಿಂದಕ್ಕಿಟ್ಟು ನಿಷ್ಕಾಮಿಯಾಗಿ ಶಿವಕಾರ್ಯದಲ್ಲಿ ಸನ್ನದ್ಧನಾದವನು ಲೋಕ ವೀರನು. ಶೂರರು ಅನೇಕರು ಇದ್ದಾರೆ. ಆದರೆ ಹೀಗೆ ಮಾನ ಧೈರ್ಯವುಳ್ಳವರು ದೊರೆಯುವುದು ದುರ್ಲಭ. ಇವರು ಪರಲೋಕ ವೀ ರೆಂದು ಹೇಳಲ್ಪಡುತ್ತಾರೆ. ಆ ಮೇಲೆ ಯಾವನು ಅಂಗದಲ್ಲಿ ಲಿಂಗವುಳ್ಳ ನಾಗಿ ಸರ್ವ ಕರಣಗಳನ್ನು ತನ್ನಲ್ಲಿರಿಸಿಕೊಂಡು ವರ್ತಿಸುತ್ತಾನೋ ಅವ ಲಿಂಗವೀರನು. ಕರಣಗಳನ್ನು ಗೆಲ್ಲುವುದಕ್ಕೆ ಬಹು ಕಡುತರವಾ ಸ್ಥೈರ್ಯವು ಬೇಕು. ಹೀಗೆ ಇದ್ದವನು ಲಿಂಗವೀರನು.

೬೫. ತ್ರಿವಿಧ ಪ್ರಸಾದಿ : ಇವು ಅರ್ಪಿತ ಪ್ರಸಾದಿ, ಅವಧಾ ಪ್ರಸಾದಿ, ಪರಿಣಾಮ ಪ್ರಸಾದಿ ಎಂದಿವೆ. ಅರ್ಪಣ, ಅವಧಾನ, ಪ



ಣಾಮ ಎಂದು ಕಾರ್ಯಗಳಲ್ಲಿಯ ಮೂರು ತರಗತಿಗಳಿರುತ್ತವೆ. ಅರ್ಪಣ ಬುದ್ಧಿಯಿಂದ ಮೊದಲು ಕಾರ್ಯವನ್ನು ಕೈಕೊಳ್ಳಬೇಕು. ಹೀಗೆ ಕೈಕೊಂಡಲ್ಲಿ ಅವನಲ್ಲಿ ಅವಧಾನ ಭಾವವು ಅಥವಾ ಏಕಾಗ್ರತೆಯು ಆ ಕಾರ್ಯಕ್ಕೋಸ್ಕರ ಉಂಟಾಗುವುದು. ಹೀಗೆ ಕಾರ್ಯ ಮಾಡಿದಲ್ಲಿ ಅದರ ಸುಪರಿಣಾಮಗಳು ಅವನಲ್ಲಿ ಎಡೆಗೊಂಡು ಅದರಲ್ಲಿ ಅವನು ಏಕಾಕಾರ ಹೊಂದುತ್ತಾನೆ. ಈ ಮೂರು ಕ್ರಿಯೆಗಳಲ್ಲಿ ಅನುಕ್ರಮವಾಗಿ ಅರ್ಪಿತ ಪ್ರಸಾದಿ, ಅವಧಾನ ಪ್ರಸಾದಿ, ಪರಿಣಾಮ ಪ್ರಸಾದಿ ಎಂದು ಮೂರು ವಿಧಗಳು ಉಂಟಾಗುತ್ತವೆ ಉದಾಹರಣಾರ್ಥವಾಗಿ, ಕಾಯದ ಕೈಯಲ್ಲಿ ಇಷ್ಟ ಲಿಂಗಕ್ಕೆ ಅರ್ಪಿಸುವವನು ಅರ್ಪಿತ ಪ್ರಸಾದಿಯಾಗುವನು. ಇಂದ್ರಿಯಗಳಲ್ಲಿ ಐದು ಲಿಂಗಗಳನ್ನು ಸ್ಥಾಪಿಸಿ ಅವುಗಳ ಅನುಭವವನ್ನು ಮನದ ಕೈಯಲ್ಲಿ ಕೊಟ್ಟು ಕೊಳ್ಳುವವನು ಅವಧಾನ ಪ್ರಸಾದಿಯು ಅಂಗವೆಲ್ಲವು ಲಿಂಗಮಯವಾಗಿ ಭಾವ ಭರಿತನಾದವನು ಪರಿಣಾಮ ಪ್ರಸಾದಿಯು.

೬೬. ತ್ರಿವಿಧ ಪ್ರಾಣಲಿಂಗ : ಇವು ಆಚಾರಪ್ರಾಣಿ, ಲಿಂಗಪ್ರಾಣಿ, ಜಂಗಮಪ್ರಾಣಿ ಎಂದಿರುತ್ತವೆ. ಪ್ರಸಾದಿಯಾಗಿ ಏಕಾಗ್ರಚಿತ್ತನಾದಲ್ಲಿ ಅವನಲ್ಲಿ ಲಿಂಗವು ಅನುಗೊಳ್ಳಹತ್ತುತ್ತದೆ. ಮನುಷ್ಯನ ಬಾಹ್ಯದಲ್ಲಿ ಆಚಾರ, ಅವನ ಅಂತರಂಗದಲ್ಲಿ ಲಿಂಗ ಮತ್ತು ಭಾವದಲ್ಲಿ ಜಂಗಮ ಇವುಗಳು ಇರುತ್ತವೆ. ಇವುಗಳ ತಿರುಳು ಅಥವಾ ಸಾರ ಅವನ ಪ್ರಾಣದಲ್ಲಿ ಅನುಕ್ರಮವಾಗಿ ಬೆರೆಯಲು ಅವನು ಆಚಾರಪ್ರಾಣಿ, ಲಿಂಗಪ್ರಾಣಿ, ಮತ್ತು ಜಂಗಮ ಪ್ರಾಣಿ ಎಂದು ಮೂರು ವಿಧಗಳು ಆಗುತ್ತವೆ. ಇವು ಪ್ರಾಣಲಿಂಗಿಯ ಮೂರು ವಿಧಗಳಾಗಿವೆ. ಹೀಗಿರುವವನೇ ಶಿವಯೋಗಿಯು. ಮತ್ತು ಅವನ ಅಂತಿಮ ಸ್ಥಿತಿಯಲ್ಲಿ ಜಂಗಮಪ್ರಾಣಿ ಎಂದು ಹೇಳಬಹುದು. ಅಂದರೆ ಬಾಹ್ಯದಲ್ಲಿ ಆಚಾರವನ್ನು ಗ್ರಹಿಸುವವನು ಆಚಾರ ಪ್ರಾಣಿಯು. ಹೀಗೆ ಸತ್‌ಕ್ರಿಯೆಗಳನ್ನು ಮಾಡುತ್ತ ಲಿಂಗದೊಡನೆ ಪ್ರಾಣವು ಏಕಾಕಾರಹೊಂದಿ ಪ್ರವಹಿಸಹತ್ತಲು ಅವನು ಲಿಂಗಪ್ರಾಣಿಯು. ಇದರ ಮುಂದೆ ಜಗತ್ತಿನಲ್ಲಿ ತುಂಬಿಕೊಂಡಿರುವ ಚೈತನ್ಯಕ್ಕೆ ತನ್ನದೆಲ್ಲವನ್ನು ನಿವೇದಿಸಿ, ಅದರಲ್ಲಿ ತಾನೇ ತಾನಾಗಿರುವವನು ಜಂಗಮಪ್ರಾಣಿಯು.

೬೭. **ತ್ರಿವಿಧ ಶರಣ :** ಇವು ಇಷ್ಟಲಿಂಗಾರ್ಚಕ, ಪ್ರಾಣಲಿಂ ರ್ಚಕ, ತೃಪ್ತಿಲಿಂಗಾರ್ಚಕ ಎಂದಿವೆ. ಪ್ರಸಾದದ ಶೇಷವೇ ಶರಣನೆ ಕೊಳ್ಳುತ್ತಾನೆ. ಅವನಲ್ಲಿ ಪ್ರಸಾದಲಿಂಗವು ನೆಲೆಗೊಂಡಿರುತ್ತದೆ. ಅವನ ಬಾ ದಲ್ಲಿ ಇಷ್ಟಲಿಂಗವು, ಅಂತರಂಗದಲ್ಲಿ ಪ್ರಾಣಲಿಂಗವು, ಭಾವದಲ್ಲಿ ತೃಪ್ತಿಲಿಂ ಅಥವಾ ಭಾವಲಿಂಗವು ಇವುಗಳನ್ನು ಅವನ ಬಾಹ್ಯದ ಇಷ್ಟಲಿಂಗಾಚಾರಗಳ ಮಾಡುವಲ್ಲಿ ಯಾವ ತರದ ಅನಿಷ್ಟಗಳು ಅಂದರೆ ತಡೆಗಳುಂಟಾಗುವುದಿ ಆದ್ದರಿಂದ ಅನಿಷ್ಟ ನಷ್ಟವಾಯಿತ್ತಾಗಿ ಇಷ್ಟಲಿಂಗಾರ್ಚಕನೆಂದು ಹೇಳ ಡುತ್ತಾನೆ. ಅವನು ತಾನು ಮತ್ತು ತನ್ನ ಸುತ್ತಲಿನ ಪರಿಸ್ಥಿತಿ ಇವುಗ ಯಾವ ತರದ ಭೇದ ಬುದ್ಧಿಯುಳ್ಳವನಿರುವದಿಲ್ಲಾದ್ದರಿಂದ ಅವನು ಪ್ರಾ ಲಿಂಗಾರ್ಚಕನು. ಈ ಅಭೇದ ಭಾವವು ಅವನ ಇಹ ಪರದಲ್ಲಿಯೂ ಕ ಇರುವುದಿಲ್ಲ. ಆದ್ದರಿಂದ ಅವನು ತೃಪ್ತಿಲಿಂಗಾರ್ಚಕನು. ಶರಣ ಸುಜ್ಞಾನ ಭಕ್ತಿಯುಳ್ಳವನು. ಭೇದ ಭಾವವಿಲ್ಲದಿರುವುದೇ ಈ ಸುಜ್ಞಾ ಭಕ್ತಿಯು. ಈ ಭೇದವು ಬಾಹ್ಯದಲ್ಲಿರದಿದ್ದರೆ ಅವನು ಇಷ್ಟ ಲಿಂಗಾರ್ಚಕನ ಇದು ಸುತ್ತಲಿನ ಜಗತ್ತಿನೊಡನೆಯೂ ಇರದಿದ್ದರೆ ಅವನು ಪ್ರಾಣಲಿಂ ರ್ಚಕನು. ಇಹ ಪರಗಳೆರಡರಲ್ಲಿಯೂ ಇರದಿದ್ದರೆ ಅವನು ಭಾವಲಿಂಗಾ ರ್ಚಕನು.

೬೮. **ತ್ರಿವಿಧ ಐಕ್ಯ :** ಈ ಭೇದಗಳು ಕಾಯ ಲಿಂಗೈಕ್ಯ, ಜೀ ಲಿಂಗೈಕ್ಯ, ಭಾವ ಲಿಂಗೈಕ್ಯ ಎಂದಿರುತ್ತವೆ. ಐಕ್ಯದಲ್ಲಿ ಮಹಾಲಿಂಗದ ಪ್ರ ಶವು ಬೆಳಗುತ್ತಿರುತ್ತದೆ. ಈ ಪ್ರಕಾಶವು ಬಾಹ್ಯ ಕ್ರಿಯೆಗಳಲ್ಲಿ ತಲೆದೋರಲು ಇದೇ ಕಾಯಲಿಂಗೈಕ್ಯವು. ಆಗ ಆ ಕ್ರಿಯೆಗಳು ಪ್ರಕಾಶಮಯವಾಗುತ್ತವೆ ಮಹಾಲಿಂಗದ ಪ್ರಕಾಶವು ಅನುಭಾವದಲ್ಲಿ ತೋರಲು ಅನುಭಾವವು ಪ್ರಕ ಶಮಯವಾಗುತ್ತದೆ. ಇದೇ ಜೀವಲಿಂಗೈಕ್ಯವು. ಮಹಾಲಿಂಗದ ಪ್ರಕ ಶವು ಅರಿವು ಇದರಲ್ಲಿ ತೋರಲು ಈ ಅರಿವು ಪ್ರಕಾಶಮಯವಾಗುತ್ತದೆ ಇದೇ ಭಾವಲಿಂಗೈಕ್ಯವು. ಪ್ರಕಾಶವೆಂದರೆ ಚರ್ಮ ಚಕ್ಷುವಿಗೆ ಕಾಣು ರುವ ಬೆಳಕು ಅಲ್ಲ. ಅದು ಲಿಂಗದೊಡನೆ ಬೆರೆದಂಥ ಒಂದು ಬಗೆಯ ಶಿವಾ ನುಭವದ ಅತ್ಯುಚ್ಚ ಸ್ಥಿತಿ ಎಂದು ಹೇಳಬಹುದು.



ಹೀಗೆ ಆರು ಅಂಗಗಳಲ್ಲಿ ಹಿಂದೆ ಸಂಖ್ಯೆ ೬೩ರಿಂದ ೬೮ರ ವರೆಗೆ ಹೇಳಿದಂತೆ ಮೂರು ಮೂರು ವಿಭಾಗಗಳಾಗಿ ೧೮ ವಿಭಾಗಗಳನ್ನು ಷಟ್‌ಸ್ಥಲ ಜ್ಞಾನಿಗಳು ಮಾಡಿರುತ್ತಾರೆ. ಲಿಂಗಸ್ಥಲಗಳು ೧೮, ಅಂಗಸ್ಥಲಗಳು ೧೮, ಹೀಗೆ ೩೬ ಸ್ಥಲಗಳು ಆಗುತ್ತವೆ.

೬೯. **ಮೂವತ್ತಾರು ಲಿಂಗಸ್ಥಲಗಳು ( ೧ನೇ ವಿಧ ) :** ಮುಂದೆ ಲಿಂಗಸ್ಥಲಗಳು ೩೬ ಮತ್ತು ಅಂಗಸ್ಥಲಗಳು ೩೬ ಹೀಗೆ ಬೇರೆ ಸ್ಥಲಗಳು ಉಂಟಾಗುತ್ತವೆ. ಷಟ್‌ಸ್ಥಲಗಳಲ್ಲಿಯ ಪ್ರತಿಯೊಂದು ಸ್ಥಲದಲ್ಲಿ ಮನುಷ್ಯನು ಆ ಒಂದೇ ಸ್ಥಲದ ಅನುಭವ ಮಾತ್ರವಲ್ಲದೆ ಉಳಿದ ಐದು ಸ್ಥಲಗಳ ಅನುಭವವನ್ನೂ ಹೊಂದಬೇಕು. ಹೀಗೆ ಹೊಂದದೆ ಹೋದಲ್ಲಿ ಅವನು ಪ್ರಗತಿಯನ್ನು ಹೊಂದಲಾರನು. ಉದಾ— ಭಕ್ತನು ಸದಾ ಭಕ್ತಸ್ಥಲದಲ್ಲಿ ಉಳಿದರೆ ಅವನು ಮೋಕ್ಷವನ್ನು ಹೊಂದಲಾರನು. ಅವನು ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಸ್ಥಲಗಳ ಅನುಭವವನ್ನು ಹೊಂದಲೇಬೇಕು. ಇನ್ನೊಬ್ಬನು ಪ್ರಾಣಲಿಂಗಿ ಸ್ಥಲದವನಿರುತ್ತಾನೆ. ಅವನು ಅದರ ಅಭ್ಯಾಸದಲ್ಲಿಯೇ ಉಳಿದರೆ ಅವನಲ್ಲಿ ಪ್ರಗತಿಯಾಗಲಾರದು. ಅವನು ಭಕ್ತ, ಮಹೇಶ್ವರ, ಪ್ರಸಾದಿ, ಶರಣ, ಐಕ್ಯ ಇವುಗಳ ಅನುಭವವನ್ನು ಹೊಂದಲೇಬೇಕು. ಇವುಗಳ ಅನುಭವವು ಅವನು ಆಯಾ ಶರೀರಗಳ ಕ್ರಿಯೆಗಳ ಮತ್ತು ಆಯಾ ಇಂದ್ರಿಯಗಳ ಜ್ಞಾನವನ್ನು ಮಾಡಿಕೊಂಡಲ್ಲಿ ಸಾಧ್ಯವಾಗುತ್ತದೆ. ಈ ಎಲ್ಲ ಅನುಭವಗಳು ಲಿಂಗಸ್ಥಲದಲ್ಲಿ ೩೬ ಮತ್ತು ಅವುಗಳಿಗನುಸಾರವಾಗಿಯೇ ಅಂಗಸ್ಥಲದಲ್ಲಿ ೩೬ ಹೀಗೆ ಇರುತ್ತವೆ. ಅವುಗಳ ವಿವರಣೆಗಳು ಕೆಳಗೆ ಕೊಡಲ್ಪಟ್ಟಿವೆ.

೭೦. **ಷಡ್ವಿಧ ಆಚಾರಲಿಂಗ :** ಇವು ಕ್ರಿಯೆ, ಮಂತ್ರ, ನಿರೀಕ್ಷಣ, ಯಜನ, ಈಳನ, ವೇಧಾ ಎಂದಿರುತ್ತವೆ. ಆಚಾರಲಿಂಗದ ಆರು ವಿಧದ ಪ್ರಗತಿಗಳು ಇಲ್ಲಿ ಹೇಳಲ್ಪಟ್ಟಿವೆ.

ಆಚಾರ ಲಿಂಗವು ಆರಂಭದಲ್ಲಿ ಸತ್ಕ್ರಿಯೆಯುಳ್ಳದ್ದು. ಸದಾಚಾರ, ಗಣಾಚಾರ, ಶಿವಾಚಾರ, ಭೃತ್ಯಾಚಾರ, ಲಿಂಗಾಚಾರ ಹೀಗೆ ಪಂಚಾಚಾರ ಸ್ವರೂಪವುಳ್ಳದ್ದು. ಹೀಗೆ ವರ್ತಿಸುವುದು ಆಚಾರಲಿಂಗದೊಳಗಣ ಆಚಾರ ಲಿಂಗವು.

ಈ ಮಿಶ್ರಲಿನ ತರುವಾಯ ಮಂತ್ರ ಸ್ವರೂಪವಾದ ಗುರುಲಿಂಗ
ಇಲ್ಲಿ ಆಚಾರಲಿಂಗವು ಮಂತ್ರಾತ್ಮಕವಾಗಿದ್ದು ಪಂಚಾಕ್ಷರೀ ಮಂತ್ರಸ್ಮ
ಮಾಡುವುದೇ ಇವರ ಲಕ್ಷಣವಾಗಿರುತ್ತದೆ. ಹೀಗೆ ವರ್ತಿಸುವುದೇ ಆ
ಲಿಂಗದೊಳಗಣ ಗುರುಲಿಂಗವು.

ಈ ಗುರುಲಿಂಗದ ತರುವಾಯ ನಿರೀಕ್ಷಣ ಸ್ವರೂಪವಾದ ಶಿವ
ವಿದೆ. ಇಲ್ಲಿ ಎವೆ ಹಳಚದೆ ಇಷ್ಟಲಿಂಗ ನಿರೀಕ್ಷಣ ಮಾಡುವುದೇ ಈ ಆ
ಲಿಂಗದ ಕಾರ್ಯವಾಗಿದೆ. ಇದು ಆಚಾರ ಲಿಂಗದೊಳಗಣ ಶಿವಲಿಂಗ

ಶಿವಲಿಂಗದ ತರುವಾಯ ಯಜನ ಸ್ವರೂಪವಾದ ಜಂಗಮಲಿಂಗ
ಇಲ್ಲಿ ಆಚಾರ ಲಿಂಗದ ಕಾರ್ಯಗಳು ಯಜನ, ಅಷ್ಟವಿಧಾರ್ಚನೆ, ಷೋ
ಶೋಪಚಾರಗಳನ್ನು ಮಾಡುವುದೇ ಇರುತ್ತವೆ. ಇದು ಆಚಾರಲಿಂಗದೊ
ಗಣ ಜಂಗಮಲಿಂಗವು.

ಜಂಗಮಲಿಂಗದ ತರುವಾಯ ಈಳನ ಎಂದರೆ ಸ್ತೋತ್ರ ಸ್ವರೂಪವಾ
ಪ್ರಸಾದಲಿಂಗವಿದೆ. ಇಲ್ಲಿ ಆಚಾರಲಿಂಗದ ಕಾರ್ಯವು ಪರಮಾತ್ಮನ
ಭಕ್ತಿಪೂರ್ವಕವಾಗಿ ಸ್ತೋತ್ರ ಮಾಡುವುದೇ ಇರುತ್ತದೆ. ಇದು ಆಚಾ
ಗದೊಳಗಣ ಪ್ರಸಾದ ಲಿಂಗವು.

ಪ್ರಸಾದ ಲಿಂಗದ ತರುವಾಯ ವೇಧಾ ಅಂದರೆ ಜ್ಞಾನ ಸ್ವರೂಪವಾ
ಮಹಾಲಿಂಗವಿದೆ. ಇಲ್ಲಿ ಮನುಷ್ಯನು ಇಷ್ಟಲಿಂಗ ಧ್ಯಾನದಲ್ಲಿ ಸುಜ್ಞಾ
ಭಕ್ತಿಯೊಡನೆ ಮಗ್ನನಾಗಿರಬೇಕು. ಇದೇ ಇಲ್ಲಿಯ ಕಾರ್ಯವು. ಇ
ಆಚಾರ ಲಿಂಗದೊಳಗಣ ಮಹಾಲಿಂಗವು.

ಹೀಗೆ ಆಚಾರ ಲಿಂಗದ ಬಾಹ್ಯ ಕ್ರಿಯೆಗಳು ಮೇಲಿನ ಆಯಾ ಸ್ಥ
ಗಳಿಗನುಸಾರವಾಗಿ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದ
ಸತ್‌ಕ್ರಿಯೆ, ಆ ಮೇಲೆ ಮಂತ್ರಜಪ, ಆಮೇಲೆ ಅವಧಾನಪೂರ್ವಕವಾ
ಮಾಡಿದ ಲಿಂಗ ನಿರೀಕ್ಷಣೆ, ಆಮೇಲೆ ಅನುಭಾವಭಕ್ತಿಪೂರ್ವಕವಾ
ಮಾಡಿದ ಅರ್ಚನೆಗಳು, ಆಮೇಲೆ ಶರಣುಭಾವದಿಂದ ಮಾಡಿದ ಪ
ಮಾತ್ಮನ ಪ್ರಾರ್ಥನೆಗಳು ಮತ್ತು ಕಡೆಗೆ ಇಷ್ಟಲಿಂಗದ ಧ್ಯಾನ—ಇ
ಗಳು ಆಚಾರಲಿಂಗದ ಆರು ವಿಧದ ಸ್ಥೂಲ ಕ್ರಿಯೆಗಳ ತರಗತಿಗಳಾಗಿರುತ್ತ
ಇದೇ ಆಚಾರ ಲಿಂಗದ ಷಡ್ವಿಧಗಳು.



೭೧. ಷಡ್ವಿಧ ಗುರುಲಿಂಗ : ಇವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾ ದೀಕ್ಷೆ, ಬೋಧಾದೀಕ್ಷೆ, ಪ್ರಸನ್ನದೀಕ್ಷೆ, ನಿರ್ವಾಣದೀಕ್ಷೆ ಎಂದಿರುತ್ತವೆ.

ಗುರುಲಿಂಗವು ಮಂತ್ರದಿಂದ ತುಂಬಿದ್ದಾಗಿರುತ್ತದೆ. ಇದೇ ಇದರ ಮುಖ್ಯ ಲಕ್ಷಣವು. ಅದು ಆಚಾರಲಿಂಗದೊಡನೆ ಬೆರೆಯಲು ಅಲ್ಲಿ ಆ ಗುರುಲಿಂಗದ ಶಕ್ತಿಯು ಅಂಗದ ವರ್ತನೆಯನ್ನು ನಷ್ಟಮಾಡುವುದು. ಮತ್ತು ಸತ್‌ಕ್ರಿಯಾನುಗ್ರಹ ಮಾಡುವುದು. ಹೀಗೆ ಮಾಡಿ ಇಷ್ಟ ಲಿಂಗದ ಕಳೆಯನ್ನು ಅದು ಮನುಷ್ಯನ ಕ್ರಿಯೆಗಳಲ್ಲಿ ಪ್ರತಿಷ್ಠಿಸುವುದು. ಇದೇ ಗುರುಲಿಂಗದೊಳಗಣ ಆಚಾರಲಿಂಗವು.

ಮುಂದೆ ಗುರುಲಿಂಗವು ಗುರುಲಿಂಗದೊಡನೆ ಬೆರೆಯಲಾಗಿ ಅಲ್ಲಿ ಆ ಗುರುಲಿಂಗವು ಪಂಚಾಕ್ಷರೀ ಮಂತ್ರಪ್ರಭಾವದಿಂದ ಪ್ರಾಣದ ದುಷ್ಟ ಪ್ರವೃತ್ತಿಗಳನ್ನು ಅಳಿಯುವುದು. ಮತ್ತು ಅದನ್ನು ಚಿತ್‌ಪ್ರಾಣವನ್ನಾಗಿ ಮಾಡುವುದು. ಆಗ ಮಂತ್ರಾನುಗ್ರಹ ಸ್ವರೂಪವಾದ ಪ್ರಾಣಲಿಂಗವು ಮನುಷ್ಯನಲ್ಲಿ ನೆಲೆಗೊಳ್ಳುವುದು. ಹೀಗಾದಲ್ಲಿ ಅದು ಗುರುಲಿಂಗದೊಳಗಣ ಗುರುಲಿಂಗವು.

ಗುರುಲಿಂಗವು ಶಿವಲಿಂಗದಲ್ಲಿ ಬೆರೆಯಲು ಆತ್ಮನ ವರ್ತನೆಯು ನಷ್ಟವಾಗುವುದು. ಇದು ಗುರುವಿನ ಹಸ್ತಮಸ್ತಕ ಸುಯೋಗದಿಂದ ಉಂಟಾಗುತ್ತದೆ. ಆಗ ಭಾವಲಿಂಗದ ಕಳೆಯು ಮನುಷ್ಯನಲ್ಲಿ ಪ್ರಾದುರ್ಭವಿಸುವುದು. ಇದೇ ವೇಧಾ ದೀಕ್ಷೆಯನ್ನು ಉಂಟುಮಾಡುವಂತಹದು. ಇದೇ ಗುರುಲಿಂಗದೊಳಗಣ ಶಿವಲಿಂಗವು.

ವೇಧಾ ದೀಕ್ಷೆಯ ತರುವಾಯ ತ್ರಿವಿಧ ಲಿಂಗದ ಜ್ಞಾನವನ್ನುಂಟು ಮಾಡಿಕೊಂಡು ಅದರ ಅನುಭಾವದಲ್ಲಿರುವುದೇ ಬೋಧಾ ದೀಕ್ಷೆ ಎನಿಸುವುದು. ಇದೇ ಬೋಧಾನುಗ್ರಹವುಳ್ಳ ಜಂಗಮಲಿಂಗವು. ಇದೇ ಗುರುಲಿಂಗದೊಳಗಣ ಜಂಗಮಲಿಂಗವು.

ಇದರ ತರುವಾಯ ಪ್ರತ್ಯಕ್ಷ ನಿರ್ಮಲ ವಸ್ತುವೇ ನೀನೆಂದು ಅನುಗ್ರಹಿಸುವುದೇ ಪ್ರಸನ್ನ ದೀಕ್ಷೆ ಎನಿಸುವುದು. ಇದೇ ಪ್ರತ್ಯಕ್ಷಾನುಗ್ರಹ

ಸ್ವರೂಪವಾದ ಪ್ರಸಾದಲಿಂಗವು. ಇದೇ ಗುರುಲಿಂಗದೊಳಗಣ ಪ್ರ ಲಿಂಗವು.

ಇದರ ತರುವಾಯ ಮೋಕ್ಷಸ್ವರೂಪವಾದ ವಸ್ತುವೇ ತಾನ್ನೆ ಅನುಗ್ರಹಿಸುವಂತಹದೇ ನಿರ್ಮಾಣ ದೀಕ್ಷೆಯಾಗಿದೆ. ಇದೇ ಮೋಕ್ಷಾ ಗ್ರಹ ಸ್ವರೂಪವಾದ ಮಹಾಲಿಂಗವು. ಇದೇ ಗುರುಲಿಂಗದೊ ಮಹಾಲಿಂಗವು.

ಹೀಗೆ ಗುರುಲಿಂಗದ ಕ್ರಿಯೆಗಳು ಆಯಾ ಸ್ಥಲಗಳಿಗನುಸಾರ ಪ್ರಗತಿಯನ್ನು ಹೊಂದುತ್ತ ಹೋಗುತ್ತವೆ. ಮೊದಲು ಕ್ರಿಯೆ, ಮ ವೇಧಾ ದೀಕ್ಷೆಗಳನ್ನು ಮೊದಲಿನ ಮೂರು ಸ್ಥಲಗಳಲ್ಲಿ ಹೊಂದಿ, ಮ ಶಿವಾನುಭವವು ಉತ್ಪನ್ನವಾದಂತೆ ಬೋಧೆ, ಆ ಮೇಲೆ ಪ್ರಸನ್ನತೆ, ನಿರ್ವಾಣ- ಈ ಸ್ಥಿತಿಗಳು ಪ್ರಾಪ್ತವಾಗುವುವು. ಇವೇ ಗುರುಲಿಂ ಳಗಣ ಷಡ್ವಿಧಗಳು.

**೭೨. ಷಡ್ವಿಧ ಶಿವಲಿಂಗ :** ಇವು ಕರಸ್ಥಲ, ನಯನಸ್ಥ ಹೃದಯಸ್ಥಲ, ಮಂತ್ರಸ್ಥಲ, ತ್ರಿಕೂಟಸ್ಥಲ, ಲಯಸ್ಥಲ ಎಂದು ಇರುತ್ತ ಶಿವಲಿಂಗವು ನಿರೀಕ್ಷಣ ಸ್ವರೂಪವಾದುದೆಂದು ಹೇಳಲ್ಪಡುತ್ತದೆ. ಇಲ್ಲಿ ಧಾನ ಭಕ್ತಿ ಅಂದರೆ ಏಕಾಗ್ರಚಿತ್ತವು ಇದೆ. ಆದರೆ ಈ ಏಕಾಗ್ರ ಕ್ಕೋಸ್ಕರ ಒಂದು ವಸ್ತುವು ಅವಶ್ಯವಾದುದು. ಈ ವಸ್ತುವು ಲಿಂ ಆಗಿದ್ದು ಇದರ ಪ್ರಕಾಶಮಯವಾದ ನಿರೀಕ್ಷಣೆಗೋಸ್ಕರ ದೇಹದಲ್ಲಿ ಬೇರೆ ಆರು ಸ್ಥಳಗಳಿರುತ್ತವೆ. ಅವು ಅನುಕ್ರಮವಾಗಿ ಇಲ್ಲಿ ಹೇಳಲ್ಪಟ್ಟಿ ಅವು ಯಾವುವೆಂದರೆ—

ಈ ಸ್ಥಳದಲ್ಲಿ ಹೇಳಲ್ಪಟ್ಟಿರುವ ಕರಸ್ಥಲವು ಸುಚಿತ್ತವೆಂದು ಭಾ ಬೇಕು. ಇದಕ್ಕೆ ಇಷ್ಟಲಿಂಗವಿದೆ. ಈ ಇಷ್ಟಲಿಂಗವೇ ಶಿವಲಿಂಗದೊಳ ಆಚಾರಲಿಂಗವಾಗಿರುತ್ತದೆ. ಇದರ ಮುಂದಿನದು ನಯನಸ್ಥಲವು. ನಯನವು ಸುಬುದ್ಧಿಗೆ ಹಸ್ತವಾದುದೆಂದು ಭಾವಿಸಿ ಕರಸ್ಥಲದ ಇಷ್ಟಲಿ ವನ್ನು ನಯನದಲ್ಲಿ ಎವೆ ಹಳಚದೆ ಅನಿಮಿಷ ದೃಷ್ಟಿಯಿಂದ ನಿರೀಕ್ಷಿ ವನು. ಇದೇ ಶಿವಲಿಂಗದೊಳಗಣ ಗುರುಲಿಂಗವು.



ನಯನಸ್ಥಲದ ಮುಂದಿನದು ಹೃದಯಸ್ಥಲವು. ಈ ಹೃದಯವು ನಿರಹಂಕಾರಕ್ಕೆ ಹಸ್ತವೆಂದು ಭಾವಿಸಿ, ಇಲ್ಲಿ ಇಷ್ಟಲಿಂಗವು ಪ್ರಾಣಲಿಂಗವಾಗಿ ವ್ಯವಹರಿಸುವುದು. ಇದೇ ಶಿವಲಿಂಗದೊಳಗಣ ಶಿವಲಿಂಗವು.

ಹೃದಯಸ್ಥಲದ ಮುಂದಿನದು ಮಂತ್ರಸ್ಥಲವು. ಈ ಮಂತ್ರಕ್ಕೆ ಸುಮನವೇ ಹಸ್ತವಾಗಿರುತ್ತದೆ. ಈ ಹಸ್ತದಲ್ಲಿ ಇಷ್ಟ, ಪ್ರಾಣ, ಭಾವ ಈ ಮೂರೂ ಲಿಂಗಗಳನ್ನು ಒಳಕೊಂಡು ತೋರುವ ಮಹಾಲಿಂಗವು ಪಂಚಾಕ್ಷರೀ ಮಂತ್ರಸ್ವರೂಪವಾಗಿ ವ್ಯವಹರಿಸುತ್ತದೆ. ಇದೇ ಶಿವಲಿಂಗದೊಳಗಣ ಜಂಗಮಲಿಂಗವು.

ಈ ಮಂತ್ರಸ್ಥಲದ ಮುಂದಿನದು ತ್ರಿಕೂಟಸ್ಥಲವು. ಈ ಸ್ಥಲಕ್ಕೆ ಹಸ್ತವಾಗಿರುವುದು ಸುಜ್ಞಾನವು. ಈ ಸುಜ್ಞಾನ ಹಸ್ತದಲ್ಲಿ ಅರಿವು ಎಂಬ ಶಿವತತ್ವವು ಮುಂದುಗೊಳ್ಳಲು, ಅಲ್ಲಿ ಇಷ್ಟಲಿಂಗಕ್ಕೆ ಮಾಡುವಾತ, ಕೈಕೊಳ್ಳುವಾತ, ಮತ್ತು ಪೂಜಾದ್ರವ್ಯ ಇವೆಲ್ಲವೂ ಒಂದೇ ಎಂದು ಭಾವಿಸಿ ಆಚರಿಸುವನು. ಇದೇ ಶಿವಲಿಂಗದೊಳಗಣ ಪ್ರಸಾದಲಿಂಗವಿರು– ತ್ತದೆ.

ಈ ಮಂತ್ರಸ್ಥಲದ ಮುಂದಿನದು ಲಯಸ್ಥಲವಿರುತ್ತದೆ. ಇದರಲ್ಲಿ ಹಸ್ತವಾಗಿರುವುದು ಸದ್ಭಾವವು. ಈ ಕರತಾಣದಲ್ಲಿ ತಮ್ಮಂಗವನ್ನು ಅಡಗಿಸಿ ವಿಶ್ರಾಂತಿಯನ್ನು ಹೊಂದಬೇಕು. ಇದೇ ಶಿವಲಿಂಗದೊಳಗಣ ಮಹಾಲಿಂಗವು.

ಈ ಪ್ರಕಾರ ಶಿವಲಿಂಗವು ಮೊದಲು ಕರಸ್ಥಲ, ನಯನಸ್ಥಲ, ಹೃದಯಸ್ಥಲ, ತ್ರಿಕೂಟಸ್ಥಲ, ಮತ್ತು ಕಡೆಗೆ ಲಯಸ್ಥಲ, ಹೀಗೆ ಆಯಾಸ್ಥಲಗಳಲ್ಲಿ ವ್ಯವಹರಿಸುತ್ತ ಕಡೆಗೆ ಲಯಸ್ಥಲವನ್ನು ಹೊಂದುವುದು. ಹೀಗೆ ಶಿವಲಿಂಗದ ಷಡ್ವಿಧಗಳಿವೆ.

**೭೩. ಷಡ್ವಿಧ ಜಂಗಮಲಿಂಗ:** ಇವು ಸ್ವಯ, ಚರ, ಪರ, ಪರಿಣಾಮಿ, ನಿರುಪಾಧಿಕ, ಪರಿಪೂರ್ಣ, ಎಂದಿರುತ್ತವೆ. ಜಂಗಮಲಿಂಗವು, ಇಲ್ಲಿ ಪ್ರಾಣಲಿಂಗಿಸ್ಥಲಕ್ಕೆ ಸಂಬಂಧಿಸಿದುದು. ಇದು ಆಚಾರಲಿಂಗದಲ್ಲಿ ಯಜನಸ್ವರೂಪವುಳ್ಳುದು. ಆದರೆ ಮುಂದೆ ಅದುಪ್ರಗತಿಯನ್ನು ಹೊಂದುತ್ತ

ಬೋಧಾ ದೀಕ್ಷೆಯಲ್ಲಿ ಬೋಧೆಯನ್ನು ಹೊಂದಿ ಆ ಮೇಲೆ ಪಂಚಾ ಮಂತ್ರರೂಪವಾಗಿ ಮುಂದೆ ಇಲ್ಲಿ ಅರಿವಿನ ಆಚರಣೆಯುಳ್ಳದ್ದಾಗಿರು ಆದರೆ ಈ ಆಚರಣೆಗೆ ಮೀರಿದ ಕ್ರಿಯೆ ಎಂಬ ಹೆಸರು. ಅದರ ಹ ಕ್ರಿಯೆಗಳಿಗೆ ಮಾರ್ಗಕ್ರಿಯೆಗಳೆಂಬ ಹೆಸರು.

ಈ ಅರಿವಿನ ಆಚರಣೆಗಳ ಮೂಲಕ ಅನುಕ್ರಮವಾಗಿ ಸ್ವಯಜಂ ಚರಜಂಗಮ, ಪರಜಂಗಮ, ಪರಿಣಾಮಿಜಂಗಮ, ನಿರುಪಾಧಿಜಂ ಪರಿಪೂರ್ಣ ಜಂಗಮ, ಎಂದು ಹೇಳಲ್ಪಡುವನು. ಇಲ್ಲಿ ಜಂಗಮಲಿಂ ಅನೇಕ ಬಗೆಯ ಬೋಧಾರೂಪುಳ್ಳುದಾಗಿ ವ್ಯವಹರಿಸುತ್ತದೆ.

ಸ್ವಯಜಂಗಮನು ಶಿವಾನುಭವವನ್ನು ಬೋಧಿಸುತ್ತ ಸ್ವಸ್ಥಾ ರುವನು. ಅನ್ಯಾಧೀನನಾಗಿರುವದಿಲ್ಲ. ಶಿವಧ್ಯಾನಪರಾಯಣನಾಗಿರು ಇದು ಜಂಗಮಲಿಂಗದೊಳಗಿನ ಆಚಾರಲಿಂಗವು.

ಚರಜಂಗಮನು ಪಂಚಮುದ್ರಾಸಮೇತನಾಗಿ ತನಗೆ ದೊರಕಿದ್ದ ಜಂಗಮಕ್ಕೆ ನೀಡಿ ಅವನು ಹೇಳಿದ ಜ್ಞಾನಾನುಭವ ಪ್ರಸಾದವನ್ನು ಕೊಂಡು ಅನುಭವಿಸುತ್ತಾನೆ. ಹೀಗೆ ಅನುಭವಿಸುತ್ತ ಪಾವನ ಮೂ ಯಾಗಿ ಧರ್ಮೋದ್ಧಾರ ಮಾಡುತ್ತ ಚರಿಸುತ್ತಾನೆ. ಇದು ಜಂ ಲಿಂಗದೊಳಗಣ ಗುರುಲಿಂಗವು.

ಪರಜಂಗಮನು ಭಕ್ತಿ ಜ್ಞಾನ ವೈರಾಗ್ಯ ಹಿಡಿದು ಆಚರಿಸು ಪರಾಪರವಾದ ಮೋಕ್ಷಾ ಸ್ವರೂಪನಾಗಿರುತ್ತಾನೆ. ಸ್ಥಾವರ ಜಂಗಮ ಅಧಿಷ್ಠಾನಕರ್ತನಾಗಿ ಆಚರಿಸುತ್ತಾನೆ. ಇದು ಜಂಗಮಲಿಂಗದೊ ಶಿವಲಿಂಗವು.

ಪರಿಣಾಮಿ ಜಂಗಮದಲ್ಲಿ ಸುಖದುಃಖಗಳು ಎರಡೂ ಇರು ಮತ್ತು ಮಹಾಜ್ಞಾನವೇ ಪರಿಣಾಮವಾಗಿ ಅದರ ಆನಂದದಲ್ಲಿರು ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.

ನಿರುಪಾಧಿಕ ಜಂಗಮನು ಯಾರನ್ನೂ ಯಾಚಿಸನು. ದೊ ರಲ್ಲಿಯೇ ಸಂತುಷ್ಟನಾಗಿ ಯಾವ ತರದ ಉಪಾಧಿಗಳು ಇಲ್ಲದೆ ವ್ಯವ ತ್ತಾನೆ. ಇದು ಜಂಗಮಲಿಂಗದೊಳಗಣ ಪ್ರಸಾದಲಿಂಗವು.



ಪರಿಪೂರ್ಣ ಜಂಗಮನು ಸರ್ವಾಚಾರ ಸಂಪತ್ತಿನ ಆಚರಣೆಯಲ್ಲಿ ವ್ಯಾಪಿಸಿದ ಅರಿವುಳ್ಳಾತನಾಗಿರುತ್ತಾನೆ. ಇದು ಜಂಗಮಲಿಂಗದೊಳಗಣ ಮಹಾಲಿಂಗವು.

ಹೀಗೆ ಜಂಗಮಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲಲ್ಲಿಯ ಅನುಭವಗಳನ್ನು ಹೊಂದುತ್ತ ಪರಿಪೂರ್ಣ ಸ್ಥಿತಿಯನ್ನು ಹೊಂದುತ್ತಾನೆ.

೭೪. ಷಡ್ವಿಧಪ್ರಸಾದಲಿಂಗ : ಇವು ಇಂದ್ರಿಯಾನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾನಂದ, ತೂರ್ಯಾನಂದ, ಮಹದಾನಂದ, ಎಂದಿರುತ್ತವೆ. ಇವು ಶರಣಸ್ಥಲದಲ್ಲಿ ಪ್ರಕಟವಾದ ಉಚ್ಚಪರಿಸ್ಥಿತಿಯ ಸ್ವರೂಪಗಳು ಇರುತ್ತವೆ. ಇಲ್ಲಿ ಸುಜ್ಞಾನಭಕ್ತಿಯು ಇದ್ದು ಇದು ಇಲ್ಲಿ ಆನಂದದ ಸ್ವರೂಪದಲ್ಲಿರುತ್ತದೆ. ಈ ಆನಂದವು ಭಕ್ತನ ಮನ, ಕರಣ, ಇಂದ್ರಿಯ, ಜ್ಞಾನ ಮೊದಲಾದವುಗಳಲ್ಲೆಲ್ಲ ತೋರುತ್ತದೆ.

ಆಚಾರಲಿಂಗದಲ್ಲಿ ಪ್ರಸಾದಲಿಂಗವು ಪರಮಾತ್ಮನ ಸ್ತುತಿರೂಪವಾಗಿಯೂ, ಗುರುಲಿಂಗದಲ್ಲಿ ಅದು ಪರಮಾತ್ಮನು ನೀನೇ ಎಂಬ ಅನುಗ್ರಹ ಉಂಟಾಗುವುದರಿಂದ ಅದು ಪ್ರಸನ್ನದೀಕ್ಷೆಯಾಗಿಯೂ, ಶಿವಲಿಂಗದಲ್ಲಿ ಅದು ಸಾಮರಸ್ಯಾಚಾರವುಳ್ಳುದಾಗಿಯೂ ಜಂಗಮಲಿಂಗದಲ್ಲಿ ಅದು ಸದಾ ಸಮಾಧಾನವೃತ್ತಿಯುಳ್ಳದಾಗಿಯೂ. ಪ್ರಕಟವಾಗಿ ಪ್ರಸಾದ ಲಿಂಗಸ್ಥಲದಲ್ಲಿ ಅದು ಕೇವಲ ಆನಂದ ಸ್ವರೂಪದಲ್ಲಿ ಇರುತ್ತದೆ. ಹೀಗೆ ಇದರ ಪ್ರಗತಿಯು ಇರುತ್ತದೆ.

ಇಂದ್ರಿಯಾನಂದದಲ್ಲಿ ಅದು ಮೊದಲು ಪರಿಣಮಿಸುತ್ತದೆ. ಇಲ್ಲಿ ಅವನಿಗೆ ಯಾವ ಉಪಾಧಿಗಳಿಲ್ಲ. ಅವನ ಇಂದ್ರಿಯಗಳಲ್ಲೆಲ್ಲ ಆನಂದವು ತುಂಬಿಕೊಂಡಿರುತ್ತದೆ. ಪ್ರಸಾದಲಿಂಗದೊಳಗಿನ ಆಚಾರಲಿಂಗವು ಇದು ಇರುತ್ತದೆ.

ಮುಂದೆ ಅವನ ಪ್ರಾಣದಲ್ಲಿ ಅದರಂತೆಯೇ ಆನಂದವು ತುಂಬಿಕೊಂಡಿರುವುದರಿಂದ ಅದು ಪ್ರಾಣಾನಂದವು. ಇದು ಇಂದ್ರಿಯಾನಂದಕ್ಕಿಂತ ಹೆಚ್ಚಿಗೆ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಗುರುಲಿಂಗವು.

ಮುಂದೆ ಅವನ ಜ್ಞಾನದಲ್ಲಿಯೂ ಕೂಡ ಆನಂದವು ತುಂಬುವುದು. ಆಗ ಶಿವತತ್ವದಲ್ಲಿ ಸ್ಥಿರಗೊಂಡಿರುವ ಆಸ್ತಿಕ್ಯಜ್ಞಾನವು ಅವನಲ್ಲಿ ತುಂಬಿ

ರುತ್ತದೆ. ಇದು ಜ್ಞಾನಾನಂದವು. ಈ ಆನಂದವು ಪ್ರಾಣಾನಂದ ತಲೂ ಸೂಕ್ಷ್ಮವಾದುದು. ಇದು ಪ್ರಸಾದಲಿಂಗದೊಳಗಣ ಶಿವಲಿಂಗ

ಮುಂದೆ ಅವನಲ್ಲಿ ಭಾವಾನಂದವುಂಟಾಗುತ್ತದೆ. ಇಲ್ಲಿ ಅವ ಶಿವಭಾವದಲ್ಲಿ ಏಕಧ್ಯಾನಪೂರ್ವಕವಾಗಿ ಆನಂದಿಸುತ್ತಾನೆ. ಇ ಪ್ರಸಾದಲಿಂಗದೊಳಗಣ ಜಂಗಮಲಿಂಗವು.

ಮುಂದೆ ಅವನು ಭಾವಾನಂದಕ್ಕಿಂತಲೂ ಅತ್ಯಂತ ಶ್ರೇಷ್ಠತರವಾ ತೂರ್ಯಾನಂದದಲ್ಲಿ ಆನಂದಿಸುತ್ತಾನೆ. ಇಲ್ಲಿ ಶರಣ ಸತಿ, ಲಿಂಗ ಪತಿ ಎ ಭಾವದೊಳಗೆ ಆಚರಿಸುತ್ತಾನೆ. ಇದು ಪ್ರಸಾದಲಿಂಗದೊಳಗಣ ಪ್ರಸಾ ಲಿಂಗವು.

ಇದರ ಮುಂದೆ ಮಹದಾನಂದವಿದೆ. ಇಲ್ಲಿ ಭಿನ್ನ ಕ್ರಿಯಾಚಾರಗ ಳಿಂದ ಬಿಡುಗಡೆ ಹೊಂದುತ್ತಾನೆ. ಇಲ್ಲಿ ಈ ಆನಂದವು ಮೋಕ್ಷಾಹ್ಲಾ ಸ್ವರೂಪವಾಗಿರುತ್ತದೆ. ಇದು ಪ್ರಸಾದಲಿಂಗದೊಳಗಣ ಮಹಾಲಿಂಗವು.

ಹೀಗೆ ಪ್ರಸಾದಲಿಂಗವು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ಅಲ್ಲಿ ನಾನಾ ಬಗೆಯ ಆನಂದವನ್ನು ಉತ್ಪನ್ನ ಮಾಡುತ್ತದೆ.

೭೫. **ಷಡ್ವಿಧ ಮಹಾಲಿಂಗ :** ಇವು ಪಿಂಡಾಕಾಶ, ಬಿಂದ್ವಾ ಕಾಶ, ಮಹದಾಕಾಶ, ಭಾವಗಮ್ಯ, ಸರ್ವತತ್ವಾಶ್ರಯ, ಮತ್ತು ಪ ಪೂರ್ಣಪ್ರಕಾಶ ಎಂದು ಇರುತ್ತವೆ. ಇಲ್ಲಿ ಸಾಮರಸ್ಯ ಸ್ಥಿತಿಯು ಇ ತ್ತದೆ. ಆಕಾಶವೆಂದರೆ ಮನುಷ್ಯನಿಗೆ ಸಂಬಂಧಿಸಿದ ಶಕ್ತಿ, ಪ್ರಾ ಅರಿವು, ಮೊದಲಾದವೆಲ್ಲವೂ ಅತ್ಯಂತ ಪರಿಪಕ್ವತೆಯನ್ನು ಹೊಂದಿ ಲಿಂ ಕಳೆಯಿಂದ ತುಂಬಿಕೊಂಡು ಅತ್ಯಂತ ಸೂಕ್ಷ್ಮಸ್ಥಿತಿಯುಳ್ಳದಾಗಿ ಮ ಚಿತ್ತಿನಲ್ಲಿ ವ್ಯವಹರಿಸುವ ಸ್ಥಿತಿಯು ಈ ಪ್ರಕಾರವಿದ್ದು ಅವುಗಳಿಗೆ ಅ ಬರುವ ಸ್ವರೂಪಿಗೆ ಆರಂಭದಲ್ಲಿ ಪಿಂಡಾಕಾಶವೆಂತಲೂ, ಆಮೇಲೆ ಬಿಂದ್ವಾ ಕಾಶವೆಂತಲೂ, ಮುಂದೆ ಅವುಗಳಿಗೆ ಮಹದಾಕಾಶವೆಂತಲೂ ಹೇಳಲ್ಪ ಡುತ್ತದೆ. ಆ ಮೇಲೆ ಭಾವಗಮ್ಯ, ಆ ಮೇಲೆ ಸರ್ವತತ್ವಾಶ್ರಯ, ಮತ್ತು ಕಡೆಗೆ ಪರಿಪೂರ್ಣಪ್ರಕಾಶವೆಂದು ಅನುಕ್ರಮವಾಗಿ ಹೇಳಲ್ಪಡುತ್ತವೆ. ಈ ಸ್ಥಿತಿಗಳು ಅತ್ಯಂತ ಪರಿಪೂರ್ಣವಾದವುಗಳು.



**ಪಿಂಡಾಕಾಶ :** ಇದು ಅತ್ಯಂತ ಸೂಕ್ಷ್ಮಸ್ಥಿತಿಗೆ ಹೋದ ಶ್ರದ್ಧಾ ಭಕ್ತಿಗೆ ಅವಕಾಶಸ್ಥಾನವಾಗಿರುತ್ತದೆ ಇದು ಪಿಂಡಾಕಾಶವೆಂದು ಹೇಳಲ್ಪಡುತ್ತದೆ. ಇದು ಮಹಾಲಿಂಗದೊಳಗಣ ಆಚಾರಲಿಂಗವು.

**ಬಿಂದ್ವಾಕಾಶ :** ಇದು ಪಿಂಡಕ್ಕಿಂತಲೂ ಸೂಕ್ಷ್ಮವಾದುದು. ನೈಷ್ಠಿಕಾಭಕ್ತಿಯು ಇಲ್ಲಿ ಅತ್ಯಂತ ಸೂಕ್ಷ್ಮಸ್ಥಿತಿಯನ್ನು ಹೊಂದಲು ಅದರ ವ್ಯವಹಾರಕ್ಕೆ ಅವಕಾಶಸ್ಥಾನವಾದುದು. ಇದು ಬಿಂದ್ವಾಕಾಶವು. ಇದು ಮಹಾಲಿಂಗದೊಳಗಣ ಗುರುಲಿಂಗವು.

**ಮಹದಾಕಾಶ :** ಇದು ಆತ್ಮನು ವ್ಯವಹರಿಸಲು ಸ್ಥಾನವಾದುದು. ಇದು ಹಿಂದಿನವುಗಳಿಗಿಂತಲೂ ಸೂಕ್ಷ್ಮವಾದುದು. ಇದು ಮಹಾಲಿಂಗದೊಳಗಣ ಶಿನಲಿಂಗವು.

**ಭಾವಗಮ್ಯ :** ಇದು ಆಕಾಶದ ಸ್ಥಿತಿಗಳಿಗಿಂತಲೂ ಅತ್ಯಂತ ಸೂಕ್ಷ್ಮವಾದುದು. ಈ ಸ್ಥಿತಿಯು ಭಾವದಿಂದ ಮಾತ್ರ ತಿಳಿಯತಕ್ಕುದು. ಅನು ಭಾವಭಕ್ತಿಗೆ ಗೋಚರವಾಗುವಂತಹದು. ಇದು ಮಹಾಲಿಂಗದೊಳಗಣ ಪ್ರಸಾದಲಿಂಗವು.

**ಸರ್ವತತ್ವಾಶ್ರಯ :** ಇದು ಸಮಸ್ತಜ್ಞಾನತತ್ವಗಳಿಗೆ ಆಶ್ರಯವಾಗಿರುತ್ತದೆ. ಇದು ಮಹಾಲಿಂಗದೊಳಗಣ ಜಂಗಮಲಿಂಗವು.

**ಪರಿಪೂರ್ಣ ಪ್ರಕಾಶ :** ಅತ್ಯಂತ ವ್ಯಾಪಕವಾದ ಮಹಾಜ್ಞಾನದಲ್ಲಿ ಪ್ರಕಾಶಸ್ವರೂಪವಾಗಿ ವ್ಯವಹರಿಸಲು ಕಾರಣವಾದುದು. ಇದು ಪರಿಪೂರ್ಣ ಪ್ರಕಾಶವೆಂದೂ ಹೇಳಲ್ಪಡುತ್ತದೆ. ಇದು ಮಹಾಲಿಂಗದೊಳಗಣ ಮಹಾಲಿಂಗವು. ಇದು ಕಟ್ಟ ಕಡೆಯ ಸಾಮರಸ್ಯ ಸ್ಥಿತಿಯು.

೭೬. **ಮೂವತ್ತಾರು ಲಿಂಗಸ್ಥಲಗಳು ( ೩೬ ವಿಧ ) :** ಇವುಗಳ ವ್ಯಾಖ್ಯೆಗಳು ಹಿಂದೆ ಸಂಖ್ಯೆ ೭೦ ರಿಂದ ೭೫ರ ವರೆಗೆ ಹೇಳಲ್ಪಟ್ಟಿವೆ. ಆದರೆ ಇವುಗಳನ್ನು ಅನ್ನುವ ಸೌಕರ್ಯಕ್ಕೋಸ್ಕರ ಆಚಾರಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ ಎಂದು ಮೊದಲಾಗಿ ಆಚಾರಲಿಂಗದೊಳಗಣ ಷಡ್ವಿಧವನ್ನು ಹೇಳುವುದುಂಟು. ಮುಂದೆ ಗುರುಲಿಂಗದೊಳಗಣ ಗುರುಲಿಂಗ, ಆಮೇಲೆ ಗುರುಲಿಂಗದೊಳಗಣ ಆಚಾರಲಿಂಗ

ಎಂದು ಮೊದಲಾಗಿ ಗುರುಲಿಂಗದೊಳಗಣ ಷಡ್ವಿಧಗಳು, ಆ...
ಶಿವಲಿಂಗದೊಳಗಣ ಶಿವಲಿಂಗ, ಆ ಮೇಲೆ ಶಿವಲಿಂಗದೊಳಗಣ ಆಚಾರ...
ಎಂದು ಮೊದಲಾಗಿ ಶಿವಲಿಂಗದೊಳಗಣ ಷಡ್ವಿಧಗಳು, ಹೀಗೆ ಮ...
ಲಿಂಗಗಳೊಳಗಣ ಷಡ್ವಿಧಗಳನ್ನು ಹೇಳುತ್ತ ಕಡೆಗೆ ಆರನೆಯದಾದ ಮ...
ಲಿಂಗದೊಳಗಣ ಮಹಾಲಿಂಗ, ಆಮೇಲೆ ಮಹಾಲಿಂಗದೊಳಗಣ ಆ...
ಲಿಂಗ ಹೀಗೆ ಇದರ ಷಡ್ವಿಧಗಳು, ಹೀಗೆ ಹೇಳುತ್ತ ಕಡೆಗೆ ಐಕ್ಯನೊಳ...
ಶರಣ ಈ ಸ್ಥಿತಿಯು ಉಳಿಯುತ್ತದೆ. ಹಿಂದೆ ವಿವರಿಸಿದ ಮೂವತ್ತಾ...
ಲಿಂಗಸ್ಥಲ (೧ನೇ ವಿಧ) ಗಳಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನು ಸ್ಮ...
ಯಲ್ಲಿಟ್ಟುಕೊಂಡು ಉಪಯೋಗಿಸುವುದು ದುಸ್ತರವು. ಆದ್ದರಿಂದ ಈ ...
ವಿಧದೊಳಗಿನಂತೆ ಹೇಳುವ ವಾಡಿಕೆಯುಂಟು. ಆದರೆ ಈ ಎರಡೂ ...
ಗಳ ಅರ್ಥದಲ್ಲಿ ಯಾವ ಭೇದವೂ ಇರುವುದಿಲ್ಲ.

೭೭. ಮೂವತ್ತಾರು ಅಂಗಸ್ಥಲಗಳು (೧ನೇ ವಿಧ) : ಲಿಂಗ...
ಲಗಳಲ್ಲಿ ಹಿಂದೆ ವಿವರಿಸಿದಂತೆ ೩೬ ವಿಧಗಳಿವೆ. ಈ ಸ್ಥಲಗಳಲ್ಲಿ ಉಂಟಾ...
ಅನುಭವಗಳು ಭಕ್ತನ ಅಂಗದಲ್ಲಿ ತೋರುತ್ತವೆ. ಆದ್ದರಿಂದ ಅವು...
ಪರಿಣಾಮಗಳು ಕೂಡ ಭಕ್ತನಲ್ಲಿ ೩೬ ಆಗಿರುತ್ತವೆ. ಇದರಿಂದ ಅಂಗಸ್ಥ...
ದಲ್ಲಿಯೂ ಲಿಂಗಸ್ಥಲದಂತೆ ೩೬ ವಿಧಗಳಾಗುತ್ತವೆ. ೩೬ ಅಂಗಸ್ಥಲದ...
೩೬ ಲಿಂಗ ಸಂಬಂಧ ಮಾಡಿಕೊಳ್ಳತಕ್ಕದ್ದು. ಈ ಸಂಬಂಧವು ಭಕ್ತಿ...
ಮೂಲಕ ಸಿದ್ಧಿಸುತ್ತದೆ. ಅಂಗಕ್ಕೂ ಲಿಂಗಕ್ಕೂ ಸಂಬಂಧವನ್ನುಂಟ...
ಮಾಡಲು ಭಕ್ತಿಯೇ ಸಾಧನವು. ಈ ಭಕ್ತಿಯಾದರೂ ೩೬ ಅಂಗಸ್ಥ...
ಮತ್ತು ೩೬ ಲಿಂಗಸ್ಥಲಗಳಿಗನುಸಾರವಾಗಿ ೩೬ ವಿಧವಾಗಿರುತ್ತದೆ. ಇ...
ಶ್ರದ್ಧಾಭಕ್ತಿಯೊಳಗಣ ಶ್ರದ್ಧಾಭಕ್ತಿ, ಶ್ರದ್ಧಾಭಕ್ತಿಯೊಳಗಣ ನಿಷ್ಠಾ...
ಭಕ್ತಿ, ಶ್ರದ್ಧಾ ಭಕ್ತಿಯೊಳಗಣ ಅವಧಾನಭಕ್ತಿ ಇತ್ಯಾದಿ ಇರುತ್ತವೆ...
ಉದಾಹರಣಾರ್ಥವಾಗಿ ಆಚಾರಲಿಂಗದೊಳಗಣ ಗುರುಲಿಂಗದ ಆಚರಣೆಯ...
ಶ್ರದ್ಧಾ ಭಕ್ತಿಯೊಳಗಣ ನಿಷ್ಠಾಭಕ್ತಿಯನ್ನೊಡಗೊಂಡಲ್ಲಿ ಭಕ್ತನೊಳಗ...
ಮಹೇಶ್ವರನಾಗುವನು. ಈ ಪ್ರಕಾರ ೩೬ ಅಂಗಸ್ಥಲದೊಳಗಣ ಆಚರಣೆ...
ಇರುತ್ತದೆ. ಈ ಪ್ರಕಾರ ೩೬ ವಿಧ ಲಿಂಗದ ಪ್ರಕಾಶವು ೩೬ ವಿಧ ಭಕ್ತಿಗಳೊ...
ಡನೆ ಕೂಡಿಕೊಳ್ಳಲು, ಆಗ ಅದು ೩೬ ವಿಧವುಳ್ಳ ಅಂಗವನ್ನು ವೇಧಿಸುತ್ತ...



ತನುತ್ರಯ, ಷಡಿಂದ್ರಿಯಗಳು ಮತ್ತು ೩೬ ತತ್ವಗಳು ಇವುಗಳನ್ನು ವ್ಯಾಪಿಸುವುದು. ಇದರಿಂದ ಮನುಷ್ಯನ ಸೂಕ್ಷ್ಮ ಶರೀರವು ಬಲಗೊಳ್ಳುತ್ತದೆ.

ಇದರ ತರುವಾಯ ಮನುಷ್ಯನ ಕಾರಣ ಶರೀರವು ಬಲಗೊಳ್ಳಬೇಕು. ಅದು ೨೧೬ ಸ್ಥಲಗಳಲ್ಲಿ ಆಗಬೇಕು. ಆದರೆ ಈ ೨೧೬ ಸ್ಥಲಗಳ ಆಚರಣೆಯು ಸ್ವಾನುಭವದಿಂದಲೇ ಉಂಟಾಗಬೇಕು. ಅಂದರೆ ಅದು ಅರಿವಿನಿಂದಲೇ ಆಗಬೇಕು. ಆದ್ದರಿಂದ ಅವುಗಳನ್ನು ಷಟ್‌ಸ್ಥಲ ಶಾಸ್ತ್ರದಲ್ಲಿ ಸವಿಸ್ತಾರವಾಗಿ ವಿವರಿಸುವುದಿಲ್ಲ. ಆದರೆ ೩೬ ಸ್ಥಲಗಳು ಕ್ರಿಯೆಯಲ್ಲಿದ್ದುದರಿಂದ ಅವುಗಳನ್ನು ಮಾತ್ರ ಅವರು ವಿವರಿಸುತ್ತಾರೆ.

ಹೀಗೆ ೩೬ ಸ್ಥಲಗಳ ವಿವೇಚನೆಯು ೨ ವಿಧವಾಗಿರುತ್ತದೆ. ಆದರೆ ಈ ವಿಧಗಳ ಅರ್ಥದಲ್ಲಿ ಭಿನ್ನವಿಲ್ಲ. ಅನುಕೂಲತೆಗಾಗಿ ಶಬ್ದಯೋಜನೆಯಲ್ಲಿ ಮಾತ್ರ ಭಿನ್ನತೆಯಾಗಿರುತ್ತದೆ.

೭೮. ಷಡ್ವಿಧ ಭಕ್ತ : ಆಚಾರಾಂಗ, ಗೌರವಾಂಗ, ಶಿವಾಂಗ, ಚರಾಂಗ, ಪ್ರಸಾದಾಂಗ, ಮಹದಂಗನೆಂದು ಇವು ಇವೆ. ಅಂದರೆ ಯಾವ ಅಂಗವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದ ಲಿಂಗ, ಮಹಾಲಿಂಗ ಇವುಗಳಿಗೆ ಸಂಬಂಧಪಡುತ್ತದೋ ಅದೆ ಎಂದು ಇಲ್ಲಿ ಆ ರೀತಿ ವರ್ಗೀಕರಣ ಮಾಡಿದ್ದಾರೆ. ಇಲ್ಲಿ ಈ ಲಿಂಗಗಳಿಗೋಸ್ಕರ ಶ್ರದ್ಧಾ ಭಕ್ತಿಯು ಸಂಬಂಧಪಡುತ್ತದೆ. ಇಲ್ಲಿ ಆಯಾ ಆರು ಲಿಂಗಗಳನ್ನು ಭಕ್ತಸ್ಥಲದಲ್ಲಿ ಏರ್ಪಡಿಸುವುದು ಇರುತ್ತದೆ.

೭೯. ಷಡ್ವಿಧ ಮಹೇಶ್ವರ : ಇವು ಆಚಾರನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ ಮತ್ತು ಮಹನ್ನಿಷ್ಠೆ ಎಂದು ಇರುತ್ತವೆ. ಇಲ್ಲಿ ಬೇರೆ ಬೇರೆ ಆರು ಲಿಂಗಗಳಿಗೆ ನಿಷ್ಠಾಭಕ್ತಿಯು ಅನುಕ್ರಮವಾಗಿ ಸಂಬಂಧಪಡುತ್ತದೆ. ಆದ್ದರಿಂದ ಆಯಾ ಲಿಂಗಗಳಿಗೋಸ್ಕರ ಇರುವ ನಿಷ್ಠಾಭಕ್ತಿಯ ಮೂಲಕವೇ ಈ ಲಿಂಗಸ್ಥಲಗಳು ಪ್ರಕಟವಾಗುತ್ತವೆ.

೮೦. ಷಡ್ವಿಧ ಪ್ರಸಾದಿ : ಈ ಸ್ಥಲದ ಪ್ರಗತಿಯು ೬ ವಿಧವಾಗಿರುತ್ತವೆ. ಅದು ಅವುದೆಂದರೆ, ಆಚಾರಾವಧಾನಿ, ಗೌರವಾವಧಾನಿ, ಲಿಂಗಾವಧಾನಿ, ಚರಾವಧಾನಿ, ಪ್ರಸಾದಾವಧಾನಿ, ಮಹದಾವಧಾನಿ ಎಂದಿರು

ತ್ತದೆ ಪ್ರಸಾದಿಯ ಮುಖ್ಯ ವೈಶಿಷ್ಟ್ಯವು ಅವಧಾನ ಭಕ್ತಿಯು. ರಿಂದ ಈ ಕ್ರಿಯೆಯ ಮೂಲಕವೇ ಪ್ರಸಾದಿಸ್ಥಲದ ತರಗತಿಗಳನ್ನು ಭ ಹೊಂದತಕ್ಕದ್ದು.

೬೧. **ಷಡ್ವಿಧ ಪ್ರಾಣಲಿಂಗಿ :** ಸಾಧ್ಯ, ವೇದ್ಯ, ಭೇದ್ಯ, ಯೋ ಸನ್ನಿಹಿತ ಮತ್ತು ಮಹಾನುಭಾವಿ ಎಂದು ಇವು ಇರುತ್ತವೆ. ಪ್ರ ಲಿಂಗಿಯ ಮುಖ್ಯ ಲಕ್ಷಣವು ಅನುಭಾವ ಭಕ್ತಿಯು. ಅನುಭಾವ ಭ ಮೂಲಕ ಪ್ರಾಣಲಿಂಗಿಯು ಸೂಕ್ಷ್ಮ ಶರೀರದ ಮೇಲೆ ಪೂರ್ಣ ಪ್ರ ವುಳ್ಳವನಾಗುತ್ತಾನೆ. ಇವನು ಸೃಷ್ಟಿಯಲ್ಲಿ ವ್ಯವಹರಿಸುವ ಶಕ್ತಿಗಳ ಳಕೊಂಡಿರುತ್ತಾನೆ. ಆದ್ದರಿಂದ ಅವನಿಂದ ಸಿದ್ಧಿಗಳು ಸಹ ಜರುಗುವ ಪೂರ್ಣ ಸ್ಥಿತಿಯುಳ್ಳ ಪ್ರಾಣಲಿಂಗಿಯು ಮಹಾನುಭಾವಿ ಎಂದು ಹೇಳಲ್ಪಟ್ಟಿದೆ ಇದರ ಆರಂಭದ ತರಗತಿಗಳು ಮೇಲೆ ಹೇಳಿದಂತೆ ಸಾ ವೇದ್ಯ, ಭೇದ್ಯ, ಯೋಗ್ಯ, ಸನ್ನಿಹಿತ, ಎಂದು ಇರುತ್ತವೆ. ಸೃಷ್ಟಿ ನಿಯಮಗಳನ್ನು ಸಾಧಿಸಿಕೊಂಡವನು ಸಾಧ್ಯನು. ಅವುಗಳನ್ನು ಕ ಕೊಂಡವನು ವೇದ್ಯನು. ಅವುಗಳ ಬೇರೆ ಬೇರೆ ರೀತಿಗಳನ್ನು ಅರಿತ ಭೇದ್ಯನು. ಅವುಗಳನ್ನು ಅರಿತು ಆಚರಿಸುವವನು ಯೋಗ್ಯನು. ಅ ಅವುಗಳೊಡನೆ ಇರುವವನು ಸನ್ನಿಹಿತನು. ಮತ್ತು ಅವುಗಳೊಡನೆ ಯನಾಗಿ ವ್ಯವಹರಿಸುವವನು ಮಹಾನುಭಾವಿಯು.

೬೨. **ಷಡ್ವಿಧಶರಣ :** ಇದರ ತರಗತಿಗಳು ಆಯತ, ಸ್ವಾಯ ಸನ್ನಿಹಿತ, ಕಾಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯ ಎಂ ತ್ತವೆ. ಶರಣನಲ್ಲಿ ಲಿಂಗವಿಕಾಸತೆಯುಂಟಾಗುತ್ತದೆ. ಈ ವಿಕಾಸತೆ ತರಗತಿಗಳು ಇವು ಇರುತ್ತವೆ. ಆಯತ, ಸ್ವಾಯತ, ಸನ್ನಿಹಿತ, ಶರಣಸ್ಥಲದಲ್ಲಿರುವವನ ಲಿಂಗಸಾನಿಧ್ಯವನ್ನು ಸೂಚಿಸುತ್ತವೆ. ಲಿಂಗ ಯತ, ಲಿಂಗಸ್ವಾಯತ, ಲಿಂಗ ಸನ್ನಿಹಿತ, ಎಂಬ ಶಬ್ದಗಳು ಷಟ್ಸ್ಥ ಶಾಸ್ತ್ರದಲ್ಲಿವೆ. ಲಿಂಗಾಯತ ಎಂದರೆ ಲಿಂಗದ ಮರ್ಮವನ್ನು ಸ್ಥೂಲರೂ ಗಳಲ್ಲಿ ಅರಿತವನು ಎಂಬರ್ಥವು ಇಲ್ಲಿ ಇರುತ್ತದೆ. ಆದರೆ ಲಿಂಗದ ಮ ವನ್ನು ಹೆಚ್ಚಿಗೆ ತಿಳಿದು ಆಚರಿಸುವವನು ಲಿಂಗಸಾಯತ, ಇದ ಹೆಚ್ಚಿಗೆ ತಿಳಿದವನು ಲಿಂಗ ಸನ್ನಿಹಿತನು, ಎಂದು ಇವರು ಹೇಳಲ್ಪಡುತ್ತ



ಇವುಗಳ ಮುಂದಿನ ತರಗತಿಗಳು ಕಳಾಗ್ರಾಹಕ, ಮನೋಮಗ್ನತೆ, ಘನಸಾಮರಸ್ಯ ಎಂದಿವೆ. ಇವಾದರೂ ಲಿಂಗದ ಮುಂದಿನ ವಿಕಾಸಾವಸ್ಥೆಯನ್ನು ಸೂಚಿಸುತ್ತವೆ ಶರಣನು ತನ್ನ ಕಟ್ಟ ಕಡೆಯ ಪೂರ್ಣಸ್ಥಿತಿಯಲ್ಲಿ ಘನಸಾಮರಸ್ಯನೆಂದು ಹೇಳಲ್ಪಡುತ್ತಾನೆ. ಈ ಪ್ರಕಾರ ಶರಣನ ತರಗತಿಗಳಿರುತ್ತವೆ.

೬೩. **ಷಡ್ವಿಧ ಐಕ್ಯ :** ಇವು ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಚರತೃಪ್ತಿ, ಪ್ರಸಾದತೃಪ್ತಿ, ನಿರ್ಭಾವತೃಪ್ತಿ ಎಂದು ಆರು ಇರುತ್ತವೆ. ತೃಪ್ತಿ ಎಂದರೆ ಆಯಾ ಸ್ಥಲಗಳಲ್ಲಿ ಉಂಟಾದ ಅನುಭವಗಳು. ಕಾರಣ ಶರೀರದಲ್ಲಿ ಒಟ್ಟುಗೂಡಿದ ಒಂದು ಸ್ಥಿತಿಯು. ಇದು ಅನುಭವವು. ಈ ಅನುಭವವು ಆಗಲು ಮನುಷ್ಯನಲ್ಲಿ ಒಂದು ವಿಧದ ಆನಂದ ಅಥವಾ ಪ್ರಕಾಶವು ಉಂಟಾಗುತ್ತದೆ. ಇದು ಮನುಷ್ಯನಲ್ಲಿ ಆದ ವಿಕಾಸತೆಯು ಇರುತ್ತದೆ. ಕಡೆಯ ಈ ವಿಕಾಸವು ಮನುಷ್ಯನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ ಆಗ ಅದು ಅವನ ರೀತಿ, ನಡತೆ, ಶೀಲ, ಅರಿವು ಆಚರಣೆ, ತಿಳಿವಳಿಕೆ, ಮನಸ್ಸು ಇವುಗಳ ಮೇಲೆಲ್ಲ ಒಂದು ಬೆಳಕನ್ನು ಬೀರುತ್ತದೆ. ಇದು ಸ್ವಾನುಭವವು. ಈ ಅನುಭವದಿಂದ ಮನುಷ್ಯನ ಕಾರ್ಯಗಳು ಜಗತ್ತಿನಲ್ಲಿ ಸರಾಗವಾಗಿ, ಯಾವ ತಡೆಗಳಿಲ್ಲದೆ, ಸ್ವಾಭಾವಿಕವಾಗಿ, ಶಾಂತವಾಗಿ, ಹರಿಯುತ್ತ ಹೋಗುತ್ತವೆ. ಇದು ಕಾರಣ ಶರೀರದ ಪೂರ್ಣಾವಸ್ಥೆ ಎಂದು ಹೇಳಬಹುದು ಇದಕ್ಕೆ ಷಟ್‌ಸ್ಥಲ ಶಾಸ್ತ್ರಜ್ಞರು, ಜ್ಞಾನಲಿಂಗ, ತೃಪ್ತಿಲಿಂಗ, ಭಾವಲಿಂಗ ಎಂದು ಹೇಳುವುದುಂಟು. ಈ ತೃಪ್ತಿಲಿಂಗವು ಆಯಾ ಆರು ಸ್ಥಲಗಳ ಸಂಬಂಧದ ಮೂಲಕ ಸೂಕ್ಷ್ಮ ಶರೀರದಲ್ಲಿ ಪ್ರವಹಿಸಹತ್ತಲು ಅದು ಅನುಕ್ರಮವಾಗಿ ಆಚಾರ ತೃಪ್ತಿ, ಗೌರವ ತೃಪ್ತಿ, ಲಿಂಗತೃಪ್ತಿ, ಚರತೃಪ್ತಿ, ಪ್ರಸಾದತೃಪ್ತಿ ಮತ್ತು ಕಡೆಗೆ ನಿರ್ಭಾವ ತೃಪ್ತಿ ಎಂದು ಹೇಳಲ್ಪಡುತ್ತವೆ. ಈ ಸ್ಥಲಗಳು ಸೂಕ್ಷ್ಮ ಶರೀರದಲ್ಲಿ ಐಕ್ಯ ಸ್ಥಲದ ಆರು ತರಗತಿಗಳು ಇರುತ್ತವೆ.

೬೪. **ಮೂವತ್ತಾರು ಅಂಗಸ್ಥಲಗಳು ( ೨ನೇ ವಿಧ ):** ಇವುಗಳ ವ್ಯಾಖ್ಯೆಗಳು ಹಿಂದೆ ಸಂಖ್ಯೆ ೨೮ ರಿಂದ ೬೩ ವರೆಗೆ ಹೇಳಲ್ಪಟ್ಟಿವೆ. ಆದರೆ ಇವುಗಳನ್ನು ಅನ್ವಯ ಸೌಕರ್ಯಕ್ಕೋಸ್ಕರ ಭಕ್ತನೊಳಗಣ ಭಕ್ತ, ಭಕ್ತನೊಳಗಣ ಮಹೇಶ್ವರ, ಎಂದು ಆರಂಭವಾಗಿ, ಭಕ್ತನೊಳಗಣ ಐಕ್ಯ

ಈ ವರೆಗೆ ೬ ಪ್ರಕಾರವಾಗಿ ಹೇಳುವುದುಂಟು. ಇವುಗಳ ಮುಂದೆ
ಶನೊಳಗಣ ಮಹೇಶ, ಆಮೇಲೆ ಮಹೇಶನೊಳಗಣ ಭಕ್ತ, ಎಂದು
ಲಾಗಿ, ಮಹೇಶನೊಳಗಣ ಷಡ್ವಿಧಗಳಿವೆ. ಆಮೇಲೆ ಪ್ರಸಾದಿಯೊ
ಪ್ರಸಾದಿ, ಆಮೇಲೆ ಪ್ರಸಾದಿಯೊಳಗಣ ಭಕ್ತ. ಈ ಪ್ರಕಾರ ಪ್ರಸಾ
ದೊಳಗಣ ಷಡ್ವಿಧಗಳು, ಹೀಗೆಯೇ ಮುಂದಿನ ಸ್ಥಲಗಳೊಳಗಿನ
ಗಳನ್ನು ಹೇಳುತ್ತ ಕಡೆಗೆ ಆರನೆಯದಾದ ಐಕ್ಯನೊಳಗಣ ಐಕ್ಯ,
ಐಕ್ಯನೊಳಗಣ ಭಕ್ತ, ಹೀಗೆ ಇದರ ಷಡ್ವಿಧಗಳನ್ನು ಹೇಳುವರು.
ಕಡೆಗೆ ಐಕ್ಯನೊಳಗಣ ಶರಣ ಈ ಸ್ಥಿತಿಗೆ ಬರುತ್ತಾನೆ. ಇದು
ಶರೀರದ ಪೂರ್ಣತೆಯು. ಈ ಸ್ಥಿತಿಯ ಮುಂದೆ ಈತನು ಕಾರಣ
ದಲ್ಲಿ ಹೋಗುತ್ತಾನೆ. ಈ ಕಾರಣ ಶರೀರದಲ್ಲಿ ಅವನಿಗೆ ೨೧೬ ಅ
ಗಳು ಉಂಟಾಗುತ್ತವೆ. ಈ ಪ್ರಕಾರ ೩೬ ಅಂಗಸ್ಥಳಗಳ ೩ನೇ
ರುತ್ತವೆ.

ಹಿಂದೆ ನಾವು ವಿವರಿಸಿದ ಮೂವತ್ತಾರು ಅಂಗಸ್ಥಲಗಳು (
ವಿಧ)— ಸಂಖ್ಯೆ ೭೭, ಇದರಲ್ಲಿಯ ಅನೇಕ ವಿಶಿಷ್ಟ ಶಬ್ದಗಳನ್ನು
ಯಲ್ಲಿಟ್ಟುಕೊಳ್ಳುವುದು ದುಸ್ತರವು. ಆದ್ದರಿಂದ ಈ ೩ನೇ ವಿಧದೊ
ಶಬ್ದಗಳನ್ನು ಉಪಯೋಗಿಸುವ ವಾಡಿಕೆಯುಂಟು. ಆದರೆ ಈ
ವಿಧಗಳ ಅರ್ಥದಲ್ಲಿ ಭಿನ್ನತೆಯು ಇರುವುದಿಲ್ಲ.

**೮೫. ಅಂಗಸ್ಥಲಗಳು ೩೬, ಲಿಂಗಸ್ಥಲಗಳು ೩೬, ಇವ
ಸಮ್ಮೇಳನ :** ಭಕ್ತ, ಮಹೇಶ್ವರ, ಪ್ರಸಾದಿ ಮೊದಲಾದ ೬ ಸ್ಥಲಗ
ಸಾರವಾಗಿ ಷಟ್‌ಚಕ್ರಗಳಿರುತ್ತವಷ್ಟೇ. ಹಾಗೆಯೇ ಆ ಪ್ರತಿಯೊ
ಚಕ್ರದಲ್ಲಿ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ ಮೊದಲಾದ
ಗಳಿರುತ್ತವೆ. ಅವು ಪರಸ್ಪರ ಮಿಶ್ರ ಆಗಿ ೩೬ ಆಗುವುವು. ಆಗ
ಮೂವತ್ತಾರು ಸ್ಥಲಗಳಲ್ಲಿ ಶ್ರದ್ಧಾದಿ ಭಕ್ತಿಗಳೂ, ಆಚಾರಾದಿ ಲಿಂಗ
ಕೂಡ ಮಿಶ್ರ ಆಗಿ ೩೬, ಆಗುತ್ತವೆ. ಉದಾ: ಭಕ್ತಿಯು, ಶ್ರದ್ಧಾ
ಯೊಳಗಣ ನಿಷ್ಠೆ, ಶ್ರದ್ಧಾ ಭಕ್ತಿಯೊಳಗಣ ಅವಧಾನ ಹೀಗೆ ಒಂದೊ
ಭಕ್ತಿಯಲ್ಲಿ ಆರಾರಾಗಿ, ಒಟ್ಟು ೩೬ ಭಕ್ತಿಗಳಾಗುತ್ತವೆ. ಈ ೩೬



ಗಳು ಮಿಶ್ರಲಿಂಗಗಳೊಡನೆ ಅನುಕ್ರಮವಾಗಿ ಸಂಬಂಧಿಸುತ್ತವೆ. ಈ ಮಿಶ್ರಲಿಂಗಗಳೂ ೩೬ ಇರುತ್ತವೆ. ಇವು ಕೂಡುವ ವಿಧವು ಹೇಗೆಂದರೆ, ಶ್ರದ್ಧಾ ಭಕ್ತಿಯೊಳಗಣ ಶ್ರದ್ಧಾಭಕ್ತಿಯು, ಆಚಾರಲಿಂಗದೊಳಗಣ ಆಚಾರ ಲಿಂಗದೊಳಗೆ ಕೂಡುತ್ತದೆ. ಹೀಗೆ ಕೂಡುತ್ತ ಕಡೆಗೆ ಶ್ರದ್ಧಾಭಕ್ತಿಯೊಳಗಣ ಸಾಮರಸ್ಯ ಭಕ್ತಿಯು ಆಚಾರಲಿಂಗದೊಳಗಣ ಮಹಾಲಿಂಗದೊಳಗೆ ಕೂಡುತ್ತದೆ. ಈ ಪ್ರಕಾರ ೩೬ ಅಂಗಗಳು, ೩೬ ಭಕ್ತಿಗಳ ಮೂಲಕ ೩೬ ಲಿಂಗಗಳಲ್ಲಿ ಬೆರೆಯುತ್ತವೆ. ಈ ೩೬ ಲಿಂಗಗಳ ಪ್ರಕಾಶವು ೩೬ ಭಕ್ತಿಗಳ ಪ್ರಕಾಶದಲ್ಲಿ ಬೆರೆಯಲು ಈ ಪ್ರಕಾಶವು ಸರ್ವಾಂಗವನ್ನು ವೇಧಿಸುತ್ತದೆ. ಹೀಗೆ ವೇಧಿಸಲು ಅದು ತನುತ್ರಯಗಳನ್ನೂ ಆರು ಇಂದ್ರಿಯಗಳನ್ನೂ ೩೬ ತತ್ವ ಗಳನ್ನೂ ವ್ಯಾಪಿಸುತ್ತದೆ. ಹೀಗೆ ವ್ಯಾಪಿಸಲು ಆ ಅಂಗಗಳೆಲ್ಲ ಐಕ್ಯ ಸ್ಥಿತಿಯನ್ನು ಹೊಂದುತ್ತವೆ. ಅಂದರೆ ಅಂಗಗಳೆಲ್ಲ ಪರಿಪೂರ್ಣತೆಯನ್ನು ಹೊಂದುತ್ತವೆ.

**೮೬. ಷಡ್ಲಿಂಗ ಸಾಧನೆ (೧ನೇ ವಿಧ) :** ಲಿಂಗ ಸಾಧನೆಯಲ್ಲಿ ೬ ತರಗತಿಗಳಿವೆ. ಈ ತರಗತಿಗಳು ಷಟ್‌ಸ್ಥಲಕ್ಕೆ ಅನುಸಾರವಾಗಿ ಇವೆ. ಅವು ಮೋಹೀ, ಭಕ್ತ, ವೀರ, ಪ್ರಾಣೀ, ಪ್ರಸಾದೀ, ತೃಪ್ತಿ ಎಂದಿರುತ್ತವೆ. ಲಿಂಗದಲ್ಲಿ ಮೊದಲು ಮೋಹಿಸತಕ್ಕದ್ದು. ಇದು ಮೋಹೀ ಸ್ಥಿತಿಯು. ಆಮೇಲೆ ಅದರಲ್ಲಿ ವಿಶ್ವಾಸವುಳ್ಳವನಾಗತಕ್ಕದ್ದು. ಆಗ ಭಕ್ತನೆನಿಸಿಕೊಳ್ಳುವನು. ಈ ವಿಶ್ವಾಸದಿಂದ ದೃಢಭಾವವು ಅವನಲ್ಲಿ ನೆಲೆಗೊಳ್ಳುವುದು. ಆಗ ಅವನು ವೀರನೆನಿಸಿಕೊಳ್ಳುವನು. ಈ ದೃಢಭಾವದಿಂದ ಲಿಂಗದ ಶಕ್ತಿಯೇ ಅವನ ಪ್ರಾಣವಾಗುವುದು. ಆಗ ಅವನು ಪ್ರಾಣೀ ಎಂದೆನಿಸಿಕೊಳ್ಳುವನು. ಆಮೇಲೆ ಅವನು ಲಿಂಗದ ಪ್ರಸಾದದಲ್ಲಿಯೇ ತಲ್ಲೀನನಾಗುವನು. ಆಗ ಅವನು ಪ್ರಸಾದಿ ಎನಿಸಿಕೊಳ್ಳುವನು. ಹೀಗೆ ತಲ್ಲೀನನಾಗಿ ಅದರಲ್ಲಿಯೇ ಆನಂದಪಡುವನು. ಆಗ ಅವನು ತೃಪ್ತಿಸ್ಥಿತಿಗೆ ಬರುವನು. ಇದು ಕಡೆಯದು. ಹೀಗೆ ಆಚಾರ ಲಿಂಗದಲ್ಲಿ ಆಚಾರಲಿಂಗ ಮೋಹೀ, ಆಚಾರಲಿಂಗ ಭಕ್ತ ಎಂದು ಮೊದಲಾಗಿ ಕಡೆಗೆ ಆಚಾರಲಿಂಗ ತೃಪ್ತಿ ಹೀಗೆ ೬ ವಿಭೇದಗಳಾಗುವುವು. ಮುಂದೆ ಹಾಗೆಯೇ ಗುರುಲಿಂಗ ಮೋಹೀ, ಗುರುಲಿಂಗ ಭಕ್ತ, ಗುರುಲಿಂಗವೀರ ಮೊದಲಾಗಿ ಗುರುಲಿಂಗದ

ಆರು ವಿಭೇದಗಳು, ಕಡೆಗೆ ಮಹಾಲಿಂಗ ಮೋಹೀ, ಮಹಾಲಿಂ ಮೊದಲಾಗಿ ಆರು ಮಹಾಲಿಂಗದ ವಿಭೇದಗಳು, ಹೀಗೆ ಒಟ್ಟು ೩೬ ಳಾಗುತ್ತವೆ. ಕಡೆಗೆ ಮಹಾಲಿಂಗ ತೃಪ್ತಿಯು ಉಂಟಾಗುತ್ತದೆ.

**೪೭. ಷಡ್ಲಿಂಗ ಸಾಧನೆ (೨ನೇ ವಿಧ) :** ಕೆಲವು ವಚನ ಮೇಲಿನ ತರಗತಿಗಳನ್ನೇ ಶಬ್ದಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ದುಂಟು. ಅವು ಮೋಹೀ, ಭಕ್ತ, ಪೂಜಕ, ವೀರ, ಪ್ರಸಾದಿ, ಎಂದಿರುತ್ತವೆ ಅಂದರೆ ಮೊದಲು ಮೋಹಿಸತಕ್ಕದ್ದು. ಹೀಗೆ ಸಿದ ಬಳಿಕ ಅವನು ಆ ಲಿಂಗದಲ್ಲಿ ಭಕ್ತಿಭಾವಪೂರಿತನಾಗುವನು. ಅವನು ಭಕ್ತನಾಗುವನು. ಆಮೇಲೆ ಅವನಲ್ಲಿ ಲಿಂಗದ ಆಚರಣೆಯ ದೋರುವುದು. ಇದು ಪೂಜಕ ಸ್ಥಿತಿಯು. ಆಮೇಲೆ ವಿಶ್ವಾಸ ತಲ್ಲಿ ಎಂಥ ಎಡರುಗಳು ಬಂದರೂ ಅವುಗಳನ್ನು ಎದುರಿಸಲು ಸಿದ್ಧ ವನು. ಇದು ವೀರ ಸ್ಥಿತಿಯು. ಆಗ ಅವನು ಲಿಂಗದ ಅನುಭವ ಹೊಂದಿ ಅದರ ಸುಪರಿಣಾಮದಲ್ಲಿ ಆನಂದಿಸಹತ್ತುವನು. ಇದು ದಿಯ ಸ್ಥಿತಿಯು. ಆಮೇಲೆ ಅವನು ಆ ಲಿಂಗವೇ ಪ್ರಾಣವಾಗಿ ಸು ಭವಿಸುತ್ತಾನೆ. ಆಗ ಅವನು ಲಿಂಗ ಪ್ರಾಣಿ ಎಂದೆನಿಸಿಕೊಳ್ಳುವನು. ಕಡೆಯ ಸ್ಥಿತಿಯು. ಕೆಲವು ವಚನಕಾರರು ಹೀಗೆ ಷಡ್ಲಿಂಗ ಸಾಧ ವಿಧಗಳನ್ನು ಬೇರೆ ಶಬ್ದಗಳಿಂದ ಹೇಳುತ್ತಾರೆ. ಇವು ಕೂಡ ಮೊ ಕೊನೇ ೩೬ ವಿಧವಾಗಿರುವುವು.

**೪೮. ೨೧೬ ಸ್ಥಲಗಳು :** ೩೬ ಸ್ಥಲಗಳ ತರುವಾಯ ಮತ್ತೊ [illegible] ತಲೆದೋರುತ್ತದೆ. ಈ ೩೬ ಸ್ಥಲಗಳಲ್ಲಿಯೇ ಪ್ರತಿಯೊ [illegible] ಪುನಃ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, [illegible] ಐಕ್ಯ, ೬ ವಿಭಾಗಗಳಾಗಿ ಒಟ್ಟು ೨೧೬ (೩೬×೬) ಸ್ಥಲಗಳಾಗು ಮನುಷ್ಯನ ಪ್ರಗತಿಯಲ್ಲಿ ಇವು ಕಡೆಯ ಸ್ಥಲಗಳು. ಇವು ಕಾರಣ [illegible] ಸಂಬಂಧಪಡುತ್ತವೆ. ಇದು ಕಾರಣಶರೀರದ ಪಕ್ವ ಸ್ಥಿತಿಯು. [illegible] ಸ್ಥಲಗಳು ಮೊದಲು ಸ್ಥೂಲಶರೀರಕ್ಕೆ ಸಂಬಂಧಿಸುತ್ತವೆ. [illegible] ಸ್ಥಲಗಳು ಆಗುವುವು. ಮುಂದೆ ಭಕ್ತನೊಳಗಣ ಭಕ್ತಸ್ಥ [illegible] ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂ



ಧಿಸುತ್ತದೆ. ಇದೇ ರೀತಿ ಉಳಿದ ಸ್ಥಲಗಳೊಡನೆ ಭಕ್ತಸ್ಥಲಗಳು ೩೬ ಆಗುತ್ತವೆ. ಇದರ ಮುಂದೆ ಭಕ್ತನೊಳಗಣ ಭಕ್ತಸ್ಥಲವು ಉಂಟಾಗುತ್ತದೆ. ಇದು ಕಾರಣಶರೀರಕ್ಕೆ ಸಂಬಂಧಿಸಿದುದು. ಆಗ ಇದೇ ರೀತಿ ಒಟ್ಟು ಸ್ಥಲಗಳು ೨೧೬ ಆಗುತ್ತವೆ. ಹೀಗೆ ಸ್ಥೂಲಶರೀರಕ್ಕೆ ೬ ಸ್ಥಲಗಳು. ಸೂಕ್ಷ್ಮಶರೀರಕ್ಕೆ ೩೬ ಸ್ಥಲಗಳು. ಮತ್ತು ಕಾರಣಶರೀರಕ್ಕೆ ೨೧೬ ಸ್ಥಲಗಳು ಸಂಬಂಧಿಸುತ್ತವೆ.

ಈ ವಿಷಯವನ್ನು ವಿವೇಚಿಸಿದಲ್ಲಿ ತೋರುವುದೇನೆಂದರೆ, ಭಕ್ತನೊಳಗಣ ಭಕ್ತಸ್ಥಲವು ಸೂಕ್ಷ್ಮಶರೀರಕ್ಕೆ ಸಂಬಂಧಪಡುತ್ತದೆ. ಹೀಗೆ ಅದು ಸಂಬಂಧಪಡಲು ಅದರ ಆರುವಿಧ ಪರಿಣಾಮಗಳು ಕಾರಣ ಶರೀರವನ್ನು ಪ್ರವೇಶಿಸುವಲ್ಲಿ ಅವು ಪುನಃ ಆರು ಸ್ಥಳಗಳಿಗೆ ಸಂಬಂಧಪಡುವುದರಿಂದ ಈ ಒಂದು ಭಕ್ತಸ್ಥಲಕ್ಕೆ ಕಾರಣ ಶರೀರದಲ್ಲಿ ೩೬ ಸ್ಥಲಗಳಾಗುತ್ತವೆ. ಇದರಿಂದ ಅಲ್ಲಿ ಭಕ್ತನ ಭಕ್ತನ ಭಕ್ತ, ಭಕ್ತನ ಭಕ್ತನ ಮಹೇಶ, ಭಕ್ತನ ಭಕ್ತನ ಪ್ರಸಾದಿ, ಭಕ್ತನ ಭಕ್ತನ ಪ್ರಾಣಲಿಂಗಿ, ಭಕ್ತನ ಭಕ್ತನ ಶರಣ, ಭಕ್ತನ ಭಕ್ತನ ಐಕ್ಯ ಎಂದು ಆಗುವುವು. ಆಮೇಲೆ ಭಕ್ತನ ಮಹೇಶನ ಭಕ್ತ, ಭಕ್ತನ ಮಹೇಶನ ಮಹೇಶ, ಹೀಗೆ ೬ ವಿಧಗಳಾಗುವುವು. ಹೀಗೆ ಎಲ್ಲ ಸ್ಥಲಗಳಲ್ಲಿ ಕೂಡಿ, ಭಕ್ತಸ್ಥಲದಲ್ಲಿ ಒಟ್ಟು ೩೬ ವಿಧಗಳಾಗುವುವು. ಹೀಗೆ ಆದದ್ದೇ ಭಕ್ತಸ್ಥಲದ ಪೂರ್ಣತೆಯ ಸ್ಥಿತಿಯು. ಆಗ ಅದು ಕಾರಣಶರೀರವನ್ನು ಪ್ರವೇಶಿಸುವುದು. ಅದರಂತೆಯೇ ಮಹೇಶ್ವರ ಸ್ಥಲದಲ್ಲಿ ೩೬, ಪ್ರಾಣಲಿಂಗಿ ಸ್ಥಲದಲ್ಲಿ ೩೬, ಶರಣಸ್ಥಲದಲ್ಲಿ ೩೬, ಐಕ್ಯ ಸ್ಥಲದಲ್ಲಿ ೩೬ ಆಗುತ್ತವೆ. ಇವೆಲ್ಲವು ಕೂಡಿ ೨೧೬ ಆಗುತ್ತವೆ. ಆಗ ಎಲ್ಲ ಸ್ಥಲಗಳ ಪೂರ್ಣತೆಯು ಉಂಟಾಗುತ್ತದೆ. ಇದರಿಂದ ಮನುಷ್ಯನ ಸರ್ವಾವಯವಗಳಲ್ಲಿ, ಶಕ್ತಿಗಳಲ್ಲಿ, ಇಂದ್ರಿಯಗಳಲ್ಲಿ, ಎಲ್ಲ ಸ್ಥಲಗಳ ವಿಕಾಸವು ಉಂಟಾಗುತ್ತದೆ. ಇದೇ ಅವನ ಪೂರ್ಣತೆಯು.

ಕ್ರಿಯೆಯು ಮೊದಲು ಸ್ಥೂಲ, ಸೂಕ್ಷ್ಮ ಶರೀರಗಳಲ್ಲಿ ಬೇರೆ ಬೇರೆ ಸ್ವರೂಪದ್ದಾಗಿ ಗೋಚರವಾಗುತ್ತದೆ. ಆದರೆ ಕಡೆಗೆ ಈ ಕ್ರಿಯೆಯ ಪರಿಣಾಮಗಳು ಕಾರಣ ಶರೀರದಲ್ಲಿ ಒಡಮೂಡುತ್ತವೆ. ಆಗ ಕಾರಣ ಶರೀರವು ಈ ಅನುಭವಗಳನ್ನು ಕಾದಿಡುತ್ತದೆ. ಅದು ಅನುಭವಗಳನ್ನು

ಸಂಗ್ರಹಿಸುವ ಒಂದು ಕೊಟ್ಟಡಿ ಎಂದು ತಿಳಿಯಬೇಕು. ಜಗತ್ತಿ ಮನುಷ್ಯನು ಮಾಡುವ ಪ್ರತಿಯೊಂದು ಕಾರ್ಯದ ಪರಿಣಾಮವ ಕೊಟ್ಟಡಿಯಲ್ಲಿ ಸಂಗ್ರಹಿಸಲ್ಪಡುತ್ತದೆ. ಮತ್ತು ಹೀಗೆ ಸಂಗ್ರಹ ಅನುಭವವನ್ನು ಮನುಷ್ಯನು ತನಗೆ ಅವಶ್ಯ ಬಿದ್ದಾಗ್ಗೆ ಹೊರಪಡಿಸಿಕೊ ಅದನ್ನು ಉಪಯೋಗಿಸುತ್ತಾನೆ. ಆದ್ದರಿಂದ ಈ ಸಂಗ್ರಹವು ಯಾವಾ ಒಳ್ಳೇ ವಿಷಯಗಳಿಂದ ತುಂಬಿರಬೇಕು. ಇಂಥ ಸಂಗ್ರಹ ಮಾಡುವ ಯನ್ನು ಷಟ್‌ಸ್ಥಲ ಶಾಸ್ತ್ರವು ಹೇಳುತ್ತದೆ. ಈ ರೀತಿಯಂತೆ ನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳ ವ್ಯಾಪಾರಗಳು ಸರಾಗವಾಗಿ ಯುತ್ತವೆ.

ಹೀಗೆ ಸರಾಗವಾಗಿ ನಡೆದರೆ ಆರು ಸ್ಥಲಗಳ ಮೂಲಕ ಅನು ವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಮನುಷ್ಯನಲ್ಲಿ ಪ್ರ ವಾಗುತ್ತವೆ.

ಭಾವಲಿಂಗಕ್ಕೆ ಜ್ಞಾನಲಿಂಗ, ಸುಜ್ಞಾನಲಿಂಗ, ತೃಪ್ತಿಲಿಂಗ ಬೇರೆ ಹೆಸರುಗಳೂ ಉಂಟು.

ಕಾರಣ ಶರೀರದಲ್ಲಿ ಕ್ರಿಯಾದಿಗಳಿಲ್ಲ. ಈ ಕ್ರಿಯೆಗಳು ಸ್ಥೂ ಸೂಕ್ಷ್ಮ ಶರೀರಗಳಲ್ಲಿ ಮಾತ್ರ ಗೋಚರವಾಗುತ್ತವೆ. ಆದರೆ ಇವು ಪರಿಣಾಮಗಳು ಕಾರಣ ಶರೀರದಲ್ಲಿ ಮಾತ್ರ ಕಾದಿಡಲ್ಪಡುತ್ತವೆ. ಪರಿಣಾಮಗಳಿಗೆ ತೃಪ್ತಿಗಳೆಂತಲೂ ವಚನಕಾರರು ಹೇಳುತ್ತಾರೆ. ತೃಪ್ತಿರೂಪವಾದ ೨೧೬ ಸ್ಥಲಗಳ ವ್ಯಾಖ್ಯೆಗಳನ್ನು ಹೇಳಲಿಕ್ಕೆ ಬರಲಾ ಆದ್ದರಿಂದ ವಚನಕಾರರು ಅವುಗಳ ನಿರ್ದೇಶವನ್ನು ಮಾತ್ರ ತಮ್ಮ ವ ಗಳಲ್ಲಿ ಮಾಡುತ್ತಾರೆ. ಯಾಕಂದರೆ ಈ ೨೧೬ ಸ್ಥಲಗಳು ಅನುಭವ ಮಾತ್ರ ತಿಳಿಯತಕ್ಕವುಗಳು.

ಮನುಷ್ಯನು ಜಗತ್ತಿನಲ್ಲಿ ಪ್ರತಿಕ್ಷಣ ನಾನಾವಿಧ ಅಸಂಖ್ಯ ಪ ರ್ಥಗಳಿಗೆ ಸಂಬಂಧಪಡುತ್ತಾನೆ. ಅದರಂತೆ ಅವುಗಳ ಅವನ ಅನುಭವ ಅಸಂಖ್ಯಾತವಾಗಿರುತ್ತವೆ. ಅವೆಲ್ಲವೂ ಕಾರಣಶರೀರದಲ್ಲಿ ಒಡಮೂ ತ್ತವೆ. ಆದರೆ ಈ ಕ್ರಿಯೆಗಳೆಲ್ಲವು ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಸ್ಥೂ ಶರೀರದಲ್ಲಿ ೬ ವರ್ಗಗಳಲ್ಲಿ ಮಾತ್ರ ಬೀಳುತ್ತವೆ. ಮುಂದೆ ಇವುಗಳು ಸೂಕ್ಷ್ಮ



ಶರೀರದಲ್ಲಿ ೩೬ ವರ್ಗಗಳಲ್ಲಿ ಬೀಳುತ್ತವೆ. ಮತ್ತು ಕಾರಣ ಶರೀರದಲ್ಲಿ ೨೧೬ ವರ್ಗದಲ್ಲಿ ಬೀಳುತ್ತವೆ.

ಹೀಗೆ ಮನುಷ್ಯಪ್ರಾಣಿಯ ಕ್ರಿಯೆಗಳು ಮುಖ್ಯವಾಗಿ ಆರು ವಿಧವಾಗಿದ್ದರೂ ವ್ಯಕ್ತಿಯು ಸ್ವಭಾವತಃ ಒಂದೇ ಸ್ಥಲದ ಗುಣಗಳನ್ನು ವಿಶೇಷವಾಗಿ ಹೊಂದಿರುವುದು ಕಂಡುಬರುತ್ತದೆ. ಉದಾ:— ಒಬ್ಬನು ಭಕ್ತಸ್ಥಲದವನಿರಬಹುದು, ಇನ್ನೊಬ್ಬನು ಮಹೇಶ್ವರ ಸ್ಥಲದವನಿರಬಹುದು, ಮಗದೊಬ್ಬನು ಪ್ರಾಣಲಿಂಗಿ ಸ್ಥಲದವನಿರಬಹುದು. ಹೀಗಿರುವದು ಅವರವರ ಸ್ವಭಾವದ ಹುಟ್ಟುಗುಣ. ಆದರೂ ಅವರವರ ಸ್ವಭಾವದ ಪೂರ್ಣ ವಿಕಾಸವು ಉಳಿದ ಸ್ಥಲಗಳ ಪರಿಚಯದ ಮೇಲೆ ಅವಲಂಬಿಸುತ್ತದೆ. ಆದ್ದರಿಂದ ಭಕ್ತಸ್ಥಲದವನು ಶರಣಸ್ಥಲದ ಅರಿವನ್ನು ಹೊಂದಲೇಬೇಕು. ಅವನು ಭಕ್ತಸ್ಥಲದಲ್ಲಿಯೇ ಯಾವಾಗಲೂ ಉಳಿಯಬಾರದು. ಹಾಗೆಯೇ ಶರಣಸ್ಥಲಕ್ಕೆ ಸ್ವಾಭಾವಿಕವಾಗಿ ಒಲವುಳ್ಳವನು ಬೇರೊಬ್ಬನಿರಬಹುದು. ಆದರೆ ಅವನು ಅದೇ ಒಂದು ಸ್ಥಲದಲ್ಲಿಯೇ ಇರಕೂಡದು. ಅದು ಪ್ರಗತಿಯಲ್ಲ ಅವನು ಭಕ್ತಸ್ಥಲದಲ್ಲಿಯೂ ಕೂಡ ಇರಬೇಕು. ಈ ತರದ ಆಚರಣೆಯಿಂದಲೇ ಮನುಷ್ಯನ ಸ್ಥೂಲ. ಸೂಕ್ಷ್ಮ, ಕಾರಣ ಶರೀರಗಳೆಲ್ಲವು ಪೂರ್ಣತೆಯನ್ನು ಹೊಂದುತ್ತವೆ. ಈ ಪೂರ್ಣತೆಯು ೧, ೨, ೩, ೬, ೩೬ ಈ ಸ್ಥಲಗಳ ಆಚರಣೆಯಿಂದ ಉಂಟಾಗುತ್ತದೆ. ಇವುಗಳಲ್ಲಿ ಮೊದಲಿನ ೩ ತಾತ್ವಿಕವಾದವು. ಉಳಿದ ೨ ಕ್ರಿಯಾಯುಕ್ತವಾದವು. ಆದ್ದರಿಂದ ವಚನಕಾರರು ೬ ಮತ್ತು ೩೬ ಸ್ಥಲಗಳ ಮೂಲಕ ತಮ್ಮ ಶಾಸ್ತ್ರವನ್ನು ಬೋಧಿಸುತ್ತಾರೆ ಇವುಗಳಿಗೆ ಮುಂದಿನದಾದ ೨೧೬ ಸ್ಥಲಗಳ ಜ್ಞಾನವನ್ನು ಮನುಷ್ಯನು ತನ್ನ ಅನುಭವದಿಂದಲೇ ಹೊಂದಬೇಕು. ಆದ್ದರಿಂದ ಅವರು ಅವುಗಳನ್ನು ವಿವರಿಸಲಾರರು. ಯಾಕಂದರೆ ೩೬ ಸ್ಥಲಗಳ ಪೂರ್ಣ ಜ್ಞಾನ ಮತ್ತು ಕ್ರಿಯೆಗಳಿಂದ ೨೧೬ ಸ್ಥಲಗಳ ಅನುಭವವು ಅವನಿಗೆ ಸ್ವಾನುಭವದಿಂದ ಕೂಡಲೇ ಉಂಟಾಗುತ್ತದೆ.

೪೯. ಸರ್ವಾಂಗಲಿಂಗಿಸ್ಥಲ : ಇದು ಮನುಷ್ಯನ ಪರಿಪೂರ್ಣ ಸ್ಥಿತಿಯನ್ನು ತೋರಿಸುತ್ತದೆ. ಮನುಷ್ಯನು ಬೇರೆ ಬೇರೆ ಸ್ಥಲಗಳಲ್ಲಿದ್ದುಕೊಂಡು ತನ್ನ ಶಕ್ತಿಯನ್ನು ವಿಕಾಸಪಡಿಸತಕ್ಕದ್ದಷ್ಟೇ ? ಶಕ್ತಿಯ ವಿಕಾಸ

ಮಾಡುವುದೆಂದರೆ ಲಿಂಗದ ಗುಣಗಳನ್ನು ಬರಮಾಡಿಕೊಳ್ಳುವುದೇ ಇ
ತ್ತದೆ. ಈ ವಿಕಾಸವು ಅವನ ಮನ, ಇಂದ್ರಿಯ, ಪ್ರಾಣ, ಕರಣಗ
ಅರಿವು, ಚೈತನ್ಯ, ಇವುಗಳೆಲ್ಲೆಲ್ಲ ಉಂಟಾಗಬೇಕು. ಆಗ ಅವನಲ್ಲಿ ಲಿಂ
ಗುಣಗಳು ಉಂಟಾಗುತ್ತವೆ. ಇವು ಉಂಟಾದ ಕೂಡಲೆ ಅವನ ಕ್ರಿಯೆಗ
ಉಚ್ಚ ಸ್ಥಿತಿಯನ್ನು ಹೊಂದುತ್ತವೆ. ಆಗ ಅವನಿಗೆ ತಾನು, ಜಗತ್ತು
ಪರಮಾತ್ಮ, ಇವುಗಳಲ್ಲಿ ಆವ ತರದ ಭೇದಗಳೂ ಗೋಚರವಾಗುವುದಿ
ಜಗತ್ತೆಲ್ಲ ಲಿಂಗಮಯವಾಗಿ ತೋರಹತ್ತುತ್ತದೆ. ಈ ಸ್ಥಿತಿಯನ್ನು ಹೊಂ
ದಲ್ಲಿ ಅವನು ಜಗತ್ತಿನಲ್ಲಿ ಇದ್ದೂ ಇಲ್ಲದ ಹಾಗೆ ಇರುತ್ತಾನೆ. ಅವ
ನೀರಿನಲ್ಲಿರುವ ತಾವರೆಯಂತೆ, ಅಂದರೆ ನೀರಿನಲ್ಲಿ ಇದ್ದರೂ ಕೂಡ ತಾವ
ಆ ನೀರು ಹೇಗೆ ಅಂಟಿಕೊಳ್ಳುವುದಿಲ್ಲವೋ ಹಾಗೆ ಅವನು ಇರುವನು. ಈ
ಸ್ಥಿತಿಯು ಅವನಿಗೆ ಪ್ರಾಪ್ತವಾಗಲು ಅವನು ಸರ್ವಾಂಗಲಿಂಗಿಸ್ಥಲವನ್ನ
ಹೊಂದಿದವನೆಂದು ವಚನಕಾರರು ಹೇಳುವುದುಂಟು.

೯೦. **ಷಟ್‌ಸ್ಥಲಶಾಸ್ತ್ರ** : ವಚನಕಾರರು ಮನುಷ್ಯನ ಗು
ಗಳು, ಇಂದ್ರಿಯಗಳು, ಕ್ರಿಯೆ ಮೊದಲಾದವುಗಳೆಲ್ಲೆಲ್ಲ ಆರು ವಿಭಾಗ
ಳನ್ನು ಮಾಡುವುದುಂಟು. ಈ ಪ್ರಕಾರ ಮಾಡಿ ಅನುಕ್ರಮವಾಗಿ ಈ
ಗಳ ವಿಕಾಸವನ್ನು ಕುರಿತು ವಿವೇಚಿಸುತ್ತಾರೆ. ಹೀಗೆ ಮಾಡಿದ ವಿವೇ
ನೆಗೆ ಷಟ್‌ಸ್ಥಲ ಶಾಸ್ತ್ರವೆಂಬ ಹೆಸರು. ಈ ಶಾಸ್ತ್ರದಲ್ಲಿ ಆರು ವಿಭಾಗ
ಳಿವೆ. ಒಂದೊಂದು ವಿಭಾಗಕ್ಕೆ ಸ್ಥಲವೆಂಬ ಹೆಸರು. ಈ ಆರು ಸ್ಥಲ
ಳಿಗೆಲ್ಲ ಆರು ವಿಶಿಷ್ಟ ಹೆಸರುಗಳಿವೆ. ಅವು ಭಕ್ತ, ಮಾಹೇಶ್ವರ, ಪ್ರಸಾದಿ
ಪ್ರಾಣಲಿಂಗಿ, ಶರಣ, ಐಕ್ಯ ಎಂದು ಇರುತ್ತವೆ. ಇವೇ ಷಟ್‌ಸ್ಥಲಗಳೆಂ
ನಿಸಿಕೊಳ್ಳುತ್ತವೆ.

೯೧. **ನಿರಾಮಯ ಷಟ್‌ಸ್ಥಲ** : ಮನುಷ್ಯನು ಆರಂಭದ
ಮೇಲೆ ಸಂಖ್ಯೆ ೯೦ ಇದರಲ್ಲಿ ಹೇಳಿದ ಮೇರೆಗೆ ಆರು ಸ್ಥಲಗಳ ಜ್ಞಾನವನ್ನು
ಮಾಡಿಕೊಂಡು ಐಕ್ಯಸ್ಥಲವನ್ನು ಹೊಂದಬೇಕು. ಈ ಸ್ಥಲವನ್ನು ಹೊಂದಿ
ಬಳಿಕ ಅವನು ಶೂನ್ಯಸ್ಥಲವನ್ನು ಹೊಂದುವನು. ಈ ಶೂನ್ಯಸ್ಥಲದ
ಕೆಲವು ತರಗತಿಗಳಿವೆ. ಅವು ಮುಖ್ಯವಾಗಿ ಮೂರು ಇವೆ. ಅವುಗಳ
ಮೊದಲನೆಯದು ನಿರಾಮಯ ಎಂಬುದಿದೆ. ಇಲ್ಲಿ ಷಟ್‌ಸ್ಥಲಗಳು ನಿರಾ



ಮಯ ಸ್ವರೂಪವನ್ನು ಹೊಂದುತ್ತವೆ ಆದ್ದರಿಂದ ಅವುಗಳು ನಿರಾಮಯ ಷಟ್‌ಸ್ಥಲವೆಂದು ಹೇಳಲ್ಪಡುತ್ತವೆ.

೯೨. **ನಿರಂಜನ ಷಟ್‌ಸ್ಥಲ** : ನಿರಾಮಯವಾದ ಬಳಿಕ ನಿರಂಜನವೆಂಬುದಿದೆ. ಇಲ್ಲಿ ಷಟ್‌ಸ್ಥಲವು ನಿರಂಜನಷಟ್‌ಸ್ಥಲವೆಂದೆನಿಸಿಕೊಳ್ಳುತ್ತದೆ.

೯೩. **ನಿರಂಜನಾತೀತ ಷಟ್‌ಸ್ಥಲ** : ಯಾವ ಷಟ್‌ಸ್ಥಲವು ಮೇಲೆ ಹೇಳಿದ ನಿರಂಜನಕ್ಕತೀತವಾಗಿರುತ್ತದೆಯೋ ಅದೇ ನಿರಂಜನಾತೀತ ಷಟ್‌ಸ್ಥಲವೆಂದು ಹೇಳಲ್ಪಡುತ್ತದೆ.

ಇದರ ತರುವಾಯ ಬಯಲು ಅಥವಾ ನಿರವಯ ಎಂಬ ಸ್ಥಿತಿಯು ಪ್ರಾಪ್ತವಾಗುತ್ತದೆ. ನೀರು ನೀರು ಬೆರೆದಂತೆ ಮನುಷ್ಯನು ಪರಮಾತ್ಮನಲ್ಲಿ ಆಗ ಬೆರೆದುಹೋಗುತ್ತಾನೆ. ಅದೇ ಮನುಷ್ಯನ ಅಂತಿಮ ಸ್ಥಿತಿಯು.

೯೪ **ನಿವೃತ್ತಿ** : ಮನುಷ್ಯನಿಗೆ ಸಂಪೂರ್ಣ ವಿಕಾಸಾವಸ್ಥೆಯು ಪ್ರಾಪ್ತವಾದ ಬಳಿಕ ಅವನ ಗುಣಗಳು, ಶಕ್ತಿಗಳು, ಚೈತನ್ಯಗಳು ಇವೇ ಮೊದಲಾದವುಗಳು ಯಾವುದರಿಂದ ಪ್ರಕಟವಾಗಿರುತ್ತವೆಯೋ ಅವುಗಳಲ್ಲಿ ಲಯವಾಗುವುವು. ಲಯವಾಗುವ ಈ ಕ್ರಿಯೆಗೆ ನಿವೃತ್ತಿ ಎಂಬ ಹೆಸರು ಇದೆ ಮನುಷ್ಯನಲ್ಲಿ ಚಕ್ರಗಳು, ಶಕ್ತಿಗಳು, ತತ್ವಗಳು. ಭಕ್ತಿಗಳು, ಲಿಂಗಗಳು, ಅಂಗಗಳು, ಕಲೆಗಳು, ನಾದಗಳು, ಮಹಾಭೂತಗಳು, ಇವೇ ಮೊದಲಾದವುಗಳು ಇವೆ. ನಿವೃತ್ತಿಯಲ್ಲಿ ಇವೆಲ್ಲವೂ ಅಡಗಿಹೋಗುತ್ತವೆ. ಆಗ ಯಾವವು ಸ್ಥೂಲರೂಪವಾಗಿವೆಯೋ ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮ ರೂಪಗಳಲ್ಲಿ ಅಡಗುತ್ತ ಅಡಗುತ್ತ ಕಡೆಗೆ ಪರಮಾತ್ಮನಲ್ಲಿ ಲಯವಾಗಿ ಹೋಗುತ್ತವೆ. ಇದು ನಿವೃತ್ತಿ ಎಂದೆನಿಸಿಕೊಳ್ಳಲ್ಪಡುತ್ತದೆ. ಅಂತ್ಯದಲ್ಲಿ ಲಿಂಗಗಳು, ಅಂಗಗಳು, ಶಕ್ತಿಗಳು, ಕಲೆಗಳು, ಮಹಾಭೂತಗಳು, ಪ್ರಣವಗಳು, ಬ್ರಹ್ಮ-ವಿಷ್ಣು-ರುದ್ರ ಮೊದಲಾದ ಪಂಚ ಬ್ರಹ್ಮರುಗಳು ಇವುಗಳೆಲ್ಲವು ಸಹ ಕ್ರಮೇಣ ಶೂನ್ಯದಲ್ಲಿ ಲಯವಾಗುವುವು.

೯೫. **ಸಕೀಲಗಳು** : ಸ್ಥಲಗಳ ಸಂಬಂಧವನ್ನು ಯಾವುದರಿಂದ ತಿಳಿಯತಕ್ಕದ್ದೋ ಅದು ಸಕೀಲವೆನಿಸುವುದು. ಸಕೀಲಗಳು ಅನೇಕವಿವೆ. ಅವುಗಳ ಮೂಲಕ ಸ್ಥಲಗಳ ಸಂಬಂಧವನ್ನು ಅರಿತುಕೊಂಡು ಆಚರಿಸ

ಬೇಕು. ಹೇಗೆ ಎರಡು ವಸ್ತುಗಳನ್ನು ಕೂಡಿಸಲು ಒಂದು ಕೀಲವು
ಯಕಾರಿಯೋ ಹಾಗೆ ಈ ಸಕೀಲಗಳು ಸ್ಥಳಗಳ ಸಂಬಂಧವನ್ನು ಅರಿ
ಸಹಾಯಕಾರಿಗಳು. ಸಕೀಲಗಳು ಅನೇಕ ವಿಧವಾಗಿವೆ. ಅವುಗಳಲ್ಲಿ
ಧಸಕೀಲಗಳು, ಅಷ್ಟವಿಧ ಸಕೀಲಗಳು, ೧೦೮ ವಿಧ ಸಕೀಲಗಳು,
ಸಕೀಲಗಳು ಮಹತ್ವವಾದವುಗಳು. ಮನುಷ್ಯನಿಗೆ ಆರಂಭದ ದಿ
ಕೆಲವು ವಿಷಯಗಳ ಆವಶ್ಯಕತೆಯು ಇರುತ್ತದೆ. ಆಗ ಅವನಿಗೆ
ವಿಧ ಸಕೀಲಗಳು ಸಾಕು. ಮುಂದೆ ಅವನಿಗೆ ಎಂಟು ವಿಧ ಸಕೀ
ಬೇಕು. ಅವು ಚಕ್ರ, ಅಂಗ, ಲಿಂಗ, ಶಕ್ತಿ, ಹಸ್ತ, ಮುಖ, ಪದಾ
ಪ್ರಸಾದ ಇವುಗಳು ಬೇಕಾಗುತ್ತವೆ. ಅವುಗಳ ಅರ್ಥವನ್ನು ಅವನು
ದುಕೊಂಡು, ಅವುಗಳಿಗೆ ಯಾವ ಸ್ಥಳಗಳ ಸಂಬಂಧವಿರತಕ್ಕದ್ದೋ
ಳನ್ನು ಸಹ ಅರಿತುಕೊಂಡು ಹಾಗೆ ಆಚರಿಸಬೇಕು. ಮುಂದೆ ಅವ
ಪ್ರಗತಿಯುಂಟಾಗಲು ಪ್ರತಿಯೊಂದು ಸ್ಥಲಕ್ಕೆ ೧೮ರಂತೆ ಆರು ಸ್ಥಲ
ಒಟ್ಟು ೧೦೮ ವಿಷಯಗಳು ಬೇಕಾಗುವುವು. ಇವುಗಳ ಮರ್ಮ
ಅವನು ಅರಿಯಬೇಕು. ಇವು ಆಗ ಆಕೃತಿ, ಪ್ರಣವ, ಚಕ್ರ, ಅಂಗ,
ತತ್ವ, ಹಸ್ತ, ಲಿಂಗ, ಮುಖ, ಶಕ್ತಿ, ಭಕ್ತಿ ಪದಾರ್ಥ, ಪ್ರಸಾದ,
ಸಾದಾಖ್ಯ, ಲಕ್ಷಣ, ಸಂಜ್ಞೆ, ವೇದ ಇವುಗಳಿರುತ್ತವೆ. ಮುಂದೆ ಇ
ಟಷ್ಟೇ ಅಲ್ಲ ಹೆಚ್ಚಿನ ವಿಷಯಗಳ ಜ್ಞಾನವು ಬೇಕಾಗುತ್ತದೆ. ಇವು
ಪ್ರತಿಯೊಂದು ಸ್ಥಲಕ್ಕೆ ೩೬ರಂತೆ ಒಟ್ಟು ೨೧೬ ಆಗುವುವು ಈ
ರಲ್ಲಿ ಬೇರೆ ಕೆಲವರು ಇನ್ನೊಂದು ವಿಧ ವಿಚಾರಕ್ಕನುಸರಿಸಿ ೯ ತರಗತಿಗ
ಮಾಡುತ್ತಾರೆ. ಆಗ ಪ್ರತಿಯೊಂದಕ್ಕೆ ೨೪ ವಿಷಯಗಳನ್ನು ಸೂ
ಒಟ್ಟು ೨೧೬ ವಿಧ ಸಕೀಲಗಳನ್ನು ಮಾಡುವುದುಂಟು. ಈ ೨೧೬ ಸ
ಗಳು ಯೌಗಿಕ ಸ್ವರೂಪದವಿರುತ್ತವೆ. ಇವುಗಳ ೯ ಸ್ಥಲಗಳಲ್ಲಿ ೬
ಚಕ್ರಗಳು ಮತ್ತು ಅವುಗಳ ಮೇಲಿನ ೩ ಚಕ್ರಗಳು ಹೀಗೆ ೯ ಚಕ್ರಗ
ಭಾವಿಸಿ ಅವುಗಳಿಗನುಸಾರವಾಗಿ ೯ ಸ್ಥಲಗಳನ್ನು ಮಾಡುತ್ತಾರೆ.
ಸಕೀಲಗಳಿದ್ದು ಅವುಗಳ ಜ್ಞಾನವನ್ನು ಭಕ್ತನು ಮಾಡಿಕೊಂಡು ವ
ತಕ್ಕದ್ದು. ಇದು ಸಕೀಲ ಜ್ಞಾನವು.



೯೬. ಏಕೋತ್ತರ ಶತಸ್ಥಲ : ಇವು ೧೦೧ ಸ್ಥಲಗಳಿರುತ್ತವೆ. ಇವುಗಳಲ್ಲಿ ಅಂಗಸ್ಥಲಗಳು ೪೪ ಮತ್ತು ಲಿಂಗಸ್ಥಲಗಳು ೫೭ ಹೀಗೆ ೧೦೧ ಇವೆ. ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿ ಆಚರಿಸಬೇಕೆಂಬುದರ ವಿವರಣೆ ಇರುತ್ತದೆ. ಲಿಂಗಸ್ಥಲಗಳಲ್ಲಿ ಈ ಆಚರಣೆಗಳಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುವವೆಂಬದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡು ಮಾಡಿದ ವಿವರಣೆಗಳಿರುತ್ತವೆ.

ಅಂಗಸ್ಥಲಗಳಲ್ಲಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಆರು ಮುಖ್ಯ ವಿಭಾಗಗಳಿರುತ್ತವೆ. ಈ ಪ್ರತಿಯೊಂದರಲ್ಲಿಯೂ ಪುನಃ ಬೇರೆ ಬೇರೆ ವಿಭಾಗಗಳಿದ್ದು, ಅವುಗಳಿಗನುಸಾರವಾಗಿ ಸ್ಥಲಗಳು ವಿವೇಚಿಸಲ್ಪಟ್ಟಿರುತ್ತವೆ. ಈ ಪ್ರಕಾರ ಭಕ್ತ ಸ್ಥಲದಲ್ಲಿ ೧೫, ಮಹೇಶ್ವರ ಸ್ಥಲದಲ್ಲಿ ೯, ಪ್ರಸಾದಿ ಸ್ಥಲದಲ್ಲಿ ೭, ಪ್ರಾಣಲಿಂಗಿ ಸ್ಥಲದಲ್ಲಿ ೫, ಶರಣ ಸ್ಥಲದಲ್ಲಿ ೪ ಐಕ್ಯ ಸ್ಥಲದಲ್ಲಿ ೪ ಹೀಗೆ ಒಟ್ಟು ೪೪ ಸ್ಥಲಗಳಿವೆ.

ಲಿಂಗಸ್ಥಲಗಳಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಮುಖ್ಯ ಆರು ವಿಭಾಗಗಳಿವೆ. ಈ ಪ್ರತಿಯೊಂದರಲ್ಲಿಯೂ ಬೇರೆ ಬೇರೆ ವಿಭಾಗಗಳಿವೆ. ಅವು ಆವವೆಂದರೆ, ಆಚಾರಲಿಂಗದಲ್ಲಿ ೯, ಗುರುಲಿಂಗದಲ್ಲಿ ೯, ಶಿವಲಿಂಗದಲ್ಲಿ ೯, ಜಂಗಮಲಿಂಗದಲ್ಲಿ ೧೨, ಪ್ರಸಾದಲಿಂಗದಲ್ಲಿ ೯, ಮಹಾಲಿಂಗದಲ್ಲಿ ೯ ಹೀಗೆ ೫೭ ಸ್ಥಲಗಳು ಹೇಳಲ್ಪಡುತ್ತವೆ.

ಇವುಗಳ ವ್ಯಾಖ್ಯೆಗಳು ಕೆಳಗೆ ಕೊಡಲ್ಪಟ್ಟಿವೆ. ಆದರೆ ಹಿಂದೆ ವಿವರಿಲ್ಪಟ್ಟ ವಿಷಯಗಳ ವ್ಯಾಖ್ಯೆಗಳು ಕೊಡಲ್ಪಟ್ಟಿಲ್ಲ.

೯೭. ಏಕೋತ್ತರ ಭಕ್ತಸ್ಥಲ : ಇವು ೧೫ ಇವೆ. ಅವು ಯಾವುವೆಂದರೆ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಲಿಂಗಧಾರಣಸ್ಥಲ, ವಿಭೂತಿಸ್ಥಲ, ರುದ್ರಾಕ್ಷಿಸ್ಥಲ, ಪಂಚಾಕ್ಷರಿ ಸ್ಥಲ, ಭಕ್ತಿಸ್ಥಲ, ಉಭಯಸ್ಥಲ, ತ್ರಿವಿಧ ಸಂಪತ್ತು ಸ್ಥಲ, ಚತುರ್ವಿಧ ಸಾರಾಯ ಸ್ಥಲ, ಎಂದಿರುತ್ತವೆ.

(ಅ) ಪಿಂಡಸ್ಥಲ : ಬೀಜದೊಳಗಿನ ವೃಕ್ಷದಂತೆ ನಿರಾಕಾರದಲ್ಲಿದ್ದುಕೊಂಡು ಪ್ರಕಟವಾಗದೆ ಇರುವ ಸ್ಥಿತಿಯು ಪಿಂಡಸ್ಥಲವು.

(ಆ) **ಪಿಂಡಜ್ಞಾನಸ್ಥಲ :** ನಿರಾಕಾರದಲ್ಲಿ ಪ್ರಕಟಗೊಳ್ಳದ ವಾಗ್ಗೆ, ಮನುಷ್ಯನಲ್ಲಿ ತಾನು ತೋರಬೇಕೆಂಬ ಜ್ಞಾನವು ಪಿಂಡದಲ್ಲಿ ಉ ಗಲು ಅದು ಪಿಂಡಜ್ಞಾನಸ್ಥಲವು.

(ಇ) **ಉಭಯಸ್ಥಲ :** ಮನುಷ್ಯನಿಗೆ ದೇಹ ಪ್ರಾಣಗಳ ಇವೆ. ಈ ಎರಡರಲ್ಲಿ ಅನುಕ್ರಮವಾಗಿ ಲಿಂಗ, ಜಂಗಮಗಳನ್ನು ಸ ಸುವುದು ಉಭಯಸ್ಥಲ. ಲಿಂಗಸಂಬಂಧವು ಆಚಾರದ ಮೂಲಕ ವ ಜಂಗಮ ಸಂಬಂಧವು ಅನುಭಾವದ ಮೂಲಕ ಉಂಟಾಗುವುವು.

(ಈ) **ತ್ರಿವಿಧ ಸಂಪತ್ತು ಸ್ಥಲ :** ತನುವಿನಲ್ಲಿ ಗುರು, ಪ್ರಾಣ ಲಿಂಗ, ಅರಿವಿನಲ್ಲಿ ಜಂಗಮ, ಹೀಗೆ ಸಂಬಂಧಿಸುವುದು ತ್ರಿವಿಧ ಸಂ ಸ್ಥಲ.

(ಉ) **ಚತುರ್ವಿಧ ಸಾರಾಯ ಸ್ಥಲ :** ಗುರು, ಲಿಂಗ, ಜಂಗ ಪ್ರಸಾದ ಇವು ನಾಲ್ಕು ಸಂಬಂಧಿಸಿದ್ದೇ ಚತುರ್ವಿಧಸಾರಾಯಸ್ಥ ಅಂಗದಲ್ಲಿ ಗುರುಭಕ್ತಿ, ಮನದಲ್ಲಿ ಲಿಂಗಭಕ್ತಿ, ಅರಿವಿನಲ್ಲಿ ಜಂಗಮ ಪರಿಣಾಮದಲ್ಲಿ ಪ್ರಸಾದ ಭಕ್ತಿ ಇವುಗಳು ಇರತಕ್ಕದ್ದು.

(ಊ) **ಉಪಾಧಿ ಮಾಟಸ್ಥಲ :** ಸಕಲರ ಹಿತಕ್ಕಾಗಿ ಮಾ ಉಪಾಧಿಮಾಟಸ್ಥಲವು.

(ಎ) **ನಿರುಪಾಧಿ ಮಾಟಸ್ಥಲ :** ಯಾವ ಬಗೆಯ ಉದ್ದೇಶ ಕೇವಲ ದಾಸೋಹಭಾವದಿಂದ ಮಾಡುವದು ನಿರುಪಾಧಿ ಮಾಟಸ್ಥಲವು.

(ಐ) **ಸಹಜ ಮಾಟಸ್ಥಲ :** ಸಾಮರಸ್ಯಭಾವದಿಂದ ಮಾ ವುದು ಸಹಜ ಮಾಟಸ್ಥಲವು. ಇಲ್ಲಿ ತಾನು, ತಾನು ಮಾಡುವ ಕ್ರಿ ಮತ್ತು ಮಾಡಿಸಿಕೊಂಬ ವಸ್ತು, ಇವುಗಳಲ್ಲೆಲ್ಲ ಸಾಮರಸ್ಯ ಭಾ ಉಂಟಾಗಬೇಕು.

೯೮. **ಏಕೋತ್ತರ ಮಹೇಶ ಸ್ಥಲ :** ಇವು ೯ ಇವೆ. ಅ ಯಾವುವೆಂದರೆ, ಮಹೇಶ್ವರ ಸ್ಥಲ, ಲಿಂಗ ನಿಷ್ಠಾಸ್ಥಲ, ಪೂರ್ವಾಶ್ರ ನಿರಸನ ಸ್ಥಲ, ವಾಗದ್ವೈತ ನಿರಸನಸ್ಥಲ, ಆಹ್ವಾನ ನಿರಸನಸ್ಥಲ, ಅ ತನುಮೂರ್ತಿ ನಿರಸನಸ್ಥಲ, ಸರ್ವಗತ ನಿರಸನಸ್ಥಲ, ಶಿವಜಗನ್ಮಯ ಸ್ಥ ಭಕ್ತದೇಹಿಕಲಿಂಗಸ್ಥಲ, ಎಂದಿರುತ್ತವೆ.

(ಅ) **ಪೂರ್ವಾಶ್ರಯ ನಿರಸನಸ್ಥಲ :** ಲಿಂಗಧಾರಣವಾದ ಬ



ಲಿಂಗಿಗಳಲ್ಲಿ ಜಾತಿಭೇದವನ್ನು ಎಣಿಸದಿರುವುದು ಪೂರ್ವಾಶ್ರಯ ನಿರಸನ ಸ್ಥಲ.

(ಆ) **ವಾಗದ್ವೈತನಿರಸನಸ್ಥಲ :** ವ್ಯವಹಾರದಲ್ಲಿ ಅದ್ವೈತ ಭಾವದಿಂದ ಆಚರಿಸದೆ ಇರುವುದು ವಾಗದ್ವೈತ ನಿರಸನಸ್ಥಲವು. ಕಾರ್ಯಗಳಲ್ಲಿ ದ್ವೈತವಿದೆ. ದ್ವೈತವಿದ್ದರೂ ಕೂಡ ಸಮರಸಾಚರಣೆಯುಳ್ಳದ್ದು.

(ಇ) **ಆಹ್ವಾನ ನಿರಸನಸ್ಥಲ :** ಲಿಂಗಾಂಗಿಗಳು ಸಮರಸಾಚಾರವುಳ್ಳವರು. ಆದ್ದರಿಂದ ಅವರ ಕ್ರಿಯೆಗಳಲ್ಲಿ ಆಹ್ವಾನ ವಿಸರ್ಜನೆಗಳಿಲ್ಲ. ಇದು ಆಹ್ವಾನ ನಿರಸನಸ್ಥಲ.

(ಈ) **ಅಷ್ಟತನುಮೂರ್ತಿನಿರಸನಸ್ಥಲ :** ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ ಇವು ಅಷ್ಟ ತನುಮೂರ್ತಿಗಳು. ಇವುಗಳಲ್ಲಿ ಆರನ್ನೂ ದೇವರೆಂದು ಪೂಜಿಸದೆ ಇರುವುದು ಅಷ್ಟ ತನುಮೂರ್ತಿನಿರಸನಸ್ಥಲ.

(ಉ) **ಸರ್ವಗತ ನಿರಸನಸ್ಥಲ :** ದೃಶ್ಯವಾಗಿರುವ ಜಗತ್ತು ಪರಮಾತ್ಮನಲ್ಲವೆಂದು ತಿಳಿಯುವುದು ಸರ್ವಗತ ನಿರಸನಸ್ಥಲ.

(ಊ) **ಶಿವಜಗನ್ಮಯಸ್ಥಲ :** ಪರಮಾತ್ಮನು ವಿಶ್ವವ್ಯಾಪಿಯೆಂದು ತಿಳಿಯುವುದು ಶಿವಜಗನ್ಮಯ ಸ್ಥಲ.

(ಎ) **ಭಕ್ತದೇಹಿಕ ಲಿಂಗಸ್ಥಲ :** ಪರಮಾತ್ಮನು ಒಳ್ಳೆಯದರಲ್ಲಿ ಇರುತ್ತಾನೆಂದು ಭಾವಿಸಿ ವರ್ತಿಸುವುದು ಭಕ್ತದೇಹಿಕ ಲಿಂಗಸ್ಥಲ.

೯೯. **ಏಕೋತ್ತರ ಪ್ರಸಾದಿ ಸ್ಥಲ :** ಇವು ಆರು ಇವೆ. ಅವು ಯಾವುವೆಂದರೆ — ಗುರು ಮಹಾತ್ಮೆ ಸ್ಥಲ, ಲಿಂಗ ಮಹಾತ್ಮೆ ಸ್ಥಲ, ಜಂಗಮ ಮಹಾತ್ಮೆ ಸ್ಥಲ, ಭಕ್ತ ಮಹಾತ್ಮೆ ಸ್ಥಲ, ಶರಣ ಮಹಾತ್ಮೆ ಸ್ಥಲ, ಪ್ರಸಾದ ಮಹಾತ್ಮೆ ಸ್ಥಲ ಎಂದು ಇವೆ. ಆಚರಣೆ, ಮನಸ್ಸು, ಅರಿವು ಇವುಗಳಲ್ಲಿ ಶುದ್ಧತೆಯನ್ನುಂಟುಮಾಡಿಕೊಳ್ಳುವುದು ಮತ್ತು ಸದ್ವರ್ತನೆಯಿಂದ ಪರಮಾನಂದದಲ್ಲಿದ್ದು ಅರ್ಪಣ ಭಾವಯುಕ್ತನಾಗಿ ಆಚರಿಸುವುದು ಈ ಸ್ಥಲದ ಮತ್ತು ಅದರ ಉಪಭಾಗಗಳ ಲಕ್ಷಣಗಳು.

೧೦೦. ಏಕೋತ್ತರ ಪ್ರಾಣಲಿಂಗಿ ಸ್ಥಲ : ಇವು ೫ ಇವೆ. ಅವು ಯಾವುವೆಂದರೆ, ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಾರ್ಚನೆಯ ಸ್ಥಲ, ಶಿವ ಯೋಗ ಸಮಾಧಿಸ್ಥಲ, ಲಿಂಗನಿಜಸ್ಥಲ ಮತ್ತು ಅಂಗಲಿಂಗಸ್ಥಲಗಳು ಇರುತ್ತವೆ.

(ಅ) ಲಿಂಗನಿಜಸ್ಥಲ : ಮನಸ್ಸಿನಲ್ಲಿ ಲಿಂಗವು ದೃಢಪಡಲು ಅದು ಮನೋಮೂರ್ತಿಯಾಗಿ ನಿಲ್ಲುವುದು. ಅದೇ ಲಿಂಗನಿಜಸ್ಥಲ.

(ಆ) ಅಂಗಲಿಂಗಸ್ಥಲ : ಲಿಂಗವು ಮನುಷ್ಯನಲ್ಲಿ ನೆಲೆಗೊಳ್ಳಲು ಅವನ ಸರ್ವಾಂಗವು ಮತ್ತು ಅವನ ಕರಣಗಳು ಲಿಂಗಮಯವಾಗುವುವು. ಇದು ಅಂಗಲಿಂಗಸ್ಥಲವು. ಇಲ್ಲಿ ಅತ್ಯಂತವಾದ ಪಾರಮಾರ್ಥಿಕ ಆನಂದವಿದೆ.

೧೦೧. ಏಕೋತ್ತರ ಶರಣಸ್ಥಲ : ಇವು ನಾಲ್ಕು ಇವೆ. ಅವು ಯಾವುವೆಂದರೆ— ಶರಣಸ್ಥಲ, ತಾಮಸನಿರಸನಸ್ಥಲ, ನಿರ್ದೇಶಸ್ಥಲ, ಶೀಲಸಂಪಾದನೆಯ ಸ್ಥಲ.

(ಅ) ತಾಮಸ ನಿರಸನಸ್ಥಲ : ತಾಮಸಭಾವದಿಂದಲೂ ಅಹಂಕಾರ ದಿಂದಲೂ ವರ್ಜಿಸಥೆ ಇರುವುದು ತಾಮಸನಿರಸನಸ್ಥಲ.

(ಆ) ನಿರ್ದೇಶ ಸ್ಥಲ : ನಿಜವನರಿದು ಸಂಶಯ ರಹಿತನಾಗಿ, ಸುಜ್ಞಾನಿಯಾಗಿ ವರ್ತಿಸುವುದು ನಿರ್ದೇಶಸ್ಥಲ.

(ಇ) ಶೀಲಸಂಪಾದನೆಯ ಸ್ಥಲ : ಆಚಾರದ ಅತಿರೇಕಗಳಿಗೆ ಒಳ ಗಾಗದೆ ಲಿಂಗಾಂಗಿಗಳಿಗೆ ಯೋಗ್ಯವಾದ ಆಚಾರಗಳನ್ನು ಅನುವರ್ತಿಸುವುದು ಶೀಲಸಂಪಾದನೆಯ ಸ್ಥಲ.

೧೦೨. ಏಕೋತ್ತರ ಐಕ್ಯಸ್ಥಲ : ಇವು ನಾಲ್ಕು ಇರುತ್ತವೆ. ಅವು ಐಕ್ಯಸ್ಥಲ, ಸರ್ವಾಚಾರ ಸಂಪತ್ತುಸ್ಥಲ, ಏಕಭಾಜನಸ್ಥಲ ಮತ್ತು ಸಹ ಭೋಜನ ಸ್ಥಲ, ಎಂದು ಇವೆ.

(ಅ) ಏಕಭಾಜನ ಸ್ಥಲ : ಲಿಂಗವೂ ತಾನೂ ಕೂಡಿಕೊಂಡು ಸಾಮರಸ್ಯತ್ವದಿಂದ ಆಚರಿಸುವುದು ಏಕಭಾಜನ ಸ್ಥಲವು.

(ಆ) ಸಹಭೋಜನ ಸ್ಥಲ : ಪರಮಾತ್ಮನಿಗೆ ತಾನು ಭೋಗಿಸುವ ದನ್ನೆಲ್ಲ ಅರ್ಪಿಸಿ ಸಮಭೋಗಿಯಾಗಿರುವುದು ಸಹಭೋಜನಸ್ಥಲ.



೧೦೩. ಏಕೋತ್ತರ ಆಚಾರಲಿಂಗಸ್ಥಲ : ಇದರಲ್ಲಿ ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಎಂಬ ಮೂರು ವಿಭೇದಗಳಿವೆ. ಗುರುಲಿಂಗದಲ್ಲಿ ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು; ಶಿವಲಿಂಗದಲ್ಲಿ ಕ್ರಿಯಾ ಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು; ಮತ್ತು ಜಂಗಮಲಿಂಗದಲ್ಲಿ ಸ್ವಯ, ಚರ, ಪರ ಎಂದು ಹೀಗೆ ಒಟ್ಟು ೯ ವಿಭಾಗಗಳಿವೆ.

(ಅ) ಗುರುಲಿಂಗ ತ್ರಿವಿಧ : ಇವು ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು ಎಂದು ಇವೆ. ದೀಕ್ಷೆಯಿಂದ ಉಪದೇಶವನ್ನು ಹೊಂದಿದಲ್ಲಿ ದೀಕ್ಷಾಗುರುವು. ಉಪದೇಶಕ್ಕೆ ಅನುಗುಣವಾಗಿ ಬೋಧೆಯನ್ನು ಅಭ್ಯಾಸಿ ಸಲು ಶಿಕ್ಷಾಗುರುವು. ಮುಂದೆ ಅದನ್ನು ಮನನಮಾಡಿಕೊಂಡಲ್ಲಿ ಜ್ಞಾನ ಗುರುವು.

(ಆ) ಶಿವಲಿಂಗತ್ರಿವಿಧ : ಇವು ಕ್ರಿಯಾಲಿಂಗ, ಭಾವಲಿಂಗ, ಜ್ಞಾನಲಿಂಗ ಎಂದು ಇವೆ. ಬಾಹ್ಯದಲ್ಲಿ ಮಾಡುವ ಸತ್‌ಕೃತ್ಯಗಳು ಕ್ರಿಯಾ ಲಿಂಗ. ಅವು ಮುಂದೆ ಭಾವಭರಿತವಾದಲ್ಲಿ ಭಾವಲಿಂಗ. ಭಾವಭರಿತನಾಗಿ ಜ್ಞಾನವಳವಡಲು ಜ್ಞಾನಲಿಂಗ.

(ಇ) ಜಂಗಮಲಿಂಗ ತ್ರಿವಿಧ : ಇವು ಸ್ವಯ, ಚರ, ಪರ ಎಂದು ಇವೆ. ಕ್ರಿಯೆಗಳ ಪರಿಣಾಮಗಳು ತನ್ನಲ್ಲಿ ನಿಶ್ಚಲವಾಗಿ ಉಳಿದರೆ ಸ್ವಯವು. ಅವು ಭಕ್ತಿ ಕಾರಣವಾಗಿ ಜಗತ್ತಿನಲ್ಲಿ ಜನಹಿತಕ್ಕೋಸ್ಕರ ಉಪಯೋಗಿಸ ಲ್ಪಟ್ಟಲ್ಲಿ ಚರವು. ಹೀಗೆ ವ್ಯವಹರಿಸಿ ಚಿದಾತ್ಮನಲ್ಲಿ ಬೆರೆದಲ್ಲಿ ಅದು ಪರವು. ಇದು ಜಂಗಮದ ಉತ್ಕೃಷ್ಟ ಸ್ಥಿತಿಯು.

ಗುರುಲಿಂಗ, ಶಿವಲಿಂಗ, ಜಂಗಮಲಿಂಗಗಳನ್ನು ಹೀಗೆ ಸಾಧಿಸಿದಲ್ಲಿ ಅವೆಲ್ಲವೂ ಆಚಾರಲಿಂಗದಲ್ಲಿ ಅಡಗುವುವು ಇವು ಆಚಾರಲಿಂಗದ ಪೂರ್ಣ ತೆಯು.

೧೦೪. ಏಕೋತ್ತರ ಗುರುಲಿಂಗಸ್ಥಲ : ಇದರಲ್ಲಿ ಆಗಮಲಿಂಗ, ಕಾಯಲಿಂಗ, ಆಚಾರಲಿಂಗ ಎಂಬ ಮೂರು ಭಾಗಗಳಿವೆ. ಆಗಮಲಿಂಗದಲ್ಲಿ ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಮೂರು ವಿಭಾಗಗಳಿವೆ. ಕಾಯಲಿಂಗದಲ್ಲಿ ಸಕಾಯ; ಅಕಾಯ; ಪರಕಾಯವೆಂಬ ಮೂರು ವಿಭಾಗಗ

ಳಿವೆ ಆಚಾರಲಿಂಗದಲ್ಲಿ ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ ಎಂದು ವಿಭೇದಗಳಿವೆ. ಹೀಗೆ ಇಲ್ಲಿ ಒಟ್ಟು ೯ ಮುಖ್ಯ ಭಾಗಗಳಿವೆ.

(ಅ) **ಆಗಮಲಿಂಗ ತ್ರಿವಿಧ** : ಇವು ಕ್ರಿಯಾಗಮ, ಭಾವಾಗಮ, ಜ್ಞಾನಾಗಮ ಎಂದು ಇವೆ. ಸತ್‌ಕ್ರಿಯೆಯೇ ಕ್ರಿಯಾಗಮವು. ಸತ್‌ಕ್ರಿಯೆಯಲ್ಲಿ ನಿಷ್ಠೆ ನಿಬ್ಬೆರಿಸಿದರೆ, ಅದು ಭಾವಾಗಮವು. ಲಿಂಗದ ಮಹಾ ಜ್ಞಾನದ ಪ್ರಕಾಶದಲ್ಲಿ ಆಚರಿಸುವುದೇ ಜ್ಞಾನಾಗಮವು.

(ಬ) **ಕಾಯಲಿಂಗ ತ್ರಿವಿಧ** : ಇವು ಸಕಾಯ, ಅಕಾಯ, ಪರ ಕಾಯವೆಂದು ಇವೆ. ಸ್ಥೂಲಕ್ರಿಯೆಗಳನ್ನು ಲಿಂಗದೊಡನೆ ಬೆರಿಸಿ ವರ್ತಿಸಿದಲ್ಲಿ ಸಕಾಯವು. ಇಂಥ ಲಿಂಗ ಕಾಯದಿಂದ ನಿರ್ದೇಹ ಸ್ಥಿತಿಯುಂಟಾಗಲು ಅದು ಅಕಾಯವು. ದೇಹದ ನಿರ್ದೇಹ ಸ್ಥಿತಿಯನ್ನು ಸಹ ದಾಟಿದಲ್ಲಿ ಅವನು ಸಕಾಯನೂ ಅಲ್ಲ. ಅಕಾಯನೂ ಅಲ್ಲ. ಅವನು ಪರ ಕಾಯನು.

(ಕ) **ಆಚಾರಲಿಂಗ ತ್ರಿವಿಧ** : ಇವು ಧರ್ಮಾಚಾರ, ಭಾವಾಚಾರ, ಜ್ಞಾನಾಚಾರ ಎಂದು ಇವೆ. ನೀತಿಯಂತೆ ನಡೆಯುವುದು ಧರ್ಮಾಚಾರವು. ನೀತಿಯು ಮನಸ್ಸಿನಲ್ಲಿ ದೃಢಪಟ್ಟಲ್ಲಿ ಭಾವಾಚಾರವು. ಹೀಗೆ ದೃಢಪಟ್ಟು ಮಹಾಜ್ಞಾನದಲ್ಲಿ ವರ್ತಿಸಿದ್ದಾದರೆ ಜ್ಞಾನಾಚಾರವು. ಇವು ಗುರುಲಿಂಗದ ಆಚಾರಲಿಂಗದಲ್ಲಿಯ ಮೂರು ತರಗಳು.

ಹೀಗೆ ಆಗಮಲಿಂಗ, ಕಾಯಲಿಂಗ, ಆಚಾರಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವೆಲ್ಲವೂ ಗುರುಲಿಂಗದಲ್ಲಿ ಅಡಗುವುವು. ಇದು ಗುರುಲಿಂಗದ ಪೂರ್ಣತೆಯು.

**೧೦೫. ಏಕೋತ್ತರ ಶಿವಲಿಂಗಸ್ಥಲ** : ಇದರಲ್ಲಿ ಅನುಗ್ರಹ ಲಿಂಗ, ಅರ್ಪಿತಲಿಂಗ ಮತ್ತು ತನುಗುಣಲಿಂಗ ಎಂದು ಮೂರು ಮುಖ್ಯ ವಿಭಾಗಗಳಿವೆ. ಇವುಗಳಲ್ಲಿ ಅನುಗ್ರಹ ಲಿಂಗದಲ್ಲಿ ಕಾಯಾನುಗ್ರಹ, ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂತಲೂ; ಅರ್ಪಿತ ಲಿಂಗದಲ್ಲಿ ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳೆಂತಲೂ; ತನುಗುಣಲಿಂಗದಲ್ಲಿ ಶಿಷ್ಯ, ಶೂಶ್ರೂಷಾ, ಸೇವ್ಯ ಎಂತಲೂ ಹೀಗೆ ಒಟ್ಟು ೯ ವಿಭಾಗಗಳಿವೆ.



(ಅ) **ಅನುಗ್ರಹಲಿಂಗ ತ್ರಿವಿಧ** : ಇವು ಕಾಯಾನುಗ್ರಹ. ಇಂದ್ರಿಯಾನುಗ್ರಹ, ಪ್ರಾಣಾನುಗ್ರಹ ಎಂದು ಇವೆ. ಅನುಗ್ರಹವು ಕಾಯವನ್ನು ಲಿಂಗಕ್ಕೆ ಅರ್ಪಿಸುವುದು. ಇಲ್ಲಿ ಅಂಗ ವಿಕಾರಗಳು ದೂರಾಗುವವು. ಇಂದ್ರಿಯಗಳನ್ನು ಲಿಂಗಕ್ಕೆ ಅರ್ಪಿಸುವುದು ಇಂದ್ರಿಯಾನುಗ್ರಹವು. ಇದರಿಂದ ಲಿಂಗ ಚೈತನ್ಯವು ಒದಗುವುದು. ಅಂಗವನ್ನು ಪ್ರಾಣಕ್ಕೆ ಸಂಬಂಧಿಸುವುದು ಪ್ರಾಣಾನುಗ್ರಹವು. ಇದರಿಂದ ಬಾಹ್ಯಾಭ್ಯಂತರವೆಲ್ಲ ಲಿಂಗಮಯವಾಗುವುದು.

(ಬ) **ಅರ್ಪಿತಲಿಂಗ ತ್ರಿವಿಧ** : ಇವು ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತಗಳಾಗಿರುವುವು. ಕಾಯದಲ್ಲಿ ಅರ್ಪಿತವಾದುದು ಕಾಯಾರ್ಪಿತವು. ಅಂತರ್ಮುಖದಲ್ಲಿ ಅಂದರೆ ಕರಣಗಳ ಮೂಲಕ ಅರ್ಪಿತವಾದುದು ಕರಣಾರ್ಪಿತವು. ಭಾವದಲ್ಲಿ ಅರ್ಪಿತವಾದುದು ಭಾವಾರ್ಪಿತವು. ಇದು ಇದ್ದೂ ಇಲ್ಲದಂಥ ಸ್ಥಿತಿಯು.

(ಕ) **ತನುಗುಣಲಿಂಗ ತ್ರಿವಿಧ**: ಇವು ಶಿಷ್ಯ, ಶುಶ್ರೂಷಾ, ಸೇವ್ಯ ಎಂದು ಇವೆ. ಗುರುವಿನಲ್ಲಿ ಶಿಷ್ಯತ್ವವನ್ನು ಅಂಗೀಕರಿಸುವುದು ಶಿಷ್ಯವು ಅವನ ಶುಶ್ರೂಷೆಯಲ್ಲಿದ್ದು ಲಿಂಗತ್ವವನ್ನು ದೃಢಪಡಿಸುವುದು ಶುಶ್ರೂಷೆಯು. ಶಿಷ್ಯ ಮತ್ತು ಗುರು ಇವರ ಏಕರೂಪತೆಯ ಅಥವಾ ಸಾಮರಸ್ಯವು ಸೇವ್ಯವು. ಆಗ ಶಿಷ್ಯನು ಗುರುವಿನಲ್ಲಿ, ಗುರುವು ಶಿಷ್ಯನಲ್ಲಿ ಬೆರೆಯುವರು.

ಹೀಗೆ ಅನುಗ್ರಹಲಿಂಗ, ಅರ್ಪಿತಲಿಂಗ, ಮತ್ತು ತನುಗುಣಲಿಂಗ ಇವುಗಳನ್ನು ಸಾಧಿಸಿದಲ್ಲಿ ಅವಲ್ಲವೂ ಶಿವಲಿಂಗದಲ್ಲಿ ಅಡಗುವುವು. ಈ ಸ್ಥಿತಿಯು ಶಿವಲಿಂಗದ ಪೂರ್ಣತೆಯು.

**೧೦೬. ಏಕೋತ್ತರ ಜಂಗಮಲಿಂಗಸ್ಥಲ** : ಇದರಲ್ಲಿ ಚಲವು ಲಿಂಗ, ನಿರೂಪಲಿಂಗ, ಪ್ರಸಾದಲಿಂಗ ಮತ್ತು ಪಾದೋದಕಲಿಂಗ ಎಂದು ನಾಲ್ಕು ವಿಭಾಗಗಳಿವೆ. ಇವುಗಳಲ್ಲಿ ವೀರಶೈವರಲ್ಲಿ ಅತಿ ಮಹತ್ವದ ಆಚಾರಗಳಾದ ಪ್ರಸಾದ ಮತ್ತು ಪಾದೋದಕ ವಿಚಾರಗಳು ಬರುತ್ತವೆ. ಚಲವು ಲಿಂಗದಲ್ಲಿ ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂತಲೂ ನಿರೂಪ ಲಿಂಗ

ದಲ್ಲಿ ನಿರ್ದೇಹವಾಗಮ, ನಿರ್ಭಾವಾಗಮ, ನಷ್ಟಾಗಮ ಎಂತಲೂ, ಪ್ರ ದಲಿಂಗದಲ್ಲಿ ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿ ಎಂತಲೂ ಪಾ ದಕ ಲಿಂಗದಲ್ಲಿ ದೀಕ್ಷಾಪಾದೋದಕ ಶಿಕ್ಷಾಪಾದೋದಕ, ಜ್ಞಾನಪಾ ದಕ ಎಂತಲೂ ಒಟ್ಟು ೧೨ ವಿಭಾಗಗಳಿವೆ.

(ಅ) ಒಲವುಲಿಂಗ ತ್ರಿವಿಧ: ಇವು ಜೀವಾತ್ಮ, ಅಂತರಾ ಪರಮಾತ್ಮ ಎಂದು ಇವೆ. ಭವಕ್ಕೆ ಸಂಬಂಧಪಟ್ಟವನು ಜೀವಾತ್ಮ ಆತ್ಮ ವಿವೇಕಿಯಾದವನು ಅಂತರಾತ್ಮನು. ತನ್ನನ್ನು ತಾನು ಅರಿಯು ವನು ಪರಮಾತ್ಮನು.

(ಬ) ನಿರೂಪಲಿಂಗ ತ್ರಿವಿಧ : ಇವು ನಿರ್ದೇಹಾಗಮ. ನಿರ್ಭಾ ವಾಗಮ ನಷ್ಟಾಗಮ ಎಂದು ಇವೆ. ದೇಹ ಭಾವವನ್ನು ಅಳಿದು ಸ್ವಾ ವಿಕವಾದ ಚಾರಿತ್ರ್ಯವುಳ್ಳವನಾದರೆ ನಿರ್ದೇಹಾಗಮವು. ಶುದ್ಧ ಭಾ ದಿಂದ ಕ್ರಿಯೆಗಳನ್ನು ಮಾಡಿದ್ದಾದರೆ ನಿರ್ಭಾವಾಗಮವು. ಆಚರಣೆಗ ಅಲಿಪ್ತನಾಗಿ ಕಾರ್ಯಮಾಡುವವನು ನಷ್ಟಾಗಮವು.

(ಕ) ಪ್ರಸಾದಲಿಂಗ ತ್ರಿವಿಧ : ಇವು ಆದಿಪ್ರಸಾದಿ, ಅಂತ್ಯಪ್ರಸಾ ಸೇವ್ಯಪ್ರಸಾದಿ ಎಂದು ಇವೆ. ಗುರುಮಾರ್ಗದಲ್ಲಿ ಭೃತ್ಯಾಚಾರವುಳ್ಳ ನಾಗಿ ಪ್ರಸಾದ ಸೇವನೆ ಮಾಡುವವನು ಆದಿಪ್ರಸಾದಿಯು. ಲಿಂಗಮು ಪ್ರಸಾದ ಸೇವನೆಯು ಅಂತ್ಯಪ್ರಸಾದಿಯು. ಇಲ್ಲಿ ಲಿಂಗೇಂದ್ರಿಯ ಮುಖ ಳ್ಳವನಾಗಿ ಆಚರಿಸಬೇಕು. ಜಂಗಮಮುಖದಿಂದ ತೃಪ್ತಿಯನ್ನು ಅನು ಭವಿಸಿದಲ್ಲಿ ಸೇವ್ಯಪ್ರಸಾದಿಯು. ಇವನು ಮಾಯಾಪ್ರಪಂಚವನ್ನು ಅ ವನು.

(ಡ) ಪಾದೋದಕಲಿಂಗ ತ್ರಿವಿಧ : ಇದರಲ್ಲಿ ದೀಕ್ಷಾಪಾದೋ ಶಿಕ್ಷಾಪಾದೋದಕ, ಜ್ಞಾನಪಾದೋದಕ ಎಂದು ಮೂರು ವಿಭಾಗಗ ತ್ತವೆ. ದೀಕ್ಷಾಗುರುಮುಖದಿಂದ ಆದುದು ದೀಕ್ಷಾಪಾದೋದಕವು. ಇ ಬಾಹ್ಯಕ್ರಿಯೆಯುಳ್ಳದ್ದು. ಬಾಹ್ಯಕ್ರಿಯೆಗಳ ಮೂಲಕ ಮನಸ್ಸಿನ ಮೇ ಆದ ಪರಿಣಾಮಗಳು ದೃಢಪಟ್ಟಲ್ಲಿ ಶಿಕ್ಷಾಪಾದೋದಕವು. ಹಿಂದಿನ ಕ್ರಿ ಗಳ ಮೂಲಕ ಉಂಟಾಗುವ ಆನಂದೋದಕವು ಜ್ಞಾನ ಗುರು ಮುಖದಿ ದಾದುದು. ಅದು ಜ್ಞಾನಪಾದೋದಕವು.



ಹೀಗೆ ಒಲವುಲಿಂಗ, ನಿರೂಪಲಿಂಗ, ಪ್ರಸಾದಲಿಂಗ, ಪಾದೋದಕ ಲಿಂಗ ಇವುಗಳನ್ನು ಸಾಧಿಸತಕ್ಕದ್ದು. ಹೀಗೆ ಸಾಧಿಸಿದಲ್ಲಿ ಅವೆಲ್ಲವೂ, ಜಂಗಮಲಿಂಗದಲ್ಲಿ ಅಡಗುವುವು. ಹೀಗಾದಲ್ಲಿ ಅದು ಜಂಗಮಲಿಂಗದ ಪೂರ್ಣತೆಯು.

೧೦೭. ಏಕೋತ್ತರ ಪ್ರಸಾದಲಿಂಗಸ್ಥಲ : ಇದರಲ್ಲಿ ನಿಷ್ಪತ್ತಿಲಿಂಗ ಆಕಾಶಲಿಂಗ, ಪ್ರಕಾಶಲಿಂಗ ಎಂದು ಮೂರು ವಿಭಾಗಗಳಿವೆ. ನಿಷ್ಪತ್ತಿಲಿಂಗ ದಲ್ಲಿ ಕ್ರಿಯಾನಿಷ್ಪತ್ತಿ, ಭಾವನಿಷ್ಪತ್ತಿ, ಜ್ಞಾನನಿಷ್ಪತ್ತಿ ಎಂತಲೂ ಆಕಾಶ ಲಿಂಗದಲ್ಲಿ ಪಿಂಡಾಕಾಶ, ಬಿಂದ್ವಾಕಾಶ, ಮಹದಾಕಾಶವೆಂತಲೂ, ಪ್ರಕಾಶ ಲಿಂಗದಲ್ಲಿ ಕ್ರಿಯಾಪ್ರಕಾಶ, ಭಾವಪ್ರಕಾಶ ಜ್ಞಾನಪ್ರಕಾಶವೆಂತಲೂ ಒಟ್ಟು ೯ ವಿಭಾಗಗಳಿವೆ.

(ಅ) ನಿಷ್ಪತ್ತಿಲಿಂಗ ತ್ರಿವಿಧ : ಇದರಲ್ಲಿ ಕ್ರಿಯಾನಿಷ್ಪತ್ತಿ, ಭಾವ ನಿಷ್ಪತ್ತಿ, ಜ್ಞಾನನಿಷ್ಪತ್ತಿ ಎಂಬ ಮೂರು ವಿಭಾಗಗಳಿವೆ. ಲಿಂಗಾನುಭವವು ಕ್ರಿಯೆಯಲ್ಲಿ ಉಂಟಾಗಲು ಕ್ರಿಯಾನಿಷ್ಪತ್ತಿಯು. ಅದು ಭಾವದಲ್ಲಿ ಉಂಟಾ ಗಲು ಭಾವನಿಷ್ಪತ್ತಿಯು. ಅದು ಜ್ಞಾನದಲ್ಲಿ ಉಂಟಾಗಲು ಜ್ಞಾನನಿಷ್ಪ ತ್ತಿಯು ಎಂದು ಹೇಳಲ್ಪಡುತ್ತದೆ.

(ಬ) ಆಕಾಶಲಿಂಗ ತ್ರಿವಿಧ: ಇದರಲ್ಲಿ ಪಿಂಡಾಕಾಶ, ಬಿಂದ್ವಾಕಾಶ ಮಹದಾಕಾಶ ಎಂಬ ಮೂರು ವಿಭಾಗಗಳಿವೆ. ಶರಣನ ಚಿತ್ ಪಿಂಡವು ಮಹತ್‌ಸ್ವರೂಪವನ್ನು ಹೊಂದಲು ಅದು ಪಿಂಡಾಕಾಶವು. ಅದು ಲಿಂಗ ದಲ್ಲಿ ಬೆರೆದು ಶರಣನ ಅರುಹನ್ನು ಆಶ್ರಯಿಸಲು ಅದು ಬಿಂದ್ವಾಕಾಶವು. ಈ ಅರುಹೂ ಕೂಡ ಮಹಾಘನ ಚೈತನ್ಯದಲ್ಲಿ ಬೆರೆಯಲು ಅದು ಮಹದಾ ಕಾಶವು ಎಂದು ಹೇಳಲ್ಪಡುತ್ತದೆ.

(ಕ) ಪ್ರಕಾಶಲಿಂಗ ತ್ರಿವಿಧ : ಇದರಲ್ಲಿ ಮೂರು ವಿಭಾಗಗಳಿವೆ. ಅವು ಯಾವುವೆಂದರೆ. ಅವು ಕ್ರಿಯಾಪ್ರಕಾಶ, ಭಾವಪ್ರಕಾಶ, ಜ್ಞಾನಪ್ರ- ಕಾಶ. ಅರುಹಿಗೆ ಪ್ರಕಾಶವೆಂಬ ಹೆಸರಿದೆ. ಈ ಪ್ರಕಾಶವು ಕ್ರಿಯೆಯಲ್ಲಿ ತೋರಿದರೆ ಕ್ರಿಯಾಪ್ರಕಾಶವು. ಭಾವದಲ್ಲಿ ತೋರಿದರೆ ಭಾವಪ್ರಕಾಶವು. ಭಿನ್ನತೆಗಳಳಿದು ಮಹಾಜ್ಞಾನವೇ ತೋರಿದಲ್ಲಿ ಅದು ಜ್ಞಾನಪ್ರಕಾಶವು.

ಹೀಗೆ ಶರಣನು ನಿಷ್ಪತ್ತಿಲಿಂಗ, ಆಕಾಶಲಿಂಗ, ಪ್ರಕಾಶಲಿಂಗ ಇವು

೧೧೨. ಸದಾಚಾರ : ಸತ್ಯಶುದ್ಧ ಕಾಯಕವನ್ನು ಮಾ
ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಪರಹಿತಾರ್ಥ ಮಾಡ
ಸದಾಚಾರವು.

೧೧೩. ಶಿವಾಚಾರ : ಶಿವಭಕ್ತರಲ್ಲಿ ಜಾತಿ ವರ್ಣಗಳನ್ನು ಎ
ಸಮಯಾಚಾರವುಳ್ಳವನಾಗಿ ಶಿವಾರ್ಪಣ ಬುದ್ಧಿಯಿಂದ ಆಚರಿಸು
ಶಿವಾಚಾರವು.

೧೧೪. ಗಣಾಚಾರ : ವೀರಶೈವರಿಗೆ ಕುಂದು ನಿಂದೆಗಳು, ಬ
ಅವುಗಳನ್ನು ಪರಿಹರಿಸದೆ ತಕ್ಕ ಪ್ರತೀಕಾರ ಮಾಡುವುದೇ ಗಣಾಚಾರವು.

೧೧೫. ಭೃತ್ಯಾಚಾರ : ಶಿವಶರಣರು ಹಿರಿಯರಾಗಿ ತಾನೇ
ಯನಾಗಿ ಭಯಭಕ್ತಿಯಿಂದ ಅವರೊಡನೆ ಆಚರಿಸುವುದು ಭೃ
ಚಾರವು.

೧೧೬. ಸಪ್ತಾಚಾರಗಳು : ಇವು ಮೇಲೆ ಹೇಳಿದಂತೆ ಕ್ರಿ
ಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾ
ಚಾರ, ಸರ್ವಾಚಾರ, ಸಂಪತ್ತಿನಾಚಾರ, ಎಂದು ಏಳು ವಿಧಗಳಾ
ಇವುಗಳ ಮೂಲಕ ಮನುಷ್ಯನ ಅಂತರಂಗ ಕ್ರಿಯೆಗಳು ಶುದ್ಧವಾಗುತ್ತವೆ

೧೧೭. ಕ್ರಿಯಾಚಾರ : ಭಕ್ತನು ದೀಕ್ಷೆಯನ್ನು ಹೊಂದಿ ನಿ
ಕರ್ಮಗಳನ್ನು ಮಾಡುತ್ತ ಮಂತ್ರದಲ್ಲಿ ನಿಂದ ನಿಜಾವಸ್ಥೆಯು ಕ್ರಿಯಾ
ರವು. ಇದರಿಂದ ಕರ್ಮೇಂದ್ರಿಯಗಳು ಪವಿತ್ರವಾಗುತ್ತವೆ.

೧೧೮. ಜ್ಞಾನಾಚಾರ : ಶಿವಶರಣರ ವಚನಾನುಭವವನ್ನು ಹೊ
ಅವುಗಳಂತೆ ಆಚರಿಸುವುದೇ ಜ್ಞಾನಾಚಾರವು. ಇದರಿಂದ ಜ್ಞಾನೇ
ಯಗಳು ಪವಿತ್ರವಾಗುವುವು.

೧೧೯. ಭಾವಾಚಾರ : ಆತ್ಮಾನುಭವವನ್ನು ಹೊಂದಿ ದುರ್ಗು
ಗಳನ್ನು ತ್ಯಜಿಸಿ ಸದ್ಗುಣಗಳನ್ನು ಹಿಡಿಯುವುದೇ ಭಾವಾಚಾರವು. ಇ
ರಿಂದ ಮನುಷ್ಯನ ಕರಣಗಳು ಪವಿತ್ರವಾಗುತ್ತವೆ.

೧೨೦. ಸತ್ಯಾಚಾರ : ಕೊಟ್ಟ ಭಾಷೆಯನ್ನು ಪ್ರಾಣಾಂತ್ಯದ
ರೆಗೂ ನಡೆಯಿಸುವುದು ಸತ್ಯಾಚಾರವು. ಇದರಿಂದ ವಿಷಯಗಳ ಮೇ
ಲೋಲುಪತೆಯು ಹೋಗಿ ದೃಢಭಾವವು ನೆಲೆಗೊಳ್ಳುತ್ತದೆ.



೧೨೧. ನಿತ್ಯಾಚಾರ : ಲಿಂಗಾಣತಿಯಿಂದ ಬಂದುದನ್ನು ಸೇವಿ
ಪ್ರಸಾದದಲ್ಲಿ ಲೋಲುಪ್ತನಾಗಿರುವುದು ನಿತ್ಯಾಚಾರವು. ಇದರಿಂದ
ಷ್ಯನು ಮಹಾಪ್ರಸಾದಿ ಎಂದೆನಿಸಿಕೊಳ್ಳುವನು.

೧೨೨. ಧರ್ಮಾಚಾರ : ಪ್ರಣವ ಮಹಾಮಂತ್ರದಲ್ಲಿ ಲೋಲುಪ್ತ
ಆಚರಿಸುವುದು ಧರ್ಮಾಚಾರವು. ಇದರಿಂದ ಲಿಂಗಾಂಗಗಳು ಏಕ
ತೆಯನ್ನು ಹೊಂದುವುವು.

೧೨೩. ಸರ್ವಾಚಾರ ಸಂಪತ್ತಿನಾಚಾರ : ಷಟ್‌ಸ್ಥಲದ ಪ್ರಕಾರ
ಸುತ್ತ ಏಕೋತ್ತರ ಮಾರ್ಗದಲ್ಲಿ ನಿಂದು ಬಚ್ಚ ಬರಿಯ ವಿರಪಯವನ್ನು
ಸುವುದೇ ಸದಾಚಾರ ಸಂಪತ್ತಿನಾಚಾರವು. ಇದರಿಂದ ಸರ್ವಾಂಗದಲ್ಲಿ
ಜ್ಯೋತಿಯುಂಟಾಗುತ್ತದೆ.

೧೨೪. ಅಷ್ಟಾವರಣಗಳು : ಗುರು, ಲಿಂಗ, ಜಂಗಮ, ಪಾದೋ
ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಅಷ್ಟಾವರಣಗಳು.
ಳಲ್ಲಿ ಬಾಹ್ಯ ಅಷ್ಟಾವರಣಗಳು, ಅಂತರಂಗ ಅಷ್ಟಾವರಣಗಳು ಎಂದು
ವಿಭೇದಗಳಿವೆ. ಹಾಗೆಯೇ ಇವುಗಳು ಸ್ಥೂಲ, ಸೂಕ್ಷ್ಮ, ಕಾರಣ
ಗಳಲ್ಲಿ ತೋರಿದಂತೆ ಅವುಗಳಲ್ಲಿ ಬೇರೆ ಮೂರು ವಿಧಗಳನ್ನು ಮಾಡ
ು.

೧೨೫. ಗುರು: ಭಕ್ತನಿಗೆ ದೀಕ್ಷೆಯನ್ನು ಮಾಡಿ ಅವನಿಗೆ ಲಿಂಗಾಂಗಿ
ಧರ್ಮದ ಉಪದೇಶವನ್ನು ಗುರುವು ಮಾಡುವನು. ಹಾಗೆ ಉಪದೇಶ
ಮಾಡಿದಂತೆ ನಡೆದಲ್ಲಿ ಭಕ್ತನ ಲಿಂಗ ಮನ ಭಾವಗಳಲ್ಲಿ ಆಯಾ ಲಿಂಗಗಳು
ಪ್ರಕಟವಾಗುವುವು. ಇದು ಗುರುವಿನ ಕಾರ್ಯವು. ಬಾಹ್ಯಕ್ರಿಯೆಗಳಿಗೆ
ಸಂಬಂಧಿಸಿದ್ದು.

೧೨೬. ದೀಕ್ಷಾಗುರು, ಶಿಕ್ಷಾಗುರು, ಜ್ಞಾನಗುರು : ಇವು
ಗುರುವಿನ ಭೇದಗಳು. ಅಂಗಕ್ಕೆ ಲಿಂಗವನ್ನು ಅನುಗೊಳಿಸಿದಲ್ಲಿ ದೀಕ್ಷಾ
ಗುರುವು. ಮನಕ್ಕೆ ಅರುಹ ತೋರಿದಲ್ಲಿ ಶಿಕ್ಷಾ ಗುರುವು. ಸಾಮರಸ್ಯದ
ಗುಟ್ಟನ್ನು ತೋರಿಸಿ ಜೀವನ ಭವವನ್ನು ಕಳೆದಲ್ಲಿ ಜ್ಞಾನಗುರುವು. ದೀಕ್ಷಾ
ಗುರುವುಳ್ಳವನಾದರೆ ಆಶಾರಹಿತನಾಗುತ್ತಾನೆ. ಶಿಕ್ಷಾ ಗುರುವಾದಲ್ಲಿ ಕ್ರಿಯೆ
ಯಲ್ಲಿ ನಿಶ್ಚಯ ಬುದ್ಧಿಯುಳ್ಳವನಾಗುತ್ತಾನೆ. ಮೋಕ್ಷಾ ಗುರುವಾದಲ್ಲಿ

ಸರ್ವೇಂದ್ರಿಯ ವ್ಯಾಮೋಹರಹಿತನಾಗಿ ಪರಂಜ್ಯೋತಿ ಪ್ರಕಾಶ ಸ್ವ
ನಾಗಿ ವ್ಯವಹರಿಸುತ್ತಾನೆ. ಇವುಗಳಿಗೆ ಅನುಕ್ರಮವಾಗಿ ಕ್ರಿಯಾ
ಜ್ಞಾನಗುರು, ಮಹಾಜ್ಞಾನಗುರು ಎಂಬ ಹೆಸರುಗಳೂ ಉಂಟು.

೧೨೭. **ಲಿಂಗ** : ಗುರುವು ಭಕ್ತನಿಗೆ ಉಪದೇಶ ಮಾಡುವಲ್ಲಿ
ಬಾಹ್ಯ ಆಚರಣೆಗೋಸ್ಕರ ಕರುಣಿಸಿದ ಚಿಹ್ನವು ಇದಾಗಿದೆ. ಆದರ ಮ
ಭಕ್ತನು ತನ್ನ ತನು ಮನ ಭಾವಗಳಲ್ಲಿ ಪರವಸ್ತುವಿನ ಕಳೆಯನ್ನು ಪ್ರ
ಮಾಡಿಕೊಳ್ಳುತ್ತಾನೆ.

೧೨೮. **ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿ**
ಲಿಂಗವು ಅಂಗದಲ್ಲಿ ಸ್ಥಾಪಿತವಾದಲ್ಲಿ ಲಿಂಗಾಯತವು, ಮನದಲ್ಲಿ ಸ್ಥಾ
ವಾದಲ್ಲಿ ಲಿಂಗಸ್ವಾಯತವು, ಭಾವದಲ್ಲಿ ಸ್ಥಾಪಿತವಾದರೆ ಲಿಂಗಸನ್ನಿಹಿ
ಸ್ಥೂಲತನುವಿನಲ್ಲಿ ಇಷ್ಟಲಿಂಗ ಪ್ರತಿಷ್ಠೆ, ಸೂಕ್ಷ್ಮ ತನುವಿನಲ್ಲಿ ಪ್ರಾಣ
ಪ್ರತಿಷ್ಠೆ, ಮತ್ತು ಕಾರಣ ತನುವಿನಲ್ಲಿ ಭಾವಲಿಂಗ ಪ್ರತಿಷ್ಠೆ. ಈ ಪ್ರ
ಸಂಬಂಧವಿರುತ್ತದೆ. ಮುಂದೆ ಈ ಲಿಂಗವು ಮಂತ್ರರೂಪವಾಗಿ ಆರು ಚ
ಳಲ್ಲಿ ಸ್ಥಾಪಿತವಾಗಲು ಅದು ಆಚಾರಾದಿ ಆರು ಲಿಂಗಗಳ ಸ್ವರೂಪ
ಹೊಂದುತ್ತದೆ. ಇವುಗಳೆಲ್ಲವು ಬಾಹ್ಯ ಇಷ್ಟಲಿಂಗದಲ್ಲಿಯೂ ಕೂಡ ಸ
ಧಪಡುತ್ತವೆ. ಹೇಗೆಂದರೆ— ಪೀಠ, ಗೋಳಕ, ಗೋಮುಖಗಳಲ್ಲಿ
ಪ್ರಾಣ ಭಾವ ಲಿಂಗಗಳು, ಪೀಠ, ಕಟಿ, ವರ್ತುಳ, ಗೋಮುಖ, ನ
ಮಸ್ತಕಗಳಲ್ಲಿ ಅನುಕ್ರಮವಾಗಿ ಆಚಾರ, ಗುರು, ಶಿವ, ಜಂಗಮ, ಪ್ರಸ
ಮಹತ್ ಈ ಲಿಂಗಗಳು ಸ್ಥಾಪಿತವಾಗುತ್ತವೆ. ಈ ಪ್ರಕಾರ ಭಾ
ಇಷ್ಟಲಿಂಗದ ಕ್ರಿಯೆಗಳನ್ನು ಮಾಡತಕ್ಕದ್ದು. ಮೇಲೆ ಹೇಳಿದ ಮೂ
ವಿಧ ಲಿಂಗಗಳಿಗೆ ಕ್ರಿಯಾಲಿಂಗ, ಜ್ಞಾನಲಿಂಗ, ಮಹಾಜ್ಞಾನ ಲಿಂಗ
ತಲೂ ಅನುಕ್ರಮವಾಗಿ ಹೆಸರುಗಳಿವೆ.

೧೨೯. **ಜಂಗಮ** : ಜಂಗಮನು ಅಂಗ ವಿಕಾಸಗಳನ್ನು ದ
ಮಾಡಿ, ಷಟ್‌ಸ್ಥಲಾಚರಣೆಯುಳ್ಳವನಾಗಿ, ಶಿವತತ್ವವನ್ನೊಳಕೊಂ
ಆಚರಿಸುತ್ತಾನೆ. ಅವನು ಭಾವದಲ್ಲಿ ಲಿಂಗಪರಿಪೂರ್ಣನು, ಲಿಂಗ
ನ್ಯನು, ಅನುಭಾವಿಯೂ, ಆನಂದಸ್ವರೂಪನು ಆಗಿರುತ್ತಾನೆ. ಜಂಗಮ
ಮೂರುವಿಧ ಶರೀರಗಳ ಮೇಲೆಯೂ ಪರಿಣಾಮ ಮಾಡುತ್ತಾನೆ.



ಅನುಕ್ರಮವಾಗಿ ಕ್ರಿಯಾ ಜಂಗಮ, ಜ್ಞಾನಜಂಗಮ, ಮಹಾಜ್ಞಾನ ಜಂಗಮ ಎಂಬ ಹೆಸರುಗಳುಂಟಾಗುತ್ತವೆ.

೧೩೦. **ಚಕ್ರಸನ್ನಿಹಿತ ಆರು ಲಿಂಗಗಳು** : ಈ ಲಿಂಗಗಳಿಗೆ ಕೆಳಗೆ ಕಾಣಿಸಿದಂತೆ ಹೆಸರುಗಳಿವೆ. ನಾಲ್ಕು ದಳಗಳುಳ್ಳ ಆಧಾರ ಚಕ್ರದಲ್ಲಿಯ ಲಿಂಗಕ್ಕೆ ಚತುರ್ವಿಧ ಬಿಂದು ಲಿಂಗವೆಂತಲೂ ಆರು ದಳಗಳುಳ್ಳ ಸ್ವಾಧಿಷ್ಠಾನ ಚಕ್ರದಲ್ಲಿಯ ಲಿಂಗಕ್ಕೆ ಷಡ್ವಿಧ ಧಾತುಲಿಂಗವೆಂತಲೂ, ಹತ್ತು ದಳಗಳುಳ್ಳ ಮಣಿಪೂರಕ ಚಕ್ರದಲ್ಲಿಯ ಲಿಂಗಕ್ಕೆ ದಶವಿದ ಕ್ಷೇತ್ರಲಿಂಗವೆಂತಲೂ, ಹನ್ನೆರಡು ದಳಗಳುಳ್ಳ ಅನಾಹತ ಚಕ್ರದಲ್ಲಿಯ ಲಿಂಗಕ್ಕೆ ದ್ವಾದಶವಿಕೃತಿ ಲಿಂಗವೆಂತಲೂ, ಹದಿನಾರು ದಳಗಳುಳ್ಳ ವಿಶುದ್ಧಿ ಚಕ್ರದಲ್ಲಿಯ ಲಿಂಗಕ್ಕೆ ಷೋಡಶಕಳಾ ಲಿಂಗವೆಂತಲೂ, ಎರಡು ದಳಗಳುಳ್ಳ ಆಜ್ಞಾ ಚಕ್ರದಲ್ಲಿಯ ಲಿಂಗಕ್ಕೆ ದ್ವಿವಿಧ ವಿದ್ಯಾಲಿಂಗವೆಂತಲೂ ಸಹಸ್ರದಳಗಳುಳ್ಳ ಬ್ರಹ್ಮಚಕ್ರದಲ್ಲಿಯ ಲಿಂಗಕ್ಕೆ ಸಹಸ್ರಶಿವಕಳಾ ಲಿಂಗವೆಂತಲೂ, ಮೂರು ದಳಗಳುಳ್ಳ ಶಿಖಾಚಕ್ರದಲ್ಲಿಯ ಲಿಂಗಕ್ಕೆ ತ್ರಿವಿಧವಿವೇಕಲಿಂಗವೆಂತಲೂ ಹೆಸರುಗಳಿವೆ. ಈ ಹೆಸರುಗಳು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗಗಳೇ ಇರುತ್ತವೆ. ಮತ್ತು ಕಡೆಯ ಎರಡರಲ್ಲಿ ಇಷ್ಟಲಿಂಗ, ಪ್ರಾಣಲಿಂಗಗಳೂ ಎಲ್ಲಕ್ಕೂ ಕಡೆಯದಾದ ಪಶ್ಚಿಮಚಕ್ರದಲ್ಲಿ ಭಾವಲಿಂಗವೂ ಸ್ಥಾಪಿತವಾಗಿರುತ್ತವೆ.

೧೩೧. **ಭಕ್ತ-ಜಂಗಮ** : ಜಂಗಮವು ಚೈತನ್ಯಾತ್ಮಕವಾದುದು. ಅದು ನಿರವಯವು. ಇಂಥ ಜಂಗಮವು ವ್ಯವಹರಿಸಲು ಅದಕ್ಕೆ ಒಂದು ಅಂಗವು ಅಥವಾ ಸ್ಥೂಲವಾದುದು ಬೇಕು. ಅವೆರಡರ ಸಹಕಾರದಲ್ಲಿಯೇ ಈ ಉಭಯ ವಸ್ತುಗಳ ಕ್ರಿಯೆಗಳು ಸಂಭವಿಸುತ್ತವೆ. ಭಕ್ತ ಜಂಗಮಗಳಿಗೆ ಈ ವಿಧದ ಸಂಬಂಧವಿದೆ.

೧೩೨. **ಗುರು-ಲಿಂಗ** : ಲಿಂಗ ಧಾರಣವು ಗುರುಮುಖವಾಗಿರುತ್ತದೆ. ಆಗ ಗುರುತತ್ವವು ಭಕ್ತನಲ್ಲಿ ಲಿಂಗರೂಪವಾಗಿ ವಾಸಮಾಡುತ್ತದೆ. ಆದ್ದರಿಂದ ಬಾಹ್ಯದಲ್ಲಿ ಗುರುವು. ಅಂತರಂಗದಲ್ಲಿ ಅದು ಲಿಂಗವು.

೧೩೩. **ಗುರು-ಜಂಗಮಗಳು** : ಭಕ್ತನು ಗುರುತತ್ವ ಸಂಬಂಧವುಳ್ಳವನಾಗಬೇಕು. ಆಗ ಇಂಥ ಗುರುವಿನ ಮೂಲಕ ಭಕ್ತನು ಲಿಂಗವನ್ನು

ಹೊಂದಿ ಉಚ್ಚ ಗುಣಗಳನ್ನು ಒಳಕೊಳ್ಳುತ್ತಾನೆ. ಹೀಗಿರುವುದು
ನಲ್ಲಿ ಗುರುವಿದ್ದುದ್ದರ ಚಿಹ್ನವು. ಇಂಥ ಕ್ರಿಯಾ ರೂಪವಾದ ಗು
ಜಂಗಮವು ಪ್ರಾಣವಾಗಿರುತ್ತದೆ. ಹೀಗೆ ಗುರುವಿಗೆ ಜಂಗಮವೇ
ರವು. ಗುರುವಿನಿಂದ ಭಕ್ತನ ಅರಿವೂ ಆಚಾರಗಳೂ ಉಂಟಾಗು
ಆದರೂ ಅವು ಜಂಗಮ ಮುಖವಾಗಿ ಬರುತ್ತವೆ. ಈ ಬಗೆಯಾಗಿ
ಜಂಗಮವನ್ನು ತಿಳಿದು ಆಚರಿಸಿದಲ್ಲಿ ಶಿವಪ್ರಸಾದವು ನೆಲೆಗೊಳ್ಳು
ಈ ಪ್ರಸಾದವೇ ಸಾಮರಸ್ಯವು. ಇದು ಗುರುಜಂಗಮಗಳ ಸಂಬಂಧ

೧೩೪. **ಲಿಂಗ-ಜಂಗಮವು :** ಶಿವ ಮತ್ತು ಶಕ್ತಿಗಳಲ್ಲಿ
ಸಂಬಂಧವೋ ಹಾಗೆ ಅನುಕ್ರಮವಾಗಿ ಲಿಂಗ ಜಂಗಮತತ್ವಗಳ ಸಂಬ
ರುತ್ತದೆ. ಶಿವ ಶಕ್ತಿಗಳು ಪರಸ್ಪರಾವಲಂಬಿಗಳು. ಹಾಗೆಯೇ
ಜಂಗಮಗಳು ಪರಸ್ಪರಾವಲಂಬಿಗಳು.

ಆದ್ದರಿಂದ ಜಂಗಮವನ್ನು ಬಿಟ್ಟು ಲಿಂಗವಿರಲಾರದು. ಅಂದ
ಜಂಗಮವು ಲಿಂಗಕ್ಕೆ ಚೈತನ್ಯಾತ್ಮಕವಾಗಿರುತ್ತದೆ.

ಗುರುಕರುಣವೇ ಲಿಂಗವು. ಈ ಲಿಂಗದ ನಿಜತ್ವವೇ ಜಂಗಮ
ಹೇಳಲ್ಪಡುತ್ತದೆ. ಆದ್ದರಿಂದ ಲಿಂಗ ಜಂಗಮಗಳು ಒಂದನ್ನೊಂದು
ವ್ಯವಹರಿಸಲಾರವು. ಹೇಗೆ ದೀಪಕ್ಕೆ ಪ್ರಕಾಶವು ಸಂಬಂಧಪಡುತ್ತ
ಹಾಗೆ ಲಿಂಗಕ್ಕೆ ಜಂಗಮವು ಸಂಬಂಧಪಡುತ್ತದೆ. ಜಂಗಮವು
ಪ್ರಕಾಶದಂತಿರುತ್ತದೆ. ಮಣ್ಣಿಲ್ಲದೆ ಮರನಾಗದು. ಮರನಿಲ್ಲದೆ
ಗದು. ಹಾಗೆಯೇ ಅಂಗವು ಮಣ್ಣಿನಂತೆ, ಲಿಂಗವು ಮರನಂತೆ,
ಜಂಗಮನ ತೆರನಂತೆ. ಲಿಂಗವು ಸಕ್ಕರೆಯಂತಿದ್ದರೆ ಜಂಗಮವು
ಯಂತೆ. ಹೀಗೆ ವಚನಕಾರರು ಲಿಂಗಜಂಗಮಗಳ ಸಂಬಂಧವನ್ನು
ಸುತ್ತಾರೆ. ಒಟ್ಟಿಗೆ ಲಿಂಗದ ಕಳೆಯೇ ಜಂಗಮವೆಂದು ಹೇಳಬಹುದು.

ತನುವನ್ನವಲಂಬಿಸಿ ಲಿಂಗವಿರುತ್ತದೆ. ಮನವನ್ನವಲಂಬಿಸಿ
ಭಾವವಿದೆ ಈ ಅನುಭಾವವೇ ಜಂಗಮವಾಗಿದೆ. ತನು,
ಅನುಭಾವ ಇವುಗಳ ಸಂಬಂಧವು ಹೇಗೋ, ಹಾಗೆಯೇ ಲಿಂಗಜಂಗಮ
ಸಂಬಂಧವಿರುತ್ತದೆ.



ಉಚ್ಚತರದ ಆಚಾರವೇ ಲಿಂಗವೆಂದು ನಾವು ಹೇಳಬಹುದು. ಈ ಆಚಾರದ ತಿಳುವಳಿಕೆಯೇ ಜಂಗಮವು. ಈ ರೀತಿ ಲಿಂಗದಲ್ಲಿಯೇ ಜಂಗಮವಿದೆಯೆಂದು ಭಾವಿಸಬೇಕು.

ಅಂತರಂಗದ ಜ್ಞಾನವು ಜಂಗಮವಾಗಿದೆ. ಆ ಜಂಗಮದ ವರ್ತನೆಯೇ ಲಿಂಗವು ಅವೆರಡೂ ಕೂಡಿದಲ್ಲಿ ಬಹಿರಂಗ ಕ್ರಿಯೆಯು ತೋರುತ್ತದೆ. ಈ ಕ್ರಿಯೆಯೇ ಗುರುಸ್ವರೂಪವು. ಹೀಗೆ ಲಿಂಗ ಜಂಗಮ ಗುರು ಇವುಗಳ ಸಂಬಂಧವಿದೆ.

ಆದ್ದರಿಂದ ಜಂಗಮವಿರಹಿತ ಲಿಂಗವಿರಲಾರದು. ಮತ್ತು ಲಿಂಗ ವಿರಹಿತ ಜಂಗಮವೂ ಇರಲಾರದು.

೧೩೫. **ಲಿಂಗ-ಜಂಗಮ-ಭಕ್ತ :** ನಾದಸ್ವರೂಪವು ಜಂಗಮವು. ನಾದವು ಶಕ್ತಿರೂಪವಾದ್ದರಿಂದ ನಾದವೇ ಜಂಗಮವೆಂದು ಹೇಳಲ್ಪಡುತ್ತದೆ. ಬಿಂದುಸ್ವರೂಪವು ಲಿಂಗವು. ಮತ್ತು ಈ ಉಭಯಕ್ಕೆ ಆಧಾರವಾದುದು ಭಕ್ತನು. ಹೀಗೆ ಈ ಮೂವರ ಸಂಬಂಧವಿದೆ. ಲಿಂಗವು ಸತ್‌ಸ್ವರೂಪವು ಭಕ್ತನು ಚಿತ್ ಸ್ವರೂಪವು. ಜಂಗಮವು ಆನಂದ ಸ್ವರೂಪವು. ಭಕ್ತನ ಅಂಗವು ಲಿಂಗವು. ಭಕ್ತನ ಪ್ರಾಣವು ಜಂಗಮವು. ಹೀಗೆ ಭಕ್ತಲಿಂಗ ಜಂಗಮಗಳ ಪರಸ್ಪರ ಸಂಬಂಧವಿದೆ.

೧೩೬. **ಲಿಂಗ ಮುಖ ಸಂಬಂಧಗಳು :** ಲಿಂಗದ ಪಿಂಡಿಕೆಯು ನಾದ ಸ್ವರೂಪವಾದುದು. ಅದರ ಪೀಠಿಕೆಯು ಮಹಾಶಕ್ತಿಯ ದ್ಯೋತಕವು. ಅದು ಬಿಂದು ರೂಪವು. ಈ ಪಿಂಡಿಕೆಯು ಪೀಠಿಕೆಯೊಡನೆ ಇರಲು ಅದರಲ್ಲಿ ಕಲೆಯು ತಲೆದೋರುತ್ತದೆ. ಹೀಗೆ ಲಿಂಗವು ನಾದಬಿಂದು ಕಲಾತ್ಮಕವಾಗಿದೆ. ಇಷ್ಟಲಿಂಗದ ಪೀಠವೇ ಇಷ್ಟಲಿಂಗವು. ಅದರ ಗೋಮುಖವೇ ಪ್ರಾಣಲಿಂಗವು. ಗೋಳಕವೇ ಭಾವಲಿಂಗವು. ಹಾಗೆಯೇ ಈ ಲಿಂಗದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ ಪ್ರಸಾದ ಲಿಂಗ ಮಹಾಲಿಂಗಗಳು ಸಂಬಂಧಪಡುತ್ತವೆ. ಇಷ್ಟಲಿಂಗದ ಆರು ಭಾಗಗಳಿಗೆ ಅವು ಸಂಬಂಧಿಸುತ್ತವೆ. ಈ ಆರು ಲಿಂಗಗಳೊಡನೆ ಅವುಗಳಿಗೆ ಸಂಬಂಧಿಸಿದ ಸಕೀಲಗಳೂ ಕೂಡ ಇಷ್ಟಲಿಂಗದಲ್ಲಿ ಸಂಬಂಧಿಸುತ್ತವೆ.

೧೩೭. **ಗುರು, ಲಿಂಗ, ಜಂಗಮಗಳು :** ಈ ಮೂರು ತ
ತನಗೆ ಸಂಬಂಧಪಡುತ್ತವೆ. ಕಾಯವು ಗುರುವು, ಪ್ರಾಣವು ಲಿ
ಜ್ಞಾನವು ಜಂಗಮವಾಗಿರುತ್ತದೆ. ಆದ್ದರಿಂದ ಕಾಯದಲ್ಲಿ ಗು
ವನ್ನು, ಜೀವದಲ್ಲಿ ಲಿಂಗತತ್ವವನ್ನು, ಭಾವದಲ್ಲಿ ಜಂಗಮತತ್ವ
ಕಾಣಬೇಕು. ಹೀಗೆ ಕಾಣುವಲ್ಲಿ ಪೂಜಿಸಿ ಗುರುವನ್ನು ಕಾಣ
ಧ್ಯಾನಿಸಿ ಲಿಂಗವನ್ನು ಕಾಣಬೇಕು. ಈ ಉಭಯದಲ್ಲಿದ್ದುಕೊಂಡು
ರನ್ನು ಜ್ಞಾನದಿಂದ ಜಂಗಮವನ್ನು ಕಾಣಬೇಕು. ಹೀಗೆ ವ
ಗುರುಲಿಂಗ ಜಂಗಮ ತತ್ವಗಳು ತನ್ನಲ್ಲಿ ಒಳಕೊಳ್ಳುತ್ತವೆ. ಗು
ಭಕ್ತನ ಚಿತ್ತವನ್ನರಿಯಬೇಕು. ಲಿಂಗವು ಭಕ್ತನ ಚಿತ್ತಿನಲ್ಲಿ ಅ
ರಿಂತಿರಬೇಕು. ಜಂಗಮವು ವ್ಯವಹಾರದ ಜಂಜಡಕ್ಕೆ ಸಿಲುಕ
ಹೀಗೆ ಭಕ್ತನ ಪಕ್ಕದಿ ಇರಬೇಕು. ಗುರುವು ಸಕಲವು, ಲಿಂಗವು ನಿಃಕಲವು
ಮವು ಸಕಲ ನಿಃಕಲವಾಗಿದೆ. ಗುರುವಿನಲ್ಲಿ ಸದಾಚಾರವಿರಬೇಕು.
ದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರವಿರಬೇಕು. ಜಂ
ಚೈತನ್ಯಾತ್ಮಕವಾದುದು. ಅಂದರೆ ಅದರ ಗುಣವು ಚರಿಸುವಂತ
ಅದನ್ನು ಒಂದೆಡೆಗೆ ನೆಲೆಸಿರುವುದು ಲಿಂಗದ ಗುಣವು. ಇದರ ಇರವನ್ನು
[illegible] ಗುರುವು. ಇಂಥ ಗುರುವಿಡಿದು ಲಿಂಗವನ್ನು ಕಾಣ
ಲಿಂಗವು ಸಾಕಾರವಾದುದು. ಈ ಸಾಕಾರವನ್ನು ನಿರಾಕಾರ
ಕಾಣಬೇಕು, ಯಾಕೆಂದರೆ ನಿರಾಕಾರದ ದ್ಯೋತಕವು ಈ ಸಾಕಾರವಿರು
ಆದರೆ ಈ ನಿರಾಕಾರವನ್ನು ಜಂಗಮವಿಡಿದು ಕಾಣಬೇಕು. ಈ ಜಂ
ಇಲ್ಲದೆ ಹೋದರೆ ಆ ನಿರಾಕಾರವು ತೋರದು. ಈ ಮೂರು ವಸ್ತು
ಪರಶಿವನ ಸ್ವರೂಪವೆಂದು ಭಾವಿಸಿ ಅವುಗಳೊಡನೆ ವರ್ತಿಸಬೇಕು. ಈ
ಅವುಗಳ ಮರ್ಮವನ್ನು ತಿಳಿದು ಭಕ್ತನು ಆಚರಿಸಬೇಕು. ಇದ
ಗುರುಲಿಂಗಜಂಗಮಗಳು ತಿಳಿಯುವುವು.

ಗುರುಲಿಂಗಜಂಗಮಗಳ ಸ್ವರೂಪಗಳು ಮೇಲೆ ಹೇಳಿದಂತಿ
ರುವ ಅವುಗಳನ್ನು ತನ್ನಲ್ಲಿಯೇ ಕಾಣಬೇಕು. ತನುವಿಗೆ ಗುರು
ಸಂಬಂಧವಿದೆ. ಮನಸ್ಸಿಗೆ ಲಿಂಗದ ಸಂಬಂಧವಿದೆ. ಮತ್ತು ಜ್ಞಾ
[illegible] ಸಂಬಂಧವಿದೆ ಆದ್ದರಿಂದ ಕಾಯದಿಂದ ಗುರುವನ್ನು,



ಅಥವಾ ಜೀವದಿಂದ ಲಿಂಗವನ್ನು, ಭಾವ ಅಥವಾ ಜ್ಞಾನದಿಂದ ಜಂಗಮವನ್ನು ಒಳಕೊಳ್ಳಬೇಕು. ಗುರುವು ನಾದವು, ಲಿಂಗವು ಬಿಂದುವು, ಜಂಗಮವು ಕಳೆಯು, ಹೀಗೆ ಅವು ಹೇಳಲ್ಪಡುತ್ತವೆ. ಆದರೆ ಈ ಮೂರರಲ್ಲಿ ಸಾಮರಸ್ಯವಿರುತ್ತದೆ. ಆದ್ದರಿಂದ ಆಚಾರವೇ ಲಿಂಗವೆಂದು ತಿಳಿಯಬೇಕು. ಪ್ರಾಣದಲ್ಲಿ ಅರಿವನ್ನು ನೆಲೆಗೊಳಿಸಬೇಕು. ಮತ್ತು ಈ ಅರಿವೇ ಜಂಗಮವೆಂದು ಭಾವಿಸಬೇಕು. ಈ ವಿಷಯವನ್ನು ಸ್ಥೂಲವಾಗಿ ಹೇಳಬೇಕಾದರೆ, ಗುರುವು ದೀಕ್ಷೆಯನ್ನು ಮಾಡುವನು. ಲಿಂಗವು ಮನಸ್ಸಿನ ಮಾಲಿನ್ಯವನ್ನು ಕಳೆಯುವದು. ಜಂಗಮವು ಪ್ರಪಂಚುಕತನವನ್ನು ದೂರ ಮಾಡುವುದು. ವಚನಕಾರರು ಗುರು-ಲಿಂಗ ಜಂಗಮ ಭಕ್ತ ಇವುಗಳಲ್ಲಿ ಭೇದ ಮಾಡುವುದಿಲ್ಲ. ಅವುಗಳಲ್ಲಿ ಸಾಮರಸ್ಯವಿರುತ್ತದೆಂದು ಅವರು ಭಾವಿಸುತ್ತಾರೆ. ಇಂಥ ಸಾಮರಸ್ಯ ವರ್ತನೆಯಿಂದ ಈ ನಾಲ್ಕರಲ್ಲಿ ಲಿಂಗದ ಕಳೆಯು ತೋರಿ ಕಡೆಗೆ ಐಕ್ಯವು ಉಂಟಾಗುತ್ತದೆ. ಈ ಸ್ಥಿತಿಯೇ ಬಯಲು ಎಂದು ವಚನಕಾರರು ಹೇಳುತ್ತಾರೆ. ಗುರು ಲಿಂಗ ಜಂಗಮದ ಈ ಅರಿವೇ ಶಿವಯೋಗವೆಂತಲೂ ಹೇಳಲ್ಪಡುತ್ತದೆ.

೧೩೮. **ಪಾದೋದಕ :** ಗುರುಲಿಂಗಜಂಗಮಗಳು ತನ್ನಲ್ಲಿ ಒಳಕೊಳ್ಳುವ ರೀತಿಯನ್ನು ಅರುಹಿಸಿಕೊಡುವ ಕ್ರಿಯೆಯು ಇದಾಗಿದೆ. ಇದು ಸಂಪೂರ್ಣ ಭಾವನಾಮಯವಾದ ವಿಧಿಯು. ಇಂಥ ಈ ಪಾದೋದಕವು ಕೇವಲ ನೀರು ಅಲ್ಲ. ಅದು ಚಿತ್‌ಸ್ವರೂಪವಾಗಿರುತ್ತದೆಂದು ತಿಳಿಯಬೇಕು. ಇದನ್ನು ಭಾವನಾಪ್ರಧಾನವಾಗಿ ಮತ್ತು ಅದರ ಮರ್ಮವನ್ನು ತಿಳಿದು ಆಚರಿಸಿದ್ದಾದರೆ, ಅದು ಭಕ್ತ ಜಂಗಮರ ಸರ್ವಾಂಗವನ್ನು ವೇಧಿಸುತ್ತದೆ. ಈ ಪಾದೋದಕದ ಮೂಲಕ ಭಕ್ತನು ಗುರುಲಿಂಗಜಂಗಮಗಳನ್ನು ಹೊಂದಿ ಸರ್ವಾಂಗಲಿಂಗಿಯಾಗುತ್ತಾನೆ. ಹೀಗೆ ಇದರ ಆಚರಣೆ ಇರುತ್ತದೆ. ಇದಕ್ಕೆ ಗುರುಲಿಂಗಜಂಗಮಗಳೆಲ್ಲವೂ ಬೇಕು. ಒಂದು ವೇಳೆ ಅವು ಪ್ರತ್ಯಕ್ಷ ದೊರೆಯದಿದ್ದರೆ ಭಕ್ತನೂ ಅವನಂತೆ ಜಂಗಮನೂ ಕೂಡ ಅವುಗಳನ್ನು ಸೂಕ್ಷ್ಮ ರೀತಿಯಿಂದ ತಮ್ಮ ಆಚರಣೆಯಲ್ಲಿಟ್ಟುಕೊಂಡು ಪಾದೋದಕ ಪ್ರಸಾದ ಸೇವನೆಯನ್ನು ಪಡೆಯುವ ಏರ್ಪಾಡನ್ನು ವಚನಕಾರರು ಮಾಡಿದ್ದಾರೆ. ಇಂಥ ಕಾಲದಲ್ಲಿ ಅವು ಕೇವಲ ಭಾವನಾಮಯವಾ

ಗಿರುತ್ತವೆ. ಹೀಗೆ ವೀರಶೈವರಲ್ಲಿ ಪಾದಪೂಜೆ ಎಂದರೆ, ಪಾದವ ತೊಳೆದ ನೀರು ಎಂಬ ಅರ್ಥವಿಲ್ಲ. ಅದು ಗುರುಲಿಂಗ ಜಂಗಮವನ್ನು ತನು ಮನ ಭಾವಗಳಲ್ಲಿ ಪ್ರಕಟಿಸಿಕೊಂಡು ಸಾಮರಸ್ಯ ಸ್ಥಿತಿಯನ್ನು ಹೊಂದುವ ರೀತಿಯನ್ನು ತಿಳಿಸುವ ಒಂದು ಬಗೆಯ ವಿಧಾನವಾಗಿದೆ. ಹಾಗೆ ಭಕ್ತ ಜಂಗಮರು ಆಚರಿಸಿದಲ್ಲಿ ಅವರ ತನು ಮನ ಭಾವಗಳೆಲ್ಲ ಲಿಂಗಮಯವಾಗುವವು. ಇದು ಸನ್ಮಾರ್ಗಿಗಳಾದ ಷಟ್‌ಸ್ಥಲವನ್ನು ಬಲ್ಲ ಸ್ತ್ರೀಪುರುಷ ಭಕ್ತ ಜಂಗಮರಿಗೆ ಮಾತ್ರ ಅಳವಡುವದಲ್ಲದೆ ಇತರರಿಗೆ ಅಳವಡಲಾರದು. ಇಷ್ಟೇ ಅಲ್ಲ, ಈ ಉಭಯತರ ಮನಪ್ರಾಣ ಭಾವಗಳ ಸಹ ಪರಸ್ಪರತೆಯನ್ನು ಹೊಂದುವಂತಹ ಸ್ಥಿತಿಯಲ್ಲಿರಬೇಕು. ಅಂದರೆ ಅವರ ರೀತಿ ನಡೆಗಳಲ್ಲಿ ಸಹಕಾರವಿರಬೇಕು. ಹೀಗೆ ಲಿಂಗಾಗಗಳು ಸದಾ ಪರಸ್ಪರ ಆಚರಿಸುತ್ತಿರಬೇಕು. ಕೇವಲ ಯಾಂತ್ರಿಕ ರೀತಿಯಿಂದ ಆಚರಿಸತಕ್ಕ ಆಚರಣೆಯು ಇದು ಅಲ್ಲ. ಪಾದೋದಕ ವಿಧಿಯನ್ನು ವಚನಕಾರರು ತಮ್ಮ ವಚನಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ. ಇಂಥ ಮೂಲ ವಚನಗಳನ್ನೇ ವಾಚಕರು ನೋಡಬೇಕು.

೧೩೯. **ಗುರುಪಾದೋದಕ, ಕ್ರಿಯಾಪಾದೋದಕ, ಜ್ಞಾನ ಪಾದೋದಕ :** ಇವು ಮೂರು ಪಾದೋಕದ ವಿಭಾಗಗಳು. ಪಾದೋದಕವು ದೇಹದಲ್ಲಿ ಶುದ್ಧಿಯನ್ನುಂಟು ಮಾಡಿ ಲಿಂಗಚೈತನ್ಯವನ್ನು ಹುಟ್ಟಿಸುತ್ತದೆ. ಗುರುಪಾದೋದಕದಿಂದ ಸ್ಥೂಲ ದೇಹದ ಶುದ್ಧಿಯು. ಕ್ರಿಯಾ ಪಾದೋ-ದಕದಿಂದ ಸೂಕ್ಷ್ಮ ದೇಹದ ಶುದ್ಧಿಯು. ಜ್ಞಾನಪಾದೋದಕದಿಂದ ಕಾರಣ ದೇಹದ ಶುದ್ಧಿಯು. ಗುರುಪಾದೋದಕದಿಂದ ಇಷ್ಟಲಿಂಗ ಸಂಬಂಧವು. ಕ್ರಿಯಾ ಪಾದೋದಕದಿಂದ ಪ್ರಾಣಲಿಂಗಸಂಬಂಧವು. ಜ್ಞಾನ ಪಾದೋದಕದಿಂದ ಭಾವಲಿಂಗ ಸಂಬಂಧವು ಉಂಟಾಗುತ್ತವೆ. ಆದ್ದರಿಂದ ಪಾದೋದಕವು ಆಚಾರದಲ್ಲಿ ಪ್ರತ್ಯಕ್ಷ ಪರಬ್ರಹ್ಮವೆಂದು ವಚನಕಾರರಿಂದ ಹೇಳಲ್ಪಡುತ್ತದೆ. ಮೊದಲು ಉದಕವು ಹೋಗಿ ಆಮೇಲೆ ಗುರುಪಾದೋದಕವೆನಿಸುತ್ತದೆ. ಈ ಗುರುಪಾದೋದಕವೇ ಕ್ರಿಯಾಪಾದೋದಕವಾಗುತ್ತದೆ. ಈ ಕ್ರಿಯಾಪಾದೋಪದಕವೇ ಜ್ಞಾನಪಾದೋದಕವಾಗುತ್ತದೆ. ಗುರುಪಾದೋದಕದಿಂದ ಸಂಚಿತಕರ್ಮವು, ಲಿಂಗಪಾದೋದಕದಿಂದ ಪ್ರಾರಬ್ಧಕರ್ಮವು, ಜಂಗಮಪಾದೋದಕದಿಂದ ಆಗಾಮಿಕರ್ಮವು, ನಷ್ಟವಾಗು



ತ್ತವೆ. ಗುರುಪಾದೋದಕ, ಕ್ರಿಯಾಪಾದೋದಕ, ಜ್ಞಾನಪಾದೋದಕ ಇವುಗಳಿಗೆ ಅನುಕ್ರಮವಾಗಿ ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕವೆಂತಲೂ. ದೀಕ್ಷಾ ಪಾದೋದಕ. ಶಿಕ್ಷಾಪಾದೋದಕ, ಜ್ಞಾನಪಾದೋದಕವೆಂತಲೂ ಬೇರೆ ಹೆಸರುಗಳಿವೆ. ದೀಕ್ಷಾಪಾದೋದಕಕ್ಕೆ ಧೂಳಪಾದೋದಕವೆಂತಲೂ ಬೇರೆ ಹೆಸರು ಉಂಟು. ಅಲ್ಲದೆ ಇವುಗಳಿಗೆ ಕರುಣ ಜಲ, ವಿನಯ ಜಲ, ಸಮತೆ ಜಲ ಎಂಬ ಹೆಸರುಗಳೂ ಅನುಕ್ರಮವಾಗಿ ಇರುತ್ತವೆ.

೧೪೦. **ಲಿಂಗೋದಕ, ಪಾದೋದಕ, ಪ್ರಸಾದೋದಕ :** ಗುರುವು, ಮೊದಲು ಪಂಚಕಲಶದ ಜಲವನ್ನು ತನ್ನ ಕರುಣ ಜಲವನ್ನಾಗಿ ಮಾಡಿ ಭಕ್ತನ ಮೈಲಿಗೆಯನ್ನು ಕಳೆಯಲು ಆಮೇಲೆ ಭಕ್ತನು ತನ್ನ ಲಿಂಗಕ್ಕೆ ಇದರಿಂದ ಮಜ್ಜನಕ್ಕೆರೆಯಲು ಅದು ಲಿಂಗೋದಕವು. ಆ ಲಿಂಗೋದಕವನ್ನು ಗ್ರಹಿಸಲು ಅದು ಪಾದೋದಕವೆನಿಸುತ್ತದೆ. ಹೀಗೆ ಪಾದೋದಕವನ್ನು ಗ್ರಹಿಸಿ ಲಿಂಪಾರ್ಪಿತ ಭೋಗೋಪಭೋಗಿಯಾದಲ್ಲಿ ಅದು ಅರ್ಪಿತ ಪ್ರಸಾದೋದಕವು. ಹೀಗೆ ಲಿಂಗಾರ್ಚನೆಯಿಂದ ಲಿಂಗೋದಕವು, ಪಂಚೇಂದ್ರಿಯಾರ್ಚನೆಯಿಂದ ಪಾದೋದಕವು, ಪ್ರಾಣಾರ್ಚನೆಯಿಂದ ಪ್ರಸಾದೋದಕವು ಆಗುವವು. ಲಿಂಗೋದಕದಿಂದ ಅಂಗವು ಶುದ್ಧವು. ಪಾದೋದಕದಿಂದ ಪರವು ನಾಸ್ತಿಯಾಗುವುದು. ಪ್ರಸಾದೋದಕದಿಂದ ಭವಬೀಜವು ಅಡಗುವುದು. ಆದ್ದರಿಂದ ಕೇವಲ ಅಂಗದೇಹಿಯಾದವನಿಗೆ ಲಿಂಗೋದಕವಿಲ್ಲ. ಪ್ರಕೃತಿಜೀವಿಗೆ ಪಾದೋದಕವಿಲ್ಲ. ಭವಜೀವಿಗೆ ಪ್ರಸಾದೋದಕವಿಲ್ಲ. ಇವು ಅನುಕ್ರಮವಾಗಿ ಸಂಚಿತ, ಪ್ರಾರಬ್ಧ, ಆಗಾಮಿ ಈ ಕರ್ಮಗಳನ್ನು ದೂರ ಮಾಡುತ್ತವೆ. ಲಿಂಗೋದಕದಿಂದ ಅಂಗರಕ್ಷಣೆಯಾಗುತ್ತದೆ. ಪಾದೋದಕದಿಂದ ತನ್ನನ್ನು ಸೋಂಕಿದ ಸರ್ವವೆಲ್ಲವೂ ಪವಿತ್ರವು ಮತ್ತು ಪ್ರಸಾದೋದಕದಿಂದ ಪ್ರಾಣನ ನೆಲೆಯ ಅರಿವು ಉಂಟಾಗುತ್ತದೆ. ಲಿಂಗೋದಕವು ಶಿವಸಂಸ್ಕಾರವುಳ್ಳದು. ಪಾದೋದಕದಿಂದ ಲಿಂಗಮಜ್ಜನಕ್ಕೆರೆವುದು. ಪ್ರಸಾದೋದಕದಿಂದ ಆರೋಗಣೆ ಮಾಡುವುದು. ಅಂದರೆ ಭುಂಜಿಸುವುದು. ಹೀಗೆ ಆಚಾರದಲ್ಲಿ ಈ ತ್ರಿವರ್ಗಗಳ ಉಪಯೋಗವಿರುತ್ತದೆ.

೧೪೧. **ದಶವಿಧ ಪಾದೋದಕಗಳು :** ಇವು ಗುರು ಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ ಎಂದು ಹತ್ತು ಇರುತ್ತವೆ. ಪಾದೋದಕವನ್ನು ಸಿದ್ಧಪಡಿಸುವಲ್ಲಿ ಮತ್ತು ಅದನ್ನು ಸ್ವೀಕರಿಸುವಲ್ಲಿ ಈ ಹತ್ತು ವಿಧಗಳುಂಟಾಗುತ್ತವೆ. ಇವು ಆಚರಣೆಗೆ ಸಂಬಂಧಪಟ್ಟರೂ ಭಾವನಾ ಪ್ರಧಾನವಾದವುಗಳು. ಇವುಗಳನ್ನು ತಾತ್ವಿಕ ದೃಷ್ಟಿಯಿಂದಲೂ ಆಚಾರ ದೃಷ್ಟಿಯಿಂದಲೂ ವಿವೇಚಿಸಬಹುದು. (೧) ತಾತ್ವಿಕ ದೃಷ್ಟಿಯಿಂದ ಕೆಳಗೆ ಹೇಳಿದಂತೆ ಇವುಗಳನ್ನು ವಿವರಿಸಬಹುದಾಗಿದೆ. ಹೇಗೆಂದರೆ, ಸ್ಪರ್ಶನ ಗುಣದಿಂದ ಬಂದುದು ಗುರುಪಾದೋದಕವು. ಅಂಗದ ಗುಣವಳಿಯಲು ಲಿಂಗಪಾದೋದಕವು. ಮಹಾಗಣಂಗಳ ಅರಿವನ್ನರಿತುದಾಗಿ ಜಂಗಮ ಪಾದೋದಕವು, ಅಥವಾ ಮಜ್ಜನೋದಕವು. ಚತುರ್ದಳ ಪದ್ಮವಿಕಸಿತವಾಗಲು ಸ್ಪರ್ಶನೋದಕವು. ಲಿಂಗಕ್ಕೆ ಪರಮಪರಿಣಾಮವನ್ನು ಸಮರ್ಪಿಸಿದಲ್ಲಿ ಅವಧಾನೋದಕವು. ಲಿಂಗಾರೋಗಣೆ ಮಾಡಿದಲ್ಲಿ ಆಪ್ಯಾಯನೋದಕವು. ಲಿಂಗವನ್ನು ಹಸ್ತದಲ್ಲಿರಿಸಲು ಅದು ಹಸ್ತೋದಕವು. ಶಿವಯೋಗವಾದಲ್ಲಿ ಪರಿಣಾಮೋದಕವು. ನಾಮಸೀಮೆ ಇಲ್ಲವಾಗಿ ನಿರ್ನಾಮೋದಕವು. ಮುಂದೆ ಹೆಸರಿಲ್ಲದ ಬಯಲು ಬೆರಿಸಲು ಅದು ಸತ್ಯೋದಕವು. ಈ ಭಾವಗಳಿಂದ ದಶವಿಧ ಪಾದೋದಕಗಳನ್ನು ಗ್ರಹಿಸತಕ್ಕದ್ದು. ಹೀಗೆ ಪಾದೋದಕವನ್ನು ಸಿದ್ಧಪಡಿಸಿ ಗ್ರಹಿಸುವುದು. ಇದು ಭಾವನಾಮಯವಾದ ಆಚರಣೆಯು. ವಾಚಕರು ಮೂಲಗ್ರಂಥಗಳನ್ನು ನೋಡಿ ಅವುಗಳ ಮರ್ಮವನ್ನು ಕಂಡುಹಿಡಿದು ಆಚರಿಸಬೇಕು. ಅಂದರೆ ಆಯಾ ತತ್ವಗಳು ಅವರಲ್ಲಿ ನೆಲೆಗೊಳ್ಳುವುವು.

೨. ಕೇವಲ ಕ್ರಿಯಾದೃಷ್ಟಿಯಿಂದಲೂ ಅವು ಹೇಳಲ್ಪಡುವುವು. ಹೇಗೆಂದರೆ— ಪಾದದಲ್ಲಿ ಸಂಬಂಧಿಸಿದ್ದು ಗುರುಪಾದೋದಕವು ಆ ಪಾದತೀರ್ಥವನ್ನು ಲಿಂಗಕ್ಕೆ ಸಂಬಂಧಿಸಬೇಕೆಂಬ ಇಚ್ಛೆಯುತ್ಪನ್ನವಾದಲ್ಲಿ ಲಿಂಗೋದಕವು. ಹಾಗೆ ಮಜ್ಜನಕ್ಕೆರೆದಲ್ಲಿ ಮಜ್ಜನೋದಕವು. ಜಿಹ್ವೆಯಲ್ಲಿ ಸ್ವೀಕರಿಸಿದಲ್ಲಿ ಸ್ಪರ್ಶನೋದಕವು. ಅದನ್ನು ಎಚ್ಚರಿಕೆಯಿಂದ ಸೇವಿಸಿದಲ್ಲಿ ಅವಧಾನೋದಕವು. ಸೇವಿಸಿ ಸಂತೋಷಹೊಂದಿದಲ್ಲಿ ಆಪ್ಯಾಯನೋದಕವು. ಹಸ್ತದೊಳಗಿನ ತೀರ್ಥವನ್ನು ಸಲ್ಲಿಸಿದ್ದು ಹಸ್ತೋದಕವು. ಬಟ್ಟಲಲ್ಲಿಯ ತೀರ್ಥವನ್ನು ಮೂರು ಸಲ ಸೇವಿಸಲು ಪರಿಣಾಮೋದಕವು. ಅಂಥ ಪಾದೋದಕವು ಅಂತಿಂತೆಂದು ಹೆಸರನ್ನು ಇಡಲಿಕ್ಕೆ ಸಾಧ್ಯವಿಲ್ಲವಾಗಿ ನಿರ್ನಾಮೋದಕವು. ಬ್ರಹ್ಮರಂಧ್ರದಲ್ಲಿಯ ಚಿದಮೃತವೇ ಇದೆಂದು ಭಾವಿಸಿದಲ್ಲಿ ಸತ್ಯೋದಕವು. ಈ ವ್ಯಾಖ್ಯೆಗಳು ಕೇವಲ ಕ್ರಿಯೆಗೆ ಸಂಬಂಧಿಸಿ ಮಾಡಿದವುಗಳು. ಹೀಗೆ ಪಾದೋದಕವನ್ನು ಬಹಿರಂಗ ಅಂತರಂಗಗಳಲ್ಲಿ ಅರಿಯಬೇಕು.



೧೪೨. **ಅರ್ಪಣ-ಪ್ರಸಾದ :** ಯಾವ ಫಲಪದವನ್ನಪೇಕ್ಷಿಸದೆ ಲಿಂಗಕಾರ್ಯಕ್ಕೋಸ್ಕರ ಕ್ರಿಯೆಗಳನ್ನು ಮಾಡುತ್ತ ತಾನು ಅನುಭವಿಸುವುದೆಲ್ಲವೂ ಪರಮಾತ್ಮನದೆಂದು ಭಾವಿಸಿ ಮಾಡುವುದು ಅರ್ಪಣವು. ಹೀಗೆ ಅರ್ಪಿಸಿ ಅನುಭವಿಸಲ್ಪಟ್ಟುದು ಪ್ರಸಾದವು.

೧೪೩. **ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣ :** (೧) ಮನುಷ್ಯನಿಗೆ ಅಂಗ, ಪ್ರಾಣ, ಭಾವವೆಂಬಿವೆ. ಇವುಗಳ ಮುಖಾಂತರವೇ ಮನುಷ್ಯನು ಕಾರ್ಯ ಮಾಡುತ್ತಾನೆ. ಇವು ಶುದ್ಧವಾದಲ್ಲಿ ಕ್ರಿಯೆಯು ಶುದ್ಧವು. ಅರ್ಪಣದಿಂದ ಅವುಗಳು ಶುದ್ಧವಾಗುತ್ತವೆ. ಇಷ್ಟಲಿಂಗಕ್ಕೆ ಅಂಗವನ್ನು, ಪ್ರಾಣಲಿಂಗಕ್ಕೆ ಮನವನ್ನು, ಭಾವಲಿಂಗಕ್ಕೆ ತೃಪ್ತಿಯನ್ನು ಅರ್ಪಿಸಬೇಕು. ಹೀಗೆ ಅರ್ಪಿಸಿದಲ್ಲಿ ಅವು ಅನುಕ್ರಮವಾಗಿ ಕಾಯಾರ್ಪಣ ಕರಣಾರ್ಪಣ, ಭಾವಾರ್ಪಣಗಳು. (೨) ಹಾಗೆಯೇ ಪದಾರ್ಥಸೇವನೆಯಲ್ಲಿ ರೂಪು, ರುಚಿ, ತೃಪ್ತಿಗಳೆಂಬುವುಗಳನ್ನು ಅನುಭವಿಸಬೇಕಾಗುತ್ತದೆ. ಆಗ ರೂಪನ್ನು ಕಾಯದ ಕೈಯಲ್ಲಿ ಇಷ್ಟಲಿಂಗಕ್ಕೆ ಅರ್ಪಿಸತಕ್ಕದ್ದು. ಅದು ಶುದ್ಧ ಪ್ರಸಾದವು. ರುಚಿಯಾಗಿ ಬಂದ ಪದಾರ್ಥವನ್ನು ಮನದ ಕೈಯಲ್ಲಿ ಜಿಹ್ವೆಯ ಮುಖದಲ್ಲಿ ಪ್ರಾಣಲಿಂಗಕ್ಕೆ ಅರ್ಪಿಸಬೇಕು. ಅದು ಸಿದ್ಧ ಪ್ರಸಾದವು. ಪರಿಣಾಮವಾಗಿ ಬಂದ ಪದಾರ್ಥವನ್ನು ಭಾವದ ಕೈಯಲ್ಲಿ ಹೃದಯಮುಖದಲ್ಲಿ ಭಾವಲಿಂಗಕ್ಕೆ ಅರ್ಪಿಸಬೇಕು. ಅದು ಪ್ರಸಿದ್ಧ ಪ್ರಸಾದವು. ಹೀಗೆ ಮಾಡಿದಲ್ಲಿ ಅಂಗಮನ ಭಾವಗಳು ಪರಮಾತ್ಮನಲ್ಲಿ ಲಯವಾಗುವವು

ಇವುಗಳಿಗೆ ಅನುಕ್ರಮವಾಗಿ ಇಷ್ಟ ಲಿಂಗಾರ್ಪಣ, ಪ್ರಾಣಲಿಂಗಾರ್ಪಣ,
ಭಾವಲಿಂಗಾರ್ಪಣ ಎಂಬ ಹೆಸರುಗಳುಂಟಾಗುತ್ತವೆ. (೩) ಮನುಷ್ಯನ
ಅಂಗ, ಪ್ರಾಣ, ಭಾವ ಅಥವಾ ತನು ಮನ ಭಾವ ಇವುಗಳನ್ನು ಅನುಕ್ರಮ
ವಾಗಿ ಗುರು ಲಿಂಗ ಜಂಗಮಕ್ಕೂ ಅರ್ಪಿಸಬೇಕೆಂದು ಹೇಳಲ್ಪಡುತ್ತದೆ.
ಗುರು ಲಿಂಗ ಜಂಗಮಗಳು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ
ಅನುಕ್ರಮವಾಗಿ ಸಂಬಂಧ ಪಡುತ್ತವೆ. ಅಷ್ಟಾವರಣಗಳು ಕ್ರಿಯಾಯುಕ್ತ
ವಾಗಿವೆ. ಆದ್ದರಿಂದ ಅನುಭವಿಸುವ ಪದಾರ್ಥಗಳನ್ನು ಗುರುಲಿಂಗ ಜಂಗ
ಮಗಳಿಗೆ ಅರ್ಪಿಸಿ ಅನುಭವಿಸಿದಲ್ಲಿ ಕಾಯಾರ್ಪಣ, ಕರಣಾರ್ಪಣ,
ಭಾವಾರ್ಪಣಗಳು ಒದಗುವುವು. (೪) ಹಾಗೆಯೇ ಮನುಷ್ಯನಿಗೆ ತನು,
ಮನ, ಧನಗಳಿರುತ್ತವೆ. ಅವುಗಳನ್ನು ಗುರು ಲಿಂಗ ಜಂಗಮಕ್ಕೆ ಅರ್ಪಿಸಿ
ಅನುಭವಿಸತಕ್ಕದ್ದು. ಹಾಗೆ ಮಾಡಿದಲ್ಲಿ ಈ ತ್ರಿವಿಧಗಳು ಒಳಕೊಳ್ಳುವವು.
ಹೀಗೆ ಇದರಲ್ಲಿ ೪ ವಿಧಗಳಾಗುತ್ತವೆ.

೧೪೪. **ಕರಣಾರ್ಪಣ :** ಮನುಷ್ಯನಿಗೆ ನೇತ್ರ. ಶ್ರೋತ್ರ. ಜಿಹ್ವೆ,
ಘ್ರಾಣ, ತ್ವಕ್ಕು ಎಂದು ಪಂಚಕರಣಗಳಿರುತ್ತವೆ. ನೇತ್ರವು ನೋಡುತ್ತದೆ.
ಶ್ರೋತ್ರವು ಕೇಳುತ್ತದೆ. ಜಿಹ್ವೆಯು ರುಚಿಸುತ್ತದೆ. ಘ್ರಾಣವು ವಾಸಿಸು
ತ್ತದೆ. ತ್ವಕ್ಕು ಮುಟ್ಟುತ್ತದೆ. ಇವುಗಳೆಲ್ಲವನ್ನೂ ಲಿಂಗಾಂಗಿಯು ಲಿಂಗಾ
ರ್ಪಿತ ಮಾಡಿ ಲಿಂಗ ಭೋಗೋಪಭೋಗಿಯಾಗಿರಬೇಕು. ಇವನೇ ಪ್ರಸಾ
ದಿಯು ಹೀಗೆ ಆಚರಿಸಿದಲ್ಲಿ ಅವನ ಸರ್ವಾಂಗವು ಶುದ್ಧವು. ಈ ಪಂಚ-
ಕರಣಗಳಲ್ಲಿ ನಾಸಿಕದಲ್ಲಿ ಆಚಾರಲಿಂಗವು ಜಿಹ್ವೆಯಲ್ಲಿ ಗುರುಲಿಂಗವು ನೇತ್ರ
ದಲ್ಲಿ ಶಿವಲಿಂಗವು ತ್ವಕ್ಕಿನಲ್ಲಿ ಜಂಗಮಲಿಂಗವು ಶ್ರೋತ್ರದಲ್ಲಿ ಪ್ರಸಾದ
ಲಿಂಗವು ಇರುತ್ತವೆ. ಈ ಪಂಚೇಂದ್ರಿಯಗಳನ್ನು ಅನುಕ್ರಮವಾಗಿ ಆಯಾ
ಲಿಂಗಗಳಿಗೆ ಅರ್ಪಿಸಬೇಕು. ಹೀಗೆ ಮಾಡಿದಲ್ಲಿ ಆತ್ಮನಲ್ಲಿ ಕಡೆಯದಾದ
ಮಹಾಲಿಂಗವು ಪ್ರಕಟವಾಗುತ್ತದೆ. ಆಗ ಸುಶಬ್ದ ಪ್ರಸಾದ, ಸ್ಪರ್ಶನ
ಪ್ರಸಾದ, ರೂಪು ಪ್ರಸಾದ, ರುಚಿ ಪ್ರಸಾದ, ಗಂಧಪ್ರಸಾದಗಳು ಪ್ರಸಾದಿಗೆ
ದೊರಕೊಳ್ಳುವುವು. ಹೀಗೆ ಆಚರಿಸುವಲ್ಲಿ ಆಯಾ ಇಂದ್ರಿಯಗಳ ದ್ವಾರಗ
ಳಲ್ಲಿ ಆಯಾ ಲಿಂಗಗಳನ್ನು ನೆಲೆಗೊಳಿಸಬೇಕು. ಹೀಗೆ ನೆಲೆಗೊಳಿಸಿ ಲಿಂಗ
ಮುಖವಾಗಿ ಇಂದ್ರಿಯ ಭೋಗವನ್ನು ಮಾಡಬೇಕು. ಆಗ ಮನುಷ್ಯನ



ಶ್ರೋತ್ರ, ನೇತ್ರ, ಘ್ರಾಣ, ಜಿಹ್ವೆ, ತ್ವಕ್ಕುಗಳು ಶಿವನ ಇಂದ್ರಿಯಗಳು,
ಅವನ ಶಿರ, ಮುಖ, ಹೃದಯಪಾದ, ಬಾಹುಗಳು ಶಿವನ ಅವಯವಗಳು.
ಅವನ ಮನ, ಬುದ್ಧಿ, ಚಿತ್ತ ಅಹಂಕಾರಗಳು ಶಿವನ ಕರಣಗಳು, ಅವನ
ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವಾಯುಗಳು ಶಿವಚೈತನ್ಯ
ವುಳ್ಳವುಗಳು ಆಗುತ್ತವೆ. ಹೀಗೆ ಮನುಷ್ಯನ ಭೋಗವೆಲ್ಲವು ಪರಮಾ
ತ್ಮನ ಭೋಗವೆನಿಸುವವು. ಇದೇ ಲಿಂಗ ಭೋಗೋಪಭೋಗವು. ಲಿಂಗಾಂ
ಗಿಯ ಜೀವನದ ಕ್ರಮವು.

೧೪೫. **ಭರಿತಾರ್ಪಣ :** ಅರ್ಪಣವಾದುದನ್ನು ಸೇವಿಸಲೇಬೇಕು.
ಅದನ್ನು ತ್ಯಜಿಸಕೂಡದು. ಆದ್ದರಿಂದ ಮನುಷ್ಯನು ತನಗೆ ಸಲುವ
ಷ್ಟನ್ನೇ ಗ್ರಹಿಸಿ ಲಿಂಗಾರ್ಪಿತ ಮಾಡಬೇಕು. ಇದು ಭರಿತಾರ್ಪಣವು. ಆದ್ದ
ರಿಂದ ಅವನು ಮಿತಹಾರಿಯಾಗಿರತಕ್ಕದ್ದು. ಹೀಗಿಲ್ಲದಿದ್ದರೆ ಲಿಂಗಭೋ-
ಗವು ತಪ್ಪುತ್ತದೆ. ಅದು ಕಿಲ್ಬಿತವು. ಅಂದರೆ ಹೊಲಸಾದದ್ದು. ಆದ್ದರಿಂದ
ಪ್ರಸಾದಿಯು ಆಹಾರವನ್ನು ಚೆಲ್ಲಕೂಡದು. ಅಂದರೆ ಊಟದಲ್ಲಿ
ಮುಸುರಿಯನ್ನು ಮಾಡತಕ್ಕದ್ದಲ್ಲ.

೧೪೬. **ಅರ್ಪಿತಾವಧಾನ :** ಅಷ್ಟವಿಧ ಸಕೀಲದ ಮೂಲಕ
ಘ್ರಾಣದಲ್ಲಿಯ ಆಚಾರಲಿಂಗದಲ್ಲಿ ಸುಗಂಧ ಪ್ರಸಾದವನ್ನು, ಜಿಹ್ವೆಯ
ಲ್ಲಿಯ ಗುರು ಲಿಂಗದಲ್ಲಿ ಸುರಸಪ್ರಸಾದವನ್ನು, ನೇತ್ರದಲ್ಲಿಯ ಶಿವಲಿಂಗ
ದಲ್ಲಿ ಸುರೂಪು ಪ್ರಸಾದವನ್ನು, ತ್ವಕ್ಕಿನಲ್ಲಿಯ ಜಂಗಮಲಿಂಗದಲ್ಲಿ ಸುಸ್ಪ
ರ್ಶನ ಪ್ರಸಾದವನ್ನು, ಕರ್ಣದಲ್ಲಿಯ ಪ್ರಸಾದಲಿಂಗದಲ್ಲಿ ಅರ್ಪಿತಾವ-
ಧಾನವು.

೧೪೭. **ಇಷ್ಟ ಪ್ರಾಣ ಭಾವಲಿಂಗಾರ್ಪಿತವು :** ಇಷ್ಟಲಿಂಗಕ್ಕೆ
ತನ್ನ ಶರೀರವನ್ನು, ಪ್ರಾಣಲಿಂಗಕ್ಕೆ ತನ್ನ ಮನಸ್ಸನ್ನು, ಭಾವಲಿಂಗಕ್ಕೆ
ತನ್ನ ತೃಪ್ತಿಯನ್ನು ಅರ್ಪಿಸುವುದು ಅನುಕ್ರಮವಾಗಿ ಇಷ್ಟ, ಪ್ರಾಣ
ಭಾವಲಿಂಗಾರ್ಪಿತವೆಂದು ಹೇಳಲ್ಪಡುತ್ತದೆ.

೧೪೮. **ಲಿಂಗಕ್ಕೆ ಗುರುಪ್ರಸಾದವು :** ಲಿಂಗವು ಗುರುವಿನ ಮನ
ಸ್ಥಲದಲ್ಲಿ ಮತ್ತು ಭಕ್ತನು ಗುರುವಿನ ಕರಸ್ಥಲದಲ್ಲಿ ಪರಿಣಾಮಹೊಂದು
ತ್ತಾರೆ. ಹೀಗೆ ಭಕ್ತ ಮತ್ತು ಲಿಂಗ ಇವು ಗುರುವಿನ ಮೂಲಕ ಪ್ರಕಟವಾ

ಗುತ್ತಿದ್ದು ಈ ಉಭಯಕ್ಕೆ ಗುರುಪ್ರಸಾದವು ಪ್ರಾಣವಾಗಿದೆ. ಆದ್ದರಿಂದ ಗುರುಪ್ರಸಾದವು ಲಿಂಗ ಮತ್ತು ಭಕ್ತ ಈ ಉಭಯಕ್ಕೆ ಸಲ್ಲುವುದೆಂದು ಭಾವಿಸಿ ಅರ್ಪಿಸಿ ಸ್ವೀಕರಿಸುವುದು.

೧೪೯. **ಗುರು, ಲಿಂಗಗಳಿಗೆ ಜಂಗಮ ಪ್ರಸಾದವು :** ಭಕ್ತನಿಗೆ ಲಿಂಗವು ಪ್ರಾಣವು, ಲಿಂಗಕ್ಕೆ ಗುರುವು ಪ್ರಾಣವು, ಗುರುವಿಗೆ ಜಂಗಮವು ಪ್ರಾಣವು. ಈ ರೀತಿಯಾಗಿರುವುದರಿಂದ ಭಕ್ತ ಲಿಂಗ ಗುರು ಇವರಿಗೆ ಜಂಗಮ ಪ್ರಸಾದವು ಸಲ್ಲುವುದೆಂದು ಭಾವಿಸಿ ಪದಾರ್ಥಗಳ ಪೂರ್ವಾಶ್ರಯವನ್ನು ಕಳೆದು ಅರ್ಪಿಸಿ ಸ್ವೀಕರಿಸುವುದು.

೧೫೦. **ಗುರು ಲಿಂಗ ಜಂಗಮಗಳಿಗೆ ಭಕ್ತನ ಪ್ರಸಾದ:** ಭಕ್ತನು ಅಂಗಸ್ವರೂಪನಾಗಿದ್ದು ಅವನಿಗೆ ಗುರು ಲಿಂಗ ಜಂಗಮಗಳು ಪ್ರಾಣಸ್ವರೂಪರು ಆದರಿಂದ ಗುರು ಲಿಂಗಜಂಗಮಗಳಿಗೆ ಭಕ್ತನೇ ಆಧಾರನು. ಆದ್ದರಿಂದ ಭಕ್ತನಿಂದ ಬಂದ ಪ್ರಸಾದವು ಗುರುವಿಗೆ, ಗುರುವಿನಿಂದೊಗೆದ ಪ್ರಸಾದವು ಲಿಂಗಕ್ಕೆ, ಉಂಟಾಗುತ್ತವೆ. ಜಂಗಮಕ್ಕೂ ಕೂಡ ಭಕ್ತನೇ ಅಂಗವಾಗಿರುವನು. ಆದ್ದರಿಂದ ಜಂಗಮಕ್ಕೆ ಭಕ್ತನ ಪ್ರಸಾದವಿದೆ. ಹೀಗೆ ಭಕ್ತ ಗುರು ಲಿಂಗ ಜಂಗಮ ಪ್ರಸಾದಗಳಲ್ಲೆಲ್ಲ ಅಭಿನ್ನತೆಯುಂಟಾಗಿರುತ್ತದೆ.

೧೫೧. **ಲಿಂಗ, ಜಂಗಮ, ಪ್ರಸಾದ:** ಅರ್ಪಣದ ಕಾರ್ಯದಲ್ಲಿ ಮನವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದಲ್ಲಿ ಅದು ಲಿಂಗರೂಪವು. ಧನವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದರೆ ಅದು ಜಂಗಮ ರೂಪವು. ತನುವನ್ನರ್ಪಿಸಿ ಸಾಮರಸ್ಯದಿಂದ ವರ್ತಿಸಿದರೆ ಅದು ಪ್ರಸಾದರೂಪವು. ಹೀಗೆ ಈ ತ್ರಿವಿಧ ಸುಖವನ್ನು ಅರ್ಪಿಸಿದಲ್ಲಿ ಅದು ಬಯಲು. ಹೀಗೆ ಮನವನ್ನು ಲಿಂಗವು, ಧನವನ್ನು ಜಂಗಮವು, ತನುವನ್ನು ಪ್ರಸಾದವು ಒಳಕೊಂಡಿರುತ್ತವೆ.

೧೫೨. **ಗುರು ಲಿಂಗ ಜಂಗಮ ಪ್ರಸಾದಗಳು :** ಪರಮಾತ್ಮನು ಗುರು ರೂಪವಾಗಿ ಕರಸ್ಥಲಕ್ಕೆ ಲಿಂಗವಾಗಿ, ಮನಸ್ಥಲಕ್ಕೆ ಮಂತ್ರವಾಗಿ, ಪ್ರಾಣಸ್ಥಲಕ್ಕೆ ಜಂಗಮವಾಗಿ, ವ್ಯವಹರಿಸುತ್ತಾನೆ. ಅಂದರೆ ತನುವಿನಲ್ಲಿ



ಗುರುವು, ಮನದಲ್ಲಿ ಲಿಂಗವು, ಪ್ರಾಣದಲ್ಲಿ ಜಂಗಮವು, ಅರಿವಿನಲ್ಲಿ ಪ್ರಸಾದವಾಗಿರುತ್ತಾನೆ.

೧೫೩. **ಗುರು ಲಿಂಗ ಜಂಗಮ ಪ್ರಸಾದ ಪಾದೋದಕಗಳು :** ಪರಮಾತ್ಮನು ಗುರುವಾಗಿ ಉಪದೇಶಿಸುತ್ತಾನೆ. ಲಿಂಗವಾಗಿ ಮನದಲ್ಲಿ ಇಂಬುಗೊಳ್ಳುತ್ತಾನೆ ಜಂಗಮವಾಗಿ ಬಂದು ಮನಸ್ಸಿನ ಅಹಂಭಾವವನ್ನು ದೂರ ಮಾಡುತ್ತಾನೆ. ಪ್ರಸಾದವಾಗಿ ಸರ್ವಾಂಗವನ್ನೆಲ್ಲ ಅವಗ್ರಹಿಸುತ್ತಾನೆ. ಕಡೆಗೆ ಪಾದೋದಕವಾಗಿ ಮನುಷ್ಯನ ಒಳಹೊರಗೆಂಬುದನ್ನೆಲ್ಲ ಶುದ್ಧಗೊಳಿಸಿ ಅವನನ್ನು ಚಿತ್ ಸ್ವರೂಪವನ್ನಾಗಿ ಮಾಡುತ್ತಾನೆ.

೧೫೪. **ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳು:** ಗುರುವಿನಲ್ಲಿ ಶುದ್ಧವು, ಲಿಂಗದಲ್ಲಿ ಸಿದ್ಧವು, ಜಂಗಮದಲ್ಲಿ ಪ್ರಸಿದ್ಧವು ಹೀಗೆ ಪ್ರಸಾದಗಳಿರುತ್ತವೆ. ಆದ್ದರಿಂದ ಕಾಯದ ಕಯ್ಯಲ್ಲಿ ಇಷ್ಟ ಲಿಂಗಕ್ಕೆ ಕೊಟ್ಟುದು ಶುದ್ಧ ಪ್ರಸಾದವು. ಮನದ ಕಯ್ಯಲ್ಲಿ ಪ್ರಾಣಲಿಂಗಕ್ಕೆ ಕೊಟ್ಟುದು ಸಿದ್ಧ ಪ್ರಸಾದವು. ಪರಿಣಾಮವಾಗಿ ಬಂದ ಪದಾರ್ಥವನ್ನು ಭಾವದ ಕಯ್ಯಲ್ಲಿ ಹೃದಯ ಮುಖದಲ್ಲಿ ಭಾವಲಿಂಗಕ್ಕೆ ಕೊಟ್ಟುದು ಪ್ರಸಿದ್ಧ ಪ್ರಸಾದವು. ಈ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳನ್ನು ಏಕ ರೂಪ ಮಾಡಿದಲ್ಲಿ ಅದು ಮಹಾಘನಲಿಂಗವೆನಿಸಿಕೊಳ್ಳುವುದು. ಆ ಮಹಾಲಿಂಗವು ತಾನಾದುದೇ ಏಕ ಪ್ರಸಾದವು. ಗುರುವಿನಿಂದ ಸರ್ವಾಂಗವೆಲ್ಲ ಶುದ್ಧ ಪ್ರಸಾದವಾಗುವುದು. ಎಲ್ಲ ವಿಷಯಗಳನ್ನು ದುರ್ವರ್ತನೆಗಳನ್ನು ಲಿಂಗ ಮುಖದಿಂದ ಜಯಿಸಿದಲ್ಲಿ ಸರ್ವಾಂಗವೆಲ್ಲ ಸಿದ್ಧಪ್ರಸಾದವಾಗುವುದು. ಸಮಸ್ತ ಕರಣಗಳ ದುರ್ವರ್ತನೆಗಳನ್ನು ಜಂಗಮ ಮುಖದಿಂದ ಜಯಿಸಿದಲ್ಲಿ ಸರ್ವಾಂಗವೆಲ್ಲ ಪ್ರಸಿದ್ಧಿ ಪ್ರಸಾದವಾಗುವುದು. ಗುರು ಪ್ರಸಾದವು ಅಂಗವನ್ನು ಸೋಂಕಿದಲ್ಲಿ ಸರ್ವಾಂಗ ಗುರುವಾಗುವುದು. ಲಿಂಗಪ್ರಸಾದವು ಮನವನ್ನು ಸೋಂಕಿದಲ್ಲಿ ಮನಸ್ಸು ಲಿಂಗವಾಗುವುದು. ಜಂಗಮ ಪ್ರಸಾದವು ಅರಿವನ್ನು ಸೋಂಕಿದಲ್ಲಿ ಅದು ಅಖಂಡಿತ ಪ್ರಸನ್ನ ಪ್ರಸಾದವಾಗುವುದು. ಕಾಯಾರ್ಪಣವರ್ಪಿತವಾಗಿ ಉಳಿದುದು ಶುದ್ಧ ಪ್ರಸಾದವೆಂತಲೂ ಕರಣಾರ್ಪಿತವರ್ಪಣವಾಗಿ ಉಳಿದುದು ಸಿದ್ಧ ಪ್ರಸಾದವೆಂತಲೂ ಭಾವಾರ್ಪಣವಾಗಿ ಉಳಿದುದು ಪ್ರಸಿದ್ಧ ಪ್ರಸಾದವೆಂತಲೂ ಬೇರೆ ವಿಧವಾಗಿಯೂ ಹೇಳಲ್ಪಡುವುದುಂಟು.

೧೫೫. **ಸ್ವಯಪ್ರಸಾದಿ, ಜ್ಞಾನಪ್ರಸಾದಿ, ಮಹಾಪ್ರಸಾದಿ:** ಇವು ಪ್ರಸಾದಿ ಸ್ಥಲವನ್ನು ಹೊಂದಿದವನ ತರಗತಿಗಳಾಗಿವೆ. ಮೊದಲು ತ್ರಿವಿಧ ಪ್ರಸಾದವನ್ನು ಹೊಂದಿದಲ್ಲಿ ಸ್ವಯಂ ಪ್ರಸಾದಿಯು. ಸ್ವಯ ಪ್ರಸಾದಿಯ ತರುವಾಯ ಅರಿವು ಉಂಟಾಗಲು ಅದು ಜ್ಞಾನ ಪ್ರಸಾದಿಯು. ಜ್ಞಾನ ಪ್ರಸಾದಿಯ ತರುವಾಯ ಮಹಾಪ್ರಸಾದ ಸ್ಥಿತಿಯು ಪ್ರಾಪ್ತವಾಗುತ್ತದೆ.

೧೫೬. **ಆದಿ ಪ್ರಸಾದಿ, ಸೇವ್ಯಪ್ರಸಾದಿ, ಅಂತ್ಯಪ್ರಸಾದಿ:** ಇಷ್ಟ ಲಿಂಗಕ್ಕೆ ಸೋಂಕಿ ಬಂದ ಪ್ರಸಾದವನ್ನು ಸ್ವೀಕರಿಸಲು ಅದು ಆದಿ ಪ್ರಸಾದಿಯು. ಆ ಇಷ್ಟ ಲಿಂಗವನ್ನು ಸೋಂಕಿ ಬಂದ ಪ್ರಸಾದವು ಪ್ರಾಣಲಿಂಗವನ್ನು ಸೋಂಕಿ, ಆಗ ಉಂಟಾದ ಪ್ರಸಾದವನ್ನು ಸ್ವೀಕರಿಸಲು ಅದು ಸೇವ್ಯ ಪ್ರಸಾದಿಯು. ಹೀಗೆ ಪ್ರಾಣಲಿಂಗವನ್ನು ಸೋಂಕಿ ಭಾವಲಿಂಗ ಮುಖಕ್ಕೆ ಬರಲು ಅಂಥದನ್ನು ಸೇವಿಸಲು ಅದು ಅಂತ್ಯ ಪ್ರಸಾದಿಯು.

೧೫೭. **ಅಚ್ಚ ಪ್ರಸಾದಿ, ನಿಚ್ಚಪ್ರಸಾದಿ, ಸಮಯ ಪ್ರಸಾದಿ:** ಅಚ್ಚ ಪ್ರಸಾದಿಯು ಗುರುವು ಬೋಧಿಸಿದಂಥ ಆಚರಣೆಯ ಮಾರ್ಗವನ್ನು ತಿಳಿದು ವ್ರತಾಚರಣೆಗೆ ಏನೂ ತಪ್ಪು ತಡೆಗಳಿಲ್ಲದ ಹಾಗೆ ಆಚರಿಸುತ್ತಾನೆ. ನಿಚ್ಚಪ್ರಸಾದಿಯಾದವನು ಕೂಡ ಗುರುವು ಹೇಳಿದ ಮೇಲು ಪಂಙ್ತಿಯಂತೆ ತನ್ನ ಆಚರಣೆಯನ್ನು ಸರಿಪಡಿಸಿಕೊಂಡು ನಡೆಯುತ್ತಾನೆ. ಅಂದರೆ ಜ್ಞಾನಿಗಳು ಯಾವ ಆಚರಣೆಯನ್ನು ಹೇಳಿಕೊಡುತ್ತಾರೋ ಅದರಂತೆ ಅವರೊಡನೆ ನಡೆದು ಮುಂದೆ ಅವರಿಲ್ಲದಿದ್ದರೂ ಕೂಡ ತಾನೇ ಅವರಂತೆ ಆಚರಿಸುತ್ತಾನೆ. ಸಮಯ ಪ್ರಸಾದಿಯು ಈ ಮೂವರಲ್ಲಿ ಎಲ್ಲಕ್ಕೂ ಅಶಕ್ತನು. ಅವನು ತತ್ಕಾಲಕ್ಕೆ ಬಂದ ಜಂಗಮನೊಡನೆ ಯಥಾಮತಿ ಆಚರಿಸುತ್ತಾನೆ. ಆಚರಣೆಯ ಈ ಬಗ್ಗೆ ಅವನಿಗೆ ಕಟ್ಟುಗಳಿರುವುದಿಲ್ಲ. ಒಂದು ವೇಳೆ ಜಂಗಮವು ಇಲ್ಲದಿದ್ದರೂ ಅವನಿಗೆ ಕೊರತೆ ಇಲ್ಲ. ಅಚ್ಚ ಪ್ರಸಾದಿಯು ವಿಧಿಪೂರ್ವಕವಾಗಿ ಜಂಗಮದ ನಿರೀಕ್ಷಣೆಯಲ್ಲಿಯೇ ಪಾದೋದಕವನ್ನು ತಪ್ಪದೆ ಸ್ವೀಕರಿಸುತ್ತಾನೆ. ಆದರೆ ನಿಚ್ಚ ಪ್ರಸಾದಿಯು ಜಂಗಮವು ಒಂದೊಪ್ಪತ್ತು ತಪ್ಪಿದರೂ ಹಿಂದಿನ ಸಂಬಂಧವನ್ನಿಟ್ಟುಕೊಂಡು ಆಚರಿಸುತ್ತಾನೆ. ತನ್ನ ಸಮಯೋಚಿತಕ್ಕೆ ಕ್ರಿಯಾ ಜಂಗಮವು ದೊರೆಯದಿದ್ದರೂ ಅವನು ತನ್ನ ಹಿಂದಿನ ಸಂಬಂಧದ ಮೂಲಕ ತನ್ನ ಕ್ರಿಯೆಗಳನ್ನು ಮುಗಿಸುತ್ತಾನೆ. ಅಂಥ ಕಾಲದಲ್ಲಿ ಅವನು ಷೋಡಶಕಲಾ ಸ್ವರೂಪವಾದ ತನ್ನ ಚಿದ್ಘನ ಮಹಾಲಿಂಗವನ್ನು ನಿರಂಜನ ಜಂಗಮದೋಪಾದಿಯಲ್ಲಿ ಭಾವಿಸಿ ನಿರ್ಗುಣಪೂಜೆ ಮಾಡಿ ಅಷ್ಟವಿಧ ಮಂತ್ರ ಸಕೀಲದಿಂದ ಅಷ್ಟವಿಧ ಲಿಂಗ ಧ್ಯಾನದಿಂದ ಅದಕ್ಕೆ ಸಮರ್ಪಿಸಿ ಪಾದೋದಕವನ್ನು ಸೇವಿಸುತ್ತಾನೆ. ಕ್ರಿಯಾ ಜಂಗಮ ಮೂರ್ತಿಗಳು ಅರ್ಚನೆಯ ಸಮಯದಲ್ಲಿ ಒಂದು ವೇಳೆ ಬಂದರೆ ದಿವಾ ರಾತ್ರಿ ಎನ್ನದೆ ಅವರೊಡನೆ ಕ್ರಿಯಾಚರಣೆಯನ್ನಾಚರಿಸುವವನು ಅಚ್ಚ ಪ್ರಸಾದಿಯು. ಆದರೆ ಸಮಯೋಚಿತದಲ್ಲಿ ಹೀಗೆ ಕ್ರಿಯಾ ಜಂಗಮವು ದೊರೆಯದಿದ್ದರೆ ಆಗ ಅವನು ಮೇಲೆ ಹೇಳಿದಂತೆ ನಿಚ್ಚ ಪ್ರಸಾಯೋಪಾದಿಯಲ್ಲಿ ಆಚರಿಸುತ್ತಾನೆ. ಆದರೆ ಅವನಿಗೆ ಆವ ಜಂಗಮವೂ ದೊರೆಯದೆ ಹೋದದ್ದಾದರೆ ತನ್ನ ಇಷ್ಟ ಮಹಾಲಿಂಗವೇ ಜ್ಞಾನ ಜಂಗಮ ಸ್ವರೂಪವೆಂದು ಭಾವಿಸಿ ಅದರ ಪರಿಣಾಮ ಪ್ರಸಾದದಲ್ಲಿ ಲೋಲುಪ್ತನಾಗುತ್ತಾನೆ. ಇವನು ಸಮಯ ಪ್ರಸಾದಿಯು.



ಆದರೆ ನಾವು ಲಕ್ಷಿಸತಕ್ಕದ್ದೇನೆಂದರೆ, ಈ ಮೂವರು ಗುರುವಿನ ಮೂಲಕ ದೀಕ್ಷೆಯನ್ನು ಹೊಂದಿ ಅಂತರಂಗದಲ್ಲಿ ಬೆಳಗುವ ಪ್ರಾಣಲಿಂಗವನ್ನು ಇಷ್ಟ ಲಿಂಗದಲ್ಲಿ ಬಹಿಷ್ಕರಿಸಿಕೊಂಡವರಿರಬೇಕು. ಲಿಂಗಾಂಗಗಳು, ಷಟ್‌ಸ್ಥಾನಗಳು ಅವವೆಂಬುದರ ಜ್ಞಾನ, ಚಿದ್ವಿಭೂತಿ, ಚಿದ್ರುದ್ರಾಕ್ಷಿ, ಪಂಚಾಕ್ಷರ, ಷಡಕ್ಷರ ಇವುಗಳ ಅರುಹು, ಷಟ್‌ಸ್ಥಲ ಮಾರ್ಗ ಮತ್ತು ಷಡ್ವಿಧ ಶೀಲ ವ್ರತ ನೇಮಗಳ ತಿಳುವಳಿಕೆ, ಷೋಡಶ ಭಕ್ತಿಯ ಆಚರಣೆ, ಮೂವತ್ತೆರಡು ಕಲೆಗಳ ಜ್ಞಾನ, ಈ ಎಲ್ಲವುಗಳ ನಿರ್ಣಯವನ್ನು ತಿಳಿದುಕೊಂಡಿರಬೇಕು. ಈ ಜ್ಞಾನವುಳ್ಳವರು ಆಯಾ ಕಾಲಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ವಚನಕಾರರು ಮೇಲೆ ವಿವರಿಸಿದ ಈ ಮೂರು ಭೇದಗಳ ಮೂಲಕ ವಿವರಿಸುತ್ತಾರೆ.

೧೫೮. **ಭಿನ್ನ ಭೋಜನ, ಪ್ರಸಾದಭೋಜನ, ಸಹಭೋಜನ:** ಇವು ಸೇವನೆಯ ಕಾಲದಲ್ಲಿ ಲಿಂಗಕ್ಕರ್ಪಿಸಿ ಭುಂಜಿಸುವ ವಿಧಗಳಾಗಿರುತ್ತವೆ. ಮುಂದಿಟ್ಟ ಸಕಲ ಪದಾರ್ಥಗಳನ್ನು ಏಕಕಾಲಕ್ಕೆ ಲಿಂಗಕ್ಕೆ ಕೊಟ್ಟು ಭುಂಜಿಸುವುದು ಭಿನ್ನಭೋಜನವು. ಮುಂದಿಟ್ಟ ಸಕಲ ಪದಾ

ರ್ಥಗಳನ್ನು ಒಂದೇ ವೇಳೆ ಲಿಂಗಕ್ಕೆ ಕೊಡದೆ ಎತ್ತಿದ ಭೋಜನವನ್ನೇ ಲಿಂಗಕ್ಕೆ ಕೊಟ್ಟು ಅದನ್ನು ಕೆಳಕ್ಕೆ ಇಳುಹದೆ ಕೊಳ್ಳುವುದು ಪ್ರಸಾದ ಭೋಜನವು. ಮುಂದಿಟ್ಟ ಪದಾರ್ಥಗಳನ್ನೆಲ್ಲ ಲಿಂಗಕ್ಕೆ ಮೊದಲು ಕೊಟ್ಟು ಭೋಜ್ಯ ಭೋಜ್ಯಕ್ಕೆ ಕೊಟ್ಟುಕೊಂಬುದು ಸಹಭೋಜನವು. ಇವು ವೀರಶೈವರಲ್ಲಿ ಊಟಮಾಡುವ ಪದ್ಧತಿಗಳಾಗಿರುತ್ತವೆ. ಆಯಾ ಕಾಲಗಳಲ್ಲಿ ಆಯಾ ವಿಧದ ಭಾವನೆಗಳು ಪರಮಾತ್ಮನಿಗೋಸ್ಕರ ಇರತಕ್ಕದ್ದು.

೧೫೯. **ಏಕಭಾಜನ** ( ತನುಭಾಜನ, ಮನಭಾಜನ, ಪ್ರಾಣ ಭಾಜನ ) : ಇಲ್ಲಿ ಇಂದ್ರಿಯಗಳಲ್ಲಿ ಲಿಂಗಾರ್ಪಿತ ಮಾಡಿ ಮನ ಬೆರಸಿ ಪರಿಣಾಮಿಸಬೇಕು. ಅತ್ಯಂತ ನೈತಿಕಾಚಾರವುಳ್ಳವನಿಗೆ ಈ ಏಕ ಭಾಜನ ಸ್ಥಿತಿಯು ಸಲ್ಲುವುದು. ಅವನಲ್ಲಿ ಸರ್ವವೂ ಲಿಂಗವೆಂಬ ಭಾವವು ದೃಢ ವಾಗಿರಬೇಕು. ಅವನ ತನುವೇ ಲಿಂಗಕ್ಕೆ ಭಾಜನವಾಗಿಯೂ ಹಾಗೆಯೇ ಅವನ ತನುವಿಗೆ ಲಿಂಗವೇ ಭಾಜನವಾಗಿಯೂ ಇದ್ದುದು ತನು ಭಾಜನವು. ಹಾಗೆಯೇ ಮನಭಾಜನ ಮತ್ತು ಪ್ರಾಣಭಾಜನಗಳಿರುತ್ತವೆ. ಅಂದರೆ ಲಿಂಗಕ್ಕೆ ಮನವೇ ಭಾಜನ ಮತ್ತು ಮನಕ್ಕೆ ಲಿಂಗವೇ ಭಾಜನವಾಗಿ ಮನವಳಿದು ಮನವೇ ಲಿಂಗವಾಗಿರಬೇಕು. ಹಾಗೆಯೇ ಪ್ರಾಣಕ್ಕೆ ಲಿಂಗವೇ ಭಾಜನವಾಗಿ ಲಿಂಗಕ್ಕೆ ಪ್ರಾಣವೇ ಭಾಜನವಾಗಿ ಪ್ರಾಣವೆಂಬ ಭಾಜನವಳಿದು ಪ್ರಾಣವು ಲಿಂಗವಾಗಿರಬೇಕು. ಇವು ಅನುಕ್ರಮವಾಗಿ ಮನಭಾಜನ ಮತ್ತು ಪ್ರಾಣ ಭಾಜನಗಳು. ಹೀಗೆ ತನುಭಾಜನ ಮನ ಭಾಜನ, ಪ್ರಾಣಭಾಜನಗಳಿರುತ್ತವೆ. ಇವೆಲ್ಲವೂ ಏಕಭಾಜನದಲ್ಲಿ ಬರು ತ್ತವೆ. ಹೀಗೆ ವರ್ತಿಸುವವರಿಗೆ ಮೇಲೆ ೧೫೮ ರಲ್ಲಿ ಹೇಳಿದ ಸಹಭೋಜನವು ಪ್ರಾಪ್ತವಾಗುತ್ತದೆ. ಇದರಲ್ಲಿ ಭಕ್ತಜಂಗಮ ಹೀಗೆ ಭೇದವಿರುವುದಿಲ್ಲ. ಯಾಕಂದರೆ ಭಕ್ತನು ತನ್ನ ಅರ್ಥ ಪ್ರಾಣಾಭಿಮಾನಗಳನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿದ್ದರಿಂದ ಅವನುಗುರುಲಿಂಗ ಜಂಗಮಕ್ಕೆ ಪ್ರಾಣವಾಗಿರು ತ್ತಾನೆ. ಇಂಥವನಿಗೂ ಗುರುಲಿಂಗ ಜಂಗಮಕ್ಕೂ ಏಕಭಾಜನವಲ್ಲದೆ ಭಿನ್ನಭಾಜನವಿರಲಾರದು. ಆದ್ದರಿಂದಲೇ ಚನ್ನಯ್ಯ ಕಣ್ಣಪ್ಪ ಇಂಥವ ರೊಡನೆ ಪರಮಾತ್ಮನು ಭುಂಜಿಸಿದನೆಂದು ವಚನಶಾಸ್ತ್ರದ ಅಭಿಪ್ರಾಯ ವದೆ. ಇದೇ ಶಿವಶರಣರ ನಡೆಯು. ಇಲ್ಲಿ ಜಾತಿಸೂತಕವಿರಲಾರದು.



ಇಷ್ಟೇ ಅಲ್ಲ, ಹೀಗೆ ಏಕಭಾಜನವಿಲ್ಲದ ಹೊರ್ತು ಅಂಗದ ಕಳೆಯಲ್ಲಿ ಲಿಂಗ ವನ್ನು ಧರಿಸಿಕೊಳ್ಳಲು ಬರಲಾರದು. ಯಾಕಂದರೆ ಭಿನ್ನಭಾವವಿದ್ದಲ್ಲಿ ಲಿಂಗ ವಿರಲಾರದು. ಆದ್ದರಿಂದ ಲಿಂಗದಲ್ಲಿ ಅವಿರಳನಾಗಿ ಅಂಗದ ಗುಣಗಳನ್ನು ಕಳೆದು ದಂದ್ವಾಚರಣೆಯನ್ನು ತೊಲಗಿಸಿ ವೀರಶೈವನು ವರ್ತಿಸತಕ್ಕದ್ದು.

೧೬೦. **ಮಿಶ್ರಾರ್ಪಣವು** : ಷಡ್ವಿಧಾಂಗವನ್ನು ಷಡ್ವಿಧಲಿಂಗದಲ್ಲಿ ಒಡಗೂಡಿಸಿ ಷಡ್ವಿಧಲಿಂಗ ಸಂಬಂಧವನ್ನು ಮಾಡಿಕೊಂಡು ಷಡ್ವಿಧ ಭಕ್ತಿ ಹಿಡಿದು ಆಚರಿಸಿ ಪರಮಾತ್ಮನೊಡನಿರುವ ಸ್ಥಿತಿಯನ್ನುಂಟು ಮಾಡಿಕೊಳ್ಳು ವುದೇ ಮಿಶ್ರಾರ್ಪಣದ ಮುಖ್ಯ ಉದ್ದೇಶವಿರುತ್ತದೆ. ಇದರಲ್ಲಿಯೂ ಕಾಯಾ ರ್ಪಣ, ಕರಣಾರ್ಪಣ, ಭಾವಾರ್ಪಣಗಳೆಂದು ಭಾಗಗಳಿವೆ.

(೧) **ಕಾಯಾರ್ಪಣ** : ಭೋಜ್ಯವನ್ನು ಆಚಾರಲಿಂಗದಲ್ಲಿ, ಪಾನ್ಯ ವನ್ನು ಗುರುಲಿಂಗದಲ್ಲಿ ಭಕ್ಷ್ಯವನ್ನು ( ಕಡಿದು ತಿನ್ನುವ ಪದಾರ್ಥ ) ಶಿವ ಲಿಂಗದಲ್ಲಿ, ಚೋಹ್ಯವನ್ನು ( ಸುರಿದು ತಿನ್ನುವ ಪದಾರ್ಥ ) ಜಂಗಮ ಲಿಂಗದಲ್ಲಿ ( ನೆಕ್ಕಿ ತಿನ್ನುವ ಪದಾರ್ಥ ) ಪ್ರಸಾದಲಿಂಗದಲ್ಲಿ ಇವೆಲ್ಲವುಗಳ ಅರಿವನ್ನು ಮಹಾಲಿಂಗದಲ್ಲಿ ಸಮರ್ಪಣೆ ಮಾಡತಕ್ಕದ್ದು. ಇದು ಷಡ್ವಿದ ಭಕ್ತಿ ಸಕೀಲಗಳಿಂದ ಆಗಬೇಕು. ಇದು ಕಾಯಾರ್ಪಣವು.

(೨) **ಕರಣಾರ್ಪಣ** : ಪ್ರಾಣಲಿಂಗವು ಘ್ರಾಣೇಂದ್ರಿಯದಲ್ಲಿ ಪಂಚಾ ಚಾರ ಸ್ವರೂಪವಾದ ಇಚಾರಲಿಂಗವಾಗಿ, ಜಿಹ್ವೆಯಲ್ಲಿ ಮಂತ್ರಮೂರ್ತಿ ಯಾದ ಗುರುಲಿಂಗವಾಗಿ, ನಯನದಲ್ಲಿ ಪ್ರಕಾಶ ಸ್ವರೂಪವಾದ ಶಿವಲಿಂಗ ವಾಗಿ, ತ್ವಕ್ಕಿನಲ್ಲಿ ಯಜನ (ಪೂಜಾ) ಸ್ವರೂಪವಾದ ಚರಲಿಂಗವಾಗಿ, ಶ್ರೋತ್ರದಲ್ಲಿ ಈಳನ (ಪ್ರಾರ್ಥನೆ) ಸ್ವರೂಪವಾದ ಪ್ರಸಾದಲಿಂಗವಾಗಿ, ಹೃದ ಯೆಂದ್ರಿಯದೊಳಗೆ ಬೋಧಾ ಸ್ವರೂಪವಾದ ಮಹಾಲಿಂಗವಾಗಿ ಇರುತ್ತದೆ. ಆದ್ದರಿಂದ ಸುಗಂಧ, ಸುರಸ, ಪರಮಪ್ರಕಾಶ, ಸುಸ್ಪರ್ಶನ, ಸುಶಬ್ದ, ಸುಪ ರಿಣಾಮ ಇವುಗಳನ್ನು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ ಜಂಗಮಲಿಂಗ, ಪ್ರಸಾದಲಿಂಗ ಮತ್ತು ಮಹಾಲಿಂಗಗಳಿಗೆ ಅರ್ಪಿಸತಕ್ಕದ್ದು. ಮುಂದೆ ಈ ಪದಾರ್ಥಗಳಲ್ಲಿ ಅವವುಗಳ ಗುಣಗಳ ಪ್ರಕಾರ ಪುನಃ ಆರು ವರ್ಗಗಳನ್ನು ವಚನಕಾರರು ಮಾಡಿ ಆಯಾ ಲಿಂಗಗಳಿಗೆ ಅರ್ಪಿಸಬೇಕೆಂದು ಹೇಳುತ್ತಾರೆ. (ಅ) ಗಂಧದಲ್ಲಿಯ ಆರು ಭಾಗಗಳು ಆವವೆಂದರೆ— ಪೃಥ್ವಿಯ ಗಂಧ, ಅಗರು ಮೊದಲಾದ ವೃಕ್ಷಗಳ ಗಂಧ, ಚಿಗುರು ಗಂಧ,

ಪುಷ್ಪದ ಗಂಧ, ಹಣ್ಣುಗಳ ಗಂಧ, ಮತ್ತು ಈ ಗಂಧಗಳನ್ನೆಲ್ಲವನ್ನು ಅರಿವ ಪರಿಣಾಮ, ಇವುಗಳನ್ನು ಅನುಕ್ರಮವಾಗಿ ಆಚಾರಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ ಗುರುಲಿಂಗ, ಆಚಾರಲಿಂಗದೊಳಗಣ ಶಿವಲಿಂಗ, ಆಚಾರಲಿಂಗದೊಳಗಣ ಜಂಗಮಲಿಂಗ, ಆಚಾರಲಿಂಗದೊಳಗಣ ಪ್ರಸಾದಲಿಂಗ, ಆಚಾರಲಿಂಗದೊಳಗಣ ಮಹಾಲಿಂಗಗಳಿಗೆ ಅರ್ಪಿಸತಕ್ಕದ್ದು. (ಬ) ರುಚಿಯಲ್ಲಿ ಮಧುರ, ಒಗರು, ಖಾರ, ಆಮ್ಲ, ಕಹಿ ಮತ್ತು ಅವೆಲ್ಲವುಗಳ ಪರಿಣಾಮ ಹೀಗೆ ಆರು ಭಾಗಗಳಿದ್ದು ಅವುಗಳನ್ನು ಅನುಕ್ರಮವಾಗಿ ಗುರುಲಿಂಗದೊಳಗಣ ಆಚಾರಲಿಂಗ–ಗುರುಲಿಂಗ–ಜಂಗಮಲಿಂಗ–ಪ್ರಸಾದಲಿಂಗ ಮಹಾಲಿಂಗಗಳಲ್ಲಿ ಅರ್ಪಿಸತಕ್ಕದ್ದು. (ಕ) ವರ್ಣಗಳಲ್ಲಿ ಪೀತ, ಶ್ವೇತ, ಕೆಂಪು, ಹಸರು, ಕೃಷ್ಣ ಮತ್ತು ಅವುಗಳ ಪರಿಣಾಮ ಎಂತಲೂ (ಡ) ಸ್ಪರ್ಶನದಲ್ಲಿ ಕಠಿಣ, ಮೃದು, ಉಷ್ಣ, ಶೈತ್ಯ, ಮಿಶ್ರ ಸ್ಪರ್ಶನ ಮತ್ತು ಅವುಗಳ ಪರಿಣಾಮವೆಂತಲೂ (ಇ) ನಾದದಲ್ಲಿ ಕಂಚಿನವಾದ್ಯ, ತಂತಿಯ ವಾದ್ಯ, ಭೇರಿ ವೊದಲಾದ ಚರ್ಮದ ವಾದ್ಯ, ಊದುವ ವಾದ್ಯ, ಗೀತನಾದ ಮತ್ತು ಅವುಗಳ ಪರಿಣಾಮವೆಂತಲೂ (ಫ) ತೃಪ್ತಿಯಲ್ಲಿ ಗಂಧ ತೃಪ್ತಿ, ರಸ ತೃಪ್ತಿ, ರೂಪತೃಪ್ತಿ, ಸ್ಪರ್ಶನ ತೃಪ್ತಿ, ಶಬ್ದ ತೃಪ್ತಿ, ಮಹದತೃಪ್ತಿ ಎಂತಲೂ ಭಾಗಗಳಿದ್ದು ಅವೆಲ್ಲವುಗಳನ್ನು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಇವುಗಳಲ್ಲಿಯ ಆರಾರು ಲಿಂಗಗಳಿಗೆ ಅರ್ಪಣ ಮಾಡತಕ್ಕದ್ದು. ಹೀಗೆ ೩೬ ತೆರದ ಕರಣಾರ್ಪಣಗಳಿರುತ್ತವೆ. ಕಾಯಾರ್ಪಣದೊಳಗಿನ ಮಿಶ್ರವೇ ಕರಣಾರ್ಪಣವೆಂದು ಹೇಳಬಹುದು.

(೩) **ಭಾವಾರ್ಪಣ** : ಇದರಲ್ಲಿ ಆತ್ಮ ತತ್ವಸಂಬಂಧವಾದ ೨೧೬ ತೆರದ ತೃಪ್ತಿಪದಾರ್ಥಗಳನ್ನು ೨೧೬ ಲಿಂಗಗಳಿಗೆ ೨೧೬ ತೆರದ ಭಕ್ತಿಸಕೀಲಗಳಿಂದ ಸಮರ್ಪಿತವಾಗುವುವು. ಕರಣಾರ್ಪಣದಲ್ಲಿರುವ ಪ್ರತಿಯೊಂದು ಗುಂಪಿನಲ್ಲಿ ಮೇಲೆ ಹೇಳಿದಂತೆ ಆರು ಆರು ವಿಭಾಗಗಳಾಗಿ ೩೬ ಭಾಗಗಳಾಗುವವಷ್ಟೇ. ಈ ಪ್ರತಿಯೊಂದರಲ್ಲಿ ಭಾವಲಿಂಗ ಸಂಬಂಧದಲ್ಲಿ ಆರು ಕ್ರಿಯೆಗಳಿರುತ್ತವೆ. ಅವು ಇಂದ್ರಿಯಗಳಿಗೆ ತಟ್ಟುವದು, ತಟ್ಟಿದ್ದನ್ನು ತಿಳಿಯುವುದು, ತಿಳಿದದ್ದನ್ನು ನಿಶ್ಚಯಿಸುವುದು, ನಿಶ್ಚಯಿಸಿದ್ದನ್ನು ದೃಢೀಕರಿಸುವುದು, ದೃಢೀಕರಿಸಿದ್ದನ್ನು ಅನುಭವಿಸುವುದು, ಅನುಭವಿಸಿದ್ದನ್ನು, ಆನಂದಿಸುವುದು ಹೀಗೆ ಇರುತ್ತವೆ. ಅವು ಆತ್ಮಸಂಬಂಧವಾದವುಗಳು. ಅವುಗಳನ್ನು ಭಾವಲಿಂಗಕ್ಕೆ ಅರ್ಪಿಸಬೇಕು. ೩೬ ತೆರದ ಕರಣಾರ್ಪಣದ ಪ್ರತಿಯೊಂದರಲ್ಲಿ ಮೇಲೆ ಹೇಳಿದ ಆರು ಕ್ರಿಯೆಗಳು ಇದ್ದು ಈ ಕ್ರಿಯೆಗಳೆಲ್ಲವು ೩೬ರ ಪ್ರತಿಯೊಂದರಲ್ಲಿ ಇರುವುದರಿಂದ ಎಲ್ಲವೂ ಕೂಡಿ ೨೧೬ ತೆರದ ಅರ್ಪಣಗಳಾಗುವವು. ಇದೇ ಭಾವಾರ್ಪಣವು. ಉದಾ– ಆಚಾರಲಿಂಗದೊಳಗಣ ಆಚಾರಲಿಂಗದೊಳಗಣ ಆಚಾರಲಿಂಗ, ಆಚಾರಲಿಂಗದೊಳಗಣ, ಆಚಾರಲಿಂಗದೊಳಗಣ ಗುರುಲಿಂಗ, ಹೀಗೆ ಅನುಕ್ರಮವಾಗಿ ಆಚಾರಲಿಂಗದೊಳಗಣ ಆಚಾರಲಿಂಗದಲ್ಲಿ ಆರು ವಿಭಾಗಗಳು, ಆ ಮೇಲೆ ಆಚಾರಲಿಂಗದೊಳಗಣ ಗುರುಲಿಂಗದೊಳಗಣ ಆಚಾರಲಿಂಗ ಮುಂತಾಗಿ ಆಚಾರಲಿಂಗದೊಳಗಣ ಗುರುಲಿಂಗದಲ್ಲಿಯ ಆರು ವಿಭಾಗಗಳು, ಹೀಗೆ ಪ್ರತಿಯೊಂದರಲ್ಲಿ ಆರಾರರಂತೆ ೩೬ ವಿಭಾಗಗಳು ಇದ್ದು, ಈ ಆರು ಸ್ಥಲಗಳಲ್ಲಿ ೩೬ ರಂತೆ ಎಲ್ಲ ಕೂಡಿ ಒಟ್ಟು ೨೧೬ ವಿಭಾಗಗಳು ಆಗುವುವು. ಇದು ಭಾವಾರ್ಪಣವು. ಇದರಲ್ಲಿ ಇಂದ್ರಿಯಗಳಿಗೆ ತಟ್ಟುವುದು ಆಚಾರಲಿಂಗಕ್ಕೆ, ತಟ್ಟಿದ್ದನ್ನು ತಿಳಿಯುವುದು ಗುರುಲಿಂಗಕ್ಕೆ, ತಿಳಿದದ್ದನ್ನು ನಿಶ್ಚಯಿಸುವುದು ಶಿವಲಿಂಗಕ್ಕೆ ನಿಶ್ಚಯಿಸಿದ್ದನ್ನು ದೃಢೀಕರಿಸುವುದು ಜಂಗಮಲಿಂಗಕ್ಕೆ. ದೃಢೀಕರಿಸಿದ್ದನ್ನು ಅನುಭವಿಸುವುದು ಪ್ರಸಾದಲಿಂಗಕ್ಕೆ, ಅನುಭವಿಸಿದ್ದನ್ನು ಆನಂದಿಸುವುದು ಮಹಾಲಿಂಗಕ್ಕೆ ಸಂಬಂಧಪಡುತ್ತವೆ. ಹೀಗೆ ಮಿಶ್ರಾರ್ಪಣದ ರೀತಿಯನ್ನು ಶಿವಶರಣರು ಬೋಧಿಸಿ ನಡೆದಿರುತ್ತಾರೆ.

೧೬೧. **ಇಷ್ಟಲಿಂಗದಲ್ಲಿ ಅರ್ಪಣದ ಸಂಬಂಧವು** : ಅಷ್ಟಾವರಣದ ಆಚರಣೆಯಲ್ಲಿ ಇಷ್ಟಲಿಂಗದ ಸಂಬಂಧವನ್ನಿಡದೆ ಆವ ಆವರಣದ ಆಚರಣೆಯನ್ನೂ ಆಚರಿಸಲಿಕ್ಕೆ ಬರಲಾರದು. ಅದರ ಮೂಲಕವಾಗಿಯೇ ಗುರುಲಿಂಗಜಂಗಮವನ್ನು ಅರಿಯಬೇಕು. ಹೀಗೆ ಅರಿತು ಪ್ರಸಾದಮೂಲಕವಾಗಿಯೇ ಭಕ್ತನು ಯಾವಾಗಲೂ ಆಚರಿಸುತ್ತಿರಬೇಕು. ಇದು ಮಿಶ್ರಾರ್ಪಣದಲ್ಲಿ ವರ್ಣಿಸಲ್ಪಟ್ಟಿದೆ. ಹಾಗೆಯೇ ನಿತ್ಯದ ಲಿಂಗಪೂಜೆಯ ಆಚರಣೆಯಲ್ಲಿಯೂ ಕೂಡ ಈ ತತ್ವಗಳನ್ನಿಟ್ಟುಕೊಳ್ಳಬೇಕು. ಈ ಅರ್ಪ

ಣದ ಮುಖ್ಯ ಆಚರಣೆಯು ಇಷ್ಟಲಿಂಗದ ಆವ ಆವ ಭಾಗಗಳಿಗೆ ಸಂಬಂಧಿಸಿದೆಂಬದನ್ನು ಅರಿತುಕೊಳ್ಳಬೇಕು. ಈ ಸಂಬಂಧವನ್ನು ಮಂತ್ರಮೂಲಕ ಮಾಡಿಕೊಳ್ಳತಕ್ಕದ್ದು. ಈ ವಿವರ ಹೇಗೆಂದರೆ— (೧) ಆಚಾರಲಿಂಗಕ್ಕೆ ಭೋಜ್ಯ, ಬೋನವೆಂಬ ಪದಾರ್ಥ, ಗಂಧವೆಂಬ ದ್ರವ್ಯ, ಕಠಿಣತೆ, ಪೃಥ್ವೀ ತತ್ವವಿದ್ದು ಓಂ ಹ್ರಾಂ ಮಂತ್ರದಿಂದ ಇಷ್ಟಲಿಂಗದ ಸಂಬಂಥ ನೂಡತಕ್ಕದ್ದು. (೨) ಗುರುಲಿಂಗಕ್ಕೆ ಪಾನ್ಯ, ಉದಕ ಪದಾರ್ಥ, ಮೃದುತ್ವ ದ್ರವ್ಯ, ಅಪ್ಪು ತತ್ವವಿದ್ದು. ಓಂ ಹ್ರೀಂ ಮಂತ್ರದಿಂದ ಇಷ್ಟಲಿಂಗದ ಕಟಿಯಲ್ಲಿ ಸಂಬಂಧಿಸತಕ್ಕದ್ದು. (೩) ಶಿವಲಿಂಗಕ್ಕೆ ಭಕ್ಷ್ಯ ರೂಪ ಪದಾರ್ಥ, ಉಷ್ಣತೆ ದ್ರವ್ಯ, ಅಗ್ನಿ ತತ್ವವಿದ್ದು, ಓಂ ಹ್ರೂಂ ಮಂತ್ರದಿಂದ ಇಷ್ಟಲಿಂಗದ ವೃತ್ತಕ್ಕೆ ಸಂಬಂಧಿಸತಕ್ಕದ್ದು. (೪) ಜಂಗಮಲಿಂಗಕ್ಕೆ ಚೋಹ್ಯ, ಸ್ಪರ್ಶನ ಪದಾರ್ಥ, ಮಿಶ್ರದ್ರವ್ಯ, ವಾಯುತತ್ವವಿದ್ದು ಓಂ, ಹ್ರೈಂ ಮಂತ್ರದಿಂದ ಇಷ್ಟ ಲಿಂಗದ ಗೋಮುಖಕ್ಕೆ ಸಂಬಂಧಿಸತಕ್ಕದ್ದು. (೫) ಪ್ರಸಾದಲಿಂಗಕ್ಕೆ ಲೇಹ್ಯ, ಶಬ್ದಪದಾರ್ಥ, ಮಿಶ್ರಸ್ಪರ್ಶನ, ಆಕಾಶತತ್ವವಿದ್ದು, ಓಂ, ಹ್ರೌಂ ಮಂತ್ರದಿಂದ ಇಷ್ಟಲಿಂಗದ ನಾಳಕ್ಕೆ ಸಂಬಂಧಿಸತಕ್ಕದ್ದು. (೬) ಮಹಾಲಿಂಗಕ್ಕೆ ಇರವಿಲ್ಲದ ಅರಿವು, ಭೋಜ್ಯಾದಿ ಐದು ಪದಾರ್ಥವೆಂದರಿವು, ಓಂ, ಹ್ರಃ ಮಂತ್ರದಿಂದ ಇಷ್ಟಲಿಂಗದ ಗೋಳಕಕ್ಕೆ ಸಂಬಂಧಿಸತಕ್ಕದ್ದು.

೧೬೨. **ಏಕಾದಶ ಪ್ರಸಾದಗಳು** : ಏಕಾದಶ ಪ್ರಸಾದಗಳಲ್ಲಿ ವೀರಶೈವನ ಪ್ರಗತಿಗೆ ಸಂಬಂಧಿಸಿದ ಎಲ್ಲ ಆಚರಣೆಗಳು ಅಡಕವಾಗಿರುತ್ತವೆ. ಆಚರಣೆಯ ಬೇರೆ ಬೇರೆ ದೃಷ್ಟಿಯಿಂದ ಅವುಗಳ ವರ್ಣನೆಯನ್ನು ವಚನಕಾರರು ಅನೇಕ ಬಗೆಯಾಗಿ ಮಾಡುತ್ತಾರೆ. ಆದರೆ ಅವೆಲ್ಲವೂ ಮೂಲದಲ್ಲಿ ಒಂದೇ ಅರ್ಥವುಳ್ಳವಾಗಿರುತ್ತವೆ. ಆದರೂ ಅವುಗಳಲ್ಲಿ ಆಂತರಂಗಿಕ ಮತ್ತು ಬಾಹ್ಯ ಎಂದು ಎರಡು ವಿಭೇದಗಳನ್ನು ನಾವು ಮಾಡಬಹುದು. ಕೇವು ವಚನಗಳಲ್ಲಿ ಇವುಗಳಿಗೆಯೇ ಅನುಕ್ರಮವಾಗಿ ಮಾಹೇಶ್ವರನ ಏಕಾದಶ ಪ್ರಸಾದಗಳು, ಮತ್ತು ಭಕ್ತನ ಏಕಾದಶ ಪ್ರಸಾದಗಳು ಎಂದು ಹೇಳುವುದುಂಟು. ಮೊದಲಿನವು ಹೆಚ್ಚಿಗೆ ತಾತ್ವಿಕವಾಗಿರುತ್ತವೆ. ಈ ಶಬ್ದಗಳಿಗೆ ಅನುಕ್ರಮವಾಗಿ ಮೀರಿದ ಸ್ಥಲಕ್ಕೆ ಸಂಬಂಧಿಸಿದವು, ಮತ್ತು ಮಾರ್ಗ ಕ್ರಿಯೆಗೆ ಸಂಬಂಧಿಸಿದವು ಎಂತಲೂ ಹೇಳಬಹುದು. ಮೊದಲನೆಯದರಲ್ಲಿ (ಅ) ವಿಧ, (ಬ) ವಿಧ, (ಕ) ವಿಧ, (ಡ) ವಿಧ ಎಂದು ನಾಲ್ಕು ವಿಧಗಳನ್ನು ಮಾಡುತ್ತೇವೆ. ೨ನೇ ವರ್ಗದಲ್ಲಿ ನಾವು ಒಂದೇ ವರ್ಗವನ್ನು ಮಾಡುತ್ತೇವೆ. ಈ ಎರಡಲ್ಲದೆ ಮೂರನೆಯ ವರ್ಗವೂ ಒಂದಿರುತ್ತದೆ. ಅದು ಸಂಪೂರ್ಣ ತಾತ್ವಿಕವು. ನಾವು ಸಂಕ್ಷೇಪವಾಗಿ ಇವುಗಳ ವ್ಯಾಖ್ಯೆಗಳನ್ನು ಆಯಾ ವಚನಕಾರರ ಅಭಿಪ್ರಾಯಗಳ ಪ್ರಕಾರ ವಿವರಿಸುತ್ತೇವೆ.



೧ನೇ ವರ್ಗವು : ಇದು ತಾತ್ವಿಕವಾದರೂ ಇದನ್ನು ಮೂರು ದೃಷ್ಟಿಯಿಂದ ಹೇಳಬಹುದು. ಅವುಗಳನ್ನು ಮೇಲೆ ಹೇಳಿದಂತೆ (ಅ) ವಿಧ, (ಬ) ವಿಧ, (ಕ) ವಿಧ, (ಡ) ವಿಧ ಎಂದು ಕರೆಯುತ್ತೇವೆ. ಅವು ಯಾವವೆಂದರೆ,

(ಅ) ವಿಧ : (೧) ಶುದ್ಧಪ್ರಸಾದ- ಮಂತ್ರಧ್ಯಾನದಿಂದ ಪದಾರ್ಥದ ಪೂರ್ವಾಶ್ರಯವಳಿದುದೇ ಶುದ್ಧಪ್ರಸಾದವು. (೨) ಸಿದ್ಧ ಪ್ರಸಾದ- ಶುದ್ಧ ಪ್ರಸಾದವನ್ನು ಲಿಂಗಕ್ಕೆ ನೈವೇದ್ಯ ಮಾಡಲು ಆಗ ಪ್ರಸಾದದ ಕಳೆ ಲಿಂಗದಲ್ಲಿ ನೆಲೆಗೊಳ್ಳುತ್ತದೆ. ಇದು ಸಿದ್ಧಪ್ರಸಾದವು. (೩) ಪ್ರಸಿದ್ಧ ಪ್ರಸಾದವು- ಸಿದ್ಧಪ್ರಸಾದವನ್ನು ಜಿಹ್ವೆಯಲ್ಲಿ ಸ್ವೀಕರಿಸುವುದು. ಇದು ಜಂಗಮಮುಖವಾದುದೆಂದು ಭಾವಿಸಿ ಹಾಗೆ ಸ್ವೀಕರಿಸಿದಲ್ಲಿ ಪ್ರಸಿದ್ಧ ಪ್ರಸಾದವು. (೪) ಆಪ್ಯಾಯನ ಪ್ರಸಾದ- ಮೇಲೆ ಹೇಳಿದ ಮೂರು ಪ್ರಸಾದಗಳು ಲಿಂಗಮುಖವಾದವುಗಳೆಂಬ ದೃಢಭಾವವು ನೆಲೆಗೊಳ್ಳಲು ಅದು ಆಪ್ಯಾಯನ ಪ್ರಸಾದವು. (೫) ಸಮಯಪ್ರಸಾದ— ಈ ಪ್ರಸಾದದ ಸೇವನಾ ಕಾಲದಲ್ಲಿ ಇತರ ಪದಾರ್ಥಗಳಿಗೆ ಲಕ್ಷವಿಡದೆ ಅವು ಅನರ್ಪಿತವೆಂದು ತಿಳಿಯುವುದು ಸಮಯಪ್ರಸಾದವು. (೬) ಪಂಚೇಂದ್ರಿಯ ವಿರಹಿತಪ್ರಸಾದ- ಈ ಪ್ರಸಾದ ಸೇವನೆಯಲ್ಲಿ ಪಂಚೇಂದ್ರಿಯಗಳು ಮುಟ್ಟದ ಮುನ್ನವೇ ಅವುಗಳನ್ನು ಸೇವಿಸುವುದು ಇರುತ್ತದೆ. (೭) ಅಂತಃಕರಣ ಚತುಷ್ಟಯ ವಿರಹಿತಪ್ರಸಾದ- ಅಂಗದ ಕರಣಗಳಿಗೆ ದೂರನಾಗಿ ಪ್ರಸಾದ ಸೇವಿಸುವುದು. (೮) ಪ್ರಸಾದಿಯ ಪ್ರಸಾದ- ಪ್ರಸಾದಿಯ ಪ್ರಸಾದವನ್ನು ಜಂಗಮಕ್ಕೆ ಕೊಟ್ಟು ಸಮರಸಭೋಗಮಾಡುವುದು. (೯) ಸದ್ಭಾವಪ್ರಸಾದ- ಪ್ರಸಾದವನ್ನು ಸದ್ಭಾವದಿಂದ ಸೇವಿಸುವುದೇ ಸದ್ಭಾವಪ್ರಸಾದವು. (೧೦) ಸಮತಾ

ಪ್ರಸಾದ- ಹಸಿವು ಅಡಗಿ ಶಾಂತಿಸೈರಣೆಯಿಂದಾಗುವುದೇ ಸಮತಾ ಪ್ರಸಾದವು. (೧೧) ಜ್ಞಾನಪ್ರಸಾದ- ಸಮತಾಪ್ರಸಾದದಲ್ಲಿ ತೃಪ್ತಿಯನ್ನು ಹೊಂದಿ ಕ್ರಿಯಾ ಖಂಡಿತ ಮಾಡುವಲ್ಲಿ ಅಖಂಡಪರಿಪೂರ್ಣಪ್ರಸಾದಿಯಾಗಿರುವುದು ಜ್ಞಾನಪ್ರಸಾದವು.

(ಬ) ವಿಧ— (೧) ಶುದ್ಧಪ್ರಸಾದ- ದೀಕ್ಷೆಯಿಂದ ತನುವನ್ನು ಶುದ್ಧಪಡಿಸಿದಲ್ಲಿ ಅದು ಶುದ್ಧಪ್ರಸಾದವು. (೨) ಸಿದ್ಧಪ್ರಸಾದವು- ಇಷ್ಟಲಿಂಗ ಧಾರಣಮಾಡಿಕೊಂಡು ಮಂತ್ರಸ್ವರೂಪವನ್ನು ನೆನೆಯುತ್ತಿರಲು ನೆನೆವ ಮನಸ್ಸಿನಲ್ಲಿ ಮಂತ್ರವು ಸಿದ್ಧಿಸಲು ಆ ಮನವೇ ಸಿದ್ಧಪ್ರಸಾದವು. (೩) ಪ್ರಸಿದ್ಧಪ್ರಸಾದವು- ತನುವು ಶುದ್ಧಪ್ರಸಾದ ಮತ್ತು ಮನವು ಸಿದ್ಧಪ್ರಸಾದವಾಯಿತ್ತೆಂಬ ಭಾವನೆಯೇ ಪ್ರಸಿದ್ಧಪ್ರಸಾದವು. (೪) ಆಪ್ಯಾಯನ ಪ್ರಸಾದ- ಈ ಮೂರಕ್ಕೆ ಮೂಲವಾದುದು ಆತ್ಮ. ಅದರಲ್ಲಿ ಪ್ರಸಾದವು ವೇಧಿಸಲು ಅದು ಆಪ್ಯಾಯನ ಪ್ರಸಾದವು. (೫) ಸಮಯಪ್ರಸಾದ— ಈ ವಿಧವು ಇತರ ಸಮಾಜದವರಿಗೆ ಸಮನಿಸಲಾರದು, ಆದರೆ ಶರಣನಿಗೆ ಮಾತ್ರ ಸಮನಿಸುತ್ತದೆಂಬ ತಿಳಿವಳಿಕೆಯು ಸಮಯ ಪ್ರಸಾದವು. (೬) ಪಂಚೇಂದ್ರಿಯವಿರಹಿತ ಪ್ರಸಾದ— ಪಂಚೇಂದ್ರಿಯಗಳಲ್ಲಿ ಪಂಚ ಪ್ರಸಾದವನ್ನು ಸಂಬಂಧಿಸಿಕೊಂಡು ಪಂಚವಿಷಯರಹಿತನಾಗಿರುವುದು ಪಂಚೇಂದ್ರಿಯವಿರಹಿತ ಪ್ರಸಾದವು. (೭) ಅಂತಃಕರಣ ಚತುಷ್ಟಯವಿರಹಿತ ಪ್ರಸಾದವು— ಇದು ಅಂಗಕರಣಗಳು ಲಿಂಗಕರಣಗಳಾಗಿರುವುದು ಇದೆ. (೮) ಪ್ರಸಾದಿಯ ಪ್ರಸಾದ— ಸರ್ವಾಂಗವು ಲಿಂಗಮಯವಾಗಿ ಲಿಂಗಭೋಗೋಪಭೋಗಿಯಾಗಿರುವುದು ಪ್ರಸಾದಿಯ ಪ್ರಸಾದ. (೯) ಸದ್ಭಾವ ಪ್ರಸಾದ- ಭಾವದಲ್ಲಿ ಸದ್ಭಾವವುಳ್ಳವನಾಗುವುದು ಸದ್ಭಾವ ಪ್ರಸಾದ. (೧೦) ಸಮತಾಪ್ರಸಾದ— ಸದ್ಭಾವಿಯಾಗಿ ಪರರ ನಿಂದೆಗಳನ್ನು ಸೈರಿಸುತ್ತ ಸರ್ವರಲ್ಲಿ ಸಮತಾಭಾವಿಯಾಗಿರುವುದು ಸಮತಾಪ್ರಸಾದವು. (೧೧) ಜ್ಞಾನಪ್ರಸಾದ— ಸಮತಾಭಾವವೇ ಅಂಗವಾದ ಶರಣನು ಗಾಳಿ ಇಲ್ಲದ ದೀಪದಂತೆ ಸಹಜಸುಜ್ಞಾನದಲ್ಲಿರುವುದೇ ಜ್ಞಾನಪ್ರಸಾದವು.

(ಕ) ವಿಧವು : (೧) ಗುರುಪ್ರಸಾದ- ಗುರುಮುಖದಿಂದ ಬಂದುದು ಗುರುಪ್ರಸಾದವು. ಇದು ಶುದ್ಧಪ್ರಸಾದವೆಂತಲೂ ಹೇಳಬಹುದು.



(೨) ಲಿಂಗಪ್ರಸಾದ- ಗುರುಪ್ರಸಾದವನ್ನು ಲಿಂಗಕ್ಕೆ ಅರ್ಪಿಸುವುದು ಲಿಂಗ ಪ್ರಸಾದವು. ಇದು ಸಿದ್ಧಪ್ರಸಾದವೆಂತಲೂ ಹೇಳಬಹುದು. (೩) ಜಂಗಮ ಪ್ರಸಾದ— ಭೋಜನಕ್ಕೆ ಸಿದ್ಧಪಡಿಸಿ ಲಿಂಗಕ್ಕೆ ಕೊಟ್ಟು ಸಲಿಸುವುದೇ ಜಂಗಮಪ್ರಸಾದವು. ಇದು ಪ್ರಸಿದ್ಧ ಪ್ರಸಾದವೆಂತಲೂ ಹೇಳಬಹುದು. (೪) ಆಪ್ಯಾಯನಪ್ರಸಾದ— ಲಿಂಗಾರ್ಪಿತದ ಅಪೇಕ್ಷೆಯಿಂದ ಸಲಿಸುವುದೇ ಆಪ್ಯಾಯನಪ್ರಸಾದ. (೫) ಸಮಯಪ್ರಸಾದ ಗುರುಲಿಂಗ ಜಂಗಮವನ್ನು ಕುರಿತು ತೆಗೆದುಕೊಂಬುವುದು ಸಮಯ ಪ್ರಸಾದವು (೬) ಪಂಚೇಂದ್ರಿಯವಿರಹಿತ ಪ್ರಸಾದ— ಪಂಚೇಂದ್ರಿಯಗಳಲ್ಲಿ ಪಂಚವಿಷಯ ಪದಾರ್ಥಗಳನ್ನು ಪಂಚವಿಧಲಿಂಗಕ್ಕೆ ಸಮರ್ಪಣೆಮಾಡುವುದು ಪಂಚೇಂದ್ರಿಯ ವಿರಹಿತಪ್ರಸಾದವು. (೭) ಅಂತಃಕರಣವಿರಹಿತ ಚತುಷ್ಟಯ ಪ್ರಸಾದ— ಅಹಂಕಾರದಲ್ಲಿ ಶಿವಚಿಂತನೆಯುಳ್ಳಾತನಾಗಿ ಸಲಿಸುವುದು ಅಂತಃಕರಣವಿರಹಿತ ಪ್ರಸಾದವು. (೮) ಪ್ರಸಾದಿಯ ಪ್ರಸಾದ— ಗುರುಲಿಂಗಜಂಗಮದ ಪ್ರಸಾದವನ್ನು ಅಪೇಕ್ಷಿಸಿ ಕೊಂಬುವುದೇ ಪ್ರಸಾದಿಯ ಪ್ರಸಾದವು. (೯) ಸದ್ಭಾವ ಪ್ರಸಾದ— ತ್ರಿವಿಧಾಂಗದಲ್ಲಿ ತ್ರಿವಿಧಲಿಂಗವನ್ನು ಸಂಬಂಧಿಸಿ ಆ ಲಿಂಗವೇ ತಾನೆಂದರಿದು ಆ ತ್ರಿವಿಧ ಲಿಂಗಕ್ಕೆ ಕೊಡುವುದು ಸದ್ಭಾವಪ್ರಸಾದವು. (೧೦) ಸಮತಾಪ್ರಸಾದ— ಬಹಿರಂಗ ಪ್ರಪಂಚವನ್ನು ನಷ್ಟಮಾಡಿ ಅರುಹುವಿಡಿದು ಸಲಿಸುವುದು ಸಮತಾಪ್ರಸಾದವು. (೧೧) ಜ್ಞಾನ ಪ್ರಸಾದ— ಗುರುವಿನ ಪ್ರಸನ್ನತ್ವವೇ ಜ್ಞಾನಪ್ರಸಾದವು.

ಇದರಲ್ಲಿ (ಅ) ವಿಧವು ಬಾಹ್ಯ ಶರೀರಕ್ಕೆ ಸಂಬಂಧಪಡುತ್ತದೆ. (ಬ) ವಿಧ ಮತ್ತು (ಕ) ವಿಧಗಳು ಪ್ರಾಣ ಮತ್ತು ಜ್ಞಾನಕ್ಕೆ ಹೆಚ್ಚಿಗೆ ಸಂಬಂಧಪಡುತ್ತವೆ. ಮುಖ್ಯವಾಗಿ ಶುದ್ಧ ಸಿದ್ಧ ಪ್ರಸಿದ್ಧ ಪ್ರದಾರ್ಥಗಳ ಮೂಲಕ ಗುರುಲಿಂಗ ಜಂಗಮವನ್ನು ಮೊದಲು ಅರಿಯಬೇಕು. ಹೀಗೆ ಅರಿತು ಮುಂದೆ ಹೇಗೆ ಆಚರಿಸಬೇಕೆಂಬುದು ಅವುಗಳ ಮುಂದಿನ ೮ ಪ್ರಸಾದಗಳಲ್ಲಿ ಹೇಳಲ್ಪಟ್ಟಿರುತ್ತದೆ. (ಅ) ವಿಧವು ಬಾಹ್ಯ ಆಚರಣೆಗೆ ಸಂಬಂಧವಾದುದು. (ಬ) ಮತ್ತು (ಕ) ವಿಧಗಳು ತಾತ್ವಿಕವಾಗಿರುತ್ತವೆ. ಅವುಗಳು ಬೇರೆ ವಿಧಗಳಾಗಿ ವ್ಯಾಖ್ಯೆಗಳಲ್ಲಿ ಕಂಡರೂ ಅವೆಲ್ಲವೂ ಒಂದೇ ಇರುತ್ತವೆ.

(೮) ಅಷ್ಟಮದಲ್ಲಿ—ಪ್ರಸಾದದ ಅರ್ಪಿತವು. (೯) ನವಮದಲ್ಲಿ— ನಿಃಶ್ಯೂನ್ಯಾರ್ಪಿತವು. (೧೦) ದಶಮದಲ್ಲಿ— ತನ್ನ ಮರೆದು ಮಹದರ್ಪಿತವು. (೧೧) ಏಕಾದಶದಲ್ಲಿ ಮಹಾಘನವು ತನ್ನನೇ ನುಂಗಿತ್ತು.

ಈಪ್ರಕಾರ ಪಾದೋದಕ ಪ್ರಸಾದಗಳ ವಿವರಣೆಗಳಿರುತ್ತವೆ. ಈ ವಿಚಾರಗಳು ಶಿವಶರಣರ ಉಕ್ತಿಗಳಲ್ಲಿ ಮಾತ್ರ ದೊರೆಯುತ್ತವೆ. ಅವು ಬಹು ಗೂಢವೂ ಉದಾತ್ತವಾದವುಗಳೂ ಇರುತ್ತವೆ. ಹಿಂದೂ ಧರ್ಮದ ಬೇರೆ ಯಾವ ಮತಗಳಲ್ಲಿಯೂ ಇಂಥ ವಿಚಾರಗಳು ದೊರೆಯಲಾರವು. ವಚನಾರ್ಥಗಳನ್ನು ಬಹು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸಿದ್ದೇವೆ. ಪ್ರಸಾದದ ಪರಿಣಾಮಗಳು ಮುಂದೆ ವಿವರಿಸಲ್ಪಟ್ಟವೆ.

೧೬೩. **ಪ್ರಸಾದದ ಪರಿಣಾಮಗಳು :** ಶುದ್ಧಪ್ರಸಾದವು ತನುವಿಗೆ ಸಂಬಂಧವು. ಆದ್ದರಿಂದ ಅದರಿಂದ ತನು ವಿಚಾರಗಳಳಿಯುವವು. ಸಿದ್ಧ ಪ್ರಸಾದವು ಮನಸ್ಸಿಗೆ ಸಂಬಂಧವು. ಆದ್ದರಿಂದ ಮನಸ್ಸಿನ ವಿಕಾರಗಳು ದೂರಾಗುವವು. ಪ್ರಸಿದ್ಧ ಪ್ರಸಾದವು ಕಾರಣ ದೇಹಕ್ಕೆ ಸಂಬಂಧವು. ಆದ್ದರಿಂದ ಭಾವದ ಭ್ರಮೆಯು ಕೆಡುವುದು. ಮುಂದೆ ಆಪ್ಯಾಯನ ಪ್ರಸಾದದಿಂದ ದುರಾಶೆಗಳು ಅಡಗುವವು. ಸಮಯ ಪ್ರಸಾದದಿಂದ ವಿಷಯಗಳು ಲಿಂಗ ವಿಷಯಗಳಾಗುವುವು. ಪಂಚೇಂದ್ರಿಯ ವಿರಹಿತ ಪ್ರಸಾದದಿಂದ ಮನುಷ್ಯನ ಇಂದ್ರಿಯಗಳು ಲಿಂಗೇಂದ್ರಿಯಗಳಾಗುವುವು. ಮುಂದೆ ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದದಿಂದ ಕರಣಗಳು, ಸಮತಾ ಪ್ರಸಾದದಿಂದ ಅಂತರಂಗದ ಒಲವುಗಳು, ಸದ್ಭಾವ ಪ್ರಸಾದದಿಂದ ಭಾವವು, ಜ್ಞಾನ ಪ್ರಸಾದದಿಂದ ಜ್ಞಾನವು, ಶುದ್ಧವಾಗುವುವು. ಹೀಗೆ ಪ್ರಸಾದಿಗಳು ಸರ್ವಸಂಗ ಪರಿತ್ಯಾಗರಾಗಿ ಬಯಲಲ್ಲಿ ಬಯಲಾಗುವರು. ಇತರ ಮತಾನುಯಾಯಿಗಳು ಯಜ್ಞಯಾಗಾದಿ ಕರ್ಮಗಳು, ಯೋಗಾಭ್ಯಾಸ, ತಪಸ್ಸು ಮೊದಲಾದ ಕಷ್ಟವಾದ ಆಚರಣೆಗಳನ್ನು ಆಚರಿಸುವುದುಂಟು. ಆದರೆ ವೀರಶೈವರು ಅಷ್ಟಾವರಣ ನಿರತರಾಗಿ ಮಂತ್ರಮೂಲಕ ಪಾದೋದಕ ಪ್ರಸಾದ ಗ್ರಾಹಕರಾಗಿ ನಿಜಸಮಾಧಿ ಅಥವಾ ಬಯಲನ್ನು ಅಥವಾ ನಿರವಯಸ್ಥಿತಿಯನ್ನು ಪಡೆಯುವರು.



೧೬೪. **ಪಾದೋದಕ ಪ್ರಸಾದಗಳ ಪರಸ್ಪರ ಸಂಬಂಧ :** ಮೊದಲು ಪಾದೋದಕವು, ಆ ಮೇಲೆ ಪ್ರಸಾದ ಈ ಪ್ರಕಾರ ಅಷ್ಟಾವರಣಗಳಲ್ಲಿ ಕ್ರಮವಿರುತ್ತದೆ. ಮೊದಲು ಪ್ರಸಾದವು ಆಮೇಲೆ ಪಾದೋದಕವೆಂದು ಭಾವಿಸುವುದು ತಪ್ಪು ಇರುತ್ತದೆ. ಪಾದೋದಕಕ್ಕಿಂತಲೂ ಸೂಕ್ಷ್ಮವಾದುದು ಮತ್ತು ವ್ಯಾಪಕ ಭಾವವುಳ್ಳದ್ದು. ಪಾದೋದಕವು ಮನುಷ್ಯನ ಬಹಿರಂಗ ಮತ್ತು ಅಂತರಂಗಗಳನ್ನು ಶುದ್ಧಗೊಳಿಸುತ್ತದೆ ಆದರೆ ಪ್ರಸಾದವು ಮನುಷ್ಯನ ಯಾವತ್ತು ಬಾಹ್ಯ ಮತ್ತು ಅಂತರಂಗ ಕ್ರಿಯೆಗಳ ಮೇಲೆ ಪರಿಣಾಮ ಮಾಡುತ್ತದೆ. ಅವನ ಸ್ಥೂಲ. ಸೂಕ್ಷ್ಮ, ಕಾರಣ ಶರೀರಗಳು, ಅವನ ಇಂದ್ರಿಯಗಳು, ಕರಣಗಳು, ಭಾವ, ಜ್ಞಾನಗಳು ಇವುಗಳ ಮೇಲೆಲ್ಲ ಅದು ತನ್ನ ಪರಿಣಾಮವನ್ನು ಮಾಡುತ್ತದೆ

೧೬೫. **ಷಡ್ವಿಧಲಿಂಗಗಳಿಗೆ ಪಾದೋದಕ ಪ್ರಸಾದಗಳ ಸಂಬಂಧ:** ಈ ಸಂಬಂಧಗಳು ಹೇಗೆಂದರೆ— (ಅ) ಪಾದೋದಕ ಸಂಬಂಧ— (೧) ಸ್ಪರ್ಶನೋದಕ ಅವಧಾನೋದಕಗಳು ಅನುಕ್ರಮವಾಗಿ ಆಚಾರಲಿಂಗ ಗುರುಲಿಂಗಗಳಿಗೆ ಸಂಬಂಧವು. ಇವು ಗುರುಪಾದೋದಕವಾಗಿ ಇಷ್ಟ ಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಗುರು ಸ್ವರೂಪವು. (೨) ಆಪ್ಯಾಯನೋದಕ, ಹಸ್ತೋದಕಗಳು ಅನುಕ್ರಮವಾಗಿ ಶಿವಲಿಂಗ ಜಂಗಮಲಿಂಗಗಳಿಗೆ ಸಂಬಂಧವು. ಇವು ಲಿಂಗ ಪಾದೋದಕವಾಗಿ ಪ್ರಾಣಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಲಿಂಗ ಸ್ವರೂಪವು. (೩) ಪರಿಣಾಮೋದಕ ನಿರ್ನಾಮೋದಕಗಳು ಅನುಕ್ರಮವಾಗಿ ಪ್ರಸಾದಲಿಂಗ ಮಹಾಲಿಂಗಗಳಿಗೆ ಸಂಬಂಧವು. ಇವು ಜಂಗಮ ಪಾದೋದಕವಾಗಿ ಭಾವಲಿಂಗಾರ್ಪಿತವಾಗುತ್ತವೆ. ಇದು ಅನಾದಿ ಜಂಗಮ ಸ್ವರೂಪವು. ಕಡೆಗೆ ಉಳಿಯುವ ಸತ್ಯೋದಕವು ನಿಃಕಲ ಪರತತ್ವಕ್ಕೆ ಸಮರ್ಪಣೆಯಾಗುತ್ತದೆ. ಇದು ಅನಾದಿ ಶರಣ ಪ್ರಸನ್ನ ಮೂರ್ತಿಯು.

(ಬ) **ಪ್ರಸಾದ ಸಂಬಂಧ :** (೧) ಆಪ್ಯಾಯನ ಪ್ರಸಾದ ಮತ್ತು ಸಮಯ ಪ್ರಸಾದಗಳು ಗುರು ಪ್ರಸಾದವೆನಿಸಿಕೊಂಡು ಆಚಾರಲಿಂಗ ಗುರುಲಿಂಗಗಳಿಗೆ ಸಂಬಂಧವು ಇವು ಸುಚಿತ್ತ ಹಸ್ತ, ಸುಬುದ್ಧಿ ಹಸ್ತ, ನಿರುಪಾಧಿ ಹಸ್ತ, ಇವು ಗಳ ಮೂಲಕ ಇಷ್ಟ ಲಿಂಗದಲ್ಲಿ ಸಂಬಂಧಿಸುತ್ತವೆ.

ಇದು ಅನಾದಿ ಭಕ್ತ ಸ್ವರೂಪವು. (೨) ಪಂಚೇಂದ್ರಿಯ ವಿರಹಿತ ಪ್ರಸಾದ, ಕರಣಚತುಷ್ಟಯ ವಿರಹಿತ ಪ್ರಸಾದಗಳು ಲಿಂಗಪ್ರಸಾದವೆನಿಸಿಕೊಂಡು ಶಿವಲಿಂಗ, ಜಂಗಮಲಿಂಗಗಳಿಗೆ ಸಂಬಂಧವು. ಇವು ನಿರಹಂಕಾರ ಹಸ್ತ, ಸುಮನ ಹಸ್ತ, ನಿರಾಲಂಬ ಹಸ್ತಗಳ ಮೂಲಕ ಪ್ರಾಣಲಿಂಗದಲ್ಲಿ ಸಂಬಂಧಿಸುತ್ತವೆ. ಇದು ಅನಾದಿ ಶೂನ್ಯ ಲಿಂಗ ಸ್ವರೂಪವು. (೩) ಸಮತಾ ಪ್ರಸಾದ. ಪ್ರಸಾದಿಯ ಪ್ರಸಾದಗಳು ಜಂಗಮ ಪ್ರಸಾದವೆನಿಸಿಕೊಂಡು ಪ್ರಸಾದಲಿಂಗ ಮಹಾಲಿಂಗಗಳಿಗೆ ಸಂಬಂಧವು. ಇವು ಸುಜ್ಞಾನ ಹಸ್ತ, ಸದ್ಭಾವ ಹಸ್ತ, ನಿಃಪ್ರಪಂಚ ಹಸ್ತ, ಇವುಗಳ ಮೂಲಕ ಭಾವಲಿಂಗದಲ್ಲಿ ಸಂಬಂಧಿಸುತ್ತವೆ. ಇದು ಅನಾದಿ ನಿರಂಜನ ಜಂಗಮ ಸ್ವರೂಪು. (೪) ಆಮೇಲೆ ಸದ್ಭಾವಪ್ರಸಾದ ಮತ್ತು ಜ್ಞಾನ ಪ್ರಸಾದಗಳು ಪರತತ್ವ ಜ್ಯೋತಿರ್ಮಯ ಲಿಂಗದೇವನಿಗೆ ನಿಜಾನಂದ ಹಸ್ತದಿಂದ ಸಮರ್ಪಿತವಾಗಲು ಅವೇ ಅನಾದಿ ಪರಿಪೂರ್ಣನಿಜವಸ್ತುವೆಂದು ಹೇಳಲ್ಪಡುತ್ತದೆ. ಈ ವಿವರಣೆಯಲ್ಲಿ ಗುರು ಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದಗಳೂ, ಗುರು ಪಾದೋದಕ, ಲಿಂಗ ಪಾದೋದಕ, ಜಂಗಮ ಪಾದೋದಕಗಳೂ ಇವುಗಳನ್ನು ವಚನಕಾರರು ವಿವರಿಸಿಲ್ಲ. ಯಾಕಂದರೆ ಉಳಿದ ಪಾದೋದಕ ಪ್ರಸಾದಗಳ ಆಚರಣೆಯ ಮೂಲಕ ಈ ಎರಡೂ ತ್ರಿವಿಧಗಳು ಆಚರಿಸುವವನಲ್ಲಿ ತಾವಾಗಿಯೂ ಒಡಮೂಡಹತ್ತುತ್ತವೆಂದು ಭಾವಿಸಿರಬೇಕೆಂದು ತೋರುತ್ತದೆ.

೧೬೦. **ಇಷ್ಟಲಿಂಗಕ್ಕೆ ಪಾದೋದಕ ಪ್ರಸಾದಗಳ ಸಂಬಂಧ:** ಈ ಸಂಬಂಧವು ಏಕೋತ್ತರ ಶತಸ್ಥಲದ ಮೂಲಕ ಇರುತ್ತದೆ. ಈ ಸ್ಥಲಗಳಲ್ಲಿ ೫೭ ಲಿಂಗಸ್ಥಲಗಳಿವೆ. ಅವುಗಳಲ್ಲಿ ಮೊದಲಿನ ೫೪ ಸ್ಥಲಗಳು ಆಚಾರಾದಿ ಆರು ಲಿಂಗಗಳಿಗೆ ಸಂಬಂಧಿಸುತ್ತವೆ. ಆಮೇಲೆ ಕಡೆಗೆ ಭಾವಾಭಾವನಷ್ಟಸ್ಥಲ, ಸ್ವಯಚರಪರವರಿಯದಸ್ಥಲ ಮತ್ತು ಜ್ಞಾನಶೂನ್ಯಸ್ಥಲ ಇವು ಉಳಿಯುತ್ತವೆ. ಇವು ಅನುಕ್ರಮವಾಗಿ ಜ್ಞಾನಗುರು, ಜ್ಞಾನಲಿಂಗ, ಜ್ಞಾನಜಂಗಮಗಳೆಂದು ತಿಳಿಯಲ್ಪಡುತ್ತವೆ. ಇವುಗಳ ಮೂಲಕ ಇಷ್ಟಲಿಂಗದ ಮೂರು ಭಾಗಗಳಲ್ಲಿ ಪಾದೋದಕ ಪ್ರಸಾದಗಳ ಸಂಬಂಧ



ಉಂಟಾಗುತ್ತದೆ. ಆದ್ದರಿಂದ ಈ ಪಾದೋದಕ ಪ್ರಸಾದಗಳಲ್ಲಿ ೩ ವಿಧಗಳು ಕಲ್ಪಿಸಲ್ಪಟ್ಟಿವೆ.

(೪) ಭಾವಾಭಾವನಷ್ಟಸ್ಥಲವು. ಇದು ಗುರುಸ್ವರೂಪವು. ಅದು ಕ್ರಿಯಾಗುರು ಲಿಂಗಜಂಗಮ ಸ್ವರೂಪದ ಇಷ್ಟಮಹಾಲಿಂಗದ ಅಧೋಪೀಠಿಕೆಗೆ ಸಂಬಂಧಪಡುತ್ತದೆ. ಅಲ್ಲಿ ಸ್ಪರ್ಶನೋದಕ ಮತ್ತು ಅವಧಾನೋದಕಗಳಿವೆ. ಅವು ಗುರುಪಾದೋದಕವೆನಿಸಿಕೊಳ್ಳುತ್ತವೆ. ಹಾಗೆಯೇ ಅಲ್ಲಿ ಆಪ್ಯಾಯನ ಪ್ರಸಾದ ಮತ್ತು ಸಮಯ ಪ್ರಸಾದಗಳಿರುತ್ತವೆ ಅವು ಗುರುಪ್ರಸಾದವೆನಿಸಿಕೊಳ್ಳುತ್ತವೆ. ಹೀಗೆ ಪಾದೋದಕಪ್ರಸಾದಗಳು ಅಳವಡಲು ಈ ರೀತಿ ಆಚರಿಸುವವರು ಆದಿಪ್ರಸಾದಿ ಮತ್ತು ನಿಚ್ಚಪ್ರಸಾದಿಗಳೆಂದು ಹೇಳಲ್ಪಡುತ್ತಾರೆ.

(೫) ಸ್ವಯಚರಪರವರಿಯದ ಸ್ಥಲವು. ಇದು ಲಿಂಗಸ್ವರೂಪವು. ಜ್ಞಾನ ಗುರುಲಿಂಗಜಂಗಮ ಸ್ವರೂಪದ ಇಷ್ಟಮಹಾಲಿಂಗದ ಗೋಳಕದಲ್ಲಿ ಅದು ಸಂಬಂಧಪಡುತ್ತದೆ. ಅಲ್ಲಿ ಆಪ್ಯಾಯನೋದಕ ಮತ್ತು ಹಸ್ತೋದಕಗಳು ಇರುತ್ತವೆ. ಅವುಗಳೇ ಲಿಂಗಪಾದೋದಕಗಳು. ಹಾಗೆಯೇ ಅಲ್ಲಿ ಪಂಚೇಂದ್ರಿಯ ವಿರಹಿತ ಪ್ರಸಾದ ಮತ್ತು ಕರಣಚತುಷ್ಟಯವಿರಹಿತ ಪ್ರಸಾದಗಳು ನೆಲಸಿರುತ್ತವೆ. ಅವು ಲಿಂಗಪ್ರಸಾದಗಳು. ಅವು ಇಷ್ಟಲಿಂಗದ ಗೋಳಕದಲ್ಲಿ ಅಳವಡಲು, ಅಂತ್ಯಪ್ರಸಾದಿ ಮತ್ತು ಸಮಯಪ್ರಸಾದಿಗಳೆಂದು ಹೀಗೆ ಆಚರಿಸುವವರು ಹೇಳಲ್ಪಡುತ್ತಾರೆ.

(೬) ಜ್ಞಾನಶೂನ್ಯಸ್ಥಲ, ಇದು ಮೂಲ ಜಂಗಮಸ್ವರೂಪವಾಗಿದೆ. ಅದು ಮಹಾಜ್ಞಾನ ಗುರುಲಿಂಗಜಂಗಮ ಸ್ವರೂಪವಾದ ಇಷ್ಟ ಮಹಾಲಿಂಗದ ಜಲರೇಖೆಯುಳ್ಳ ಪಾಣಿಬಟ್ಟಲಕ್ಕೆ ಸಂಬಂಧಪಡುತ್ತದೆ. ಅಲ್ಲಿ ಪರಿಣಾಮೋದಕ ನಿರ್ನಾಮೋದಕ ಮತ್ತು ಸತ್ಯೋದಕಗಳು ನೆಲಸಿರುತ್ತವೆ. ಅವುಗಳೇ ಜಂಗಮಪಾದೋದಕಗಳು ಹಾಗೆಯೇ ಅಲ್ಲಿ ಸಮತಾಪ್ರಸಾದ, ಪ್ರಸಾದಿಯ ಪ್ರಸಾದ, ಸದ್ಭಾವ ಪ್ರಸಾದ, ಮತ್ತು ಜ್ಞಾನ ಪ್ರಸಾದಗಳು ಸಂಬಂಧಪಡುತ್ತವೆ. ಅವೇ ಜಂಗಮಪ್ರಸಾದಗಳು. ಹೀಗೆ ಆಚರಿಸುವವರು ಸೇವ್ಯಪ್ರಸಾದಿ ಮತ್ತು ಅಚ್ಚಪ್ರಸಾದಿಗಳೆಂದು ಹೇಳಲ್ಪಡುತ್ತಾರೆ.

ಹೀಗೆ ಸ್ವೀಕರಿಸಿದ ಪಾದೋದಕವೇ ನೇತ್ರದಲ್ಲಿ ಕರುಣಜಲ, ವಾಕ್ಕಿನಲ್ಲಿ ವಿನಯಜಲ, ಅಂತರಂಗದಲ್ಲಿ ಸಮತಾಜಲವಾಗಿರುತ್ತದೆ. ಈ ತ್ರಿವಿಧೋದಕವು ತಿಳಿದುಪ್ಪವು ಹೆರೆದುಪ್ಪವಾದಂತೆ ಇಷ್ಟ ಮಹಾಲಿಂಗಕ್ಕೆ ತ್ಯಾಗಾಂಗವಾದ ಶುದ್ಧ ಪ್ರಸಾದವಾಗುವುದು. ಪ್ರಾಣಲಿಂಗಕ್ಕೆ ಭೋಗಾಂಗವಾದ ಸಿದ್ಧಪ್ರಸಾದವಾಗುವುದು. ಮತ್ತು ಭಾವಲಿಂಗಕ್ಕೆ ಯೋಗಾಂಗವಾದ ಪ್ರಸಿದ್ಧ ಪ್ರಸಾದವಾಗುವುದು.

ಈ ತ್ರಿವಿಧಪ್ರಸಾದ ಪಾದೋದಕಗಳು ಶರಣನಿಗೆ ಶುದ್ಧಪ್ರಸಾದವಾಗಿ ಅವನ ಜಿಹ್ವೆಯಲ್ಲಿ ಅಚ್ಚಪ್ರಸಾದವಾಗುತ್ತವೆ. ಸಿದ್ಧಪ್ರಸಾದವಾಗಿ ಅವನ ಹಸ್ತದಲ್ಲಿ ನಿಚ್ಚಪ್ರಸಾದವಾಗುತ್ತದೆ. ಪ್ರಸಿದ್ಧ ಪ್ರಸಾದವಾಗಿ ಅವನ ಪಾದದಲ್ಲಿ ಸಮಯಪ್ರಸಾದವಾಗುತ್ತವೆ. ಇವೆಲ್ಲವು ಶ್ರೀ ಪ್ರಭುದೇವರ ವಿಚಾರಗಳು.

೧೬೭ **ಚಕ್ರಗಳಿಗೆ ಪಾದೋದಕ ಪ್ರಸಾದಗಳ ಸಂಬಂಧ :** ಪಾದೋದಕ ಪ್ರಸಾದಗಳು ಭಕ್ತನ ಚಕ್ರಗಳ ಮೇಲೆಯೂ ಪರಿಣಾಮ ಮಾಡುತ್ತವೆ. ಅವುಗಳಲ್ಲಿ ಬೇರೆ ಬೇರೆ ಮಂತ್ರಸ್ವರೂಪವುಳ್ಳ ಲಿಂಗಗಳು ನೆಲಸಿದ್ದು, ಆಯಾ ಪಾದೋದಕ ಪ್ರಸಾದ ಸೇವನೆಯ ಮೂಲಕ ಆ ಲಿಂಗಗಳಲ್ಲಿ ಮತ್ತು ಆ ಲಿಂಗಗಳಿದ್ದ ಚಕ್ರಗಳಲ್ಲಿ ಚೈತನ್ಯವು ಉಂಟಾಗುತ್ತದೆ. ಇದು ಭಕ್ತನ ಪ್ರಗತಿಗೆ ಕಾರಣವಾಗುತ್ತದೆ. ಈ ಪ್ರಗತಿಯು ಭಕ್ತನ ಕಾಯ, ಮನ, ಭಾವಗಳಲ್ಲಿ ಹಾಗೆಯೇ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಈ ಚಕ್ರಗಳು, ಮುಂದೆ ಈ ಚಕ್ರಗಳ ತರುವಾಯ ಇರುವ ಬ್ರಹ್ಮಚಕ್ರ ಮತ್ತು ಶಿಖಾಚಕ್ರ, ಇವುಗಳಲ್ಲೆಲ್ಲ ಜಾಗ್ರತೆಯ ಉತ್ಪನ್ನವಾಗಲು ಎಲ್ಲಕ್ಕೂ ಕಡೆಯದಾದ ಪಶ್ಚಿಮ ಚಕ್ರದಲ್ಲಿಯೂ ಲಿಂಗದ ಕಳೆಯು ಪೂರ್ಣತೆಯನ್ನು ಹೊಂದಲು ಅದೇ ಲಿಂಗಾಂಗ ಸಾಮರಸ್ಯವು. ಈ ಪೂರ್ಣತೆಯು ಗುರುಲಿಂಗಜಂಗಮದ ತಿಳುವಳಿಕೆಯನ್ನುಂಟುಮಾಡಿಕೊಂಡು ಆಚರಿಸಿದ ಪಾದೋದಕ ಪ್ರಸಾದಗಳ ಮೂಲಕವೇ ಉಂಟಾಗುತ್ತದೆ. ಈ ವಿವರವು ಹೇಗೆಂದರೆ --

(೧) ಕಾಯದ ಮಧ್ಯದಲ್ಲಿ ಇಷ್ಟಲಿಂಗ ಮಹಾಮಂತ್ರ, ಚಿದ್ವಿಭೂತಿ, ಚಿದ್‌ರುದ್ರಾಕ್ಷಿಗಳು ನೆಲೆಸಿದ್ದು, ಇಲ್ಲಿ ದೀಕ್ಷಾಪಾದೋದಕ ಮತ್ತು ಶುದ್ಧಪ್ರಸಾದಗಳಿರುತ್ತದೆ. (೨) ಮನದ ಮಧ್ಯದಲ್ಲಿ ಪ್ರಾಣಲಿಂಗ ಸಪ್ತ



ಕೋಟಿ ಮಹಾಮಂತ್ರವಿದ್ದು, ಇಲ್ಲಿ ಶಿಕ್ಷಾಪಾದೋದಕ ಮತ್ತು ಸಿದ್ಧ ಪ್ರಸಾದಗಳು ಸಂಬಂಧಪಡುತ್ತವೆ. ಇವುಗಳ ಮೂಲಕವೇ ಮನಸ್ಸು ಪೂರ್ಣತೆಯನ್ನು ಹೊಂದುತ್ತದೆ. (೩) ಭಾವದ ಮಧ್ಯದಲ್ಲಿ ಭಾವಲಿಂಗ ಅಗಣಿತ ಮಂತ್ರವಿದ್ದು ಇಲ್ಲಿ ಜ್ಞಾನಪಾದೋದಕ ಮತ್ತು ಪ್ರಸಿದ್ಧ ಪ್ರಸಾದಗಳು ಸಂಬಂಧಪಡುತ್ತವೆ. ಇವುಗಳ ಮೂಲಕವೇ ಭಾವವು ಪೂರ್ಣತೆಯನ್ನು ಹೊಂದುತ್ತದೆ.

ಆದರೆ ಈ ಪ್ರಗತಿಯೊಡನೆ ಎಲ್ಲ ಚಕ್ರಗಳಲ್ಲಿ ಜಾಗ್ರತಿಯು ಉಂಟಾದಲ್ಲಿ ಅವೆಲ್ಲವುಗಳಲ್ಲಿ ಪರಸ್ಪರತೆಯುಂಟಾಗಿ ಎಲ್ಲವೂ ಸ್ಥಿರಪಡುತ್ತ ಹೋಗುತ್ತವೆ. ಈ ಜಾಗ್ರತಿಯು ಆಯಾ ಮಂತ್ರಧ್ಯಾನಪೂರ್ವಕವಾಗಿ ಆಯಾ ಲಿಂಗಗಳಲ್ಲಿ ಮತ್ತು ಚಕ್ರಗಳಲ್ಲಿ ಉಂಟಾಗತಕ್ಕದ್ದು. ಈ ಕಾರ್ಯವು ಆಯಾ ಪಾದೋದಕ ಪ್ರಸಾದಗಳ ಮೂಲಕ ಜರಗುವುದು. ಅದು ಹೇಗೆಂದರೆ—

(೪) ಪಂಚಾಚಾರ :ಮೂರ್ತಿಯಾದ ಆಚಾರಲಿಂಗ ಮಂತ್ರವು ಆಧಾರ ಚಕ್ರಕ್ಕೆ ಸಂಬಂಧಿಸಿದ್ದು ಅಲ್ಲಿ ಸ್ಪರ್ಶನೋದಕ ಮತ್ತು ಆಪ್ಯಾಯನ ಪ್ರಸಾದಗಳು ಪರಿಣಾಮ ಮಾಡುತ್ತವೆ. (೫) ಮಂತ್ರಮೂರ್ತಿಯಾದ ಗುರುಲಿಂಗ ಮಂತ್ರವು ಸ್ವಾಧಿಷ್ಠಾನ ಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಅವಧಾನೋದಕ ಮತ್ತು ಸಮಪ್ರಸಾದಗಳು ಪರಿಣಾಮ ಮಾಡುತ್ತವೆ. (೬) ನಿರೀಕ್ಷಣ ಮೂರ್ತಿಯಾದ ಶಿವಲಿಂಗಮಂತ್ರವು ಮಣಿಪೂರಕ ಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಆಪ್ಯಾಯನೋದಕ ಮತ್ತು ಪ್ರಸಾದಿಯ ಪ್ರಸಾದಗಳು ಪರಿಣಾಮಮಾಡುತ್ತವೆ. (೭) ಯಜನಸ್ವರೂಪವಾದ ಜಂಗಮಲಿಂಗಮಂತ್ರವು ಅನಾಹತ ಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಹಸ್ತೋದಕ ಮತ್ತು ಪಂಚೇಂದ್ರಿಯವಿರಹಿತ ಪ್ರಸಾದಗಳು ಪರಿಣಾಮಮಾಡುತ್ತವೆ. (೮) ಈಳನ ಸ್ವರೂಪವಾದ ಪ್ರಸಾದಲಿಂಗಮಂತ್ರವು ವಿಶುದ್ಧಿಚಕ್ರಕ್ಕೆ ಸಂಬಂಧವಾಗಿದ್ದು ಅಲ್ಲಿ ಪರಿಣಾಮೋದಕ ಮತ್ತು ಕರಣ ಚತುಷ್ಟಯವಿರಹಿತ ಪ್ರಸಾದಗಳು ಪರಿಣಾಮ ಮಾಡುತ್ತವೆ. (೯) ವೇಧಾಸ್ವರೂಪವಾದ ಮಹಾಲಿಂಗಮಂತ್ರವು ಆಜ್ಞಾ ಚಕ್ರಕ್ಕೆ ಸಂಬಂಧ

ವಾಗಿದ್ದು ಅಲ್ಲಿ ನಿರ್ನಾಮೋದಕ ಮತ್ತು ಸಮತಾ ಪ್ರಸಾದಗಳು ಪರಿಣಾಮ ಮಾಡುತ್ತವೆ.

ಮೇಲೆ ಹೇಳಿದವುಗಳು ಕೆಳಗಿನ ಆರು ಚಕ್ರಗಳು. ಇವುಗಳ ಮುಂದೆ ಬ್ರಹ್ಮಚಕ್ರ ಶಿಖಾಚಕ್ರ ಮತ್ತು ಕಡೆಗೆ ಪಶ್ಚಿಮಚಕ್ರಗಳು ಇವೆ. ಅಲ್ಲಿಯೂ ಕೂಡ ಮಂತ್ರಗಳೂ ಪಾದೋದಕ ಪ್ರಸಾದಗಳೂ ಸಂಬಂಧಪಡುತ್ತವೆ. ಅದು ಹೇಗೆಂದರೆ–

(೧೦) ಬ್ರಹ್ಮಚಕ್ರಕ್ಕೆ ನಿರಾಲಂಬಮೂರ್ತಿ ನಿಃಕಲಲಿಂಗ ಮಂತ್ರವು ಸಂಬಂಧಪಡುತ್ತಿದ್ದು ಅಲ್ಲಿ ಸತ್ಯೋದಕ ಮತ್ತು ಸದ್ಭಾವಪ್ರಸಾದಗಳು ಪರಿಣಾಮಮಾಡುತ್ತವೆ. (೧೧) ಶಿಖಾಚಕ್ರಕ್ಕೆ ಪರಿಪೂರ್ಣಾನಂದ ನಿಃಪ್ರಪಂಚ ಮೂರ್ತಿಶೂನ್ಯ ನಿರಂಜನ ಲಿಂಗಮಂತ್ರವಿದ್ದು ಅಲ್ಲಿ ಕರುಣಜಲ, ವಿನಯಜಲ, ಸಮತಾಜಲಗಳು ಹಾಗೂ ಚಿತ್ಕಲಾಪ್ರಸಾದ, ನಿಜಪ್ರಸಾದ, ಚಿದ್ರೂಪಪ್ರಸಾದಗಳು ಸಂಬಂಧಪಡುತ್ತವೆ. (೧೨) ಇವುಗಳೇ ಪಶ್ಚಿಮ ಚಕ್ರದಲ್ಲಿಯೂ ಸಂಬಂಧಪಡುತ್ತವೆ.

ಈ ವಿಧದ ಆಚರಣೆಯಿಂದ ಭಕ್ತನ ಸರ್ವಾಂಗವೆಲ್ಲ ಪಾದೋದಕ ಪ್ರಸಾದಮಯ, ಲಿಂಗಮಯ, ಮಂತ್ರಮಯವಾಗುತ್ತದೆಂದು ತಿಳಿಯುವುದು.

೧೭೮. **ಪ್ರಸಾದಿಕರು :** ಅವುದೋ ಒಂದು ಕಾರಣದಿಂದ ಸಂಸಾರದಲ್ಲಿ ಶ್ರೇಯಬುದ್ಧಿಯು ಉತ್ಪನ್ನವಾಗಲು ಪುನರ್ದೀಕ್ಷೆಯನ್ನು ಹೊಂದಿ ಆಹಾರ ಗ್ರಹಣದ ವಿಷಯವಾಗಿ ವಿಶೇಷ ನಿರ್ಬಂಧಗಳ ನ್ನಿಟ್ಟುಕೊಂಡು ಆಚರಿಸುವವರು ಪ್ರಸಾದಿಕರೆಂದು ರೂಢಿಯಲ್ಲಿ ಹೇಳುವುದುಂಟು. ಇವರು ಪಾಲ್ಕುರಿಕೆ ಸೋಮಾರಾಧ್ಯರು ವಿವರಿಸಿದ ೬೪ ಶೀಲಗಳಲ್ಲಿ ಕೆಲವುಗಳನ್ನು ಸಹ ಆಚರಿಸುತ್ತಿರಬಹುದು. ಆದರೆ ಶಿವಶರಣರ ನಡೆನುಡಿಗೆ ಇವರು ಪ್ರಸಾದಿಕರೆಂದು ಹೇಳಲು ಬರಲಾರರು. ಪ್ರಸಾದಿಕರು ಷಟ್‌ಸ್ಥಲ, ಏಕೋತ್ತರಶತಸ್ಥಲಗಳ ಮರ್ಮವನ್ನು ಅರಿತವರಾಗಿರಬೇಕು. ಇದನ್ನರಿತುಕೊಂಡು ದಶವಿಧಪಾದೋದಕ, ಏಕಾದಶ ಪ್ರಸಾದಗಳನ್ನು ಆಚರಿಸಬೇಕು. ಇಂಥ ಆಚರಣೆಯಿಂದ ಅವರ ತನು, ಮನ, ಭಾವಗಳು, ಚಕ್ರಗಳು, ಶಕ್ತಿಗಳು, ಇಂದ್ರಿಯಗಳು, ಕರಣಗಳು, ಇವುಗ



ಳಲ್ಲೆಲ್ಲ ಲಿಂಗದ ಕಳೆಯು ಬೆಳಗುತ್ತಿರುವುದು. ಹೀಗೆ ಆಚರಿಸುವವರೇ ಪ್ರಸಾದಿಕರು.

೧೭೯. **ವಿಭೂತಿ :** ಅದು ಮಹಾವಸ್ತುವಿನ ದಿವ್ಯ ತೇಜವು. ಅದು ಕಾಲ, ಕಾಮ, ಕರ್ಮತ್ರಯ, ತನುತ್ರಯ ಇವುಗಳನ್ನು ಚಿತ್ ಶಿಖಿ ಎಂಬ ಜ್ಞಾನಾಗ್ನಿಯಿಂದ ದಹಿಸಿದ ಚಿಹ್ನವು. ಶಿವಶರಣರು ಅದು ಪರಶಿವನ ಪರಮ ಚೈತನ್ಯವು, ಚಿತ್‌ಸ್ವರೂಪ ಎಂದು ಭಾವಿಸಿ ಅದನ್ನು ಲೇಪಿಸಿಕೊಳ್ಳುತ್ತಾರೆ.

೧೮೦. **ದೀಕ್ಷಾಭಸಿತ, ಶಿಕ್ಷಾಭಸಿತ, ಕ್ರಿಯಾಭಸಿತ :** ವಿಭೂತಿಗಳು ಮೂರು ವಿಧವಾಗಿವೆ. (೧) ಕ್ರಿಯಾಗ್ನಿಯಿಂದ ದಹಿಸಿದ ಬೂದಿಯನ್ನು ಧೂಳಪಾದೋದಕದಲ್ಲಿ ಅಥವಾ ಗುರುಪಾದೋದಕದಲ್ಲಿ ಶೋಧಿಸಿ ಘಟ್ಟಿಯ ಮಾಡಿದ್ದು ದೀಕ್ಷಾಭಸಿತವು. (೨) ಗುರುಪಾದೋದಕ ಮತ್ತು ಲಿಂಗಪಾದೋದಕ ಇವುಗಳನ್ನು ಸಮ್ಮಿಶ್ರ ಮಾಡಿ ಷಡಕ್ಷರ ಮಂತ್ರವನ್ನು ಸ್ಥಾಪಿಸಿದ್ದು ಶಿಕ್ಷಾಭಸಿತವು. (೩) ಗುರುಪಾದೋದಕದಲ್ಲಿ ಘಟ್ಟಿಯ ಕಟ್ಟಿ, ಲಿಂಗಪಾದೋದಕವನ್ನು ಆ ಘಟ್ಟಿಗೆ ಸಮ್ಮಿಶ್ರ ಮಾಡಿ ಆದಿ ಪ್ರಣವಗಳಾರು, ಅನಾದಿಪ್ರಣವಗಳಾರು, ಚಿತ್ಕಲಾಪ್ರಸಾದ ಪ್ರಣವಗಳಾರು, ನಿಃಕಳಂಕ ಚಿತ್ಕಲಾ ಮೂಲ ಪ್ರಣವ ಮೂರು ಹೀಗೆ ೨೧ ಪ್ರಣವಗಳನ್ನು ಸ್ಥಾಪಿಸಿ ತಯಾರಿಸಿದ್ದು ಕ್ರಿಯಾಭಸಿತವು. ಜ್ಞಾನಭಸಿತವೆಂತಲೂ ಇದಕ್ಕೆ ಹೆಸರಿದೆ. ಅಷ್ಟಾವರಣದ ಆಚರಣೆಯಲ್ಲಿ ಆಚರಿಸುವವರ ಅನುಕೂಲತೆಗೋಸ್ಕರ ಶಿವಶರಣರು ಈ ವಿಧಗಳನ್ನು ಕಲ್ಪಿಸಿದ್ದಾರೆ. ಈ ದೃಷ್ಟಿಯಿಂದ ಲಿಂಗಧಾರಕ ಭಕ್ತರು. ಉಪಾಧಿಭಕ್ತರು, ನಿರುಪಾಧಿ ಭಕ್ತರು ಎಂಬ ಮೂರು ವರ್ಗಗಳು ಅನುಕ್ರಮವಾಗಿ ಮಾಡಲ್ಪಟ್ಟಿರುತ್ತವೆ. ಅವರು ಆಯಾ ರೀತಿಯಿಂದ ಭಸಿತವನ್ನು ಉಪಯೋಗಿಸುವುದು. ಈ ವಿಧಗಳು ಅವರವರ ಅನುಕೂಲ್ಯತೆಗೋಸ್ಕರ ಮಾಡಲ್ಪಟ್ಟಿರುತ್ತವೆ. ಸಹಜಭಕ್ತ ಮತ್ತು ನಿರ್ವಾಣಭಕ್ತ ಎಂತಲೂ ಇನ್ನು ಎರಡು ವಿಧಗಳನ್ನು ಕಲ್ಪಿಸುವುದುಂಟು. ಇವರು ಎಲ್ಲರಿಗೂ ಮೇಲ್ತರಗತಿಯವರು.

೧೮೧. **ವಿಭೂತಿ ಧಾರಣದ ಸ್ಥಳಗಳು :** (೧) ಲಿಂಗಧಾರಕ ಭಕ್ತರು ೮ ಸ್ಥಾನಗಳಲ್ಲಿ ಧರಿಸುವುದು. ಅವು ಮಸ್ತಕ, ಲಲಾಟ, ಗ್ರೀವ,

ಎರಡು ಬಾಹುಗಳು. ಹೃದಯ, ನಾಭಿ, ಪೃಷ್ಠ ಹೀಗೆ ಇರುತ್ತವೆ. (೨) ಉಪಾಧಿಭಕ್ತರು ಧರಿಸುವ ಸ್ಥಳಗಳು ೧೬ ಇವೆ. ಅವು— ಶಿರಸ್ಸು, ಭಾಳ, ಎರಡು ಕರ್ಣಗಳು, ಎರಡು ಓಷ್ಠ, ಕಂಠ. ಎರಡು ಬಾಹುಗಳು, ಎರಡು ಭುಜಗಳು, ಎರಡು ಮಣಿಬಂಧಗಳು, ಹೃದಯ ಅಪರ, ನಾಭಿ ಹೀಗೆ ಇರುತ್ತವೆ. (೩) ನಿರುಪಾಧಿಭಕ್ತರು ಧರಿಸುವ ಸ್ಥಾನಗಳು ೩೨ ಇವೆ. ಅವು ಮೂರ್ಧ್ನ, ಲಲಾಟ, ಎರಡು ಕರ್ಣಗಳು, ಎರಡು ನೇತ್ರಗಳು, ಘ್ರಾಣ, ಮುಖ, ಎರಡು ಬಾಹುಗಳು, ಎರಡು ಭುಜಗಳು, ಎರಡು ಮಣಿಬಂಧಗಳು, ಎರಡು ಸ್ತನಗಳು, ವಕ್ಷ, ಉದರ, ಎರಡು ಪಾರ್ಶ್ವಗಳು, ನಾಭಿ ಮೇಢ್ರ, ಪಾಯು, ಪೃಷ್ಠ, ಉರುದ್ವಯ, ಎರಡು ಜಾನುಗಳು, ಎರಡು ಜಂಘೆಗಳು, ಎರಡು ಪಾದಗಳು ಹೀಗೆ ಇರುತ್ತವೆ.

೧೬೨. **ವಿಭೂತಿ ಧಾರಣದ ಪರಿಣಾಮಗಳು :** ದೀಕ್ಷಾಭಸಿತದಿಂದ ವಿಧಿಲಿಖಿತವು ತೊಡೆದು ಶಿವಲಿಖಿತವು ಲಿಖಿಸಲ್ಪಡುವುದು. ಶಿಕ್ಷಾಭಸಿತದಿಂದ ಲಿಂಗನಿಷ್ಠಾಪರ ಭಕ್ತಿಯು ತೋರುವದು ಜ್ಞಾನ ಅಥವಾ ಕ್ರಿಯಾಭಸಿತದಿಂದ ಸರ್ವಾಚಾರ ಸಂಪತ್ತು, ಜಂಗಮಾನುಭವವು ದೊರೆಯುವವು.

೧೬೩. **ಪಂಚಭಸ್ಮಗಳು :** (೧) ಭೂತಿ-ಇದು ಶಿವಜ್ಞಾನಸುಖ ಮಹದೈಶ್ವರ್ಯವನ್ನುಂಟು ಮಾಡುತ್ತವೆ (೨) ಭಸಿತವು-ಮನುಷ್ಯನ ಸಕಲ ಕಾಂಕ್ಷೆಗಳನ್ನು ಸುಟ್ಟು ನಿಃಕಾಮನನ್ನಾಗಿ ಮಾಡುತ್ತದೆ. (೩) ಭಸ್ಮ-ಇದು ಪೂರ್ವಕರ್ಮವನ್ನು ದೂರಮಾಡುತ್ತದೆ. (೪) ಕ್ಷಾರ- ಇದು ಮಾಯೆಯನ್ನು ಕೆಡಿಸುತ್ತದೆ. (೫) ರಕ್ಷೆ- ಇದು ಭೂತ, ಪ್ರೇತ, ಪಿಶಾಚ, ರಾಕ್ಷಸ ಬಾಧೆಗಳನ್ನು ತಪ್ಪಿಸುತ್ತದೆ. ಇವೆಲ್ಲವು ನಂದೆ, ಭದ್ರೆ, ಸುರಭಿ, ಸುಶೀಲ, ಸುಮನ ಎಂಬ ಗೋವುಗಳ ಮೂಲಕ ಆಯಾ ಮಂತ್ರಗಳಿಂದ ಉತ್ಪನ್ನವಾಗುತ್ತವೆ.

೧೬೪. **ರುದ್ರಾಕ್ಷಿಗಳು :** ರುದ್ರಾಕ್ಷಿಗಳು ಪರಶಿವನ ಜ್ಞಾನಚಕ್ಷುವಿನಿಂದ ಉದಯವಾದುವೆಂದು ತಿಳಿಯಲ್ಪಡುತ್ತವೆ. ಅವು ಶಿವಾನುಭವದ ಅರಿಕೆಯನ್ನು ಮಾಡಿಕೊಡುವ ತತ್ವಚಿಂತಾಮಣಿಗಳು ಮತ್ತು ರುದ್ರನ ಮುದ್ರೆಗಳು ಎಂದು ಭಾವಿಸಬೇಕು. ಭಕ್ತನು ಜಪದ ರೀತಿಗಳನ್ನು



ಮೊದಲು ತಿಳಿಯಬೇಕು. ಇವುಗಳನ್ನು ತಿಳಿದು ಮಂತ್ರಸ್ಮರಣೆಯಿಂದ ರುದ್ರಾಕ್ಷಿಗಳನ್ನು ಆಯಾ ಸ್ಥಾನಗಳಲ್ಲಿ ಧರಿಸಿಕೊಂಡು ತಾನೇ ರುದ್ರನಾಗಿ ಲಿಂಗವನ್ನು ಪೂಜಿಸಬೇಕು. ವಿಭೂತಿ ರುದ್ರಾಕ್ಷಿಗಳನ್ನು ಧರಿಸಿಕೊಂಡು ಶಿವಲಿಂಗಾರ್ಚನೆಯನ್ನು ಮಾಡಿ, ಪಂಚಾಕ್ಷರಿಯನ್ನು ವಿಧಾನಪೂರ್ವಕ ಜಪಿಸುವುದೇ ವೀರಶೈವನ ಮುಖ್ಯ ಆಚರಣೆಯಾಗಿದೆ.

೧೬೫. **ರುದ್ರಾಕ್ಷಿ ಧಾರಣ ಸ್ಥಾನಗಳು :** ಪಶ್ಚಿಮ ಚಕ್ರದಲ್ಲಿ ೧, ಶಿಖಿಯಲ್ಲಿ ಅಥವಾ ಮುಧ್ನಿರ್ಯಲ್ಲಿ ೩, ಶಿರವನ್ನು ಬಳಸಿ ೩೬, ಪ್ರತಿಯೊಂದು ಕರ್ಣದಲ್ಲಿ ಒಂದೊಂದು, ಕಂಠದಲ್ಲಿ ೩೨, ಉರ ಅಥವಾ ಎದೆಯಲ್ಲಿ ೫೬, ಎರಡು ತೋಳುಗಳಲ್ಲಿ ೧೬, ೧೬, ಎರಡು ಮುಂಗೈಗಳಲ್ಲಿ ೧೨, ೧೨, ವಕ್ಷಸ್ಥಳದಲ್ಲಿ ಹಾರ ಅಥವಾ ಯಜ್ಞೋಪವೀತವಾಗಿ ೧೦೮, ಈ ಪ್ರಕಾರ ರುದ್ರಾಕ್ಷಿಗಳನ್ನು ಭಕ್ತನು ಧರಿಸಬೇಕು. ಈ ರುದ್ರಾಕ್ಷಿಗಳು ಬೇರೆ ಬೇರೆ ಮುಖದವುಗಳಿದ್ದು ಅವುಗಳನ್ನು ಬೇರೆ ಬೇರೆ ವಿಶಿಷ್ಟಸ್ಥಾನಗಳಲ್ಲಿ ಧರಿಸಬೇಕೆಂಬ ನಿಯಮಗಳಿವೆ. ಹಸ್ತದಲ್ಲಿ ಧರಿಸಿದಲ್ಲಿ ದಾನಕೊಡಬಹುದು. ಆದರೆ ದಾನ ತೆಗೆದುಕೊಳ್ಳಬಾರದು. ಬಾಹುವಿನಲ್ಲಿದ್ದರೆ ಪರವಧೂ ಸಂಗವನ್ನು ಮಾಡಕೂಡದು. ಉರದಲ್ಲಿದ್ದರೆ ಅನ್ಯದೈವಕ್ಕೆರಗಬಾರದು. ಹೀಗೆ ರುದ್ರಾಕ್ಷಿಧಾರಣವಾದ ಬಳಿಕ ಉಚ್ಚನೈತಿಕಾಚರಣೆಯುಳ್ಳವನಾಗಿರಬೇಕು. ಜಪಕಾಲದಲ್ಲಿ, ತಪಸ್ಸಿನ ಕಾಲದಲ್ಲಿ ಮತ್ತು ದೇವಪೂಜೆಯಲ್ಲಿ ರುದ್ರಾಕ್ಷಿಗಳನ್ನು ಧರಿಸಬೇಕು. ಹೀಗೆ ಭಕ್ತನು ರುದ್ರಾಕ್ಷಿಯನ್ನರಿದು ಆಚರಿಸಬೇಕು.

೧೬೬. **ರುದ್ರಾಕ್ಷಿಯ ವಿಧಗಳು :** ೧೪ ಮುಖಗಳ ವರೆಗೆ ರುದ್ರಾಕ್ಷಿಗಳಿರುತ್ತವೆ. ಏಕಮುಖ ರುದ್ರಾಕ್ಷಿಯು ಪರಶಿವಗೆ, ೨ ಮುಖವುಳ್ಳ ರುದ್ರಾಕ್ಷಿಯು ಈಶಾನಗೆ, ೩ ಮುಖವುಳ್ಳ ರುದ್ರಾಕ್ಷಿಯು ಅಗ್ನಿಗೆ, ೪ ಮುಖವುಳ್ಳ ರುದ್ರಾಕ್ಷಿಯು ಬ್ರಹ್ಮನಿಗೆ, ೫ ಮುಖವುಳ್ಳ ರುದ್ರಾಕ್ಷಿಯು ಸದಾಶಿವನಿಗೆ, ೬ ಮುಖವುಳ್ಳ ರುದ್ರಾಕ್ಷಿಯು ಷಣ್ಮುಖನಿಗೆ, ೭ ಮುಖವುಳ್ಳ ರುದ್ರಾಕ್ಷಿಯು ಅನಂತನಿಗೆ, ೮ ಮುಖವುಳ್ಳ ರುದ್ರಾಕ್ಷಿಯು ವಿಘ್ನೇಶ್ವರನಿಗೆ, ೯ ಮುಖವುಳ್ಳ ರುದ್ರಾಕ್ಷಿಯು ಭೈರವನಿಗೆ, ೧೦ ಮುಖವುಳ್ಳ ರುದ್ರಾಕ್ಷಿಯು ಮಾಧವನಿಗೆ, ೧೧ ಮುಖವುಳ್ಳ ರುದ್ರಾಕ್ಷಿಯು ಏಕಾದಶ

ರುದ್ರನಿಗೆ. ೧೨ ಮುಖವುಳ್ಳ ರುದ್ರಾಕ್ಷಿಯು ದ್ವಾದಶಾದಿತ್ಯರಿಗೆ, ೧೩ ಮುಖವುಳ್ಳ ರುದ್ರಾಕ್ಷಿಯು ಮಹೇಶ್ವರನಿಗೆ, ೧೪ ಮುಖವುಳ್ಳ ರುದ್ರಾಕ್ಷಿಯು ಚತುರ್ದಶ ಮನುಗಳಿಗೆ ಸಂಬಂಧಪಡುತ್ತವೆ.

ಶಿವಾಸ್ಥಾನದಲ್ಲಿ ಏಕಮುಖ ರುದ್ರಾಕ್ಷಿಯನ್ನು, ಮಸ್ತಕದಲ್ಲಿ, ೩ ಮುಖ, ೩ ಮುಖ ಮತ್ತು ೧೨ ಮುಖಗಳುಳ್ಳ ಮೂರು ರುದ್ರಾಕ್ಷಿಗಳನ್ನು, ೧೧ ಮುಖಗಳುಳ್ಳ ರುದ್ರಾಕ್ಷಿಗಳನ್ನು ಶಿರವನ್ನು ಬಳಸಿ, ೫ ಮುಖ ೭ ಮುಖ ಅಥವಾ ೧೦ ಮುಖಗಳುಳ್ಳ ರುದ್ರಾಕ್ಷಿಗಳನ್ನು, ಕರ್ಣದಲ್ಲಿ, ಕಂಠದಲ್ಲಿ ೮ ಮುಖಗಳುಳ್ಳ ರುದ್ರಾಕ್ಷಿಗಳನ್ನು ೭ ಮುಖಗಳುಳ್ಳ ರುದ್ರಾಕ್ಷಿಗಳನ್ನು ೪ ಮುಖಗಳುಳ್ಳ ರುದ್ರಾಕ್ಷಿಗಳನ್ನು ಉರದಲ್ಲಿ, ೧೩ ಮುಖಗಳುಳ್ಳ ರುದ್ರಾಕ್ಷಿಗಳನ್ನು ಬಾಹುವಿನಲ್ಲಿ, ೯ ಮುಖಗಳುಳ್ಳ ರುದ್ರಾಕ್ಷಿಗಳನ್ನು ಮುಂಗೈಯಲ್ಲಿ, ೧೪ ಮುಖಗಳುಳ್ಳ ರುದ್ರಾಕ್ಷಿಗಳನ್ನು ವಕ್ಷಸ್ಥಳದಲ್ಲಿ, ಧರಿಸುವುದೆಂದು ವಚನಕಾರರು ಹೇಳುತ್ತಾರೆ.

೧೭೭. **ಚಿದ್ರುದ್ರಾಕ್ಷಿ**: ಚಿದ್ರುದ್ರಾಕ್ಷಿಗಳೆಂತಲೂ ಇದ್ದು ಅವುಗಳ ವಿವರಣೆಯನ್ನು ಮಂತ್ರ ಈ ವಿಷಯದಲ್ಲಿ ವಾಚಕರು ನೋಡತಕ್ಕದ್ದು.

೧೭೮. **ಮಂತ್ರ**: ಪರಮಾತ್ಮನ ನಾಮವೇ ಮಂತ್ರವಾಗಿದೆ. ಇದು ವೀರಶೈವರಲ್ಲಿ 'ಓಂ ನಮಃಶಿವಾಯ' ಎಂದಿದೆ. ಇದನ್ನೇ ಅವರು ನೆನೆಯಬೇಕು. ಇದು ಭವಬಂಧನ ದುರಿತಗಳನ್ನು ಗೆಲ್ಲುವುದೆಂದು ಬಸವನ ಅಭಿಪ್ರಾಯವು. ವಿವೇಕವು ಹೋದಲ್ಲಿ, ನೆನಪುಗೆಟ್ಟು ಮತಿಮಂದವಾದಲ್ಲಿ ಮಂತ್ರವನ್ನು ನೆನೆಯಬೇಕು. ಇದನ್ನೇ ವೀರಶೈವನು ಜಪಿಸಬೇಕು. ಪಂಚಾಕ್ಷರಿಯು ಹೀಗಿದ್ದು ಇದೇ ಎಲ್ಲ ಮಂತ್ರಗಳಿಗೆ ಉತ್ಪತ್ತಿ ಲಯ ಸ್ಥಾನವಾಗಿದೆ. ಇದೇ ಶಿವಮಂತ್ರವೆನಿಸುತ್ತದೆ. ಏಳು ಕೋಟಿ ಮಹಾಮಂತ್ರಗಳಿವೆ. ಉಪಮಂತ್ರಗಳಿಗೆ ಲೆಕ್ಕವಿಲ್ಲ. ಆದರೆ ಭಕ್ತನು ಅವುಗಳಲ್ಲಿ ವ್ಯಾಕುಲನಾಗದೆ ಈ ಶಿವಮಂತ್ರ ಒಂದನ್ನೇ ನೆನೆಯಬೇಕು.

೧೭೯. **ಪಂಚಾಕ್ಷರ ಮಂತ್ರ**: ಆರಂಭದಲ್ಲಿ ಜಗತ್ತು ತಲೆದೋರದೆ ಇದ್ದ ಕಾಲದಲ್ಲಿ ನಿತ್ಯ ನಿರಂಜನ ಪರವಸ್ತುವು ಒಂದೇ ಇದ್ದು ಅದು ನಿರಂಜನ ಪ್ರಣಮವೆಂದು ಹೇಳಲ್ಪಡುತ್ತದೆ. ಆದರ ಚಿತ್ಕಳೆಗೆ ಶುದ್ಧ ಪ್ರಣಮವೆಂಬ ಹೆಸರು ಇದೆ. ಈ ಶುದ್ಧ ಪ್ರಣಮದಲ್ಲಿ ಚಿತ್ತು ಉದಯವಾಗುತ್ತದೆ. ಆ ಚಿತ್ತು ಸಚ್ಚಿದಾನಂದಸ್ವರೂಪುಳ್ಳದಾಗಿ ಚಿತ್‌ಪ್ರಣಮವೆಂ



ದೆನಿಸಿಕೊಳ್ಳುತ್ತದೆ. ಆದರಲ್ಲಿ ಚಿತ್‌ಶಕ್ತಿಯು ಉದಯವಾಗುತ್ತದೆ. ಇದರಲ್ಲಿ ನಾದ ಬಿಂದು ಕಳೆಗಳು ಉಂಟಾಗುತ್ತವೆ. ಆಕಾರವೇ ನಾದವು, ಉಕಾರವೇ ಬಿಂದುವು, ಮಕಾರವೇ ಕಳೆಯು ಮತ್ತು ಚಿತ್‌ಶಕ್ತಿ ಇವು ನಾಲ್ಕು ಒಂದಾದಲ್ಲಿ ಪ್ರಣಮವು ಅಂದರೆ ಓಂಕಾರವು ಉಂಟಾಗುತ್ತದೆ. ಈ ಪ್ರಣಮವು ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ, ಅರ್ಧಚಂದ್ರಾಕೃತಿ, ಬಿಂದ್ವಾಕೃತಿ ಎಂದು ಐದು ಆಕೃತಿಗಳನ್ನು ಒಳಗೊಂಡಿದೆ. ಅವು ಆದರಲ್ಲಿ ಅಡಕವಾಗಿವೆ. ತಾರಕಾಕೃತಿಯಲ್ಲಿ ನಕಾರ ಜನನ, ದಂಡಕಾಕೃತಿಯಲ್ಲಿ ಮಕಾರ ಜನನ, ಕುಂಡಲಾಕೃತಿಯಲ್ಲಿ ಶಿಕಾರ ಜನನ, ಅರ್ಧಚಂದ್ರಾಕೃತಿಯಲ್ಲಿ ವಕಾರ ಜನನ, ಬಿಂದ್ವಾಕೃತಿಯಲ್ಲಿ ಯಕಾರ ಜನನ ಈ ಪ್ರಕಾರ ಪಂಚಾಕ್ಷರಗಳ ಉತ್ಪತ್ತಿಯು ಇದೆ. ಈ ಅಕ್ಷರಗಳಲ್ಲಿ ಓಂ ಪ್ರಣಮವು ಕೂಡಲು ಅದು ಶಿವಪಂಚಾಕ್ಷರೀ ಮಂತ್ರವೆಂದು ಹೇಳಲ್ಪಡುತ್ತದೆ. ಇದಕ್ಕೆ ಪ್ರಣಮ ಪಂಚಾಕ್ಷರೀ ಮಂತ್ರ, ಷಡಕ್ಷರೀ ಮಂತ್ರ ಎಂಬ ಬೇರೆ ಹೆಸರುಗಳಿವೆ.

೧೮೦. **ಪ್ರಣಮಪಂಚಾಕ್ಷರೀ ಮಂತ್ರದ ಜಪದ ಪರಿಣಾಮಗಳು**: ಮನುಷ್ಯನು ಮೂಲದಲ್ಲಿ ಶಕ್ತಿಮಯನಾಗಿದ್ದಾನೆ. ಆದರೆ ಅದು ಪ್ರಕಟವಾಗಿರುವುದಿಲ್ಲ. ಅದನ್ನು ಪ್ರಕಟಗೊಳಿಸುವುದೇ ಮಂತ್ರಜಪದ ಉದ್ದೇಶವು. ಈ ಮಂತ್ರವು ಅವನ ಶಕ್ತಿಯನ್ನೆಲ್ಲ ಆವರಿಸತಕ್ಕದ್ದಾಗಿದೆ. ಮಂತ್ರ ಜಪಿಸುವುದೂ ಪರಮಾತ್ಮನನ್ನು ನೆನೆಯುವುದೂ ಒಂದೇಯಾಗಿವೆ. ದೇವರ ಪ್ರಾರ್ಥನೆ ಎಂದರೆ ಪರಮಾತ್ಮನ ಹೆಸರನ್ನು ತೆಗೆದುಕೊಂಡು ಅವನಿಂದ ಒಂದು ಭಿಕ್ಷೆ ಬೇಡುವುದು ಅಲ್ಲ. ಯಾಕಂದರೆ ವೀರಶೈವರಲ್ಲಿ ಭಿಕ್ಷೆ ಬೇಡುವುದು ಇಲ್ಲ. ಆದ್ದರಿಂದ ಪಂಚಾಕ್ಷರೀ ಜಪವನ್ನು ಮಾಡುವ ಅವರ ಉದ್ದೇಶವು ಆತ್ಮಶಕ್ತಿಯನ್ನು ಬೆಳಸುವದಿರುತ್ತದೆ. ಹೀಗೆ ಶಕ್ತಿಯನ್ನು ಬೆಳಸಿ ಕಾಯಕಗಳನ್ನು ಮಾಡುತ್ತ ತನ್ನ ಎಲ್ಲ ಗುಣಗಳನ್ನು ವಿಕಾಸಪಡಿಸಬೇಕು. ಈ ವಿಕಾಸದ ಪೂರ್ಣಾವಸ್ಥೆಯೇ ಲಿಂಗಾಂಗಸಾಮರಸ್ಯವು. ಮಂತ್ರಜಪದ ಉದ್ದೇಶವು ಹೀಗಿರುವುದರಿಂದ ಅದನ್ನು ಕೇವಲ ಯಾಂತ್ರಿಕ ರೀತಿಯಿಂದ ಮಾಡಕೂಡದು. ಆದರ ಅರ್ಥವನ್ನು ತಿಳಿದು ಜಪವನ್ನು ಮಾಡಬೇಕು. ಮನುಷ್ಯನ ಗುಣಗಳಾವವೆಂಬುದು ಷಟ್‌ಸ್ಥಲ ಶಾಸ್ತ್ರದಲ್ಲಿ ಹೇಳಿದೆ. ಇವುಗಳನ್ನು ತಿಳಿದುಕೊಂಡು ಮಂತ್ರಶಕ್ತಿಯನ್ನು ಅವು

ಗಳಲ್ಲಿ ಬೆರಿಸಬೇಕು. ಪಂಚಾಕ್ಷರದಲ್ಲಿ ಪ್ರಣಮಗೂಡಿ ಆರು ವಿಭಾಗಗಳಿವೆ. ಅವು ನ, ಮ, ಶಿ, ವ, ಯ, ಓಂ ಎಂದಿವೆ. ಅವುಗಳು ಮನುಷ್ಯನ ಆಯಾ ಗುಣಗಳಿಗೆ ಸಂಬಂಧಪಡುತ್ತವೆ. ಅವುಗಳ ಉಚ್ಚಾರಣೆಯಲ್ಲಿ ಈ ಗುಣಗಳ ವಿಕಾಸದ ಉತ್ಕಟ ಭಾವನೆಯೂ ಇರಬೇಕು. ಈ ಗುಣಗಳಲ್ಲಿ ವಚನ ಶಾಸ್ತ್ರವು ೫ ಮುಖ್ಯ ವಿಭಾಗಗಳನ್ನು ಮಾಡುತ್ತದೆ. ಅವು— (೧) ಶರೀರಕ್ಕೆ ಸಂಬಂಧಿಸಿದವು. (೨) ಬಾಹ್ಯ ವರ್ತನೆಗೆ ಸಂಬಂಧಿಸಿದವು. (೩) ಅಂತರಂಗದ ಆಚರಣೆಗೆ ಸಂಬಂಧಿಸಿದವು. (೪) ಮನುಷ್ಯನ ಯೌಗಿಕ ಜೀವನಕ್ಕೆ ಸಂಬಂಧಿಸಿದವು. (೫) ಮನುಷ್ಯನ ಲೈಂಗಿಕ ವರ್ತನೆಗೆ ಸಂಬಂಧಿಸಿದವು. ಹೀಗೆ ಐದು ವಿಭಾಗಗಳನ್ನು ಸ್ಥೂಲವಾಗಿ ಮಾಡಬಹುದು. ಯಾವ ಯಾವ ಗುಣಗಳು ಯಾವ ಯಾವ ಪ್ರಣಮಗಳಿಗೆ ಸಂಬಂಧಪಡುತ್ತವೆಂಬುದನ್ನು ವೀರಶೈವರು ಅರಿತು ಆಚರಿಸಬೇಕು. ಆಚರಿಸಿದಲ್ಲಿ ಆಯಾ ಗುಣಗಳು ಬಲಪಡುತ್ತವೆ.

**ನಕಾರ ಮಂತ್ರ :** ಪೃಥ್ವೀತತ್ವ, ರುಧಿರಮಯ, ದಶೇಂದ್ರಿಯಗಳು ಮತ್ತು ಆಧಾರಚಕ್ರ ಇವು ಶರೀರಕ್ಕೆ ಸಂಬಂಧಪಡುತ್ತವೆ. ಸುಚಿತ್ತಹಸ್ತ ಮತ್ತು ಶ್ರದ್ಧಾಭಕ್ತಿ ಇವು ಬಾಹ್ಯಾಚಾರಕ್ಕೆ ಸಂಬಂಧಿಸುತ್ತವೆ. ಅಂತರ್ಯಾಮಿತ್ವ, ಕ್ರಿಯಾಶಕ್ತಿ ಮತ್ತು ಪೀತವರ್ಣ ಇವು ಅಂತರಂಗಿಕ ಆಚರಣೆಗೆ ಸಂಬಂಧಿಸುತ್ತವೆ. ಬ್ರಹ್ಮತತ್ವ, ಕರ್ಮಸಾದಾಖ್ಯ, ಸದ್ಯೋಜಾತ ಮಂತ್ರಮೂರ್ತಿ, ಸತ್‌ಸ್ವರೂಪು ಇವು ಯೌಗಿಕ ಜೀವನಕ್ಕ ಸಂಬಂಧಪಡುತ್ತವೆ. ಆತ್ಮತತ್ವ, ಈಶಾನ್ಯಮಂತ್ರ ಮೂರ್ತಿ, ಬ್ರಹ್ಮ, ಭಕ್ತ್ಯಂಗ ಸ್ವರೂಪ ಭಕ್ತ ಮತ್ತು ಆಚಾರಲಂಗ ಇವು ಲೈಂಗಿಕ ವರ್ತನೆಗೆ ಸಂಬಂಧಪಡುತ್ತವೆ. ನಕಾರ ಪ್ರಣಮವು ಇವುಗಳಿಗೆಲ್ಲ ಸಂಬಂಧಿಸಿರುವುದರಿಂದ ಅದರ ಪ್ರಭಾವದ ಮೂಲಕ ಈ ಗುಣಗಳ ವಿಕಾಸವು ಉಂಟಾಗುತ್ತದೆ.

(೨) **ಮಕಾರ ಮಂತ್ರ :** ಅಪ್ಪು ತತ್ವ, ಮಾಂಸಮಯ, ಮನ ಪಂಚಕಗಳು ಮತ್ತು ಸ್ವಾಧಿಷ್ಠಾನಚಕ್ರ ಇವು ಶರೀರಕ್ಕೆ ಸಂಬಂಧವು. ಸುಬುದ್ಧಿಹಸ್ತ, ನೈಷ್ಠಿಕಾಭಕ್ತಿ ಇವು ಬಾಹ್ಯಾಚಾರಕ್ಕೆ ಸಂಬಂಧಿಸುತ್ತವೆ. ಚೈತನ್ಯ, ಜ್ಞಾನಶಕ್ತಿ ಮತ್ತು ನೀಲವರ್ಣ ಇವುಗಳು ಅಂತರಂಗಿಕ ಆಚ



ರಣೆಗೆ ಸಂಬಂಧಪಡುತ್ತವೆ. ವಿಷ್ಣುತತ್ವ, ಕರ್ತೃಸಾದಾಖ್ಯ, ವಾಮದೇವ ಮಂತ್ರಮೂರ್ತಿ, ಚಿತ್‌ಸ್ವರೂಪು ಇವು ಯೌಗಿಕ ಜೀವನಕ್ಕೆ ಸಂಬಂಧಿಸುತ್ತವೆ ವಿದ್ಯಾತತ್ವ, ಈಶ್ವರಮಂತ್ರಮೂರ್ತಿ, ಪಿಂಡಬ್ರಹ್ಮ, ವಿದ್ಯಾಂಗ ಸ್ವರೂಪ, ಮಹೇಶ್ವರ ಮತ್ತು ಗುರುಲಿಂಗ ಇವು ಭಕ್ತನ ಲೈಂಗಿಕ ವರ್ತನೆಗೆ ಸಂಬಂಧಪಡುತ್ತವೆ. ಇವುಗಳಿಗೆ ಮಕಾರ ಪ್ರಣಮವು ಸಂಬಂಧವಾಗಿರುವುದರಿಂದ ಅದರ ಧ್ಯಾನದ ಮೂಲಕ ಈ ಗುಣಗಳ ವಿಕಾಸವು ಉಂಟಾಗುತ್ತದೆ.

(೩) **ಶಿಕಾರಮಂತ್ರ :** ಅಗ್ನಿತತ್ವ, ಮೇಧಸ್ಸು, ಮಯ, ಪ್ರಾಣಸ್ವರೂಪು, ಮಣಿಪೂರಕ ಚಕ್ರ, ಇವು ಶರೀರಕ್ಕೆ ಸಂಬಂಧಿಸಿದವು. ನಿರಹಂಕಾರಹಸ್ತ ಮತ್ತು ಅವಧಾನಭಕ್ತಿ ಇವು ಬಾಹ್ಯ ಆಚರಣೆಗೆ ಸಂಬಂಧಪಡುತ್ತವೆ. ಭಾವ, ಇಚ್ಛಾಶಕ್ತಿ ಮತ್ತು ಕುಂಕುಮವರ್ಣ ಇವು ಅಂತರಂಗಿಕ ಆಚರಣೆಗೆ ಸಂಬಂಧ ಪಡುತ್ತವೆ. ರುದ್ರತತ್ವ, ಮೂರ್ತಿ ಸಾದಾಖ್ಯ, ಅಘೋರಮಂತ್ರ ಮೂರ್ತಿ, ಆನಂದಸ್ವರೂಪ ಇವು ಯೌಗಿಕ ಜೀವನಕ್ಕೆ ಸಂಬಂಧ ಪಡುತ್ತವೆ. ಶಿವತತ್ವ, ಮಹೇಶ್ವರಮಂತ್ರ ಮೂರ್ತಿ, ಕಲಾ ಬ್ರಹ್ಮ, ಪ್ರಸಾದಿ, ಶಿವಲಿಂಗ ಇವು ಲೈಂಗಿಕ ಆಚರಣೆಗೆ ಸಂಬಂಧ ಪಡುತ್ತವೆ. ಶಿಕಾರಪ್ರಣಮವು ಇವುಗಳಿಗೆ ಸಂಬಂಧಿಸಿರುವುದರಿಂದ ಅದರ ಧ್ಯಾನ ಮೂಲಕ ಈ ಗುಣಗಳ ವಿಕಾಸವು ಉಂಟಾಗುತ್ತದೆ.

(೪) **ವಕಾರಮಂತ್ರ :** ವಾಯುತತ್ವ, ಅಸ್ತಿಮಯ, ದಶವಾಯುಗಳ ಸ್ವರೂಪು, ಅನಾಹತಚಕ್ರ, ಇವು ಶರೀರಕ್ಕೆ ಸಂಬಂಧ ಪಡುತ್ತವೆ. ಸುಮನಹಸ್ತ ಮತ್ತು ಅನುಭಾವಭಕ್ತಿಗಳು ಬಾಹ್ಯಾಚಾರಕ್ಕೆ ಸಂಬಂಧಪಡುತ್ತವೆ. ಕರ್ತಾರ, ಆದಿಶಕ್ತಿ ಮತ್ತು ಶ್ವೇತವರ್ಣಗಳು ಅಂತರಂಗಿಕ ಆಚರಣೆಗೆ ಸಂಬಂಧಪಡುತ್ತವೆ. ಈಶ್ವರತತ್ವ, ಅಮೂರ್ತಿಸಾದಾಖ್ಯ, ತತ್ಪುರುಷಮಂತ್ರ ಮೂರ್ತಿ, ಮತ್ತು ನಿತ್ಯಸ್ವರೂಪ ಇವುಗಳು ಯೌಗಿಕ ಜೀವನಕ್ಕೆ ಸಂಬಂಧಿಸುತ್ತವೆ. ಈಶ್ವರತತ್ವ, ಈಶಮಂತ್ರಮೂರ್ತಿ, ಆನಂದ ಬ್ರಹ್ಮ, ಕಾಮಾಂಗಸ್ವರೂಪವಪ್ಪ ಪ್ರಾಣಲಿಂಗಿ ಮತ್ತು ಜಂಗಮ, ಲಿಂಗ, ಇವು ಲೈಂಗಿಕ ಆಚರಣೆಗೆ ಸಂಬಂಧಪಡುತ್ತವೆ. ವಕಾರ ಪ್ರಣಮವು ಇವು

ಗಳು ಒಂಟು ೩೮ ಕಳೆಗಳು ಕೂಡಿ ಕಲಾಪ್ರಣವವಾಗುತ್ತದೆ. ಈ ಪ್ರತಿಯೊಂದು ಕಳೆಯು ಬಹು ಪ್ರಕಾಶಮಾನವಾದುದು. ಅದು ಬಹು ಸೂಕ್ಷ್ಮವಾದುದು.

೧೮೬. **ಅನಾದಿಪ್ರಣವು :** ಚಿತ್ಕಳಾ ಪ್ರಣವದ ನೆನಹು ಮಾತ್ರದಿಂದ ಅನಾದಿ ಪ್ರಣವದ ಉತ್ಪತ್ತಿಯು. ಆದಿ ಅಕಾರ, ಉಕಾರ, ಮಕಾರವಿಲ್ಲದಂದು ಆದಿ ನಾದ ಬಿಂದು ಕಳೆಗಳಿಲ್ಲದಂದು ಅನಾದಿ ಪ್ರಣವು ಓಂಕಾರವು ಉಂಟಾಗುತ್ತದೆ.

೧೮೭. **ಬಕಾರಪ್ರಣವು :** ಕಲಾಪ್ರಣವದಲ್ಲಿ ಉದಯವಾದ ಚಿನ್ನಾದದಿಂದ ಬಕಾರಪ್ರಣವವು ಉಂಟಾಗುತ್ತದೆ. ಅದಕ್ಕೆ ಪರನಾದವೆಂಬ ಹೆಸರು ಇದೆ. ಪರಶಕ್ತಿ ಸುನಾದ ಚೈತನ್ಯವೇ ಈ ಬಕಾರವು.

೧೮೮. **ಸಕಾರಪ್ರಣವು :** ಕಲಾಪ್ರಣವದ ಚಿದ್ಬಿಂದುವಿನಿಂದ ಸಕಾರಪ್ರಣವದ ಉತ್ಪತ್ತಿಯು. ಅದಕ್ಕೆ ಪರಬಿಂದುವೆನ್ನುವರು. ಪರಶಕ್ತಿಯ ಚಿತ್‌ಪ್ರಭಾವರಣವೇ ಸಕಾರವು.

೧೮೯. **ವಕಾರ ಪ್ರಣವು :** ಕಲಾಪ್ರಣವದ ಚಿತ್ಕಳೆಯಿಂದ ವಕಾರ ಪ್ರಣವದ ಉತ್ಪತ್ತಿಯು. ಅದಕ್ಕೆ ಪರಕಳೆ ಎಂದೆನ್ನುತ್ತಾರೆ. ಪರಶಕ್ತಿಯ ಚಿತ್ಕಲಾತೇಜದ ಪುಂಜವೇ ಈ ವಕಾರವು.

೧೯೦. **ಬ, ಸ, ವಾಕ್ಷರತ್ರಯ :** ಈ ಪ್ರಣವಗಳು ಪರನಾದ, ಪರಬಿಂದು, ಪರಕಳೆಗಳು. ಇವುಗಳ ಮೇಲೆ ಮೂಲ ಪ್ರಕೃತಿಯು ಅವಲಂಬಿಸಿರುವುದು; ಈ ಮೂರು ಅಕ್ಷರಗಳು ಮುಂದಿನ ಅ, ಉ, ಮ ಇವುಗಳಿಗೂ ಆಧಾರವಾಗಿವೆ. ಈ ಅ, ಉ, ಮ ಪ್ರಣವಗಳು ಹೆಚ್ಚಿಗೆ ಸ್ಥೂಲವಾದವುಗಳು ಮತ್ತು ಇವು ಅನಾದಿಪ್ರಣವದ ನೆನಹುಮಾತ್ರದಿಂದ ಉಂಟಾಗುತ್ತವೆ.

೧೯೧. **ಅಕಾರ ಪ್ರಣವು :** ಅದು ಆದಿನಾದವು. ಆದಾದರೂ ಚಿನ್ನಾದವೆಂದು ಹೇಳಲ್ಪಡುತ್ತದೆ. ಜಗತ್ತಿನಲ್ಲಿ ಸಂಹಾರಕೃತ್ಯವನ್ನೆಸಗುತ್ತದೆ ಆದ್ದರಿಂದ ಅದು ರುದ್ರತತ್ವವು. ಓಂಕಾರ ಪ್ರಣವದ ತಾರಕಾಕೃತಿ ಮತ್ತು ದಂಡಕಾಕೃತಿಗಳು ಅಕಾರಪ್ರಣವದಲ್ಲಿ ಸಂಬಂಧಪಡುತ್ತವೆ.



೧೯೨. **ಉಕಾರ ಪ್ರಣವು :** ಇದು ಆದಿ ಬಿಂದುವು. ಅಥವಾ ಚಿದ್ಬಿಂದುವು. ಇದು ತಿರೋಧಾನ ಕೃತ್ಯವನ್ನೆಸಗುತ್ತದೆ. ಆದ್ದರಿಂದ ಅದು ಈಶ್ವರತತ್ವವು. ಓಂಕಾರಪ್ರಣವದ ತಾರಕಾಕೃತಿ ಮತ್ತು ಅರ್ಧಚಂದ್ರಾಕೃತಿಗಳು ಇದಕ್ಕೆ ಸಂಬಂಧಪಡುತ್ತವೆ.

೧೯೩. **ಮಕಾರ ಪ್ರಣವು :** ಇದು ಆದಿಕಳೆಯು ಅಥವಾ ಚಿತ್ಕಳೆಯು ಇದೆ. ಇದು ಅನುಗ್ರಹಕೃತ್ಯವನ್ನೆಸಗುತ್ತದೆ. ಆದ್ದರಿಂದ ಅದು ಸದಾಶಿವತತ್ವವು. ಓಂಕಾರದ ಜ್ಯೋತಿರಾಕೃತಿ ಮತ್ತು ದರ್ಪಣಾಕೃತಿಗಳು ಇವುಗಳಿಗೆ ಸಂಬಂಧಿಸುತ್ತದೆ.

೧೯೪. **ಬೀಜಾಕ್ಷರಗಳು :** ಅ, ಉ, ಮ, ಬ, ಸ, ವ ಇವುಗಳಿಗೆ ಬೀಜಾಕ್ಷರಗಳೆಂದು ಹೆಸರಿದೆ. ಬ ಸ ವಾಕ್ಷರಗಳು ಚಿನ್ನಾದ ಚಿದ್ಬಿಂದು ಚಿತ್ಕಲಾ ಸ್ವರೂಪಗಳು. ಅ, ಉ, ಮಾಕ್ಷರಗಳು ಶಿವಶಕ್ತ್ಯಾತ್ಮಕವಾಗಿವೆ. ಅವೂ ಕೂಡ ಚಿತ್‌ಸ್ವರೂಪವುಳ್ಳವು. ಅವುಗಳಿಂದ ಮೂಲ ಪ್ರಣವವು ಉಂಟಾಗುತ್ತದೆ.

೧೯೫. **ಶಕ್ತಿಸಂಬಂಧದ ಪ್ರಣವುಗಳು :** ಉ, ಮ, ಅ ಈ ಕ್ರಮದಿಂದ ಜಪಗಳಿದ್ದಲ್ಲಿ, ಅವು ಶಕ್ತಿಸಂಬಂಧದ ಪ್ರಣವಗಳೆಂದೆನಿಸಿಕೊಳ್ಳುತ್ತವೆ.

೧೯೬. **ಶಿವಸಂಬಂಧದ ಪ್ರಣವುಗಳು :** ಇಲ್ಲಿಯ ಜಪದ ಕ್ರಮವು ಅ, ಉ, ಮ ಹೀಗಿರುತ್ತದೆ.

೧೯೭. **ಶಿವಶಕ್ತಿರಹಿತ ಪ್ರಣವುಗಳು :** ಇಲ್ಲಿಯ ಜಪದ ಕ್ರಮವು ಮ, ಅ, ಉ ಹೀಗಿರುತ್ತದೆ.

೧೯೮. **ಶಿವಸಂಬಂಧ, ಶಕ್ತಿಸಂಬಂಧ ಮತ್ತು ಶಿವಶಕ್ತಿರಹಿತ ಪ್ರಣವುಗಳ ಕೂಟವು :** ಶಿವಸಂಬಂಧವಾದ ಪ್ರಣವಗಳು, ಶಕ್ತಿಸಂಬಂಧವಾದ ಪ್ರಣವಗಳು, ಶಿವಶಕ್ತಿರಹಿತ ಪ್ರಣವುಗಳು—ಇವು ಮೂರು ಕೂಡಿ ಏಕಾರ್ಥವಾದಲ್ಲಿ ಅಖಂಡ ಅಪ್ರಮಾಣ ವಾಙ್ಮನಗೋಚರಕ್ಕತ್ತತ್ತವಾದ ಮಹಾಘನಕ್ಕೆ ಘನವಾದ ಉಪಮಾತೀತಕ್ಕೆ ಅತ್ತತ್ತವಾದ ಸ್ಥಿತಿಯು ಇರುತ್ತದೆ.

೧೯೯. **ಶಿವಸಂಬಂಧದ ಪ್ರಣವುಗಳಿಂದಾದ ವಸ್ತುಗಳು :** ಇದರಲ್ಲಿ ಜ್ಯೋತಿಸ್ವರೂಪಪ್ರಣವು, ದರ್ಪಣಾಕಾರಪ್ರಣವ, ಅರ್ಧಚಂದ್ರಕ ಪ್ರಣವ, ಕುಂಡಲಾಕಾರಪ್ರಣವ, ದಂಡಸ್ವರೂಪಪ್ರಣವ, ತಾರಕಸ್ವ-ರೂಪಪ್ರಣವ ಎಂದು ಆರು ಪ್ರಕಾರಗಳಿರುತ್ತವೆ.

(ಬ) ದರ್ಪಣಾಕಾರ ಪ್ರವಣದಲ್ಲಿ ಈಶಾನ್ಯಮುಖ, ಅರ್ಧಚಂದ್ರಕ ಪ್ರಣವದಲ್ಲಿ ತತ್ಪುರುಷಮುಖ, ಕುಂಡಲಾಕಾರ ಪ್ರಣವದಲ್ಲಿ ಅಘೋರಮುಖ ದಂಡಸ್ವರೂಪ ಪ್ರಣವದಲ್ಲಿ ವಾಮದೇವಮುಖ, ತಾರಕಸ್ವ ರೂಪದಲ್ಲಿ ಸದ್ಯೋಜಾತಮುಖ ಉಂಟಾಗುತ್ತವೆ.

(ಕ) ಈಶಾನ್ಯಮುಖದಲ್ಲಿ ಸಾಯುಜ್ಯಪ್ರಣವು, ತತ್ಪುರುಷ ಮುಖದಲ್ಲಿ ಸಾಕಲ್ಯಪ್ರಣವು, ಅಘೋರಮುಖದಲ್ಲಿ ಶಾಂಭವಪ್ರಣವು, ವಾಮದೇವಮುಖದಲ್ಲಿ ಸ್ಯಾಸ್ಯಪ್ರಣವು (?) ಸದ್ಯೋಜಾತಮುಖದಲ್ಲಿ ಸೌಖ್ಯ ಪ್ರಣವು (?) ಉಂಟಾಗುತ್ತವೆ.

೨೦೦. **ಶಕ್ತಿ ಸ್ವರೂಪ ಪರಮ ಪ್ರಣವುಗಳಿಂದಾದ ವಸ್ತುಗಳು:** ಅವು ತಾರಕಸ್ವರೂಪ ಪ್ರಣವು, ದಂಡಕಸ್ವರೂಪ ಪ್ರಣವು, ಕುಂಡಲಾಕಾರ ಪ್ರಣವು, ಅರ್ಧಚಂದ್ರಕ ಪ್ರಣವು, ದರ್ಪಣಾಕಾರ ಪ್ರಣವು, ಜ್ಯೋತಿ ಸ್ವರೂಪ ಪ್ರಣವು ಎಂದು ಇರುತ್ತವೆ. ಇವು ಶಿವಸಂಬಂಧದ ಪ್ರಣವುಗಳ ಕ್ರಮಕ್ಕೆ ವಿರುದ್ಧ ಕ್ರಮದಲ್ಲಿರುತ್ತವೆ.

೨೦೧. **ಶಿವಶಕ್ತಿರಹಿತ ಪ್ರಣವುಗಳಿಂದಾದ ವಸ್ತುಗಳು :** ಅಖಂಡ ಮಹಾಜ್ಯೋತಿ ಪ್ರಣವುದಲ್ಲಿ ಮೂರ್ತಿಬ್ರಹ್ಮಪ್ರಣವು, ಪಿಂಡ ಬ್ರಹ್ಮಪ್ರಣವು, ಕಲಾಬ್ರಹ್ಮಪ್ರಣವು, ಬ್ರಹ್ಮಾನಂದಪ್ರಣವು, ವಿಜ್ಞಾನ ಬ್ರಹ್ಮಪ್ರಣವು, ಪರಬ್ರಹ್ಮಪ್ರಣವು ಇವುಗಳು ಉಂಟಾಗುತ್ತವೆ.

೨೦೨. **ಆದಿಪ್ರಣವ :** ಓಂಕಾರವೆಂಬ ಅನಾದಿ ಪ್ರಣವದ ನೆನಹು ಮಾತ್ರದಿಂದ ಆದಿ ಅಕಾರ, ಆದಿ ಉಕಾರ, ಆದಿಮಕಾರಗಳು ಉಂಟಾಗುತ್ತವೆ. ಇವು ಅನುಕ್ರಮವಾಗಿ ಚಿನ್ನಾದ ಚಿದ್ಬಿಂದು ಚಿತ್ಕಲೆಗಳಾಗಿವೆ. ಇವು ಮೂರು ಮತ್ತು ಮೂಲ ಚಿತ್ತು ಇವು ಕೂಡಿದಲ್ಲಿ ಓಂಕಾರ ಪ್ರಣವವು ಉಂಟಾಗುತ್ತದೆ. ಇದು ಆದಿಪ್ರಣವವು. ಅದು ನಿತ್ಯಪರಿಪೂರ್ಣ



ಪರಂಜ್ಯೋತಿ ಪರಬ್ರಹ್ಮವೆಂದು ತಿಳಿಯಬೇಕು. ಇದಕ್ಕೆಯೇ ಗೋಳಕಾಕಾರ ಪ್ರಣವು, ಮೂಲ ಪ್ರಣವುಗಳೆಂಬ ಹೆಸರುಗಳಿವೆ.

೨೦೩. **ಷಡ್ವಿಧ ಪ್ರಣವುಗಳು :** ಇವು ಜ್ಯೋತಿಸ್ವರೂಪ ಪ್ರಣವು, ದರ್ಪಣಾಕಾರ ಪ್ರಣವು, ಅರ್ಧಚಂದ್ರಕ ಪ್ರಣವು, ಕುಂಡಲಾಕಾರ ಪ್ರಣವು, ದಂಡಸ್ವರೂಪ ಪ್ರಣವು, ತಾರಕಸ್ವರೂಪ ಪ್ರಣವು ಹೀಗೆ ಇರುತ್ತವೆ. ಇವುಗಳಲ್ಲಿ ಪ್ರಣವುದ ಮತ್ತು ಪಂಚಾಕ್ಷರಗಳ ಉದಯವು. ಇವು ಆರು ಆದಿಪ್ರಣವು ಅನಾದಿಪ್ರಣವು ಮತ್ತು ಚಿತ್ತಲಾಪ್ರಣವು ಇವುಗಳಲ್ಲಿಯೂ ಕೂಡ ಆಯಾ ಸ್ವರೂಪಗಳಿಂದ ಇವೆ ಎಂದು ಭಾವಿಸಿ ಜಪಿಸಬೇಕು.

೨೦೪. **ಅಷ್ಟಾಕ್ಷರಗಳು :** ಇವು ಬ, ಸ, ವ; ಅ, ಉ, ಮ; ಹಂ, ಕ್ಷಂ ಎಂದು ಇವೆ. ಜಗತ್ತಿನ ಆಯಾ ಸ್ವರೂಪಗಳನ್ನು ಇವು ಸೂಚಿಸುತ್ತವೆ. ಈ ಸ್ವರೂಪಗಳ ಬಗ್ಗೆ ಈ ಮೊದಲಿಗೇ ಹೇಳಲ್ಪಟ್ಟಿದೆ.

೨೦೫. **ಐವತ್ತೆರಡಕ್ಷರಗಳ ಉತ್ಪತ್ತಿ :** ಗೋಳಕಾಕಾರ ಪ್ರಣವದ ಯಕಾರ ಬೀಜದಲ್ಲಿ ಅಕಾರದಿಂದ ಅಃಕಾರದ ವರೆಗೆ ಷೋಡಶಾಕ್ಷರಗಳ ಉತ್ಪತ್ತಿ, ವಕಾರ ಬೀಜದಲ್ಲಿ ಕಕಾರದಿಂದ ಠಕಾರದ ವರೆಗೆ ದ್ವಾದಶಾಕ್ಷರಗಳ ಉತ್ಪತ್ತಿ, ಶಿಕಾರ ಬೀಜದಲ್ಲಿ ಡಕಾರದಿಂದ ಫಕಾರದವರೆಗೆ ದಶಾಕ್ಷರಗಳ ಉತ್ಪತ್ತಿ, ಮಕಾರ ಬೀಜದಲ್ಲಿ ಬಕಾರದಿಂದ ಲಕಾರದ ವರೆಗೆ ಆರಕ್ಷರಗಳ ಉತ್ಪತ್ತಿ, ನಕಾರ ಬೀಜದಲ್ಲಿ ವಕಾರದಿಂದ ಸಕಾರದ ವರೆಗೆ ದಶಾಕ್ಷರಗಳ ಉತ್ಪತ್ತಿ, ಮಕಾರ ಬೀಜದಲ್ಲಿ ಬಕಾರದಿಂದ ಲಕಾರದನರೆಗೆ ನಾಲ್ಕಕ್ಷರಗಳ ಉತ್ಪತ್ತಿ ಹೀಗೆ ಇರುತ್ತವೆ ಈ ಅಕ್ಷರಗಳನ್ನು ಅರಿವಿನಿಂದ ಅರಿದರೆ ಅವು ಪುನಃ ನ ಮ ಶಿ ವಾ ಯ ಆರಕ್ಷರಗಳಾಗುತ್ತವೆ ಮುಂದೆ ಆರಂಭದ ೧೬ ಸ್ವರಾಕ್ಷರಗಳು ಅಕಾರ ಪ್ರಣವುದಲ್ಲಿ ಕಕಾರಾದಿ ಭಕಾರಾಂತ್ಯವಾದ ೨೪ ವಿಕಲಾಕ್ಷರಗಳು ಉಕಾರ ಪ್ರಣವುದಲ್ಲಿ ಕಡೆಯ ಮಕಾರಾದಿ ಕ್ಷಕಾರಾಂತ್ಯವಾದ ೧೧ ವ್ಯಾಪಕಾಕ್ಷರಗಳು ಮಕಾರ ಪ್ರಣವುದಲ್ಲಿ ಲಯವಾಗುತ್ತವೆ. ಇವುಗಳನ್ನು ಸಹ ಬೀಜಾಕ್ಷರಗಳೆಂತಲೂ ಒಮ್ಮೊಮ್ಮೆ ಕರೆಯುವುದುಂಟು.

೨೦೬. **ಪಂಚಾಕ್ಷರ :** ನ ಮಃ ಶಿ ವಾ ಯ ಇವು ಪಂಚಾಕ್ಷರ

[illegible]

[illegible]

೨೦೭. [illegible] ಮೂಲ ಪಂಚಾಕ್ಷರಿ ಮಂತ್ರ [illegible] ಮಂತ್ರ ಎಂದು [illegible] ಇಲ್ಲದಿದ್ದರೆ ಅದು [illegible] ಈ ಷಡಕ್ಷರವು ಜಗತ್ತಿನಲ್ಲಿ ವ್ಯಾಪಿಸಿವೆ. [illegible] ಜೊಂದು ವಸ್ತುವಿನ ವ್ಯಾಪಾರವು ಈ [illegible] ಪ್ರಣವಾಕ್ಷರ ದಿಂದ ಹೊರಡುವ ಶಕ್ತಿಗಳ [illegible] ವಸ್ತುಗಳನ್ನು ೫ ವಿಭಾಗಗಳನ್ನಾಗಿ [illegible] ಈ ಪ್ರತಿಯೊಂದು ವಿಭಾಗದ ಮೇಲೆ [illegible] ಪ್ರಣವವು [illegible] ಮಾಡುತ್ತವೆ. ಈ ವಿಷಯದಲ್ಲಿ [illegible] ಓಂಕಾರವು. ಪಂಚಾಕ್ಷರಗಳಿಗೆ ಈ ಪ್ರಣವವು ಕೂಡಿದಲ್ಲಿ ಅದು ಪ್ರಣವ ಪಂಚಾಕ್ಷರೀ ಮಂತ್ರವು ಅಥವಾ ಷಡಕ್ಷರೀ ಮಂತ್ರವು ಎಂದು ಹೇಳಲ್ಪಡುತ್ತದೆ. ಇದು ಆರು ಅವಯವಗಳುಳ್ಳದ್ದು. ಇವು ಅನುಕ್ರಮವಾಗಿ ಪರಮಾತ್ಮನ ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವನಿಯಂತೃತ್ವ, ಸರ್ವಾಂತರ್ಯಾಮಿತ್ವ, ಸರ್ವಾತ್ಮಕತ್ವ, ಸರ್ವಶಕ್ತಿತ್ವ ಈ ಗುಣಗಳನ್ನು ಸೂಚಿಸುತ್ತವೆ. ಇದರ ಅಕ್ಷರಗಳು ಯಾವ ಯಾವ ವಿಷಯಗಳನ್ನು ಸೂಚಿಸುತ್ತವೆಂಬುದನ್ನು ನಾವು ಹಿಂದೆಯೇ [illegible] ಇದರಲ್ಲಿ ವಿವರಿಸಿದ್ದೇವೆ.

೨೦೮. ಪಂಚಾಕ್ಷರ ಮತ್ತು ಷಡಕ್ಷರಗಳ ಪರಸ್ಪರ ಸಂಬಂಧ: ಪಂಚಾಕ್ಷರವು ಕೇವಲ ಶಕ್ತಿ ಮಂತ್ರವು. ಅದರ ಷಡಕ್ಷರವು ಶಿವಮಂತ್ರವೆಂದು ಹೇಳಲ್ಪಡುತ್ತದೆ. ಶಕ್ತಿ ಮಂತ್ರದಲ್ಲಿ ಓಂಕಾರ ಸಂಬಂಧಿಸಿದಲ್ಲಿ ಅದು ಶಿವ ಮಂತ್ರ ಅಥವಾ ಶಿವಶಕ್ತಿಮಂತ್ರವೆಂದು ಹೇಳಲ್ಪಡುತ್ತದೆ. ಓಂಕಾರದ [illegible] ಶಕ್ತಿಗಳು ಸ್ವತಂತ್ರವಾಗಿ ಲಿಂಗನೊಡನೆ [illegible] [illegible].

೨೦೯. ಮೂರು ಶರೀರಗಳಿಗೆ ಪ್ರಣವ ಸಂಬಂಧ : ಶರೀರಗಳು



ಸ್ಥೂಲ, ಸೂಕ್ಷ್ಮ, ಕಾರಣಗಳೆಂದು ಇವೆ. ಸ್ಥೂಲ ಶರೀರದಲ್ಲಿ ಬಕಾರವು, ಸೂಕ್ಷ್ಮ ಶರೀರದಲ್ಲಿ ಸರಕಾರವು, ಕಾರಣ ಶರೀರದಲ್ಲಿ ವಕಾರವು ಇರುತ್ತವೆ.

೨೧೦. ನಾದಬಿಂದುಕಳೆಗಳಿಗೆ ಪ್ರಣವ ಸಂಬಂಧ : ನಾದದಲ್ಲಿ ಅಕಾರವು, ಬಿಂದುವಿನಲ್ಲಿ ಉಕಾರವು, ಕಳೆಯಲ್ಲಿ ಮಕಾರವು ಇರುತ್ತವೆ.

೨೧೧. ಜೀವತ್ರಯಗಳಿಗೆ ಪ್ರಣವ ಸಂಬಂಧ: ವಿಶ್ವತೈಜಸ, ಪ್ರಾಜ್ಞ ಇವು ಜೀವತ್ರಯಗಳು. ವಿಶ್ವದಲ್ಲಿ ಅಕಾರವು, ತೈಜಸದಲ್ಲಿ ಉಕಾರವು ಪ್ರಾಜ್ಞದಲ್ಲಿ ಮಕಾರವು ಇರುತ್ತವೆ.

೨೧೨. ಶೂನ್ಯಚಕ್ರಗಳಲ್ಲಿ ಪ್ರಣವಸಂಬಂಧ : ಬ್ರಹ್ಮರಂಧ್ರದಲ್ಲಿ ಓಂಕಾರ, ಅಕಾರ, ಬಕಾರಗಳು ಶಿಖಿಯಲ್ಲಿ ಕ್ಷಕಾರ, ಉಕಾರ, ಸಕಾರಗಳು ಮತ್ತು ಪಶ್ಚಿಮ ಚಕ್ರದಲ್ಲಿ ಹಕಾರ, ಮಕಾರಗಳು ಇರುತ್ತವೆ.

೨೧೩. ಪಂಚಭೂತಗಳಿಗೆ ಪ್ರಣವ ಸಂಬಂಧ : ಪ್ರಕೃತಿ ಅಥವಾ ಆತ್ಮನಲ್ಲಿ ಓಂಕಾರವು. ಪೃಥ್ವಿಯಲ್ಲಿ ನಕಾರವು ಅಪ್ಪುವಿನಲ್ಲಿ ಮಕಾರವು ಅಗ್ನಿಯಲ್ಲಿ ಶಿಕಾರವು ವಾಯುವಿನಲ್ಲಿ ವಕಾರವು ಆಕಾಶದಲ್ಲಿ ಯಕಾರವು ಇರುತ್ತವೆ.

೨೧೪. ಕರ್ಮೇಂದ್ರಿಯಗಳಿಗೆ ಪ್ರಣವ ಸಂಬಂಧ :

(ಅ) ಇವು ವಾಕ್ಕು ಪಾಣಿ ಪಾದ ಪಾಯುಗುಹ್ಯಗಳವೆ. ವಾಕ್ಕಿನಲ್ಲಿ ಯಕಾರ ಪಾಣಿಯಲ್ಲಿ ವಕಾರ ಪಾದದಲ್ಲಿ ಶಿಕಾರ ಪಾಯುವಿನಲ್ಲಿ ಮಕಾರ ಮತ್ತು ಗುಹ್ಯದಲ್ಲಿ ನಕಾರ ಇರುತ್ತವೆ.

(ಬ) ಮಸ್ತಕ, ಮುಖ, ಹೃದಯ, ಗುಹ್ಯ ಮತ್ತು ಪಾದಗಳು ಶರೀರದ ಅವಯವಗಳು. ಮಸ್ತಕದಲ್ಲಿ ಯಕಾರವು, ಮುಖದಲ್ಲಿ ವಕಾರವು, ಹೃದಯದಲ್ಲಿ ಶಿಕಾರವು, ಗುಹ್ಯದಲ್ಲಿ ಮಕಾರವು, ಪಾದದಲ್ಲಿ ನಕಾರವು ಇರುತ್ತವೆ.

೨೧೫. ಜ್ಞಾನೇಂದ್ರಿಯಗಳಿಗೆ ಪ್ರಣವ ಸಂಬಂಧ :

(ಅ) ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ, ಹೃದಯೇಂ-ದ್ರಿಯ ಇವು ಜ್ಞಾನೇಂದ್ರಿಯಗಳು. ಶ್ರೋತ್ರಕ್ಕೆ ಯಕಾರ, ತ್ವಕ್ಕಿಗೆ ವಕಾರ,

ಸಂತ್ವಕ್ಕೆ ನಕಾರ, ಚಕ್ಷುಗೆ ಮಕಾರ, ಘ್ರಾಣಕ್ಕೆ ಶಿಕಾರ ಮತ್ತು ಶ್ರವಣೇಂದ್ರಿಯಕ್ಕೆ ಓಂಕಾರ ಸಂಬಂಧವಿರುತ್ತವೆ.

(ಆ) ಲಲಾಟ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ನಾಸಾ ಪುಟ ಇವು ಶರೀರದ ಅವಯವಗಳು. ಲಲಾಟದಲ್ಲಿ ಓಂಕಾರ, ಶ್ರೋತ್ರದಲ್ಲಿ ಯಕಾರ, ತ್ವಕ್ಕಿನಲ್ಲಿ ವಕಾರ, ನೇತ್ರದಲ್ಲಿ ಶಿಕಾರ, ಜಿಹ್ವೆಯಲ್ಲಿ ಮಕಾರ, ನಾಸಾಪುಟದಲ್ಲಿ ನಕಾರ ಇವುಗಳು ಇರುತ್ತವೆ.

೨೧೬. ವಿಷಯಂಗಳಿಗೆ ಪ್ರಣವ ಸಂಬಂಧ : ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವು ಶರೀರ ವಿಷಯಗಳು. ಶಬ್ದಕ್ಕೆ ಯಕಾರ, ಸ್ಪರ್ಶಕ್ಕೆ ವಕಾರ, ರೂಪಕ್ಕೆ ಶಿಕಾರ, ರಸಕ್ಕೆ ಮಕಾರ, ಗಂಧಕ್ಕೆ ನಕಾರ, ಸಂಬಂಧವಿರುತ್ತವೆ.

೨೧೭. ಅಂತಃಕರಣಗಳಿಗೆ ಪ್ರಣವ ಸಂಬಂಧ : ಇವು ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನಗಳಿರುತ್ತವೆ. ಚಿತ್ತಿಗೆ ನಕಾರವು, ಬುದ್ಧಿಗೆ ಮಕಾರವು, ಅಹಂಕಾರಕ್ಕೆ ಶಿಕಾರವು, ಮನಕ್ಕೆ ವಕಾರವು, ಜ್ಞಾನಕ್ಕೆ ಯಕಾರವು, ಸಂಬಂಧಪಡುತ್ತವೆ.

೨೧೮. ವಾಯುಗಳಿಗೆ ಪ್ರಣವ ಸಂಬಂಧ : ಪ್ರಾಣ, ಅಪಾನ ವ್ಯಾನ, ಉದಾನ, ಸಮಾನ ಇವು ವಾಯುಗಳು. ಪ್ರಾಣಕ್ಕೆ ನಕಾರವು, ಅಪಾನಕ್ಕೆ ಮಕಾರವು, ವ್ಯಾನಕ್ಕೆ ಶಿಕಾರವು, ಉದಾನಕ್ಕೆ ವಕಾರವು, ಸಮಾನಕ್ಕೆ ಯಕಾರವು ಸಂಬಂಧಪಡುತ್ತವೆ.

೨೧೯. ಸಪ್ತಧಾತುಗಳಿಗೆ ಪ್ರಣವ ಸಂಬಂಧ :

(ಅ) ಒಂದೇ ವಿಧ : ತ್ವಕ್ಕು, ರುಧಿರ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜೆ, ಇವು ಧಾತುಗಳು. ತ್ವಕ್ಕಿಗೆ ಓಂಕಾರ, ರುಧಿರಕ್ಕೆ ನಕಾರ, ಮಾಂಸಕ್ಕೆ ಮಕಾರ, ಮೇಧಸ್ಸಿಗೆ ಶಿಕಾರ, ಅಸ್ಥಿಗೆ ವಕಾರ, ಮಜ್ಜೆಗೆ ಯಕಾರ ಸಂಬಂಧಿಸುತ್ತವೆ.

(ಆ) ಬೇರೆ ವಿಧ : ಚರ್ಮ, ಅಸ್ಥಿ, ಮಾಂಸ, ಮಜ್ಜೆ, ರಕ್ತ, ಪ್ರಾಣ ಇವು ಧಾತುಗಳು. ಚರ್ಮದಲ್ಲಿ ನಕಾರವು, ಅಸ್ಥಿಯಲ್ಲಿ ಮಕಾರವು,



ಮಾಂಸದಲ್ಲಿ ಶಿಕಾರವು, ಮಜ್ಜೆಯಲ್ಲಿ ವಕಾರವು, ರಕ್ತದಲ್ಲಿ ಯಕಾರವು, ಪ್ರಾಣದಲ್ಲಿ ಓಂಕಾರವು ಸಂಬಂಧಪಡುತ್ತವೆ.

೨೨೦. ಶ್ಲೇಷ್ಮ, ಶುಕ್ಲ, ರಸ, ಪಿತ್ತ ಇವುಗಳಿಗೆ ಪ್ರಣವ ಸಂಬಂಧ : ಶ್ಲೇಷ್ಮಕ್ಕೆ ಯಕಾರ, ಶುಕ್ಲಕ್ಕೆ ಶಿಕಾರ, ರಸಕ್ಕೆ ನಕಾರ, ಪಿತ್ತಕ್ಕೆ ವಕಾರ ಸಂಬಂಧಪಡುತ್ತದೆ.

೨೨೧. ಮನುಷ್ಯನಿಗೆ ಕ್ಷುಧೆ, ತೃಷ್ಣೆ, ನಿದ್ರೆ, ಆಲಸ್ಯ, ಸಂಗ ಇವುಗಳಿರುತ್ತವೆ. ಕ್ಷುಧೆಯಲ್ಲಿ ನಕಾರವು, ತೃಷ್ಣೆಯಲ್ಲಿ ಮಕಾರವು, ನಿದ್ರೆಯಲ್ಲಿ ಶಿಕಾರವು, ಆಲಸ್ಯದಲ್ಲಿ ವಕಾರವು, ಸಂಗದಲ್ಲಿ ಯಕಾರವು ಸಂಬಂಧಪಡುತ್ತವೆ. ಇವುಗಳಿಂದ ಇಂಥವುಗಳ ಆಸಕ್ತಿಯನ್ನು ದೂರ ಮಾಡಬಹುದು.

೨೨೨. ಮನುಷ್ಯನಿಗೆ ಮೋಹ, ಭಯ, ರಾಗ, ಲಜ್ಜೆ ದ್ವೇಷಗಳಿರುತ್ತವೆ. ಮೋಹದಲ್ಲಿ ಯಕಾರ, ಭಯದಲ್ಲಿ ವಕಾರ, ರಾಗದಲ್ಲಿ ಶಿಕಾರ, ಲಜ್ಜೆಯಲ್ಲಿ ಮಕಾರ, ದ್ವೇಷದಲ್ಲಿ ನಕಾರ ಸಂಬಂಧಪಡುತ್ತವೆ. ಇವುಗಳ ಮೂಲಕ ಈ ದೋಷಗಳನ್ನು ದೂರ ಮಾಡಬಹುದು.

೨೨೩. ಪದಾರ್ಥಗಳಿಗೆ ಕಠಿಣ ಅಥವಾ ಮೃದು ಹೀಗೆ ಧರ್ಮಗಳಿರುತ್ತವೆ. ಕ್ಲಂ ಇದು ಕಠಿಣಕ್ಕೆ, ಕ್ಲಿಂ ಇದು ಮೃದುವಿಗೆ ಸಂಬಂಧವಿರುತ್ತವೆ.

೨೨೪. ಮನುಷ್ಯನಿಗೆ ಅಸ್ಥಿ, ಮಾಂಸ, ತ್ವಕ್ಕು, ನಾಡಿ, ರೋಮಗಳಿವೆ. ಇವುಗಳಲ್ಲಿ ಅಸ್ಥಿಗೆ ನಕಾರ, ಮಾಂಸಕ್ಕೆ ಮಕಾರವು, ತ್ವಕ್ಕಿಗೆ ಶಿಕಾರವು, ನಾಡಿಗೆ ವಕಾರವು, ರೋಮಕ್ಕೆ ಯಕಾರವು ಸಂಬಂಧಪಡುತ್ತವೆ.

೨೨೫. ಶರೀರದ ಪಾರ್ಶ್ವಗಳಿಗೆ ಪ್ರಣವ ಸಂಬಂಧ : ಶರೀರದ ಬಲಭಾಗದಲ್ಲಿ ಓಂಕಾರ, ಎಡಭಾಗದಲ್ಲಿ ಉಕಾರ, ಮುಂಭಾಗದಲ್ಲಿ ಅಕಾರ, ಹಿಂಭಾಗದಲ್ಲಿ ಮಕಾರ, ಊರ್ಧ್ವಭಾಗದಲ್ಲಿ ಹಕಾರಗಳಿರುತ್ತವೆ.

೨೨೬. ಶರೀರಕ್ಕೆ ಪ್ರಣವ ಸಂಬಂಧ :

(ಅ) ಶರೀರಕ್ಕೆ ಮುಖ, ಎರಡು ಭುಜಗಳು, ದೇಹಮಧ್ಯ, ಎರಡು ಪಾದಗಳು ಇರುತ್ತವೆ. ಮುಖದಲ್ಲಿ ಓಂಕಾರ, ಎರಡು ಭುಜಗಳಲ್ಲಿ ವಕಾರ

ಯಕಾರಗಳು, ದೇಹಮಧ್ಯದಲ್ಲಿ ಶಿಕಾರ, ಎರಡು ಪಾದಗಳಲ್ಲಿ ನಕಾರ ಮಕಾರಗಳು ಇರುತ್ತವೆ.

(ಬ) ಶರೀರಕ್ಕೆ ಬಲಪಾದ, ಎಡಪಾದ, ಮಧ್ಯನಾಭಿ, ಬಲಹಸ್ತ, ಎಡಹಸ್ತ, ಮತ್ತು ಮಸ್ತಕಗಳಿವೆ. ಬಲಪಾದದಲ್ಲಿ ವಕಾರ, ಎಡಪಾದದಲ್ಲಿ ಮಕಾರ. ಮಧ್ಯನಾಭಿಯಲ್ಲಿ ಶಿಕಾರ, ಬಲಹಸ್ತದಲ್ಲಿ ವಕಾರ, ಎಡಹಸ್ತದಲ್ಲಿ ಯಕಾರ ಮತ್ತು ಮಸ್ತಕದಲ್ಲಿ ಓಂಕಾರಗಳಿರುತ್ತವೆ.

೨೨೭. **ಶರೀರದ ಉಪಾಂಗಗಳಲ್ಲಿ ಪ್ರಣವ ಸಂಬಂಧ :**

(ಅ) ಬಲಹಸ್ತದ ಮಧ್ಯದಲ್ಲಿ ಓಂಕಾರ, ಹೆಬ್ಬೆರಳಿನಲ್ಲಿ ಯಕಾರ, ಉಳಿದ ನಾಲ್ಕು ಬೆರಳುಗಳಲ್ಲಿ ನ, ಮ, ಶಿ, ವ ಈ ಪ್ರಣವಗಳು ಸಂಬಂಧಿಸುತ್ತವೆ.

ಹಸ್ತದ ಮೇಲುಭಾಗಕ್ಕೆ ಅಕಾರ, ಮುಂಗಯ್ಯಿಗೆ ಬಕಾರ, ಮೊಳಕೆಯ್ಯಿಗೆ ಉಕಾರ, ರಟ್ಟೆಯಲ್ಲಿ ಸಕಾರ, ಭುಜದಲ್ಲಿ ಮಕಾರ, ಹೆಗಲಲ್ಲಿ ವಕಾರ ಸಂಬಂದಿಸುತ್ತವೆ.

(ಬ) ಉಭಯ ತಳಪಾದದಲ್ಲಿ ಓಂಕಾರ, ಉಭಯ ಪಾದಾಂಗುಷ್ಠದಲ್ಲಿ ಯಕಾರ, ಉಭಯ ನಾಲ್ಕು ಬೆರಳುಗಳಲ್ಲಿ ನ, ಮ, ಶಿ, ವ ಈ ನಾಲ್ಕು ಪ್ರಣವಗಳು ಸಂಬಂಧಿಸುತ್ತವೆ.

ಉಭಯ ಪಾದದ ಮೇಲು ಭಾಗದಲ್ಲಿ ಅಕಾರ, ಉಭಯ ಪಾದದ ಹರಡಿನಲ್ಲಿ ಉಕಾರ, ಉಭಯಪಾದ ದಂತದ ಹರಡಿನಲ್ಲಿ ಬಕಾರ, ಉಭಯ ಪಾದದ ಹಿಮ್ಮಡದಲ್ಲಿ ಮಕಾರ, ಉಭಯ ಕಣಕಾಲದಲ್ಲಿ ನಕಾರ, ಉಭಯಪಾದ ಮೊಳಕಾಲಲ್ಲಿ ಹಕಾರ, ಕಿರುದೊಡೆಗಳಲ್ಲಿ ಅಕಾರ, ಹಿಂದೊಡೆಗಳಲ್ಲಿ ಉಕಾರ, ಉಭಯಾಂಗದಲ್ಲಿ ಮಕಾರ ಸಂಬಂಧಿಸುತ್ತವೆ.

೨೨೮. ಉಭಯ ಬರಕಿಯಲ್ಲಿ ನಮಶ್ಶಿವಾಯ, ಉಭಯ ಮೊಲೆಯಲ್ಲಿ ಓಂಕಾರ; ಕಕ್ಷೆಯಲ್ಲಿ ಅಕಾರ, ಹೃದಯದಲ್ಲಿ ಉಕಾರ, ಕಂಠದಲ್ಲಿ ಮಕಾರ; ಉಭಯ ಬಗಲಲ್ಲಿ ಬಕಾರ, ಹೆಡಕಿನಲ್ಲಿ ಸಕಾರ, ಹೆಡಕಿನ ಎಡಬಲದಲ್ಲಿ ವಕಾರ; ಉಭಯಕರ್ಣದಲ್ಲಿ ಓಂಕಾರ ಆಲಿಯಲ್ಲಿ ಯಕಾರ, ಕಿರಿಯಾಲಿಯಲ್ಲಿ ವಕಾರ; ಕರ್ಣ ಮತ್ತು ಊರ್ಧ್ವ ಭಾಗ ನಯನಗಳಲ್ಲಿ



ಅಕಾರ ಬಕಾರಗಳು, ಎಡಭಾಗದ ನಯನಗಳಲ್ಲಿ ಉಕಾರ ಸಕಾರಗಳು, ಉಭಯ ನಯನ ಮಧ್ಯದಲ್ಲಿ ಮಕಾರ ವಕಾರಗಳು, ಉಭಯ ಗಲ್ಲಗಳಲ್ಲಿ ಓಂಕಾರ ಇವುಗಳು ಸಂಬಂಧಪಡುತ್ತವೆ.

೨೨೯. **ಚಕ್ರಗಳಿಗೆ ಪ್ರಣವ ಸಂಬಂಧ :** ಆಧಾರದಲ್ಲಿ ನಕಾರ, ಸ್ವಾಧಿಷ್ಠಾನದಲ್ಲಿ ಮಕಾರ, ಮಣಿಪೂರಕದಲ್ಲಿ ಶಿಕಾರ, ಅನಾಹತದಲ್ಲಿ ವಕಾರ, ವಿಶುದ್ಧಿಯಲ್ಲಿ ಯಕಾರ, ಆಜ್ಞೆಯಲ್ಲಿ ಓಂಕಾರಗಳು ಇರುತ್ತವೆ.

೨೩೦. ರೇಚಕದಲ್ಲಿ ಅಕಾರ, ಪೂರಕದಲ್ಲಿ ಉಕಾರ, ಕುಂಭಕದಲ್ಲಿ ಮಕಾರ ಸಂಬಂಧಿಸುತ್ತವೆ.

**ಟೀಪು :** ಶಿವಶರಣರು ಶರೀರ, ಪದಾರ್ಥ, ಗುಣ ಮತ್ತು ಅವಯವ ಇವುಗಳು ಯಾವ ಪ್ರಣವಕ್ಕೆ ಸಂಬಂಧಿಸಿವೆ ಎಂಬುದನ್ನು ಹೇಳುವಲ್ಲಿ ಅವರು ಕೆಲವೊಂದು ಕಾರಣವನ್ನು ಮುಂದಿಟ್ಟುಕೊಂಡು ಸಂಬಂಧವನ್ನು ಹೇಳುವುದುಂಟು. ಪಂಚಭೂತಗಳಿಂದ ಜಗತ್ತಿನಲ್ಲಿಯ ಪ್ರತಿಯೊಂದು ಪದಾರ್ಥವು ಉತ್ಪನ್ನವಾಗುತ್ತದೆಂದು ಹಿಂದೂ ಜನರ ಮುಖ್ಯ ತತ್ವವಿದೆ. ಇದಕ್ಕನುಸರಿಸಿಯೇ ಶಿವಶರಣರಲ್ಲಿ ಪ್ರಣವಪಂಚಾಕ್ಷರಿಯ ರಚನೆ ಇದೆ. ಅದರ ಪ್ರತಿಯೊಂದು ಪ್ರಣವವು ಒಂದೊಂದು ಭೂತಕ್ಕೆ ಸಂಬಂಧಿಸಿದೆ. (ವ|| ೨೧೩ ನೋಡಿರಿ.) ಆದ್ದರಿಂದ ಪಂಚಭೂತಗಳ ಗುಣಗಳನ್ನು ಮೊದಲು ಅರಿತುಕೊಳ್ಳಬೇಕು. ಉದಾ : ಪೃಥ್ವಿಯ ತತ್ವವು ಎಲ್ಲಕ್ಕೂ ಸ್ಥೂಲವಾದದ್ದು. ಭೂತಗಳು ಮುಂದೆ ಸೂಕ್ಷ್ಮವಾಗುತ್ತವಾಗುತ್ತ ಆಕಾಶತತ್ವದ ವರೆಗೂ ಹೋಗುತ್ತವೆ. ಹೀಗೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಇವುಗಳ ಗುಣಗಳಂತೆ ಪದಾರ್ಥಗಳಲ್ಲಿಯೂ ವಿಭಾಗಗಳು ಉಂಟಾಗಿವೆ. ಹೀಗೆ ಆಯಾ ಇಂದ್ರಿಯಗಳಲ್ಲಿ, ವಿಷಯಗಳಲ್ಲಿ, ಪದಾರ್ಥಗಳ ಗುಣಗಳಲ್ಲಿ, ರಚನೆಯಲ್ಲಿ, ಕ್ರಿಯೆಗಳಲ್ಲಿ ಪಂಚಮಹಾಭೂತಗಳ ಪ್ರಕಾರ ಐದೈದು ವಿಭಾಗಗಳು ಕಲ್ಪಿಸಲ್ಪಟ್ಟಿವೆ ಈ ವಿಭಾಗಗಳು ಮೊದಲು ಸ್ಥೂಲವಾಗಿದ್ದು ಬರಬರುತ್ತ ಅವು ಸೂಕ್ಷ್ಮವಾಗುತ್ತ ಹೋಗುತ್ತವೆ. ಹೀಗಾಗಲಿಕ್ಕೆ ಅವುಗಳಲ್ಲಿರುವ ಪಂಚಭೂತ ತತ್ವಗಳೇ ಕಾರಣಗಳಾಗಿವೆ. ಮಂತ್ರಗಳನ್ನು ಸಂಬಂಧಿಸುವಲ್ಲಿ ವಾಚಕರು ಈ ತೆರದ ಭೇದಗ

ಳನ್ನು ಮೊದಲು ಅರಿತುಕೊಳ್ಳಬೇಕು. ಅರಿತುಕೊಂಡಲ್ಲಿ ಕೆಲವೊಂದು ಪದಾರ್ಥಗಳಿಗೆ ಒಂದು ವಿಶಿಷ್ಟ ಪ್ರಣಮವನ್ನು ಏಕೆ ಶಿವಶರಣರು ಇಟ್ಟಿರುವ ರೆಂಬುದು ತಿಳಿಯುತ್ತದೆ. ಬೇರೆ ಬೇರೆ ಪ್ರಣಮಗಳಿಂದಲೇ ಆಯಾ ಗುಣ ಗಳು ಆಯಾ ಪದಾರ್ಥಗಳಲ್ಲಿ ಉಂಟಾಗಿರುತ್ತವೆಂದು ಅವರ ತತ್ವವಿದೆ. ಆದ್ದರಿಂದ ಆಯಾ ಪದಾರ್ಥಗಳನ್ನು ಆ ಪ್ರಣಮಕ್ಕೆಯೇ ಸಂಬಂಧಿಸತ ಕ್ಕದ್ದು. ಹೀಗೆಯೇ ಶರೀರವು, ಶರೀರದ ಮುಖ್ಯಭಾಗಗಳು, ಅದರ ಅವ ಯವಗಳು ಸಹ ಬೇರೆ ಬೇರೆ ಪ್ರಣಮಗಳಿಗೆ ಸಂಬಂಧಪಡುತ್ತವೆ. ಒಮ್ಮೊಮ್ಮೆ ಪದಾರ್ಥಗಳ ಕೆಲವೊಂದು ವರ್ಗವನ್ನು ಕಲ್ಪಿಸುವಲ್ಲಿ ಒಂದು ದೃಷ್ಟಿಯ ನ್ನಿಟ್ಟುಕೊಂಡು ಅದನ್ನು ರಚಿಸಿರುತ್ತಾರೆ. ಆದರೆ ಬೇರೊಂದು ವರ್ಗವನ್ನು ಕಲ್ಪಿಸುವಲ್ಲಿ ಬೇರೊಂದು ದೃಷ್ಟಿಯು ಅಥವಾ ಉದ್ದೇಶವು ಅವರಿಗೆ ಇರು ವುದರಿಂದ ಆಗ ಮೊದಲಿನ ವರ್ಗದಲ್ಲಿ ಕೆಲವೊಂದು ಸ್ಥಾನ ಹೊಂದಿದ ಪದಾರ್ಥವು ಬೇರೆ ವರ್ಗದಲ್ಲಿ ಬೇರೆ ಸ್ಥಾನವನ್ನು ಹೊಂದಬಹುದು. ಆದ್ದ ರಿಂದ ಪ್ರಣಮಗಳು ಆಯಾ ವರ್ಗಗಳ ಪ್ರಕಾರ ಬೇರೆ ಬೇರೆಯಾಗುತ್ತವೆಂ ಬುದನ್ನು ವಾಚಕರು ಲಕ್ಷಿಸಬೇಕು. (ಸಂಖ್ಯೆ ೨೯೯, ೩೨೪ ನೋಡಿರಿ.) ಮನುಷ್ಯನಿಗೆ ವಿಕಾರಗಳೂ ಉಂಟು. ಅವುಗಳನ್ನು ದೂರಮಾಡುವಲ್ಲಿ ಅವು ಗಳಿಗೂ ಕೂಡ ಪ್ರಣಮಗಳನ್ನು ಸಂಬಂಧಿಸಬೇಕು. ಇವು ಸಹ ಮಂತ್ರ ಸಂಬಂಧದಲ್ಲಿ ಬರುತ್ತವೆ. ಮನುಷ್ಯನು ಕ್ರಿಯಾ ರಹಿತನಾಗಬೇಕಾಗುತ್ತದೆ. ಆದರೆ ಅವನು ಯಾವ ಗುಣಗಳಿಗೂ ಕೂಡ ಅಲಿಪ್ತನಾಗಿರಬೇಕಾಗುತ್ತದೆ. ಇದರಿಂದ ಕರ್ಮವು ಅವನಿಗೆ ಅಂಟಿಕೊಳ್ಳುವುದಿಲ್ಲ. ಇದು ಈ ಪ್ರಣಮಗ ಳನ್ನು ಸಂಬಂಧಿಸುವುದರಿಂದ ಸಾಧ್ಯವಾಗುತ್ತದೆ. ಈ ತತ್ವವನ್ನು ಶಿವಶ ರಣರು ಅಂಗೀಕರಿಸಿ ಮಂತ್ರಸಂಬಂಧ ಮಾಡಿದ್ದಾರೆ. ಇದರಿಂದ ದುರ್ವಿಕಾ ರಗಳು ಸಹ ಮನುಷ್ಯನಲ್ಲಿ ಅಡಗುವವೆಂದು ಅವರು ಭಾವಿಸಿರುತ್ತಾರೆ.

ಈ ಪ್ರಣಮಗಳಲ್ಲಿ ಬ, ಸ, ವ, ಅ, ಉ, ಮ ಎಂಬ ಸೂಕ್ಷ್ಮ ಪ್ರಣ ಮಗಳಿವೆ. ಇವುಗಳಲ್ಲಿ ಅ, ಉ, ಮ ಪ್ರಣಮಗಳು ಬ, ಸ, ವ ಪ್ರಣಮ ಗಳಿಗಿಂತ ಹೆಚ್ಚಿಗೆ ಸ್ಥೂಲವಾದವುಗಳು. ಆದ್ದರಿಂದ ಯಾವ ಕ್ರಿಯೆಗಳು ಇನ್ನಿತರ ಕ್ರಿಯೆಗಳಿಂದ ಅಥವಾ ಅವಯವಗಳಿಂದ ಉತ್ಪನ್ನವಾಗಿರುತ್ತ ವೆಯೋ ಅಂಥ ಮೂಲ ಕ್ರಿಯೆಗಳು ಅಥವಾ ಶರೀರದ ಮುಖ್ಯ ಭಾಗಗಳು



ಅವುಗಳ ಉಪಭಾಗಗಳಿಗಿಂತಲೂ ಸೂಕ್ಷ್ಮವಾದವುಗಳು ಇದಕ್ಕನುಸರಿಸಿ ಅ, ಉ, ಮ, ಬ, ಸ, ವ ಪ್ರಣಮಗಳನ್ನು ವಚನಕಾರರು ಇಟ್ಟಿದ್ದಾರೆ. ಅವು ಮೊದಲು ಶೂನ್ಯಸ್ಥಲಗಳಿಂದ ಹೊರಟಂಥವು ಇರುತ್ತವೆ. (ಸಂಖ್ಯೆ ೨೯೯ ರಿಂದ ೩೨೨ರ ವರೆಗೆ ನೋಡಿರಿ.) ಮೂಲಭಾಗಗಳಿಗೆ ಬ, ಸ, ವ ಪ್ರಣಮಗಳನ್ನು ಮತ್ತು ಉಪಭಾಗಗಳಿಗೆ ಅ, ಉ, ಮ ಪ್ರಣಮಗಳನ್ನು ಅವರು ಸಂಬಂಧಿಸುತ್ತಾರೆ.

ಹಾಗೆಯೇ ಮನುಷ್ಯನ ಸುತ್ತಲೂ ಅವನ ಗುಣಗಳಿಗೆ ಅನುಸಾರ ವಾಗಿ ಶಕ್ತಿಗಳು ಸಂಚರಿಸುತ್ತಿರುತ್ತವೆ. ಆದ್ದರಿಂದ ಅಲ್ಲಿಯೂ ಅವರು ಪ್ರಣಮಗಳನ್ನು ಇಟ್ಟಿದ್ದಾರೆ. (ಸಂಖ್ಯೆ ೩೩೫ ನೋಡಿರಿ.)

ಆದರೆ ಈ ಎಲ್ಲ ವಿಷಯಗಳಲ್ಲಿ ನಡೆಯುವವನ ಉಚ್ಚವರ್ತನೆ, ಉಜ್ವಲಭಾವನೆ, ಮನಸ್ಸಿನ ಏಕಾಗ್ರತೆ ಇವು ಅವಶ್ಯವಿರುವುದರಿಂದ ಅವು ಗಳ ಪ್ರಭಾವದಿಂದ ಮನುಷ್ಯನು ಹೀಗೆ ಮಂತ್ರಮಯನಾಗಿ ಆಚರಿಸು ತ್ತಾನೆ. ಹೀಗೆ ಆಚರಿಸುತ್ತ ಅವನು ಆತ್ಮೋದ್ಧಾರವನ್ನು ಮಾಡಿಕೊಳ್ಳು ತ್ತಾನೆ. ಹೀಗೆ ಮಂತ್ರದ ಬಗ್ಗೆ ಶಿವಶರಣರ ವಿಚಾರಗಳಿವೆ.

೩೩೧. **ಪಂಚ ಪಂಚಾಕ್ಷರಗಳು :** ಇವು ಮೂಲ ಪಂಚಾಕ್ಷರ, ಸ್ಥೂಲಪಂಚಾಕ್ಷರ, ಸೂಕ್ಷ್ಮಪಂಚಾಕ್ಷರ, ಮಾಯಾಖ್ಯ ಪಂಚಾಕ್ಷರ, ಪ್ರಸಾದ ಪಂಚಾಕ್ಷರ ಎಂದು ಐದು ಇರುತ್ತವೆ. ಇವುಗಳಲ್ಲಿ ಒಟ್ಟು ೩೮ ಪ್ರಣ ಮಗಳಿರುತ್ತವೆ. ಪಂಚಾಕ್ಷರಿಯ ಉಪಯೋಗವು ಧ್ಯಾನದಲ್ಲಿ, ಪೂಜೆ ಯಲ್ಲಿ, ನ್ಯಾಸದಲ್ಲಿ, ಆಚರಣೆಯಲ್ಲಿ, ನಿತ್ಯದ ನಡೆಯಲ್ಲಿ, ನಿಂತಲ್ಲಿ ಕುಳಿತಲ್ಲಿ ನೋಡಿದಲ್ಲಿ ಎಲ್ಲೆಲ್ಲಿಯೂ ಇರುತ್ತದೆ. ಅದರ ಮೂಲಕ ಮನುಷ್ಯನು ತನ್ನಲ್ಲಿ ಲಿಂಗವೃತ್ತಿಯನ್ನು ನೆಲೆಗೊಳಿಸುತ್ತಾನೆ. ಸಿಷ್ಟಾಮಂತರು ಪರಮಾತ್ಮನ ನಾಮಸಂಕೀರ್ತನವನ್ನು ಮಾಡುವುದುಂಟು. ಆದರೆ ವೀರಶೈವನು ಲಿಂಗಿ ಯಾದ್ದರಿಂದ ಅವನು ಪಂಚಾಕ್ಷರಗಳ ಉಪಯೋಗವನ್ನು ಮಾಡಿಕೊಳ್ಳು ತ್ತಾನೆ. ಆದ್ದರಿಂದ ಅವುಗಳ ಸಂಬಂಧವನ್ನು ಅವನು ಅರಿತುಕೊಳ್ಳ ಬೇಕು. ಹೀಗೆ ಅರಿತು ಆಚರಿಸಿದಲ್ಲಿ ಅವನಲ್ಲಿ ದುಷ್ಟವಾಸನೆಗಳು ಉಂಟಾ ಗಲಾರವು. ಅವನಲ್ಲಿ ದುಷ್ಟ ಪ್ರವೃತ್ತಿಗಳು ಅಡಗುವವು. ಭೂತ ಪಿಶಾಚಿ ಗಳು ಅವನನ್ನು ಸಮೀಪಿಸಲು ಹಿಂಜರಿಯುತ್ತವೆ. ಪಂಚಾಕ್ಷರವು ಕೇವಲ

ಅಕ್ಷರದ ಮಂತ್ರವು. ಆದರೆ ಅದರ ಉಪಯೋಗವು ಷಟ್‌ಸ್ಥಲವನ್ನರಿತವನಿಗೆ ತಿಳಿಯುವುದು. ಅವನು ಹೀಗೆ ಅರಿತು ಆಚರಿಸಿದಲ್ಲಿ ಈ ಮಂತ್ರಾಕ್ಷರಗಳು ಅವನ ಆಯಾ ಸ್ಥಾನಗಳಲ್ಲಿ ದೃಢ ಪಡುವವು. ಆಗ ಅವುಗಳಿಂದ ಆಯಾ ಶಕ್ತಿಗಳು ಹೊರಹೊರಡುವವು. ಈ ಶಕ್ತಿಗಳ ಮೂಲಕ ಕರ್ಮಗಳು ಅವನನ್ನು ಮುಟ್ಟಲಾರವು. ಈ ಪ್ರಕಾರ ವೀರಶೈವನು ಪಂಚಾಕ್ಷರ ಮಂತ್ರ ಮೂಲಕ ಶಿವಸಾಮರಸ್ಯವನ್ನು ಹೊಂದುತ್ತಾನೆ.

೨೩೨. **ನವಪ್ರಣವುಗಳು :** ಅ, ಉ, ಮ, ಓಂ. ನ, ಮ, ಶಿ, ವಾ, ಯ, ಇವುಗಳು ನವಪ್ರಣವುಗಳು. ಇವುಗಳ ಭಾವವು ಹಿಂದೆ ವಿವರಿಸಲ್ಪಟ್ಟಿರುತ್ತದೆ.

೨೩೩. **ಷಟ್‌ಸ್ಥಲದಲ್ಲಿ ಅ ಉ ಮಾಕ್ಷರಗಳ ಸಂಬಂಧ:** ಷಟ್‌ಸ್ಥಲದಲ್ಲಿ ಏಕವಿಧ, ದ್ವಿವಿಧ, ತ್ರಿವಿಧ ಮತ್ತು ಷಡ್ವಿದ ಹೀಗೆ ವಿಧಗಳಿವೆ. ಏಕವಿಧವು ಪರಬ್ರಹ್ಮವನ್ನು ಸೂಚಿಸುತ್ತದೆ. ದ್ವಿವಿಧವು ಶಿವ ಶಕ್ತಿ, ಅಂಗಲಿಂಗ, ಇವುಗಳನ್ನು ಸೂಚಿಸುತ್ತದೆ. ತ್ರಿವಿಧವು ಅನೇಕವಿದ್ದು ಅವು ಬಹು ಸೂಕ್ಷ್ಮವಾದವು. ಅಲ್ಲಿ ಅ, ಉ, ಮ ಸಂಬಂಧಪಡುತ್ತವೆ. ಷಡ್ವಿಧಕ್ಕೆ ಪ್ರಣವ ಸಹಿತ ಪಂಚಾಕ್ಷರಗಳು ಸಂಬಂಧಪಡುತ್ತವೆ.

ಈ ತ್ರಿವಿಧಗಳಲ್ಲಿ ಮುಖ್ಯವು ಯಾವುವೆಂದರೆ : ತತ್ ತ್ವಂ ಅಸಿ, ಈಡಾ ಪಿಂಗಳ ಸುಷುಮ್ನಾ; ಸತ್ಕ್ರಿಯೆ ಸಮ್ಯಜ್ಞಾನ ತ್ರಿಕೂಟ; ಚಿದಂಗ ಚಿದ್ಘನಲಿಂಗ ತ್ರಿಕೂಟ; ಚಿನ್ನಾದ ಚಿದ್ಬಿಂದು ಚಿತ್‌ಕಳೆ; ನಾದ ಬಿಂದು ಕಳೆ, ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತ; ಕರುಣಜಲ ವಿನಯಜಲ ಸಮತಾ ಜಲ; ಲಿಂಗದರೂಪ ಪ್ರಣವಲಿಂಗದ ರುಚಿ ಉಭಯದ ತೃಪ್ತಿ; ತನು ವಿನ ಕುರುಹು ಉನ್ಮನಿಕುರುಹು ನಿಜದಿರವು; ಗುರು ಲಿಂಗ ಜಂಗಮವು; ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು; ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ; ಸ್ವಯಜಂಗಮ ಚರಜಂಗಮ ಪರಜಂಗಮ; ಗುರುಪಾದೋದಕ ಲಿಂಗಪಾದೋದಕ ಜಂಗಮಪಾದೋದಕ; ಶುದ್ಧಪ್ರಸಾದ ಸಿದ್ಧಪ್ರಸಾದ ಪ್ರಸಿದ್ಧ ಪ್ರಸಾದ; ಕ್ರಿಯಾಭಸಿತ ಜ್ಞಾನಭಸಿತ ಚಿದ್ಘನಭಸಿತ; ನಮ ಶಿವ ಯಓಂ; ಅಷ್ಟಾವರಣ ಪಂಚಾಚಾರ ಉಭಯದ ಕೂಟ; ಲಿಂಗದ ಪೀಠ ಊರ್ಧ್ವ ಪೀಠ ಗೋಮುಖ; ಲಿಂಗದ ವೃತ್ತ ಕಟಿ ವರ್ತುಳ; ಶಕ್ತಿಪೀಠ ಶಿವ



ಪೀಠ ಉಭಯದ ಕೂಟ ಈ ಪ್ರಕಾರ ಗುಂಪುಗಳಿದ್ದು ಈ ಗುಂಪುಗಳಲ್ಲಿ ಷಟ್‌ಸ್ಥಲ ಶಾಸ್ತ್ರಕ್ಕೆ ಸಂಬಂಧಿಸಿದ ವಿಶಿಷ್ಟಾರ್ಥವುಳ್ಳ ಮೂರು ಮೂರು ಶಬ್ದಗಳಿವೆಯಷ್ಟೇ. ಈ ಮೂರು ಅನುಕ್ರಮವಾಗಿ ಅ, ಉ, ಮ ಈ ಬೀಜಾಕ್ಷರಗಳಿಗೆ ಸಂಬಂಧ ಪಡುತ್ತವೆ.

೨೩೪. **ಇಷ್ಟಲಿಂಗಕ್ಕೆ ತ್ರಿವಿಧಗಳ ಸಂಬಂಧ :** ಗುರು, ಲಿಂಗ ಜಂಗಮಗಳು; ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಗಳು; ಸ್ವಯ ಚರ ಪರಗಳು; ಇವು ತ್ರಿವಿಧಗಳು ಇದ್ದು ಇವುಗಳಲ್ಲಿ ಮೂರು ಮೂರು ಭಾಗಗಳಿವೆಯಷ್ಟೇ. ಈ ಭಾಗಗಳು ಅನುಕ್ರಮವಾಗಿ ಲಿಂಗದ ಪೀಠ, ಲಿಂಗದ ಮೇಲೂರ್ಧ್ವ, ಮತ್ತು ಲಿಂಗದ ಗೋಮುಖ ಇವುಗಳಿಗೆ ಸಂಬಂಧಿಸುತ್ತವೆ.

೨೩೫. **ಇಷ್ಟಲಿಂಗಕ್ಕೆ ಪಂಚಾಕ್ಷರ ಸಂಬಂಧ :** ಗೋಳಕ, ಪೀಠ, ಕಂಠ, ಗೋಮುಖ, ವೃತ್ತ ಎಂದು ಇಷ್ಟಲಿಂಗದಲ್ಲಿ ಭಾಗಗಳಿವೆ. ಇವು ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಪ್ರಣವುಗಳಿಗೆ ಸಂಬಂಧಪಡುತ್ತವೆ.

೨೩೬. **ಪಂಚಾಕ್ಷರಿಯ ಮಿಶ್ರಪಂಚೀಕರಣ:** ಕರ್ಮೇಂದ್ರಿಯಗಳು ಪಂಚವಿಷಯಗಳು, ಜ್ಞಾನೇಂದ್ರಿಯಗಳು, ವಾಯುಗಳು, ಕರಣೇಂದ್ರಿಯಗಳು ಇವು ಮನುಷ್ಯನ ಕ್ರಿಯೆಗಳಿಗೆ ಅವಶ್ಯವಾಗಿ ಬೇಕಾಗುವ ಸಾಧನಗಳಾಗಿವೆ. ಕರ್ಮೇಂದ್ರಿಯಗಳು ಹೆಚ್ಚಿಗೆ ಸ್ಥೂಲವಾಗಿದ್ದು ಮುಂದಿನವುಗಳು ಹೆಚ್ಚು ಹೆಚ್ಚಿಗೆ ಸೂಕ್ಷ್ಮವಾಗುತ್ತ ಹೋಗುತ್ತವೆ. ಈ ಐದು ಗುಂಪುಗಳು ನ, ಮ, ಶಿ, ವಾ, ಯ ಈ ಪಂಚಾಕ್ಷರಗಳಿಗೆ ಅನುಕ್ರಮವಾಗಿ ಸಂಬಂಧಪಡುತ್ತವೆ. ಇದು ಹೇಗೆಂದರೆ, ವಾಕ್ಕು, ಪಾಣಿ, ಪಾದ, ಗುಹ್ಯ, ವಾಯು ಇವು ಕರ್ಮೇಂದ್ರಿಯಗಳು, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಇವು ಪಂಚ ವಿಷಯಗಳು, ಶ್ರೋತ್ರ, ಚರ್ಮ, ನೇತ್ರ, ಜಿಹ್ವೆ, ಘ್ರಾಣ ಇವು ಜ್ಞಾನೇಂದ್ರಿಯಗಳು, ಸಮಾನ, ಉದಾನ, ವ್ಯಾನ, ಅಪಾನ, ಪ್ರಾಣ ಇವುಗಳು ವಾಯುಗಳು, ಅರಿವು, ಮನ, ಹಮ್ಮು, ಬುದ್ಧಿ, ಚಿತ್ತ, ಇವು ಕರಣೇಂದ್ರಿಯಗಳು. ಇವು ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಬೇರೆ ಬೇರೆ ಪ್ರಣವುಗಳಿಗೆ ಸಾಮೂಹಿಕವಾಗಿ ಸಂಬಂಧಪಡುತ್ತವೆ. ಆದರೆ ಒಂದೊಂದೇ ಗುಂಪು ತೆಗೆದುಕೊಂಡು ವಿಚಾರಿಸಿದಲ್ಲಿ ಅವುಗಳ ಸಂಬಂ

ಥವು ಹಿಂದೆ ೨೧೪, ೨೧೫, ೨೧೬, ೨೧೭, ೨೧೮ ಈ ಗುಂಪುಗಳಲ್ಲಿ ಹೇಳಿದ ಮೇರೆಗೆ ಆಗುತ್ತದೆ. ಈ ಎರಡನೇ ವಿಧ ಸಂಬಂಧಕ್ಕೆ ಪಂಚ ವಿಂಶತಿ ತತ್ತ್ವ ಸಂಬಂಧವೆಂಬ ಹೆಸರು. ಈಗಿನದಕ್ಕೆ ಮಿಶ್ರ ಪಂಚೀಕರಣ ಸಂಬಂಧ ವೆಂದು ಹೇಳುವುದುಂಟು.

೨೩೭. **ಭಕ್ತನ ಅಂಗವು ಲಿಂಗ ಮಯವು :** ಮೇಲೆ ಸಂಖ್ಯೆ ೨೧೪, ೨೧೫, ೨೧೬, ೨೧೭, ೨೧೮ ಇವುಗಳಲ್ಲಿ ನಿರ್ದೇಶವಾದ ಪ್ರಕಾರ ಸಂಬಂಧಪಟ್ಟ ನ, ಮ, ಶಿ, ವಾ, ಯ ಈ ಪ್ರಕರಣಗಳಿಗೆ ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳು ಸಂಬಂಧಿಸುತ್ತವೆ. ಯಾಕೆಂದರೆ ಮಂತ್ರದಲ್ಲಿಯೇ ಲಿಂಗವಿದೆ. ಆದ್ದರಿಂದ ಭಕ್ತನ ಚಿತ್ತ, ಬುದ್ಧಿ, ಹಮ್ಮು, ಮನ, ಅರಿವು ಇವುಗಳಲ್ಲಿ ಅನುಕ್ರಮವಾಗಿ ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗಗಳು ಸಂಬಂಧಿಸುತ್ತವೆ. ಹಾಗೆಯೇ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವಾಯುಗಳಲ್ಲಿ, ಘ್ರಾಣ, ಜಿಹ್ವೆ, ನೇತ್ರ, ಚರ್ಮ, ಶ್ರೋತ್ರ ಈ ಜ್ಞಾನೇಂದ್ರಿಯಗಳಲ್ಲಿ, ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಂಬ ವಿಷಯಗಳಲ್ಲಿ, ಪಾಯು,ಗುಹ್ಯ, ಪಾದ, ಪಾಣಿವಾಕ್ಕು ಎಂಬ ಕರ್ಮೇಂದ್ರಿಯಗಳಲ್ಲಿ ಆನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳು ಸಂಬಂಧಿಸುತ್ತವೆ. ಹೀಗೆ ಸಂಬಂಧಿಸುವದರಿಂದ ಭಕ್ತನ ಅಂಗವು ಲಿಂಗಮಯವಾಗುತ್ತದೆ. ಇದು ಭಕ್ತನಲ್ಲಿ ಮಂತ್ರ ಸಂಬಂಧವಾದ ಪರಿಣಾಮವು.

೨೩೮. **ಮಿಶ್ರ ಅಂಗಲಿಂಗ ಸಂಗ :** ಹಿಂದೆ ಸಂಖ್ಯೆ ೨೩೭ ರಲ್ಲಿ ನಿರ್ದೇಶಿಸಿದ ಪ್ರಕಾರ ಕರ್ಮೇಂದ್ರಿಯಗಳು, ಪಂಚವಿಷಯಗಳು, ಜ್ಞಾನೇಂದ್ರಿಯಗಳು, ವಾಯುಗಳು, ಕರಣೇಂದ್ರಿಯಗಳು ಇವುಗಳಿಗೆ ಸಾಮೂಹಿಕ ರೀತಿಯಿಂದ ಅನುಕ್ರಮವಾಗಿ ನ, ಮ, ಶಿ, ವಾ, ಯ ಈ ಪಂಚ ಪ್ರಣವಗಳು ಸಂಬಂಧಿಸುವವಷ್ಟೇ, ಹಾಗೆಯೇ ಅವು ಸಾಮೂಹಿಕ ರೀತಿಯಿಂದ ಅನುಕ್ರಮವಾಗಿ ಲಿಂಗಕ್ಕೆ ಸಂಬಂಧಿಸುತ್ತವೆ. ಆಗ ಆ ಲಿಂಗವು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗಗಳೆಂದು ಹೇಳಲ್ಪಡುತ್ತವೆ. ಹೀಗೆ ಅವು ಮಿಶ್ರಲಿಂಗಕ್ಕೆ ಸಂಬಂಧಿಸಿದಲ್ಲಿ ಮಿಶ್ರ



ಅಂಗಲಿಂಗಸಂಗವೆಂದು ಹೇಳಲ್ಪಡುತ್ತದೆ.

೨೩೯. **ಭಕ್ತನಲ್ಲಿ ಗುರುಲಿಂಗ ಜಂಗಮಗಳು :** ಭಕ್ತನ ತನುವೇ ಗುರು, ಅವನ ಮನವೇ ಲಿಂಗ, ಅವನ ಭಾವವೇ ಜಂಗಮವು. ಭಕ್ತನ ಕರವು ಇಷ್ಟಲಿಂಗವು, ಮನವು ಪ್ರಾಣಲಿಂಗವು, ಭಾವವು ಭಾವಲಿಂಗವು.

೨೪೦. **ಭಕ್ತನಿಗೆ ತತ್ವಮಸಿ ಪದದ ಸಂಬಂಧ :** ಭಕ್ತನ ಕಾಯವು ತತ್ ಪದವು, ಅವನ ಕರ ಪೀಠದ ಇಷ್ಟವು ತ್ವಂ ಪದವು, ಈ ಎರಡರ ಸಂಗವು ಅಸಿ ಪದವು.

ಭಕ್ತನ ಕ್ರಿಯೆಯು ತತ್ ಪದವು. ಅವನ ಅಂತರಂಗದ ಜ್ಞಾನವು ತ್ವಂ ಪದವು. ಈ ಎರಡರ ಸಂಗವು ಅಸಿ ಪದವು.

ಭಕ್ತನ ಲಿಂಗವು ತತ್ ಪದವು. ಅವನ ಪ್ರಾಣವು ತ್ವಂ ಪದವು. ಈ ಎರಡರ ಸಂಗವು ಅಸಿ ಪದವು.

ಭಕ್ತನ ಕುರುಹು ತತ್ ಪದವು. ಅವನ ಅರುಹು ತ್ವಂ ಪದವು, ಎರಡರ ಸಂಗವು ಅಸಿ ಪದವು.

೨೪೧. **ಶಬ್ದ ಚತುಷ್ಟಯ ಸಂಬಂಧ :** ಪರೆ, ಪಶ್ಯತಿ, ಮಧ್ಯಮೆ, ವೈಖರಿ ಇವು ಶಬ್ದ ಚತುಷ್ಟಯಗಳು. ಚಿತ್ತಕ್ಕೆ ನಿಲುಕಲು ಆದು ಪರೆ. ಆದು ನೆನಹಿಗೆ ಬರಲು ಪಶ್ಯತಿ, ಜಿಹ್ವೆಗೆ ಬರಲು ಅದು ಮಧ್ಯಮೆ, ವಚನಕ್ಕೆ ಬರಲು ಆದು ವೈಖರಿಯು. ನೆನಹಿಗೆ ಬರಲು ಅದು ಪರೆ, ಮನಸಿನ ನೆನಹಿಗೆ ಬರಲು ಆದು ಪಶ್ಯತಿ, ಕಣ್ಣಿನ ಕೊನೆಗೆ ಬರಲು ಆದು ಮಧ್ಯಮೆ, ತನುವಿಗೆ ಸೋಂಕಲು ಅದು ವೈಖರೀ.

ಲಿಂಗದ ನೆನೆಯಲು ಆದು ಪರೆ. ಲಿಂಗವನ್ನು ಕಣ್ಣಾರೆ ನೋಡಲು ಆದು ಪಶ್ಯತಿ. ಲಿಂಗವನ್ನು ನುತಿಸಲು ಅದು ಮಧ್ಯಮೆ. ಲಿಂಗವನ್ನು ಪೂಜಿಸಲು ಆದು ವೈಖರಿಯು.

೨೪೨. **ಲಿಂಗಾಂಗ ಕೂಟ :** ವಾಮ ಕರಪೀಠದಲ್ಲಿಯ ಲಿಂಗವು ಮತ್ತು ನೇತ್ರದ ನೋಟ ಇವೆರಡು ಕೂಡಿದಲ್ಲಿ ಆದು ಲಿಂಗಾಂಗ ಕೂಟ.

ಹೃದಯ ಪೀಠದ ಚಿಲ್ಲಿಂಗವು ಮತ್ತು ಮನಸ್ಸಿನ ನೆನಹು ಇವೆರಡು ಕೂಡಿದಲ್ಲಿ ಆದು ಲಿಂಗಾಂಗ ಕೂಟ.

ಈ ಅಕ್ಷರಗಳನ್ನು ಪಂಚಾಕ್ಷರೀ ಮಂತ್ರಕ್ಕೆ ಜೋಡಿಸಿ ಅನ್ನುವುದರಿಂದ ಪಂಚಾಕ್ಷರೀ ಮಂತ್ರದ ಬಲವು ಹೆಚ್ಚುತ್ತದೆಂದು ಭಾವಿಸಲ್ಪಡುತ್ತದೆ.

೨೪೫. **ಷಟ್ ಪ್ರಸಾದಮಂತ್ರ** : ಹ್ರಾಂ, ಹ್ರೀಂ, ಹ್ರೂಂ, ಹ್ರೈಂ ಹ್ರೌಂ, ಹ್ರಃ ಇದು ಷಟ್ ಪ್ರಸಾದ ಮಂತ್ರವು. ಇದಕ್ಕೆ ಓಂಕಾರವು ಕೂಡಿ ದಲ್ಲಿ ಶಿವಾಂಗ ಮಂತ್ರವಾಗುತ್ತದೆ. ಇದರ ಆರಕ್ಷರಗಳು ಷಟ್ ಸಾದಾಖ್ಯ, ಷಟ್‌ಕರಣ ಇವುಗಳನ್ನು ತೋರಿಸುತ್ತವೆ.

೨೪೬. **ಪಂಚ ಪ್ರಸಾದ ಮಂತ್ರ** : ಓಂ ಹಂ ಹ್ರಾಂ ಹಂ, ಹ್ರೌಂ ಹಂಸ ಇದು ಪಂಚ ಪ್ರಸಾದ ಮಂತ್ರವೆಂದು ಹೇಳಲ್ಪಡುತ್ತದೆ. ಹಂಸ ಈ ಶಬ್ದವು ಇದರಲ್ಲಿ ಮಹತ್ವವಾದದ್ದು.

೨೪೭. **ಪಂಚಾಕ್ಷರೀ ಮಂತ್ರದ ವಿಧಗಳು** : ಇವು ಸಂಖ್ಯೆ ೨೩೧ ರಲ್ಲಿ ಹೇಳಿದ ಮೇರೆಗೆ ಮೂಲ ಪಂಚಾಕ್ಷರ, ಸ್ಥೂಲ ಪಂಚಾಕ್ಷರ, ಸೂಕ್ಷ್ಮ ಪಂಚಾಕ್ಷರ, ಮಾಯಾಖ್ಯ ಪಂಚಾಕ್ಷರ, ಪ್ರಸಾದ ಪಂಚಾಕ್ಷರ ಎಂದು ಇರುತ್ತವೆ. ಇವುಗಳನ್ನು ಲಿಂಗ ಮಧ್ಯದಲ್ಲಿ ಅನುಸಂಧಾನಿಸಿ ಸ್ಮರಿಸುವುದೇ ಧ್ಯಾನವೆಂದು ಹೇಳಲ್ಪಡುತ್ತದೆ.

೨೪೮. **ಮೂಲ ಪಂಚಾಕ್ಷರ** : ಓಂ ನಮಃ ಶಿವಾಯ ಇದು ಮೂಲ ಪಂಚಾಕ್ಷರವು. ಇದು ಅನೇಕ ವಿಧ ಪಂಚಾಕ್ಷರಗಳಲ್ಲಿ ಮುಖ್ಯ ವಾದುದು.

ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವನಿಯಂತೃತ್ವ, ಸರ್ವಾಂತರ್ಯಾಮಿತ್ವ, ಸರ್ವಾತ್ಮಕತ್ವ, ಸರ್ವಶಕ್ತಿತ್ವ ಈ ಗುಣಗಳು ಪರಮಾತ್ಮನಲ್ಲಿರುವದನ್ನು ಈ ಮಂತ್ರವು ಸೂಚಿಸುತ್ತದೆ..

೨೪೯. **ಸ್ಥೂಲ ಪಂಚಾಕ್ಷರ** : ಓಂ, ಹ್ರಾಂ, ಹ್ರೀಂ, ಹ್ರೂಂ, ನಮಃ ಶಿವಾಯ ಇದು ಸ್ಥೂಲ ಪಂಚಾಕ್ಷರವು. ಒಂಬತ್ತು ಅಕ್ಷರಗಳುಳ್ಳದ್ದು. ಇದು ಉದಾರತ್ವ, ಅನುಪ್ರವೇಶತ್ವ, ನೇಮಕತ್ವ, ರುದ್ರತ್ವ, ಶ್ರುತ್ಯಾಚಾರತ್ವ ಈ ಗುಣಗಳು ಪರಮಾತ್ಮನಲ್ಲಿರುವುದನ್ನು ಈ ಮಂತ್ರವು ಸೂಚಿಸುತ್ತದೆಂದು ತಿಳಿಯಲ್ಪಟ್ಟಿದೆ.

೨೫೦. **ಸೂಕ್ಷ್ಮ ಪಂಚಾಕ್ಷರ** : ಓಂ, ಹ್ರೀಂ, ಶಿವಾಯ ಇದು

ಸೂಕ್ಷ್ಮ ಪಂಚಾಕ್ಷರ ಮಂತ್ರವು ಇದು ವಟಬೀಜದಂತೆ ಬಹು ಸೂಕ್ಷ್ಮವಾದದ್ದು.

೨೫೧. ಮಾಯಾಖ್ಯ ಪಂಚಾಕ್ಷರ : ಓಂ, ಹ್ರೀಂ, ಹ್ರೂಂ ನಮಃ ಶಿವಾಯ, ಇದು ಮಾಯಾಖ್ಯ ಪಂಚಾಕ್ಷರವು. ಇದರಲ್ಲಿ ೮ ಅಕ್ಷರಗಳಿವೆ.

೨೫೨. ಪ್ರಸಾದ ಪಂಚಾಕ್ಷರ : ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ನಮಃ ಶಿವಾಯ ಇದು ಪ್ರಸಾದ ಪಂಚಾಕ್ಷರಿಯು. ಈ ಮಂತ್ರವು ಬ್ರಹ್ಮಸ್ಥಾನದ ಮಧ್ಯವಳಯದ ಸಹಸ್ರದಳ ಕಮಲ ಕರ್ಣಿಕೆಯಲ್ಲಿರುವ ಪಂಚಪತ್ರದಲ್ಲಿ ವಾಸಿಸುತ್ತದೆಂದು ತಿಳಿಯಲ್ಪಟ್ಟಿರುತ್ತದೆ. ಇದರಲ್ಲಿ ೧೦ ಅಕ್ಷರಗಳಿವೆ.

೨೫೩. ಷಟ್‌ತ್ರಿಂಶನ್ಮಂತ್ರಗಳು : ಇವು ಬೀಜಾಕ್ಷರ ಮಂತ್ರ, ಕೀಲಕ ಮಂತ್ರ, ನ್ಯಾಸಾಕ್ಷರಮಂತ್ರ, ವದನಾಕ್ಷರ ಮಂತ್ರ, ಶಕ್ತಿಷಡಂಗ ಮಂತ್ರ, ಲಿಂಗ ಷಡಕ್ಷರಮಂತ್ರ ಎಂದು ಆರು ವಿಧಗಳಾಗಿವೆ. ಇವೆಲ್ಲವೂ ಕೂಡಿ ೩೬ ಮಂತ್ರಗಳಾಗುತ್ತವೆ. ಇವುಗಳನ್ನು ವೀರಶೈವರು ತಮ್ಮಲ್ಲಿ ತೆಗೆದುಕೊಂಡಿರುತ್ತಾರೆ. ಪಂಚ ಪಂಚಾಕ್ಷರ ಮಂತ್ರಗಳು ಪರಮಾತ್ಮನ ಧ್ಯಾನದಲ್ಲಿ ಉಪಯುಕ್ತವಾದವುಗಳು. ಆದರೆ ಈ ಷಟ್ ತ್ರಿಂಶನ್ಮಂತ್ರಗಳು ಅವರ ಆಚರಣೆಯಲ್ಲಿ ಬೇಕಾದವುಗಳಿರುತ್ತವೆ. ಅವುಗಳ ಉಪಯೋಗವು ಅವರ ಅನೇಕ ಕ್ರಿಯೆಗಳಲ್ಲಿರುತ್ತದೆ.

೨೫೪. ಬೀಜಾಕ್ಷರ ಮಂತ್ರ : ಬ ಸ ವ ಅ ಉ ಮ ಇವುಗಳು ಬೀಜಾಕ್ಷರಗಳು. ಇವು ಹಿಂದೆ ವಿಸ್ತಾರವಾಗಿ ಹೇಳಲ್ಪಟ್ಟಿವೆ. ಅವು ಮೂಲ ಶಕ್ತಿಗಳು. ಇವು ಆರು ಅಕ್ಷರಗಳಿವೆ.

೨೫೫. ಕೀಲಕಮಂತ್ರ : ಹ್ರಾಂ, ಹ್ರೀಂ, ಹ್ರೂಂ, ಹ್ರೈಂ, ಹ್ರೌಂ, ಹ್ರಃ ಇವು ಆರು ಅಕ್ಷರಗಳು. ಕೀಲಕ ಮಂತ್ರ ಇದಕ್ಕೆ ಷಟ್‌ಪ್ರಸಾದ ಮಂತ್ರವೆಂತಲೂ ಇನ್ನೊಂದು ಹೆಸರಿದೆ (ಹಿಂದೆ ಸಂಖ್ಯೆ ೨೪೫ ನೋಡಿರಿ.) ಕೀಲಕ ಮಂತ್ರ ಈ ಶಬ್ದದಲ್ಲಿ 'ದೃಢ ಪಡಿಸುವದು,' ಎಂಬರ್ಥವಿದೆ. ಆದ್ದರಿಂದ ಈ ಅಕ್ಷರಗಳ ಕಾರ್ಯವು ಆಯಾ ಮಂತ್ರಗಳನ್ನು ತನ್ನಲ್ಲಿ ದೃಢಪಡಿಸುವುದಿರುತ್ತದೆಂದು ತಿಳಿದುಬರುತ್ತದೆ.



೨೫೬. ನ್ಯಾಸಾಕ್ಷರ ಮಂತ್ರ : ಇದರಲ್ಲಿ ಆರು ಮಂತ್ರಗಳಿರುತ್ತವೆ. ಇದಕ್ಕೆ ಷಡಂಗ ಮಂತ್ರವೆಂದು ಬೇರೊಂದು ಹೆಸರಿದೆ. ಶರೀರದ ಭಾಗಗಳಲ್ಲಿ ಮಂತ್ರ ನ್ಯಾಸ ಮಾಡುವುದೇ ಈ ಮಂತ್ರದ ಕಾರ್ಯವಾಗಿರುತ್ತದೆ.

ಓಂ ಹ್ರಾಂ ಹೃದಯಾಯ ನಮಃ ಇದು ಹೃದಯಮಂತ್ರವೆಂದು ಹೇಳಲ್ಪಡುತ್ತದೆ.

ಓಂ ಹ್ರೀಂ ಶಿರಸೆ ಸ್ವಾಹಾ ಇದು ಶಿರೋಮಂತ್ರವೆಂದು ಹೇಳಲ್ಪಡುತ್ತದೆ.

ಓಂ ಹ್ರೂಂ ಶಿಖಾಯೈ ವೌಷಟ್ ಇದು ಶಿಖಾಮಂತ್ರವೆಂದು ಹೇಳಲ್ಪಡುತ್ತದೆ.

ಓಂ ಹ್ರೈಂ ಕವಚಾಯ ಭಂ ಇದು ಕವಚಮಂತ್ರವೆಂದು ಹೇಳಲ್ಪಡುತ್ತದೆ.

ಓಂ ಹ್ರೌಂ ನೇತ್ರತ್ರಯಾಯ ವೌಷಟ್ ಇದು ನೇತ್ರಮಂತ್ರವೆಂದು ಹೇಳಲ್ಪಡುತ್ತದೆ.

ಓಂ ಹ್ರಃ ಅಸ್ತ್ರಾಯ ಫಟ್ ಇದು ಅಸ್ತ್ರಮಂತ್ರವೆಂದು ಹೇಳಲ್ಪಡುತ್ತದೆ.

೨೫೭. ವದನಾಕ್ಷರ ಮಂತ್ರ : ಇದಕ್ಕೆ ಪಂಚಬ್ರಹ್ಮಮಂತ್ರವೆಂಬ ಬೇರೊಂದು ಹೆಸರು ಇದೆ. ಇದರಲ್ಲಿ ಆರು ಮಂತ್ರಗಳು ಸೇರ್ಪಡೆಯಾಗುತ್ತವೆ. ಪರಶಿವನಿಗೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಎಂದು ಪಂಚಮುಖಗಳಿವೆಯಷ್ಟೇ. ಈ ಮಂತ್ರಗಳು ಈ ಪಂಚ ಮುಖಗಳಿಗೆ ಸಂಬಂಧಿಸುತ್ತವೆ. ಪಂಚಮುಖಗಳು ವಚನಶಾಸ್ತ್ರದಲ್ಲಿ ಅಂಗೀಕರಿಸಲ್ಪಟ್ಟಿವೆ. ಜಗತ್ತಿನ ಉತ್ಪತ್ತಿಯ ಕಾಲದಲ್ಲಿ ಆಗುವ ಆರು ವಿಧಗಳು ಅಥವಾ ಸಾದಾಖ್ಯಗಳು ಈ ಮುಖಗಳಲ್ಲಿಯೇ ಉಂಟಾಗುವವೆಂದು ಹೇಳಲ್ಪಡುವುದುಂಟು. ಸ್ಥಾನಶುದ್ಧಿ, ಸಂಪ್ರೋಕ್ಷಣ, ಭಸ್ಮೋದ್ಧೂಳನ, ತ್ರಿಪುಂಡ್ರಧಾರಣ ಈ ಕಾರ್ಯಗಳಲ್ಲಿ ಈ ಮಂತ್ರಗಳ ಉಪಯೋಗವಿರುತ್ತದೆ. ದೀಕ್ಷಾ ಕಾಲದಲ್ಲಿ ಇವುಗಳು ಬಹಳ ಕಡೆ ಉಪಯೋಗಿಸಲ್ಪಡುತ್ತವೆ. ಮಂತ್ರ ನ್ಯಾಸದಲ್ಲಿಯೂ ಇವುಗಳ ಉಪಯೋಗವಿರುತ್ತದೆ. ಇದನ್ನು ಒಮ್ಮೊಮ್ಮೆ ಷಡಂಗಮಂತ್ರವೆಂತಲೂ ಸಹ ಕರೆಯುವುದುಂಟು. ಇವು ಯಾವುವೆಂದರೆ–

ಓಂ ಹ್ರಾಂ ನಾಂ ಸದ್ಯೋಜಾತಾಯ ನಮಃ ಇದು ಪಾದಕ್ಕೆ ಸಂಬಂಧವಾಗುತ್ತದೆ.

ಓಂ ಹ್ರೀಂ ಮಾಂ ವಾಮದೇವಾಯ ನಮಃ—ಇದು ಗುಹ್ಯಕ್ಕೆ ಸಂಬಂಧವಾಗುತ್ತದೆ.

ಓಂ ಹ್ರೂಂ ಶೀಂ ಅಘೋರಾಯ ನಮಃ ಇದು ಹೃದಯಕ್ಕೆ ಸಂಬಂಧಿಸುತ್ತದೆ.

ಓಂ ಹ್ರೈಂ ವಾಂ ತತ್ಪುರುಷಾಯ ನಮಃ ಇದು ಮುಖಕ್ಕೆ ಸಂಬಂಧವಾಗುತ್ತದೆ.

ಓಂ, ಹ್ರೌಂ ಯಾಂ ಈಶಾನಾಯ ನಮಃ ಇದು ಶಿರಸ್ಸಿಗೆ ಸಂಬಂಧವಾಗುತ್ತದೆ.

ಓಂ ಹ್ರಃ ಓಂ ಹೃದಯಾಯ ನಮಃ ಇದು ಸರ್ವಾಂಗದಲ್ಲಿ ಸಂಬಂಧವಾಗುತ್ತದೆ.

ಈ ಮಂತ್ರಗಳಿಗೆ ಅನುಕ್ರಮವಾಗಿ ಸದ್ಯೋಜಾತಮಂತ್ರ, ವಾಮದೇವಮಂತ್ರ, ಅಘೋರಮಂತ್ರ, ತತ್ಪುರುಷಮಂತ್ರ, ಈಶಾನಮಂತ್ರ, ಹೃದಯಮಂತ್ರ ಎಂದು ಹೆಸರುಗಳಿರುತ್ತವೆ. ಭಸ್ಮೋದ್ಧೂಳನ ಕಾಲದಲ್ಲಿ ಈ ಮಂತ್ರಗಳನ್ನು ನಿಶ್ಚಿತ ಸಂಖ್ಯೆಯಿಂದ ಉಚ್ಚರಿಸುತ್ತ ಆಯಾ ಸ್ಥಾನಗಳಲ್ಲಿ ಭಸಿತವನ್ನು ಸಂಬಂಧಿಸಿಕೊಳ್ಳತಕ್ಕದ್ದು. ಅಂಗನ್ಯಾಸವು ಮಾತ್ರ ಮೇಲೆ ಉದಹರಿಸಿದ ಮಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ.

೨೫೮. **ಶಕ್ತಿಷಡಂಗಮಂತ್ರ** : ಇದರಲ್ಲಿಯೂ ಆರು ಮಂತ್ರಗಳು ಸೇರ್ಪಡೆಯಾಗುತ್ತವೆ. ಮನುಷ್ಯನು ಷಟ್‌ಸ್ಥಲಕ್ಕನುಗುಣವಾಗಿ ಆಚರಿಸಿದಲ್ಲಿ ಅವನಲ್ಲಿ ಶಕ್ತಿಗಳು ಉಂಟಾಗಿ ಕೆಲವು ಪರಿಣಾಮಗಳು ಸಂಭವಿಸುತ್ತವೆ. ಆಗ ಈ ಶಕ್ತಿಷಡಂಗಮಂತ್ರವು ಉಪಯೋಗಿಸಲ್ಪಡುತ್ತದೆ. ಈ ಮಂತ್ರದ ಮೂಲಕ ಅವನಲ್ಲಿಯ ಆಯಾ ಶಕ್ತಿಗಳು ಸರಿಯಾದ ಮಾರ್ಗದಿಂದ ಚಲಿಸುತ್ತವೆ. ಈ ಮಂತ್ರಗಳು ಯಾವವೆಂದರೆ—

ಓಂ ಹ್ರಾಂ ನಾಂ ಸರ್ವಜ್ಞ ಸರ್ವಶಕ್ತಿ ಧಾಮ್ನೇ ನಮಃ
ಓಂ ಹ್ರೀಂ ಮಾಂ ತೃಪ್ತಿಶಕ್ತಿ ಧಾಮ್ನೇ ನಮಃ



ಓಂ ಹ್ರೂಂ ಶೀಂ ಅನಾದಿಶಕ್ತಿ ಧಾಮ್ನೇ ನಮಃ
ಓಂ ಹ್ರೈಂ ವಾಂ ಸ್ವತಂತ್ರ ಶಕ್ತಿ ಧಾಮ್ನೇ ನಮಃ
ಓಂ ಹ್ರೌಂ ಯಾಂ ನಿತ್ಯ ಶಕ್ತಿ ಧಾಮ್ನೇ ನಮಃ
ಓಂ ಹ್ರಃ ಓಂ ಅಲುಪ್ತಾ ಶಕ್ತಿ ಧಾಮ್ನೆ ನಮಃ
ಈ ಪ್ರಕಾರ ಇದರಲ್ಲಿ ಆರು ಮಂತ್ರಗಳಿವೆ.

೨೫೯. **ಲಿಂಗ ಷಡಕ್ಷರ ಮಂತ್ರ** : ಇವಾದರೂ ಆರು ಇರುತ್ತವೆ. ಇವು ಕೇವಲ ವೀರಶೈವ ಮಂತ್ರಗಳು. ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ ಇವುಗಳಿಗೆ ಇವು ಸಂಬಂಧಿಸುತ್ತವೆ. ಇವು ಯಾವುವೆಂದರೆ—

ಓಂ ಹ್ರಾಂ ನಾಂ ಆಚಾರಲಿಂಗಾಯ ನಮಃ
ಓಂ ಹ್ರೀಂ ಮಾಂ ಗುರುಲಿಂಗಾಯ ನಮಃ
ಓಂ ಹ್ರೂಂ ಶೀಂ ಶಿವಲಿಂಗಾಯ ನಮಃ
ಓಂ ಹ್ರೈಂ ವಾಂ ಜಂಗಮಲಿಂಗಾಯ ನಮಃ
ಓಂ ಹ್ರೌ ಯಾಂ ಪ್ರಸಾದಲಿಂಗಾಯ ನಮಃ
ಓಂ ಹ್ರಃ ಓಂ ಮಹಾಲಿಂಗಾಯ ನಮಃ
ಲಿಂಗ ಜಪದಲ್ಲಿ ಇವುಗಳು ಯಾವಾಗಲೂ ಉಪಯೋಗಿಸಲ್ಪಡುತ್ತವೆ.

೨೬೦. **ಉದಾಧಿಭಕ್ತ, ನಿರುಪಾಧಿಭಕ್ತ, ಸಹಜಭಕ್ತ** : ಉಪಾಧಿಭಕ್ತನು ಕ್ರಿಯಾದೀಕ್ಷೆಯುಕ್ತನಾಗಿರುತ್ತಾನೆ. ಈತನಿಗೆ ಗುರುಮಂತ್ರವು ಸಲ್ಲುತ್ತದೆ. ನಿರುಪಾಧಿಭಕ್ತನು ಕ್ರಿಯಾದೀಕ್ಷೆಯನ್ನು ಹೊಂದುವುದಲ್ಲದೆ ಗುರುಲಿಂಗಜಂಗಮದಲ್ಲಿ ತನ್ನದೆಲ್ಲವನ್ನು ನಿರ್ವಂಚಕತ್ವದಿಂದ ಸಮರ್ಪಿಸಿ ನಡೆನುಡಿ ಸಂಪನ್ನನಾಗಿರುತ್ತಾನೆ. ಈತನಿಗೆ ಲಿಂಗಮಂತ್ರವನ್ನು ಹೇಳುವುದು. ಹೀಗೆ ಈ ಉಭಯತರ ಆಚರಣೆಯನ್ನು ಹೊಂದಿದ್ದಲ್ಲದೆ ಸಮಸ್ತ ಭೋಗಾದಿಗಳನ್ನು ನೀಗಿದವನು ಸಹಜಭಕ್ತನು. ಈತನಿಗೆ ಜಂಗಮ ಮಂತ್ರವು ಸಲ್ಲುತ್ತದೆ. ( ಹಿಂದೆ ಸಂಖ್ಯೆ ೧೭೦ ಮತ್ತು ಸಂಖ್ಯೆ ೧೭೦ ಸಹ ನೋಡಿರಿ. )

೨೬೧. **ಗುರುಮಂತ್ರ, ಲಿಂಗಮಂತ್ರ, ಜಂಗಮಮಂತ್ರ** : ಶಕ್ತಿ ಪ್ರಣಮಮಂತ್ರಗಳು, ಶಿವಪ್ರಣಮಮಂತ್ರಗಳು, ಶಿವಶಕ್ತಿರಹಿತ ಪ್ರಣಮ

ಮಂತ್ರಗಳು ಎಂದು ಮೂರುವಿಧ ಮಂತ್ರಗಳು ಇವೆ. ಈ ಪ್ರತಿಯೊಂದರಲ್ಲಿ ೧೨, ೧೨ ಪ್ರಣವಗಳು ಇರುತ್ತವೆ. ಶಕ್ತಿಪ್ರಣವು ಮಂತ್ರಗಳು ಗುರುವಿಗೆ, ಶಿವಪ್ರಣವುಮಂತ್ರಗಳು ಲಿಂಗಕ್ಕೆ, ಶಿವಶಕ್ತಿರಹಿತ ಪ್ರಣವು ಮಂತ್ರಗಳು ಜಂಗಮಕ್ಕೆ, ಸಂಬಂಧಪಡುತ್ತವೆ. ಈ ಪ್ರಣವುಗಳು ಭಕ್ತ, ಗುರು, ಜಂಗಮ ಹೀಗೆ ಬೇರೆ ಬೇರೆ ವರ್ಗದವರಿಗೆ ಬೇರೆ ಬೇರೆಯಾಗಿ ಸಂಬಂಧಪಡುತ್ತವೆಂದು ಭಾವಿಸಕೂಡದು. ಯಾಕಂದರೆ ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಪ್ರತಿಯೊಬ್ಬನಲ್ಲಿ ಗುರು, ಲಿಂಗ, ಜಂಗಮುಗಳು ಇವೆ. ಈ ತ್ರಿವಿಧಗಳು ಅವನಲ್ಲಿ ಪ್ರಕಟವಾದಂತೆ ಅವನು ಉಪಾಧಿಭಕ್ತ, ನಿರುಪಾಧಿಭಕ್ತ, ಸಹಜಭಕ್ತ ಎಂದು ಕರೆಯಲ್ಪಡುತ್ತಾನೆ.

೨೬೨. ನಿರಾಭಾರಿ ಜಂಗಮ ಶರಣಗಣಂಗಳು: ಶುದ್ಧಪ್ರಸಾದ ಪ್ರಣವ ೧೨, ಸಿದ್ಧಪ್ರಸಾದ ಪ್ರಣವ ೧೨, ಪ್ರಸಿದ್ಧ ಪ್ರಸಾದ ಪ್ರಣವ ೧೨ ಹೀಗೆ ಒಟ್ಟು ೩೬ ಪ್ರಣವಗಳಿದ್ದು ಅವುಗಳನ್ನೊಡಗೂಡಿರುವವರೇ ನಿರಾಭಾರಿ ಜಂಗಮ ಶರಣ ಗಣಗಳು. ಶುದ್ಧಪ್ರಸಾದ ಪ್ರಣವುಗಳು ಆಚಾರಲಿಂಗ ಗುರುಲಿಂಗಗಳಿಗೆ ಸಂಬಂಧಿಸುತ್ತವೆ. ಇವುಗಳನ್ನು ಇಷ್ಟಲಿಂಗಕ್ಕೆ ಮಾಡುವುದು. ಸಿದ್ಧಪ್ರಸಾದ ಪ್ರಣವುಗಳು ಶಿವಲಿಂಗ ಜಂಗಮಲಿಂಗಕ್ಕೆ ಸಂಬಂಧಿಸುತ್ತವೆ. ಇವನ್ನು ಪ್ರಾಣಲಿಂಗಕ್ಕೆ ಮಾಡುವುದು. ಪ್ರಸಿದ್ಧ ಪ್ರಸಾದ ಪ್ರಣವುಗಳು ಪ್ರಸಾದಲಿಂಗ ಮಹಾಲಿಂಗಕ್ಕೆ ಸಂಬಂಧಿಸುತ್ತವೆ. ಇವನ್ನು ಭಾವಲಿಂಗಕ್ಕೆ ಮಾಡುವುದು.

**ಟೀಪು:** ಅ, ಉ, ಮ; ಬ, ಸ, ವ; ಓಂ ನ ಮಃ ಶಿ ವಾ ಯ ಇವು ಪ್ರಣವುಗಳು. ಇವುಗಳ ಸ್ಥಾನಭೇದದಿಂದ ಶುದ್ಧಪ್ರಸಾದ ಪ್ರಣವುಗಳು, ಸಿದ್ಧಪ್ರಸಾದ ಪ್ರಣವುಗಳು, ಪ್ರಸಿದ್ಧಪ್ರಸಾದ ಪ್ರಣವುಗಳು ಉಂಟಾಗುತ್ತವೆಂದು ತಿಳಿಯುವುದು. ಅದೇ ಪ್ರಕಾರ ಶಕ್ತಿಪ್ರಣವು ಮಂತ್ರಗಳು, ಶಿವಪ್ರಣವುಮಂತ್ರಗಳು, ಶಿವಶಕ್ತಿರಹಿತಪ್ರಣವುಮಂತ್ರಗಳು ಉಂಟಾಗುತ್ತವೆ. ಇವುಗಳ ವಿವರಗಳು ಮುಂದೆ ಹೇಳಲ್ಪಡುವವು.

೨೬೩. **ಪಂಚಾಸ್ತ್ರ ಮಹಾಮಂತ್ರಗಳು**: ಇವು ಶಿವಾಸ್ತ್ರ ಮಂತ್ರ, ಕ್ಷುರಿಕಾಸ್ತ್ರಮಂತ್ರ, ಪಾಶುಪತಾಸ್ತ್ರಮಂತ್ರ, ವ್ಯೋಮಾಸ್ತ್ರಮಂತ್ರ, ಅಘೋರಾಸ್ತ್ರಮಂತ್ರ ಎಂದಿರುತ್ತವೆ. ಅವುಗಳ ವಿವರ:



(೧) **ಶಿವಾಸ್ತ್ರಮಂತ್ರ**: ಇದು ಓಂ, ಹಃ. ಅನಂತಶಕ್ತಿ ಧಾಮ್ನೆ ಜ್ಯೋತಿರೂಪಾಯ ಎಂದಿರುತ್ತದೆ.

(೨) **ಕ್ಷುರಿಕಾಸ್ತ್ರಮಂತ್ರ**; ಇದು ಓಂ ತಿಕ್ಷಕ್ಷಿಭಿ ಚಿಚ್ಛಿದ ಕ್ಷುಂ ಕೃತ ಕ್ಷುರಿಕಾಸ್ತ್ರಾಯ ಫಟ್ ಎಂದಿರುತ್ತದೆ.

(೩) **ಪಾಶುಪತಾಸ್ತ್ರಮಂತ್ರ**: ಇದು ಓಂ, ಶ್ರೀಂ, ಪಶು, ಹುಂ ಫಟ್ ಎಂದಿರುತ್ತದೆ.

(೪) **ವ್ಯೋಮಾಸ್ತ್ರಮಂತ್ರ**: ಇದು ಓಂ, ಆಂ, ಈಂ, ಊಂ, ವ್ಯೋಮವ್ಯಾಪಿನೇ ವ್ಯೋಮಾಸ್ತ್ರಾಯ ಫಟ್ ಎಂದಿರುತ್ತದೆ.

(೫) **ಅಘೋರಾಸ್ತ್ರಮಂತ್ರ**: ಓಂ ಸ್ಫುರ ಸ್ಫುರಘೋರಘೋರತಮ ತನುರೂಪ ಚಟಚಟ ಪ್ರಚಟ ಪ್ರಚಟ ಕಹ ಕಹ ವಮ ವಮ ಬಂಧ ಬಂಧ ಘಾತಾಯ ಘಾತಾಯ ಹುಂ ಫಟ್ ಎಂದಿದೆ.

ಈ ಮಂತ್ರಗಳು ವೀರಶೈವಪರವಾದುವಲ್ಲ. ಆದರೂ ಇವು ರೂಢಿಯಿಂದ ಅವುಗಳಲ್ಲಿ ಮುಖ್ಯವಾಗಿ ಶಿವಾಸ್ತ್ರಮಂತ್ರವು ವೀರಶೈವರ ಕೆಲವು ವಿಧಿವಿಧಾನಗಳಲ್ಲಿ ಉಪಯೋಗಿಸಲ್ಪಡುವುದುಂಟು.

೨೬೪. **ಸಿದ್ಧಿ ಮಂತ್ರಗಳು**: ಕೆಲವು ಮಂತ್ರಗಳನ್ನು ಸಾಧಕರು ಉಪಯೋಗಿಸುವುದುಂಟು. ಆದರೆ ಅವು ವೀರಶೈವ ಪರವಾದುವಲ್ಲ. ಸಿದ್ಧಿಗಳನ್ನು ವೀರಶೈವರು ಮಾಡತಕ್ಕದ್ದಲ್ಲ. ಆಯಾ ಮಂತ್ರಗಳ ಕೆಳಗೆ ಕಾಣಿಸಿದ ಹೆಸರುಗಳೇ ಅವುಗಳಿಂದ ಆಗುವ ಸಿದ್ಧಿಗಳನ್ನು ಸೂಚಿಸುತ್ತವೆ.

(ಅ) **ಪಂಚೋಪಾಸ್ತ್ರ ಮಂತ್ರಗಳು**: ಅವು ಐದು ಇರುತ್ತವೆ. ಯಾವುವೆಂದರೆ— ಬ್ರಹ್ಮಾಸ್ತ್ರ ಮಂತ್ರ, ನಾಗಾಸ್ತ್ರ ಮಂತ್ರ, ಗರುಡಾಸ್ತ್ರ ಮಂತ್ರ, ಅನಲಾಸ್ತ್ರ ಮಂತ್ರ, ಅರುಣಾಸ್ತ್ರಮಂತ್ರ, ಅಘೋರಾಸ್ತ್ರಮಂತ್ರ ಎಂದಿವೆ. ಈ ಮಂತ್ರಗಳಿಂದ ಕೆಲವೊಂದು ಶಕ್ತಿಯನ್ನು ಉಂಟುಮಾಡಿಕೊಳ್ಳಬಹುದು.

(ಬ) **ಸಂಜೀವನತ್ರಯ ಮಂತ್ರ**: ಇವು ಮೂರು ಇವೆ. ಯಾವವೆಂದರೆ— ವಿದ್ಯಾಸಂಜೀವನಮಂತ್ರ, ಆತ್ಮಸಂಜೀವನಮಂತ್ರ, ಮೃತ ಸಂಜೀವನಮಂತ್ರ ಎಂದಿವೆ.

(ಕ) **ಪಂಚಶಕ್ತಿಮಂತ್ರಗಳು :** ಅವು ಜೃಂಭಕ, ಪ್ರಸ್ವಾಪನ, ಅಪ್ರತಿಹತ, ನಿಶ್ಚೇಷ್ಟೀಕರಣ, ಜೀವಗ್ರಾಹ ಎಂದಿವೆ.

(ಡ) **ಪಂಚಮಾಯಾಮಂತ್ರಗಳು :** ಇವು ಕಾಮರೂಪ ಘೋರ ದರ್ಶನ, ಸಮ್ಮೋಹನ, ವಿಶ್ವರೂಪ, ಗುಲ್ಮಸೃಷ್ಟಿ. ಎಂದಿವೆ.

(ಇ) **ಏಕಾದಶ ರೌದ್ರಾಸ್ತ್ರಮಂತ್ರಗಳು :** ಅವು ರುದ್ರಶೂಲ, ರುದ್ರಶಕ್ತಿ, ರುದ್ರಚಕ್ರ, ರುದ್ರವಜ್ರ, ರುದ್ರಪಾಶ, ರುದ್ರದಂಡ, ರುದ್ರ ಪಿನಾಕ, ರುದ್ರನಾರಾಯಣ, ರುದ್ರಬಾಣ, ರುದ್ರಗದಾ, ರುದ್ರಖಡ್ಗ, ಎಂದಿವೆ.

ಇವಲ್ಲದೆ ಧನಮಂತ್ರಗಳು, ಉಪಶಕ್ತಿಮಂತ್ರಗಳು, ತಾಂತ್ರಿಕ ಸಿದ್ಧಿ ಮಂತ್ರಗಳು ಎಂದು ಬೇರೆ ಅನೇಕ ಮಂತ್ರಗಳಿವೆ ಆದರೆ ಇವೆಲ್ಲವೂ ವೀರ ಶೈವರಿಗೆ ವರ್ಜ್ಯವಾದವುಗಳು. ಅವುಗಳ ನಾಮನಿರ್ದೇಶವನ್ನು ಮಾತ್ರ ಇಲ್ಲಿ ಮಾಡಿದ್ದೇವೆ.

೨೬೫. **ಅಜಪೆಗಾಯತ್ರೀಮಂತ್ರ :** ಪ್ರಾಣಾಯಾಮಪೂರ್ವಕ ವಾಗಿ ಇದನ್ನು ಎಲ್ಲ ವೈದಿಕರು ಜಪಿಸುವುದುಂಟು. ಈ ಮಂತ್ರವೂ ಕೂಡ ವೀರಶೈವರಿಗೆ ಸಂಬಂಧಿಸಿದುದಲ್ಲ ಇದು ಮೂಲದಲ್ಲಿ ಸೂರ್ಯನಿಗೆ ಸಂಬಂಧಿ ಸಿದ್ದಿದೆ. ವೈದಿಕಧರ್ಮಗಳಲ್ಲಿ ಇದರ ಮಹತ್ವವು ಬಹಳ ಇದ್ದದರಿಂದ, ಇದನ್ನು ಲಿಂಗರೂಪವಾಗಿ ಅರ್ಥಮಾಡಲು ಕೆಲವು ವೀರಶೈವ ಗ್ರಂಥಗಳಲ್ಲಿ ಪ್ರಯತ್ನಗಳು ಮಾಡಲ್ಪಟ್ಟದ್ದು ತೋರಿಬರುತ್ತವೆ. ಆದರೆ ಶಿವಶರಣರು ಈ ಮಂತ್ರವನ್ನು ಉಪಯೋಗಿಸುವುದಿಲ್ಲ. ಅವರು ಯಾವಾಗಲೂ ಷಟ್‌ಸ್ಥಲಕ್ಕೆ, ಆಯಾ ಲಿಂಗಗಳಿಗೆ, ಪಂಚಾಕ್ಷರಗಳಿಗೆ ಸಂಬಂಧಪಟ್ಟ ಮಂತ್ರಗ ಳನ್ನೇ ಉಪಯೋಗಿಸುತ್ತಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಅಪವಾದಾತ್ಮಕವಾಗಿ ತಮ್ಮ ಮಂತ್ರಗಳಿಗೆ ವಿರೋಧವಲ್ಲದ ಸಹಾಯಕಮಂ ತ್ರಗಳನ್ನು ಮಾತ್ರ ಉಪಯೋಗಿಸುವುದುಂಟು.

೨೬೬. **ಬೀಜಾಕ್ಷರಗಳ ಸಮೂಹಗಳು :** ಶಿವಾನುಭವ ಶಾಸ್ತ್ರ ದಲ್ಲಿ ಬೀಜಾಕ್ಷರಗಳನ್ನು ಎರಡು ಗುಂಪುಗಳನ್ನಾಗಿ ಮಾಡಿದ್ದು ಕಂಡುಬರು



ತ್ತದೆ. ಒಂದು ಗುಂಪಿನಲ್ಲಿ ೮ ಬೀಜಾಕ್ಷರಗಳು ಇವೆ. ಅವು ಬ, ಸ, ವ, ಅ, ಉ. ಮ, ಹಂ, ಕ್ಷಂ, ಎಂದಿವೆ. ಎರಡನೆಯದರಲ್ಲಿ ೫೨ ಬೀಜಾಕ್ಷರಗಳು ಇವೆ. (ಸಂಖ್ಯೆ ೨೦೫ ನೋಡಿರಿ.)

೨೬೭. **ಪ್ರಣವಗಳ ಸಮೂಹಗಳು :** ಮೇಲ್ಕಂಡ ಬೀಜಾಕ್ಷರ ಗಳ ಸಮೂಹಗಳಂತೆಯೇ ಪ್ರಣವಗಳ ಸಮೂಹಗಳೂ ಶಿವಾನುಭವ ಶಾಸ್ತ್ರದಲ್ಲಿ ಕೆಲವು ಹೇಳಲ್ಪಡುತ್ತವೆ. ಅವು ಅನೇಕ ವಿಧವಾಗಿವೆ. ಹೇಗೆಂ ದರೆ—

ತ್ರಿವಿಧಪ್ರಣವ, ಷಡ್ವಿಧಪ್ರಣವ, ನವವಿಧಪ್ರಣವ. ದ್ವಾದಶವಿಧ ಪ್ರಣವ, ಏಕವಿಂಶತಿಪ್ರಣವ, ೨೪ ಪ್ರಣವಗಳು. ೬೬ ಪ್ರಣವಗಳು, ೪೮ ಪ್ರಣವಗಳು, ದಶಪಂಚಪ್ರಣವಗಳು, ಏಕವಿಶಂತಿಪ್ರಣವಗಳು ಇತ್ಯಾದಿ ಶಿವಾನುಭವ ಶಾಸ್ತ್ರಕಾರರು ಈ ಪ್ರಕಾರ ಅನೇಕ ವಿಧವಾಗಿ ಮಂತ್ರ ವಿಷಯಗಳನ್ನು ಹೇಳಿರುತ್ತಾರೆ. ಪ್ರತಿಯೊಂದು ಪ್ರಣವವು ಕೆಲ ವೊಂದು ವಿಶಿಷ್ಟ ವಿಷಯ ಅಥವಾ ತತ್ವವನ್ನು ಸೂಚಿಸುತ್ತದೆ. ಆ ವಿಷ ಯವು ಅಥವಾ ತತ್ವವು ಷಟ್‌ಸ್ಥಲ ಶಾಸ್ತ್ರಕ್ಕೆ ಸಂಬಂಧಿಸಿದ್ದಿರುತ್ತದೆ. ಈ ಸಂಬಂಧವನ್ನು ತಿಳಿದಲ್ಲಿ, ಕೆಲವೊಂದು ಪ್ರಣವಗಳ ಗುಂಪು ಆವ ಆವ ವಿಷಯಗಳನ್ನು ನಿರೂಪಿಸುತ್ತದೆಂಬುದನ್ನು ಕಂಡುಹಿಡಿಯಬಹುದು. ವಾಚಕರು ಈ ವಿಷಯವನ್ನು ಸ್ವತಂತ್ರ ಗ್ರಂಥಗಳಲ್ಲಿಯೇ ಸಂದರ್ಭಾನು ಸಾರ ತಿಳಿದುಕೊಳ್ಳಬೇಕು. ಈಗಿನ ಸಂಕ್ಷಿಪ್ತ ಗ್ರಂಥದಲ್ಲಿ ಇವುಗಳನ್ನು ತಿಳಿಸುವುದು ಶಕ್ಯವಿಲ್ಲ. ಹೀಗೆ ಈ ಎಲ್ಲ ರೀತಿಗಳನ್ನು ತಿಳಿದುಕೊಂಡು ಮಂತ್ರಾರ್ಥವನ್ನು ಲಕ್ಷಿಸಿ ಆಚರಿಸತಕ್ಕದ್ದು. ಮಂತ್ರಜಪದಲ್ಲಿ ಆ ಮಂತ್ರಾ ರ್ಥವನ್ನು ಲಕ್ಷಿಸಿ ತಮ್ಮ ವಿಧಿಗಳನ್ನು ನೆರವೇರಿಸಿದಲ್ಲಿ ಅವು ಪರಿ ಣಾಮಕಾರಿಗಳಾಗುವವು. ಇವುಗಳಲ್ಲಿ ಮುಖ್ಯವಾದವುಗಳು ಕೆಳಗೆ ಹೇಳ ಲ್ಪಟ್ಟವೆ. ಪ್ರತಿಯೊಬ್ಬ ವೀರಶೈವನು ಅವುಗಳ ಜ್ಞಾನವನ್ನು ಮಾಡಿ ಕೊಂಡು ಉಪಯೋಗಿಸತಕ್ಕದ್ದು.

೨೬೮. **ಶತಮಂತ್ರಾಕ್ಷರಗಳು :** ಇವು ಪೂರ್ಣ ವೀರಶೈವಪರವಾದ ವುಗಳು.

| ಹೆಸರು | ಪ್ರಣವ ಸಂಖ್ಯೆ. | |
|---|---|---|
| (೧) ಮೂಲ ಪಂಚಾಕ್ಷರ | ೬ | (ಸಂಖ್ಯೆ ೨೪೮) |
| (೨) ಸ್ಥೂಲ ಪಂಚಾಕ್ಷರ | ೯ | (ಸಂಖ್ಯೆ ೨೪೯) |
| (೩) ಸೂಕ್ಷ್ಮ ಪಂಚಾಕ್ಷರ | ೫ | (ಸಂಖ್ಯೆ ೨೫೦) |
| (೪) ಮಾಯಾಖ್ಯ ಪಂಚಾಕ್ಷರ | ೮ | (ಸಂಖ್ಯೆ ೨೫೧) |
| (೫) ಪ್ರಸಾದ ಪಂಚಾಕ್ಷರ | ೧೦ | (ಸಂಖ್ಯೆ ೨೫೨) |
| (೬) ನಿರಂಜನ ಪ್ರಣವ, ಶೂನ್ಯ ಪ್ರಣವ, ನಿಷ್ಕಲ ಪ್ರಣವ, ಮತ್ತು ಮೂಲ ಪ್ರಣವಗಳು. | ೪ | |
| (೭) ಷಡಕ್ಷರ ಮಂತ್ರ | ೬ | (ಸಂಖ್ಯೆ ೨೦೭) |
| (೮) ಬೀಜಾಕ್ಷರಗಳು | ೫೨ | (ಸಂಖ್ಯೆ ೨೦೫) |
| ಒಟ್ಟು | ೧೦೦ | |

೨೦೯. **ನೂರೆಂಟು ಪ್ರಣವಗಳು :** ಇವು ಕೂಡ ಪೂರ್ಣ ವೀರಶೈವಪರವಾದವುಗಳು.

| | |
|---|---|
| (೧) ಬ, ಸ, ವ | ೩ |
| (೨) ಅ, ಉ, ಮ | ೩ |
| (೩) ಪಂಚಾಕ್ಷರ | ೬ |

೧೨

ವೀರಶೈವರಲ್ಲಿ ಯಾವ ಮಂತ್ರ ತೆಗೆದುಕೊಂಡರೂ ಅದರಲ್ಲಿ ಈ ೧೨ ಪ್ರಣವಗಳು ಮುಖ್ಯ ಸ್ಥಾನವನ್ನು ಹೊಂದಿರುತ್ತವೆ. ಈ ೧೨ ಪ್ರಣವಗಳನ್ನು ಒಂಭತ್ತು ವೇಳೆ ಪುನಶ್ಚರಣೆ ಮಾಡಲು ನೂರೆಂಟು ಪ್ರಣವಗಳಾಗುತ್ತವೆ. ಇವುಗಳಲ್ಲಿರುವ ಬ, ಸ, ವ ಅಕ್ಷರಗಳು ಆತ್ಮತ್ರಯವನ್ನು ಸೂಚಿಸುತ್ತವೆ. ಅವು ಗುರುಲಿಂಗಜಂಗಮ ಸ್ವರೂಪವು. ಅವು ಬಹು ಸೂಕ್ಷ್ಮವು. ಅ, ಉ, ಮ ಅಕ್ಷರಗಳು ತನುತ್ರಯಗಳು. ಅವು ಇಷ್ಟ,



ಪ್ರಾಣ, ಭಾವಲಿಂಗಗಳ ಸ್ವರೂಪಗಳು. ಹೆಚ್ಚಿಗೆ ಸ್ಥೂಲವು. ಷಡಕ್ಷರೀ ಮಂತ್ರದ ಆಯಾ ಪ್ರಣವಗಳು ಷಟ್‌ತತ್ವಗಳನ್ನು ತೋರಿಸುತ್ತವೆ. ಅವೆಲ್ಲವೂ ಷಡ್ವಿಧಲಿಂಗಸ್ವರೂಪವು. ಇವುಗಳು ಹಿಂದೆ ವಿವರಿಸಲ್ಪಟ್ಟಿವೆ. ಇವುಗಳ ಧ್ಯಾನದಿಂದ ಶಿವಯೋಗವು ಲಭಿಸುತ್ತದೆ.

೨೧೦. **೧೩೬ ವರ್ಣಗಳು :** ಮೇಲೆ ಸಂಖ್ಯೆ ೨೦೮ ರಲ್ಲಿಯ ಶತ ಮಂತ್ರಾಕ್ಷರಗಳು ಒಂದುನೂರು ಮತ್ತು ಸಂಖ್ಯೆ ೨೫೩ ರಲ್ಲಿಯ ಷಟ್‌ತ್ರಿಂಶನ್ಮಂತ್ರಗಳು ೩೬ ಈ ಉಭಯ ಕೂಡಿ ೧೩೬ ವರ್ಣಗಳಾಗುವವು. ಇವುಗಳ ಪೂರ್ಣ ಜ್ಞಾನವುಳ್ಳವನಾಗಿ ಆಚರಿಸುವವನೇ ಮಂತ್ರಶರೀರಿಯು, ಲಿಂಗಾಂಗಿಯು ಎಂದೆನಿಸಿಕೊಳ್ಳುತ್ತಾನೆ.

೨೧೧. **ಜಪದ ಉದ್ದೇಶವು :** ಕರಸ್ಥಲದಲ್ಲಿರುವ ಶಿವಲಿಂಗದ ಬಾಹ್ಯೋಪಚಾರಗಳಲ್ಲಿ ಲೋಲುಪ್ತನಾಗಿರಲು ಆ ಲಿಂಗವು ಅಂತರಂಗದಲ್ಲಿ ವೇಧಿಸಿ ಅಲ್ಲಿ ಬೇರೆ ಬೇರೆ ಲಿಂಗಗಳಾಗಿ ನೆಲೆಗೊಳ್ಳುವುದು. ಈ ಕಾರ್ಯದಲ್ಲಿ ಲಿಂಗ ಜಪವು ಲಿಂಗಧ್ಯಾನಿಗೆ ಸಹಾಯಕವಾಗುತ್ತದೆ. ಈ ರೀತಿಯನ್ನು ವೀರಶೈವನು ತಿಳಿದು ಆಚರಿಸುವುದೇ ಜಪದ ಉದ್ದೇಶವು.

೨೧೨. **ಲಿಂಗಜಪ :** ಚಕ್ರಗಳಲ್ಲಿ ಬೇರೆ ಬೇರೆ ದಳಗಳಿವೆ ಈ ದಳಗಳಿಗೆ ಕೆಲವೊಂದು ಸಂಖ್ಯೆಯ ಜಪಗಳಿದ್ದು ಅವೆಲ್ಲವೂ ಕೂಡಿ ೨೧೬೦೦ ಆಗುವವು. ಇವುಗಳನ್ನರಿತು ಆಚರಿಸುತ್ತಿರಲು ಆಗ ರೇಚಕವೇ ಪಂಚಾಕ್ಷರಿ, ಪೂರಕವೇ ಓಂಕಾರ, ಕುಂಭಕವೇ ಚಿತ್‌ಶಕ್ತಿರೂಪವಾಗುವುದು. ಈ ರೀತಿಯನ್ನರಿತು ಆಚರಿಸುವುದೇ ಲಿಂಗ ಜಪವು ಅಥವಾ ಶಿವ ಜಪವು.

೨೧೩. **ಚಿದ್ರುದ್ರಾಕ್ಷಿ :** ಇದಕ್ಕೆ ಚಿದಕ್ಷಮಣಿ ಎಂತಲೂ ಹೆಸರಿದೆ. ಕರದಲ್ಲಿರುವ ಇಷ್ಟ ಲಿಂಗವು ಷಡಾಧಾರ ಚಕ್ರಗಳಲ್ಲಿ ಆರು ತೆರನಾದ ಲಿಂಗವಾಗಿ ಪ್ರಕಟವಾಗುತ್ತದೆ. ಆಧಾರದಲ್ಲಿ ಚತುರ್ವಿಧ ಬಿಂದು ಲಿಂಗ, ಸ್ವಾಧಿಷ್ಠಾನದಲ್ಲಿ ಷಡ್ವಿಧಧಾತುಲಿಂಗ, ಮಣಿಪೂರಕದಲ್ಲಿ ದಶವಿಧ ಕ್ಷೇತ್ರಲಿಂಗ, ಅನಾಹತದಲ್ಲಿ ದ್ವಾದಶವಿಕೃತಿಲಿಂಗ, ವಿಶುದ್ಧಿಯಲ್ಲಿ ಷೋಡಶಕಳಾಲಿಂಗ, ಆಜ್ಞೆಯಲ್ಲಿ ಆತ್ಮವಿದ್ಯಾಲಿಂಗ ಎಂದು ಆರು ಕರೆಯಲ್ಪಡುತ್ತದೆ.

ಅಂತರಂಗದಲ್ಲಿ ಹೀಗೆ ಲಿಂಗವು ಸ್ಥಾಪಿತವಾಗುವುದರಿಂದ ವೀರಶೈವನು ಪ್ರಾಣಲಿಂಗಿ ಎಂದೆನಿಸಿಕೊಳ್ಳುತ್ತಾನೆ. ಷಟ್‌ಚಕ್ರಗಳಲ್ಲಿರುವ ಈ ಲಿಂಗಗಳಲ್ಲಿ ರುದ್ರರು ಸಂಬಂಧಪಟ್ಟಿರುತ್ತಾರೆ. ಈ ರುದ್ರರು ಒಟ್ಟು ೫೦ ಜನರು. ಆಧಾರದಲ್ಲಿ ೪ ರುದ್ರರು, ಸ್ವಾಧಿಷ್ಠಾನದಲ್ಲಿ ೬ ರುದ್ರರು, ಮಣಿಪೂರಕದಲ್ಲಿ ೧೦ ರುದ್ರರು, ಅನಾಹತದಲ್ಲಿ ೧೨ ರುದ್ರರು, ವಿಶುದ್ಧಿಯಲ್ಲಿ ೧೬ ರುದ್ರರು, ಆಜ್ಞೆಯಲ್ಲಿ ಇಬ್ಬರು, ಹೀಗೆ ೫೦ ರುದ್ರರು ಇದ್ದಾರೆ. ಅವರು ಲೋಮವಿಲೋಮದಲ್ಲಿ ಒಂದುನೂರು ರುದ್ರರಾಗುತ್ತಿದ್ದು ಅವರೊಡನೆ ಮಾಯಾಖ್ಯ ಪಂಚಾಕ್ಷರಿ ಓಂ, ಹ್ರಾಂ ಹ್ರೀಂ, ನಮಃ ಶಿವಾಯ ಈ ಎಂಟು ಕೂಡಲು ನೂರೆಂಟು ರುದ್ರ ಬೀಜಗಳಾಗುತ್ತವೆ. ಇವುಗಳೇ ಚಿದ್ರುದ್ರಾಕ್ಷಿಗಳು ಎಂದೆನಿಸಿಕೊಳ್ಳುತ್ತವೆ.

ಈ ರುದ್ರರಿಗೆ ನೂರೆಂಟು ಶಕ್ತಿಗಳು ಸತಿಪತಿಭಾವದಿಂದಿರುತ್ತಾರೆ. ಆಯಾ ಚಕ್ರಗಳಲ್ಲಿ ಎಷ್ಟು ಜನ ರುದ್ರರು ಇದ್ದಾರೋ, ಅಷ್ಟೇ ಸಂಖ್ಯೆಯಿಂದ ಶಕ್ತಿಯರೂ ಇದ್ದು ಮಾಯಾಖ್ಯಗೂಡಿ ೧೦೮ ಶಕ್ತಿಗಳಾಗಿ ರುದ್ರರೊಡನೆ ಬೆರೆದು ಚಿದ್ಗ್ರಂಥಿಗಳೆಂದೆನಿಸಿಕೊಳ್ಳುತ್ತಾರೆ.

ಆಗ ಲಿಂಗವೇ ಮಂತ್ರ ಮಂತ್ರವೇ ಚಿತ್ತು ಎಂದು ಅರಿದು ಜಪಿಸಲು ಪ್ರಾಣವಾಯುವಿಕಾರವಳಿಯುತ್ತದೆ, ಸುಜ್ಞಾನವೇ ಸೂತ್ರವಾಗುತ್ತದೆ. ಚಿದ್ರುದ್ರಾಕ್ಷಿಯು ಈ ತೆರನನ್ನು ಅರಿದು ಜಪಿಸುವುದು. ಇದನ್ನರಿತು ಜಪಿಸಲು, ಭಕ್ತನಲ್ಲಿ ಲಿಂಗಶಕ್ತಿಯು ಉದ್ಭವಿಸುತ್ತದೆ.

೨೭೪. ಕಂಠಸ್ಥಾನದಲ್ಲಿಯ ರುದ್ರರ ಮತ್ತು ಶಕ್ತಿಯರ ಹೆಸರುಗಳು ಕೆಳಗೆ ವಿವರಿಸಿದಂತೆ ಇವೆ. ಇವರು ಸ್ವರಾಕ್ಷರ ಮೂರ್ತಿಗಳೆಂದು ಹೇಳಲ್ಪಡುತ್ತಾರೆ.

| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಶ್ರೀಕಂಠ | ಪೂರ್ಣೋದರಿ | ಅ |
| ಅನಂತ | ವಿರಜೆ | ಆ |
| ಸೂಕ್ಷ್ಮ | ಶಾಲ್ಮಲಿ | ಇ |
| ತ್ರಿಮೂರ್ತಿ | ಲೋಲಾಕ್ಷಿ | ಈ |



| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಅಮರೇಶ | ವರ್ತುಳಾಕ್ಷಿ | ಉ |
| ಅರ್ಘೀಶ | ದೀರ್ಘನಾಸಿಕೆ | ಊ |
| ಭಾರಭೂತಿ | ದೀರ್ಘಮುಖಿ | ಋ |
| ಅರಿಲೇಶ | ಗೋಮುಖಿ | ೠ |
| ಸ್ಥಾಣುಕ | ದೀರ್ಘಜಿಹ್ವೆ | ಌ |
| ಹರ | ಕುಂಡೋದರಿ | ೡ |
| ಝುಂಟೀಶ | ಉರ್ಧ್ವಕೇಶಿ | ಏ |
| ಜಾತುಕ | ವಿಕೃತಮುಖಿ | ಐ |
| ಸದ್ಯೋಜಾತ | ಜ್ವಾಲಾಮುಖಿ | ಓ |
| ಅನುಗ್ರಹೇಶ್ವರ | ಉಲ್ಕಾಮುಖಿ | ಔ |
| ಅಕ್ರೂರ | ಶ್ರೀಮುಖಿ | ಅಂ |
| ಮಹಾಸೇನ | ವಿದ್ಯಾಮುಖಿ | ಅಃ |

೨೭೫. ಹೃದಯಸ್ಥಾನದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು ಕೆಳಗೆ ವಿವರಿಸಿದಂತೆ ಇವೆ. ಇವರು ವಿಕಲಾಕ್ಷರಾದಿ ದೇವತೆಗಳು ಮತ್ತು ದ್ವಾದಶಾಕ್ಷರರು. ಇದು ಅನಾಹತ ಚಕ್ರವು.

| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಕ್ರೋಧೀಶ | ಮಹಾಕಾಳಿ | ಕ |
| ಚಂಡೇಶ | ಸರಸ್ವತಿ | ಖ |
| ಪಂಚಾಂತಕಶಿವೋತ್ತಮ | ಗೌರಿ | ಗ |
| ಶಿವೋತ್ತಮ | ಮಂತ್ರಶಕ್ತಿ | ಘ |
| ಏಕರುದ್ರ | ಆತ್ಮಶಕ್ತಿ | ಙ |
| ಕೂರ್ಮ | ಭೂತಮಾತೆ | ಚ |
| ಏಕನೇತ್ರ | ಲಂಬೋದರಿ | ಛ |
| ಚತುರಾಸನ | ದ್ರಾವಿಣಿ | ಜ |
| ಅಜೇಶ | ನಗರಿ | ಝ |
| ಸರ್ವ | ಖೇಚರಿ | ಞ |

| | | |
|---|---|---|
| [illegible] | ಹುಂಕಾರಿ | ಟ |
| [illegible] | ರೂಪಿಣಿ | ಠ |

[illegible] [illegible] ಸ್ಥಾನದಲ್ಲಿರುವ ರುದ್ರರು ಮತ್ತು ಶಕ್ತಿಯರು [illegible] ಇದ್ದಾರೆ. ಇವರು ೧೦ ಜನರು ಇದ್ದಾರೆ. ಇದು [illegible] ಚಕ್ರವು.

| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| [illegible] | ನಿರಜೆ | ಡ |
| ಅರ್ಧನಾರೀಶ್ವರ | ಕಾಲೋದರಿ | ಢ |
| [illegible] | ಪೂತನಿ | ಣ |
| ಉಮಾಕಾಂತ | ಭದ್ರಕಾಳಿ | ತ |
| ಆಷಾಢದಂಡಿ | ಯೋಗಿನಿ | ಥ |
| [illegible] | ಶಂಖಿನಿ | ದ |
| ಅತ್ರಿರುದ್ರ | ಘರ್ಜಿನಿ | ಧ |
| ಮೀನರುದ್ರ | ಕಾಲರಾತ್ರಿ | ನ |
| ಮೇಷರುದ್ರ | ಕುರ್ದಿನಿ | ಪ |
| ಲೋಹಿತ | ಕಪರ್ದಿನಿ | ಫ |

೨೬೭. ಗುಹ್ಯಸ್ಥಾನದಲ್ಲಿರುವ ಸ್ವಾಧಿಷ್ಠಾನ ಚಕ್ರದಲ್ಲಿರುವ ರುದ್ರರ ಮತ್ತು ಶಕ್ತಿಯರ ಹೆಸರುಗಳು ಕೆಳಗೆ ಕಾಣಿಸಿದಂತೆ ಇವೆ.

| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಶಿವ | ವಾಗ್ನನೆ | ಬ |
| ಸಕಲಂಡ | ಜಯೆ | ಭ |
| ದ್ವಿಲಂಡ | ಸುಮುಖಿ | ಮ |
| ಮಹಾಕಾಲ | ಈಶ್ವರಿ | ಯ |
| ಸಾಲ | ರೇವತಿ | ರ |
| ಭುಜಂಗೇಶ | ಮಾಧವಿ | ಲ |

೨೬೮. ಗುದಸ್ಥಾನದಲ್ಲಿಯ ಆಧಾರಚಕ್ರದಲ್ಲಿರುವ ರುದ್ರರು ಮತ್ತು ಶಕ್ತಿಯರು ನಾಲ್ವರು. ಇವರ ಹೆಸರುಗಳು ಕೆಳಗೆ ಕಾಣಿಸಿದಂತೆ.



| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಪಿನಾಕೇಶ | ವಾರುಣಿ | ವ |
| ಖಡ್ಗೀಶ | ವಾಯುವಿ | ಶ |
| ಬಕ | ರಕ್ಷಾವಧಾರಿಣಿ | ಷ |
| ಶ್ವೇತಭೃಗ್ವೀಶ | ಸಹಜೆ | ಸ |

೨೬೯. ಲಲಾಟಸ್ಥಾನದಲ್ಲಿ ಇಬ್ಬರು ರುದ್ರರು ಶಕ್ತಿಯರು ಇದ್ದಾರೆ. ಇದು ಆಜ್ಞಾಚಕ್ರವು.

| ರುದ್ರರು | ಶಕ್ತಿಯರು | ಅಕ್ಷರಗಳು |
|---|---|---|
| ಶಿವ | ವ್ಯಾಪಿನಿ | ಹಂ |
| ಸಂವರ್ತಕ | ಮಾಯಾಸ್ಥಿತೆ | ಕ್ಷಂ |

**ಸೂಚನೆ :** ಮೇಲೆ ಸಂಖ್ಯೆ ೨೬೩ ರಿಂದ ೨೬೯ ರ ವರೆಗೆ ಹೇಳಿದ ವಿವರಣೆಗಳು ಚಿದ್ರುದ್ರಾಕ್ಷಿಯ ವಿಷಯದಲ್ಲಿ ಬರುತ್ತವೆ. ಬಾಹ್ಯ ಇಷ್ಟ ಲಿಂಗದ ಮೂಲಕ ಅಂತರಂಗದಲ್ಲಿ ಲಿಂಗಗಳು ಪ್ರಕಟವಾಗುತ್ತವೆ. ಇದು ಲಿಂಗಧ್ಯಾನದ ಮೂಲಕ ಜರಗುತ್ತದೆ. ಹೀಗೆ ನೆಲೆಗೊಂಡ ಲಿಂಗಗಳ ಹೆಸರುಗಳು ಸಂಖ್ಯೆ ೨೬೩ ರಲ್ಲಿ ಇವೆ ಅವೇ: ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಾಗಿರುತ್ತವೆ. ಹೀಗೆ ನೆಲೆಗೊಳ್ಳುವಲ್ಲಿ ಆ ಚಕ್ರಗಳಿರುವ ದಳಗಳಲ್ಲಿ ರುದ್ರರೂ ಶಕ್ತಿಯರೂ ಇವರ ಸಂಗಮವಾಗುವುದು. ಈ ಸಂಗಮವು ಜರಗಿದಲ್ಲಿ ಅದು ಚಿದ್ಗ್ರಂಥಿ ಎಂದು ಹೇಳಲ್ಪಡುತ್ತದೆ. ಸಾಮಾನ್ಯ ಜನರಲ್ಲಿಯ ಗ್ರಂಥಿಗಳಲ್ಲಿ ರಕ್ತ, ಸ್ನಾಯುಗಳನ್ನು ಮಾತ್ರ ಕಾಣಬಹುದು. ಆದರೆ ಲಿಂಗಜಪಗಳಿಂದ ಪಕ್ವವಾದ ಲಿಂಗಾಂಗಿಯ ಶರೀರದಲ್ಲಿರುವ ಈ ಗ್ರಂಥಿಗಳಲ್ಲಿ ಲಿಂಗಶಕ್ತಿಯು ಇರುತ್ತದೆ. ಆದ್ದರಿಂದ ಅವು ಚಿದ್ಗ್ರಂಥಿಗಳೆಂದು ಹೇಳಲ್ಪಟ್ಟಿರುತ್ತವೆ. ಇದು ವೀರಶೈವನ ಲಿಂಗಮಂತ್ರಜಪವು.

೨೭೦. ಲಿಂಗಜಪಗಳಲ್ಲಿ ಅರ್ಪಣಭಾವವು : ವೀರಶೈವರು ಲಿಂಗಾರ್ಪಣ ಭಾವದಿಂದ ತಮ್ಮ ಲಿಂಗಜಪಗಳನ್ನು ಮಾಡತಕ್ಕದ್ದು. ಅರ್ಪಣ ಭಾವದಿಂದ ಲಿಂಗವು ಅಂತರಂಗವನ್ನು ವೇಧಿಸುತ್ತದೆ. ಜಪಮಾಡುವದೆಂದರೆ ಕೇವಲ ನಾಮಸಂಕೀರ್ತನವಲ್ಲ ಅದರೊಡನೆ ಆಯಾ ಲಿಂಗಗಳ

ನೆನಹು ಮತ್ತು ಆ ನೆನಹಿನೊಡನೆ ಅರ್ಪಣಭಾವ ಇವುಗಳೂ ಇರತಕ್ಕದ್ದು. ವೀರಶೈವರಲ್ಲಿ ಲಿಂಗಜಪಗಳು ಈ ರೀತಿಯಾಗಿರುತ್ತವೆ.

೨೮೧. **ಲಿಂಗಜಪಗಳ ಭೇದಗಳು** : ಇವು ಮುಖ್ಯ ಎರಡು ಇವೆ. ಈ ಒಂದೊಂದು ಭೇದದಲ್ಲಿ ಅನೇಕ ಉಪಭೇದಗಳೂ ಇರುತ್ತವೆ. ಮುಖ್ಯ ಭೇದಗಳು ಯಾವುವೆಂದರೆ— (೧) ಪ್ರಣವೋಚ್ಚರಣೆಗಳು. ಇಲ್ಲಿ ಪ್ರಣವುಗಳ ಪುನಶ್ಚರಣೆ ಮಾತ್ರ ಇರುತ್ತದೆ. ಮನುಷ್ಯನಲ್ಲಿ ಹುದುಗಿರುವ ಅಂತಃಶಕ್ತಿಯನ್ನು ಒಟ್ಟಾಗಿ ಹೆಚ್ಚಿಸುವುದೇ ಇವುಗಳ ಉದ್ದೇಶವು. (೨) ಪ್ರಣವುಗಳನ್ನು ಆಯಾ ಲಿಂಗಗಳಿಗೆ ಸಮರ್ಪಣ ಮಾಡುತ್ತ ಉಚ್ಚರಿಸುವುದು. ಇಲ್ಲಿ ಅಂತಃಶಕ್ತಿಯನ್ನು ಆಯಾ ಲಿಂಗಗಳಿಗೆ ಸಮರ್ಪಿಸುವುದಿರುತ್ತದೆ. ಹೀಗೆ ಇವುಗಳಲ್ಲಿ ಎರಡು ಮುಖ್ಯ ಭೇದಗಳನ್ನು ಮಾಡಬಹುದು.

೨೮೨. **ಪ್ರಣವೋಚ್ಚರಣೆ** : ವೀರಶೈವರಲ್ಲಿ ಅ, ಉ, ಮ; ಬ, ಸ, ವ; ಓಂ ನ ಮಃ ಶಿ ವಾ ಯ ಹೀಗೆ ೧೨ ಮುಖ್ಯ ಪ್ರಣವುಗಳು ಇರುತ್ತವೆ. ಇವುಗಳ ಉಚ್ಚರಣೆಯ ಮುಖ್ಯ ವಿಧಗಳು ಯಾವುವೆಂದರೆ—

೧ನೇ ವಿಧ :

ಬಾಂ ಸಾಂ ವಾಂ; ನಾಂ ಮಾಂ ಶೀಂ ವಾಂ ಯಾಂ ಓಂ; ಅಂ ಊಂ ಮಾಂ ಎಂದಿದೆ.

೨ನೇ ವಿಧ :

ಓಂ. ನಾಂ ಮಾಂ; ಅಂ ಬಾಂ ಹ್ರಾಂ ಹ್ರೀಂ, ನಮಃಶಿವಾಯ.
ಓಂ. ಶೀಂ ವಾಂ; ಊಂ ಸಾಂ ಹ್ರೂಂ ಹ್ರೈಂ, ನಮಃಶಿವಾಯ
ಓಂ. ಯಾಂ; ಮಾಂ ವಾಂ ಹ್ರೌಂ ಹ್ರಃ, ನಮಃಶಿವಾಯ

ಒಂದನೇ ವಿಧವು ಸಾಮಾನ್ಯವಾದುದು. ಎರಡನೇ ವಿಧವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ ಅನುಕ್ರಮವಾಗಿ ಸಂಬಂಧಿಸಿ ಹೇಳಲ್ಪಟ್ಟಿದೆ.

೨೮೩. **ಲಿಂಗಾರ್ಪಣ ಜಪಗಳು** : ಇದರಲ್ಲಿ ತ್ರಿಲಿಂಗಾರ್ಪಣ ಜಪವು, ನವಲಿಂಗಾರ್ಪಣ ಜಪವೆಂತಲೂ ಷಡ್ಲಿಂಗಾರ್ಪಣ ಜಪವು, ಆರ



ಣಾರ್ಪಣ ಜಪವೆಂತಲೂ ಭೇದಗಳು ಇರುತ್ತವೆ. ಅಲ್ಲದೆ ವೀರಶೈವರು ತಮ್ಮ ಅಂಗದ ಮೇಲೆ ಧರಿಸುವ ಇಷ್ಟಲಿಂಗಕ್ಕೆ ಸಂಬಂಧಿಸಿದ ಜಪವೂ ಒಂದು ಇದೆ.

೨೮೪. **ತ್ರಿಲಿಂಗಾರ್ಪಣ ಜಪವು** :

ಓಂ ಹ್ರಾಂ ನಾಂ ನಮಃಶಿವಾಯ ಆಚಾರಲಿಂಗಾಯನಮಃ
ಓಂ ಹ್ರೀಂ ಮಾಂ ನಮಃಶಿವಾಯ ಗುರುಲಿಂಗಾಯನಮಃ

ಇಷ್ಟಲಿಂಗವೇ ನಿಮಗರ್ಪಿತವು.

ಓಂ ಹ್ರೂಂ ಶೀಂ ನಮಃಶಿವಾಯ ಶಿವಲಿಂಗಾಯನಮಃ
ಓಂ ಹ್ರೈಂ ವಾಂ ನಮಃಶಿವಾಯ ಜಂಗಮಲಿಂಗಾಯನಮಃ

ಪ್ರಾಣಲಿಂಗವೇ ನಿಮಗರ್ಪಿತವು.

ಓಂ ಹ್ರೌಂ ಯಾಂ ನಮಃಶಿವಾಯ ಪ್ರಸಾದಲಿಂಗಾಯನಮಃ
ಓಂ ಹ್ರಃ ಓಂ ನಮಃಶಿವಾಯ ಮಹಾಲಿಂಗಾಯನಮಃ

ಭಾವಲಿಂಗವೇ ನಿಮಗರ್ಪಿತವು.

೨೮೫. **ನವಲಿಂಗಾರ್ಪಣ ಜಪವು** : ಇದರಲ್ಲಿ ಷಡ್ಲಿಂಗ ಜಪವೂ ಸೇರಿಕೊಂಡಿರುತ್ತದೆ. ಇದರಲ್ಲಿ ಎರಡು ವಿಧಗಳಿವೆ.

೧ನೇ ವಿಧ :

| | | | |
|---|---|---|---|
| ಓಂ | ಹ್ರಾಂ | ನಾಂ | ಆಚಾರಲಿಂಗಾಯನಮಃ |
| ಓಂ | ಹ್ರೀಂ | ಮಾಂ | ಗುರುಲಿಂಗಾಯನಮಃ |
| ಓಂ | ಹ್ರೂಂ | ಶೀಂ | ಶಿವಲಿಂಗಾಯನಮಃ |
| ಓಂ | ಹ್ರೈಂ | ವಾಂ | ಜಂಗಮಲಿಂಗಾಯನಮಃ |
| ಓಂ | ಹ್ರೌಂ | ಯಾಂ | ಪ್ರಸಾದಲಿಂಗಾಯನಮಃ |
| ಓಂ | ಹ್ರಃ | ಓಂ | ಮಹಾಲಿಂಗಾಯನಮಃ |
| ಓಂ | ಅಂ | | ಇಷ್ಟಲಿಂಗಾಯನಮಃ |
| ಓಂ | ಊಂ | | ಪ್ರಾಣಲಿಂಗಾಯನಮಃ |
| ಓಂ | ಮಾಂ | | ಭಾವಲಿಂಗಾಯನಮಃ |

ಇವುಗಳಲ್ಲಿ ಮೊದಲನೆಯ ಆರು ಷಟ್‍ಸ್ಥಲಕ್ಕೂ ಉಳಿದ ಮೂರು ಅವುಗಳಿಗೆ ಮೇಲಿರುವ ಶೂನ್ಯ ಸ್ಥಳಗಳಿಗೂ ಸಂಬಂಧಿಸುತ್ತವೆ.

೨ನೇ ವಿಧ: ಕೆಳಗಿನದರಲ್ಲಿ ಬ, ಸ, ವ; ಅ, ಉ, ಮ ಪ್ರಣವಗಳನ್ನೊಳಗೊಂಡು ಮಾಡತಕ್ಕ ಜಪದ ಕ್ರಮವಿದೆ. ಅದರಲ್ಲಿ ಪ್ರಣವಗಳಲ್ಲಿ ಮಂತ್ರಶಕ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಒಂದಕ್ಕಿಂತಲೂ ಹೆಚ್ಚು ಸಾರೆ ಅವು ಇಡಲ್ಪಟ್ಟಿವೆ. ಅದು ಹೇಗೆಂದರೆ—

(೧) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಆಚಾರಲಿಂಗಾಯನಮಃ

(೨) ಓಂ ಬಾಂ ಓಂಸಾ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಗುರುಲಿಂಗಾಯನಮಃ

(೩) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಶಿವಲಿಂಗಾಯನಮಃ

(೪) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಜಂಗಮಲಿಂಗಾಯನಮಃ

(೫) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ, ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಪ್ರಸಾದಲಿಂಗಾಯನಮಃ

(೬) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ, ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಮಹಾಲಿಂಗಾಯನಮಃ

(೭) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ



ಇಷ್ಟಲಿಂಗಾಯನಮಃ

(೮) ಓಂ ಬಾಂ ಓಂ ಸಾಂ ಓಂ ವಾಂ; ಓಂ ನಾಂ ಓಂ ಮಾಂ, ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ ಓಂ; ಆಂ ಓಂ ಊಂ ಓಂ ಮಾಂ ಪ್ರಾಣಲಿಂಗಾಯನಮಃ

(೯) ಓಂ ಬಾಂ ಓಂ ನಾಂ ಓಂ ವಾಂ; ಓಂ ಸಾಂ ಓಂ ಮಾಂ ಓಂ ಶೀಂ ಓಂ ವಾಂ ಓಂ ಯಾಂ; ಓಂ ಓಂ, ಓಂ; ಆಂ ಓಂ ಊಂ ಓಂ ಮಾಂ ಭಾವಲಿಂಗಾಯನಮಃ

೨೮೬. ಕಾಯಾರ್ಪಣ ಜಪವು :

(ಅ) ಭೋಜ್ಯವನ್ನು ಓಂ ಹ್ರಾಂ ನಾಂ ನಮಃಶಿವಾಯ ಈ ಮಂತ್ರದಿಂದ ಆಚಾರಲಿಂಗಕ್ಕೆ ಅರ್ಪಿಸುವುದು.

(ಬ) ಪಾನ್ಯವನ್ನು ಓಂ ಹ್ರೀಂ ಮಾಂ ನಮಃಶಿವಾಯ ಎಂಬ ಮಂತ್ರದಿಂದ ಗುರುಲಿಂಗಕ್ಕೆ ಸಮರ್ಪಿಸುವುದು.

(ಕ) ಭಕ್ಷವನ್ನು ಓಂ, ಹ್ರೂಂ, ಹ್ರೈಂ, ವಾಂ ನಮಃಶಿವಾಯ ಎಂಬ ಮಂತ್ರದಿಂದ ಶಿವಲಿಂಗಕ್ಕೆ ಅರ್ಪಿಸುವುದು.

(ಡ) ಚೋಹ್ಯವನ್ನು ಓಂ ಹ್ರೈಂ ವಾಂ ನಮಃಶಿವಾಯ ಎಂಬ ಮಂತ್ರದಿಂದ ಜಂಗಮಲಿಂಗಕ್ಕೆ ಅರ್ಪಿಸುವುದು.

(ಇ) ಲೇಹ್ಯವನ್ನು ಓಂ ಹ್ರೌಂ ಯಾಂ ನಮಃಶಿವಾಯ ಎಂಬ ಮಂತ್ರದಿಂದ ಪ್ರಸಾದಲಿಂಗಕ್ಕೆ ಅರ್ಪಿಸುವುದು.

(ಫ) ಇಲ್ಲದಲ್ಲಿಯ ರೂಪನ್ನು ಪರಿಣಾಮವೆಂಬ ದ್ರವ್ಯವನ್ನು ತೃಪ್ತಿ ಎಂಬ ಪದಾರ್ಥವನ್ನು ಓಂ ಹ್ರಃ ಓಂ ನಮಃ ಶಿವಾಯ ಎಂಬ ಮಂತ್ರದಿಂದ ಮಹಾಲಿಂಗಕ್ಕೆ ಅರ್ಪಿಸುವುದು.

೨೮೭. ಕರಣಾರ್ಪಣ ಜಪವು : ರೂಪು, ರುಚಿ, ತೃಪ್ತಿಗಳನ್ನು ಯಾವ ಜಪದಿಂದ ಅರ್ಪಿಸತಕ್ಕದ್ದೋ ಅದೇ ಕರಣಾರ್ಪಣ ಜಪವೆಂದು ಹೇಳಲ್ಪಡುತ್ತದೆ. ಅದು ಹೇಗೆಂದರೆ—

ಓಂ ಹ್ರಾಂ ಹ್ರೀಂ, ಬಾಂ ಆಂ ನಾಂ ಮಾಂ, ನಮಶ್ಶಿವಾಯ
ಎಂದು ರೂಪು ಪದಾರ್ಥವನ್ನು ಇಷ್ಟಲಿಂಗಕ್ಕೆ ಅರ್ಪಿಸುವುದು.
ಓಂ ಹ್ರೂಂ ಹ್ರೈಂ, ಸಾಂ ಊಂ ಶೀಂ ವಾಂ, ನಮಶ್ಶಿವಾಯ

ಎಂದು ರುಚಿ ಪದಾರ್ಥವನ್ನು ಪ್ರಾಣಲಿಂಗಕ್ಕೆ ಅರ್ಪಿಸುವುದು.

ಓಂ ಹ್ರೌಂ ಹ್ರಃ, ವಾಂ ಮಾಂ ಯಾಂ, ಓಂ, ನಮಶ್ಶಿವಾಯ.

ಎಂದು ತೃಪ್ತಿಪದಾರ್ಥವನ್ನು ಭಾವಲಿಂಗಕ್ಕೆ ಅರ್ಪಿಸುವುದು. ;ಇದು ಕರಣಾರ್ಪಣ ಜಪವು.

೧೮೮. **ಇಷ್ಟಲಿಂಗಾರ್ಪಣ ಜಪವು** : ಇದನ್ನು ಅರ್ಪಿಸುವ ವಿಧವು ಹೇಗೆಂದರೆ—

ಓಂ ಹ್ರಾಂ ನಮಃಶಿವಾಯ - ಪೀಠದಲ್ಲಿರುವ ಆಚಾರಲಿಂಗಕ್ಕೆ
ಓಂ ಹ್ರೀಂ ನಮಃಶಿವಾಯ - ಕಟಿಯಲ್ಲಿರುವ ಗುರುಲಿಂಗಕ್ಕೆ
ಓಂ ಹ್ರೂಂ ನಮಃಶಿವಾಯ - ವರ್ತುಳದಲ್ಲಿರುವ ಶಿವಲಿಂಗಕ್ಕೆ
ಓಂ ಹ್ರೈಂ ನಮಃಶಿವಾಯ - ಗೋಮುಖದಲ್ಲಿರುವ ಜಂಗಮಲಿಂಗಕ್ಕೆ
ಓಂ ಹ್ರೌಂ ನಮಃಶಿವಾಯ - ನಾಳದಲ್ಲಿರುವ ಪ್ರಸಾದಲಿಂಗಕ್ಕೆ
ಓಂ ಹ್ರಃ ನಮಃಶಿವಾಯ - ಗೋಳಕದಲ್ಲಿರುವ ಮಹಾಲಿಂಗಕ್ಕೆ

ಸಮರ್ಪಿಸುವುದು.

ಬೇರೆ ಪದ್ಧತಿಯ ಜಪಗಳೂ ಉಂಟು. ಆದರೆ ಅವುಗಳ ಮೂಲ ತತ್ವಗಳಲ್ಲಿ ಭೇದವಿಲ್ಲ. ಅವುಗಳ ಉಪಯೋಗದಂತೆ ಬೇರೆ ಬೇರೆ ಹೆಸರುಗಳುಂಟು. ಅವುಗಳಲ್ಲಿ ಕೆಲವು ಮಾದರಿಗಾಗಿ ಕೆಳಗೆ ಕೊಡಲ್ಪಟ್ಟಿವೆ.

೨೮೯. **ಹಸ್ತಪ್ರಸಾದ ಜಪ** : ಈ ಜಪದ ವಿವರ ಕೆಳಗೆ ಕಾಣಿಸಿದಂತೆ ಇದೆ. ಇಷ್ಟ ಪ್ರಾಣ ಭಾವಲಿಂಗಗಳ ಜಪಗಳು ಇವಾಗಿವೆ.

ಓಂ ಹ್ರಾಂ ಹ್ರೀಂ ಬಾಂ ಅಂ ನಾಂ ಮಾಂ ಇಷ್ಟಲಿಂಗಾಯನಮಃ
ಓಂ ಹ್ರೂಂ ಹ್ರೇಂ ಸಾಂ ಊಂ ಶೀಂ ವಾ ಪ್ರಾಣಲಿಂಗಾಯನಮಃ
ಓಂ ಹ್ರೌಂ ಹ್ರಃ ವಾಂ ಮಾಂ ಯಾಂ ಓಂ ಭಾವಲಿಂಗಾಯನಮಃ

ಇದನ್ನು ಜಪಿಸಿ ಅಡಿಗೆಯನ್ನು ಮುಟ್ಟಿಸುವುದು.

೨೯೦. **ರೂಪು ರುಚಿ ತೃಪ್ತಿಗಳ ಅರ್ಪಣ** :

ನಮಃಶಿವಾಯ ರೂಪು ಇಷ್ಟಲಿಂಗಾಯನಮಃ
ನಮಃಶಿವಾಯ ರುಚಿ ಪ್ರಾಣಲಿಂಗಾಯನಮಃ



ನಮಃಶಿವಾಯ ತೃಪ್ತಿ ಭಾವಲಿಂಗಾಯನಮಃ

ಇದೊಂದು ವಿವಿಧ ಕರಣಾರ್ಪಣ ಜಪವು. ಇದರ ಮೂಲಕ ಲಿಂಗಕ್ಕೆ ತೋರಿಸಿ ಎಡೆಯನ್ನು ಅರ್ಪಿಸುವುದು.

೨೯೧. **ನ್ಯಾಸಗಳು** : ವೀರಶೈವರಲ್ಲಿ ಅನೇಕ ತರದ ನ್ಯಾಸಗಳಿವೆ. ನ್ಯಾಸಗಳು ಮಂತ್ರಾಕ್ಷರಗಳ ಮೂಲಕವೇ ಆಗುತ್ತವೆ. ಅವುಗಳಿಂದ ವೀರಶೈವನು ಮಂತ್ರ ಶರೀರಿಯಾಗಿ ಲಿಂಗವನ್ನು ಪೂಜಿಸುತ್ತಾನೆ. ಅವುಗಳ ವಿವರಗಳು ಮುಂದೆ ಕೊಡಲ್ಪಡುವವು. ಹೀಗೆ ಮಂತ್ರಗಳ ಕಾರ್ಯಗಳು ಅನೇಕ ವಿಧವಾಗಿವೆ.

೨೯೨. **ತ್ರಿಲಿಂಗಗಳ ಜಪಸಂಖ್ಯೆ** : ಇಷ್ಟಲಿಂಗದ ಜಪಗಳ ಸಂಖ್ಯೆ ೪೩೨೦. ಪ್ರಾಣಲಿಂಗದ ಜಪಗಳ ಸಂಖ್ಯೆ ೯೫೦೪. ಭಾವಲಿಂಗದ ಜಪಗಳ ಸಂಖ್ಯೆ ೭೭೭೬. ಹೀಗೆ ಒಟ್ಟು ಜಪಸಂಖ್ಯೆ ೨೧೬೦೦ ಆಗುತ್ತವೆ. ಇಷ್ಟಲಿಂಗದಲ್ಲಿ ಆಚಾರಲಿಂಗದ ೪ ದಳಗಳು ಗುರುಲಿಂಗದ ೬ ದಳಗಳು ಅಂತು ೧೦ ದಳಗಳಿದ್ದು ಪ್ರತಿಯೊಂದು ದಳಕ್ಕೆ ೪೩೨ ಜಪಸಂಖ್ಯೆಯ ಪ್ರಕಾರ ಇದಕ್ಕೆ ಒಟ್ಟು ೪೩೨೦ ಜಪಗಳಾಗುತ್ತವೆ. ಪ್ರಾಣಲಿಂಗದಲ್ಲಿ ೧೦ ದಳಗಳುಳ್ಳ ಶಿವಲಿಂಗ ಮತ್ತು ೧೨ ದಳಗಳುಳ್ಳ ಜಂಗಮಲಿಂಗವಿದ್ದು ಮೇಲಿನ ಎಣಿಕೆಯ ಪ್ರಕಾರ ಜಪಗಳ ಸಂಖ್ಯೆ ೯೫೦೪ ಆಗುತ್ತವೆ. ಭಾವಲಿಂಗದಲ್ಲಿ ೧೬ ದಳಗಳುಳ್ಳ ಪ್ರಸಾದಲಿಂಗ ಮತ್ತು ೨ ದಳಗಳುಳ್ಳ ಮಹಾಲಿಂಗವಿದ್ದು ಅದೇ ಎಣಿಕೆಯಿಂದ ಒಟ್ಟು ಜಪಸಂಖ್ಯೆ ೭೭೭೬ ಆಗುತ್ತವೆ. ಜಪಕ್ಕೆ ಒಟ್ಟು ೬೦ ಗಳಿಗೆ ಅಂದರೆ ೨೪ ತಾಸುಗಳು ಹತ್ತುತ್ತವೆ.

೨೯೩. **ಷಡ್ವಿಧ ಲಿಂಗಗಳ ಜಪಸಂಖ್ಯೆ** :

| ಲಿಂಗ | ಲಿಂಗಕ್ಕೆ ದಳಗಳು | ಒಂದು ದಳಕ್ಕೆ ಜಪಸಂಖ್ಯೆ | ಲಿಂಗದ ಒಟ್ಟು ಜಪಸಂಖ್ಯೆ | ಹತ್ತುವ ವೇಳೆ ಗಳಿಗೆ-ಪಾನಿವಾಳ |
|---|---|---|---|---|
| ಆಚಾರಲಿಂಗ | ೪ | ೪೩೨ | ೧೭೨೮ | ೪-೪೮ |
| ಗುರುಲಿಂಗ | ೬ | ೪೩೨ | ೨೫೯೨ | ೭-೧೨ |
| ಶಿವಲಿಂಗ | ೧೦ | ೪೩೨ | ೪೩೨೦ | ೧೨-೦ |

| | | | | |
|---|---|---|---|---|
| ಜಂಗಮಲಿಂಗ | ೧೨ | ೪೩೨ | ೫೧೮೪ | ೧೪-೨೪ |
| ಪ್ರಸಾದಲಿಂಗ | ೧೬ | ೪೩೨ | ೬೯೧೨ | ೧೯-೧೨ |
| ಮಹಾಲಿಂಗ | ೨ | ೪೩೨ | ೮೬೪ | ೨-೨೪ |
| | ೫೦ | | ೨೧೬೦೦ | ೬೦-೦ |

ವೇಳೆಯ ಕೋಷ್ಟಕ : ೬೦ ಪಾಸಿವಾಳ=೧ ಗಳಿಗೆ; $2\frac{1}{2}$ ಗಳಿಗೆ ೧ ತಾಸು.

೨೯೪. **ಲಿಂಗಗಳ ಜಪಸಂಖ್ಯೆಯ ಪ್ರಮಾಣಗಳು :** ಆಚಾರ ಲಿಂಗದ ಜಪಕ್ಕೆ ೩೦೮ರಿಂದ ೧೬ ವೇಳೆ ಜಪಿಸುವುದು. ಗುರುಲಿಂಗದ ಜಪಕ್ಕೆ ೩೦೮ರಿಂದ ೨೪ ವೇಳೆ ಜಪಿಸುವುದು. ಶಿವಲಿಂಗದ ಜಪಕ್ಕೆ, ೩೦೮ರಿಂದ ೪೦ ವೇಳೆ ಜಪಿಸುವುದು. ಜಂಗಮಲಿಂಗದ ಜಪಕ್ಕೆ ೩೦೮ರಿಂದ ೪೮ ವೇಳೆ ಜಪಿಸು ವುದು. ಪ್ರಸಾದಲಿಂಗದ ಜಪಕ್ಕೆ ೩೦೮ರಿಂದ ೬೪ ವೇಳೆ ಜಪಿಸುವುದು. ಮಹಾ ಲಿಂಗದ ಜಪಕ್ಕೆ ೩೦೮ರಿಂದ ೮ವೇಳೆ ಜಪಿಸುವುದು. ಅಂದರೆ ಎಲ್ಲಕ್ಕೂ ಕಡಿಮೆ ೨೦೦ ಜಪಗಳು ಆಗುತ್ತಿದ್ದು ಎಲ್ಲಕ್ಕು ಹೆಚ್ಚು ಜಪಗಳು ೨೧೬೦೦ ಆಗು ವವು. ಎಲ್ಲಕ್ಕೂ ಕಡಿಮೆ ಎಂದರೆ ೨೦೦ ಜಪಗಳಿಗೆ ಈಗಿನ ಲೆಕ್ಕದ ಪ್ರಕಾರ $13\frac{1}{3}$ ಮಿನಿಟುಗಳು ಹತ್ತುತ್ತವೆ.

೨೯೫. **ಮಿಶ್ರಷಟ್‌ಸ್ಥಲ ಜಪಗಳು (೩೬ ಅಂಗಲಿಂಗ ಸ್ಥಳಗಳ ಜಪಗಳು ) :** ಪ್ರತಿಯೊಂದು ಲಿಂಗದಲ್ಲಿ ಆರಾರು ಲಿಂಗಗಳಿವೆಯಷ್ಟೇ. ಒಂದು ಲಿಂಗದಲ್ಲಿಯ ಜಪಗಳನ್ನು ಈ ಆರರಲ್ಲಿ ಸಮನಾಗಿ ಹಂಚಿ ಹಾಕತ ಕ್ಕದ್ದು. ಹೀಗೆ ಹಂಚಿಹಾಕಿದಲ್ಲಿ ಆಯಾ ಲಿಂಗಗಳಿಗೆ ಆಗುವ ಜಪಸಂಖ್ಯೆ ಕೆಳಗೆ ಕಾಣಿಸಿದಂತೆ ಆಗುವುದು.

| ಲಿಂಗಗಳು | ಒಟ್ಟು ಜ. ಸಂಖ್ಯೆ | ಮಿಶ್ರ ಲಿಂಗಗಳ | ಸಂಖ್ಯೆ | ಪ್ರತಿ ಲಿಂಗಕ್ಕೆ ಜ. ಸಂಖ್ಯೆ | ಜಪಕ್ಕೆ ಹತ್ತುವ ವೇಳೆ ಪಳಗಳು | ಪಳಕ್ಕೆ ಜಪಗಳು |
|---|---|---|---|---|---|---|
| ಆಚಾರಲಿಂಗ | ೧೭೨೮ | ಆಚಾರಲಿಂಗ ಮಿಶ್ರ | ೬ | ೨೮೮ | ೪೮ | ೬ |
| ಗುರುಲಿಂಗ | ೨೫೯೨ | ಗುರುಲಿಂಗ ಮಿಶ್ರ | ೬ | ೪೩೨ | ೭೨ | ೬ |
| ಶಿವಲಿಂಗ | ೪೩೨೦ | ಶಿವಲಿಂಗ ಮಿಶ್ರ | ೬ | ೭೨೦ | ೧೨೦ | ೬ |
| ಜಂಗಮಲಿಂಗ | ೫೧೮೪ | ಜಂಗಮಲಿಂಗ ಮಿಶ್ರ | ೬ | ೮೬೪ | ೧೪೪ | ೬ |
| ಪ್ರಸಾದಲಿಂಗ | ೬೯೧೨ | ಪ್ರಸಾದಲಿಂಗ ಮಿಶ್ರ | ೬ | ೧೧೫೨ | ೧೯೨ | ೬ |
| ಮಹಾಲಿಂಗ | ೮೬೪ | ಮಹಾಲಿಂಗ | ೬ | ೧೪೪ | ೨೪ | ೬ |
| | | ಮಿಶ್ರ | ೩೬ | | | |



ಈ ಪ್ರಕಾರ ೩೬ ಸ್ಥಳಗಳಿಗೆ ಸಂಬಂಧಿಸಿ ಜಪಗಳನ್ನು ಮಾಡುವುದು.

೨೯೬. **ಅಷ್ಟದಳಕ್ಕೆ ಜಪ ವಿವರ :** ಹೃದಯದಲ್ಲಿ ಅಷ್ಟದಳ ಕಮಲವಿದೆ. ಅಲ್ಲಿ ಪ್ರಾಣಲಿಂಗವು ನೆಲೆಗೊಂಡಿದೆ. ದಳಗಳಿಗನುಸರಿಸಿ ಪ್ರಾಣದ ಗುಣಗಳು ಉಂಟಾಗುತ್ತವೆ. ಅವುಗಳ ಒಲವುಗಳನ್ನು ಲಿಂಗಜಪದಿಂದ ಸರಿ ಪಡಿಸುವುದು.

| | | | | | | |
|---|---|---|---|---|---|---|
| (೧) | ಪೃಥ್ವೀ | ತತ್ವದ | ಪೂರ್ವ | ದಳಕ್ಕೆ | ಜಪ | ೫೦೦೦ |
| (೨) | ಅಪ್ಪು | ,, | ವರುಣ | ,, | ,, | ೪೦೦೦ |
| (೩) | ಅಗ್ನಿ | ,, | ಅಗ್ನಿ | ,, | ,, | ೩೦೦೦ |
| (೪) | ವಾಯು | ,, | ವಾಯುವ್ಯ | ,, | ,, | ೨೦೦೦ |
| (೫) | ಆಕಾಶ | ,, | ಈಶಾನ್ಯ | ,, | ,, | ೧೦೦೦ |
| (೬) | ಸೂರ್ಯ | ,, | ಯಮ | ,, | ,, | ೨೪೦೦ |
| (೭) | ಚಂದ್ರ | ,, | ನೈಋತ್ಯ | ,, | ,, | ೩೨೦೦ |
| (೮) | ಆತ್ಮ | ,, | ಕುಬೇರ | ,, | ,, | ೧೦೦೦ |
| | | | | | | ೨೧೬೦೦ |

೨೯೭. **ಷಟ್‌ಸ್ಥಲಗಳಿಗೆ ೧೦೧ ಸ್ಥಲಗಳ ಸಂಬಂಧ :** ಜಪಗಳ ಮೂಲಕ ಈ ಸಂಬಂಧವು ದೃಢಪಡುತ್ತದೆ. ಭಕ್ತಸ್ಥಳ ೧೫ ಆಚಾರಲಿಂಗ ಸ್ಥಳ ೯ ಇವು ಇಷ್ಟಲಿಂಗದ ವೃತ್ತದಲ್ಲಿ ಸಂಬಂಧವು. ಮಹೇಶ್ವರಸ್ಥಳ ೯

ಗುರುಲಿಂಗಸ್ಥಳ ೯ ಇವು ಇಷ್ಟಲಿಂಗದ ಕಟಿಯಲ್ಲಿ ಸಂಬಂಧವು. ಪ್ರಸಾದಿಸ್ಥಲ ೭ ಶಿವಲಿಂಗಸ್ಥಲ ೯ ಇವು ಇಷ್ಟಲಿಂಗದ ವರ್ತುಳದಲ್ಲಿ ಸಂಬಂಧವು. ಪ್ರಾಣಲಿಂಗಿಸ್ಥಲ ೫ ಜಂಗಮಲಿಂಗಸ್ಥಲ ೧೨ ಇದ್ದು ಇವು ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವು. ಶರಣಸ್ಥಲ ೪, ಪ್ರಸಾದ ಲಿಂಗಸ್ಥಲ ೯ ಇದ್ದು ಇವು ಲಿಂಗದ ನಾಳದಲ್ಲಿ ಸಂಬಂಧವು. ಐಕ್ಯಸ್ಥಲ ೪ ಮಹಾಲಿಂಗಸ್ಥಲ ೯ ಇವು ಇಷ್ಟಲಿಂಗದ ಗೋಳಕದಲ್ಲಿ ಸಂಬಂಧವು.

ಹೀಗೆ ಅಂಗಸ್ಥಲಗಳು ೪೪, ಲಿಂಗಸ್ಥಲಗಳು ೫೭ ಅಂತು ೧೦೧ ಸ್ಥಲಗಳು ಇವೆ. ಇವುಗಳನ್ನು ಮೇಲೆ ಹೇಳಿದಂತೆ ಇಷ್ಟಲಿಂಗದ ಷಡ್ವಿಧ ಸ್ಥಾನಗಳಲ್ಲಿ ಸಂಬಂಧ ಮಾಡಿಕೊಂಡು ಭಕ್ತಿಜ್ಞಾನವೈರಾಗ್ಯದಿಂದಾಚರಿಸುತ್ತ ಜಪಗಳ ಮೂಲಕ ಲಿಂಗಸಂಬಂಧ ಮಾಡಿಕೊಂಡಲ್ಲಿ ಲಿಂಗವು ತನ್ನಲ್ಲಿ ಪ್ರಕಟವಾಗುತ್ತದೆ. ಜಪಗಳ ಕಾರ್ಯವು ಇದೇ ಇರುತ್ತದೆ.

ಟೀಪು : ಮೇಲ್ಕಂಡ ವಿವರಣೆಗಳಲ್ಲಿ ಮಂತ್ರಗಳ ಜಪದಲ್ಲಿ ಒಂದು ವ್ಯವಸ್ಥೆ ಇದ್ದದ್ದು ವಾಚಕರಿಗೆ ಕಂಡುಬರದೆ ಇರಲಾರದು. ನ, ಮ, ಶಿ, ವಾ, ಯ, ಓಂ ಇವು ಕ್ರಮವಾಗಿ ಸ್ಥೂಲದಿಂದ ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ ಹೋಗುವುದರಿಂದ ಇವು ಕ್ರಮವಾಗಿ ಆಚಾರಲಿಂಗ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಿಗೆ ಸಂಬಂಧಿಸುತ್ತವೆ. ಈ ಆರು ಅನುಕ್ರಮವಾಗಿ ಇಷ್ಟ, ಪ್ರಾಣ, ಭಾವಲಿಂಗಗಳಿಂದ ಎರಡೆರಡರಂತೆ ಉಂಟಾಗಿವೆ. ಇವು ಮೂರು ಅ ಉ ಮ ಪ್ರಣವಗಳಿಂದಾಗಿವೆ. ಈ ತ್ರಿವಿಧಗಳು ಸೂಕ್ಷ್ಮವಾದವು. ಅವು ಇಷ್ಟ ಪ್ರಾಣ ಭಾವಲಿಂಗಗಳನ್ನು ಸೂಚಿಸುತ್ತವೆ. ಮತ್ತು ಈ ತ್ರಿವಿಧ ಲಿಂಗಗಳ ತರುವಾಯ ಶೂನ್ಯಲಿಂಗಗಳು ಬರುತ್ತವೆ. ಇವು ಬ, ಸ, ವ ಪ್ರಣವಗಳಿಂದ ಸೂಚಿತವಾಗುತ್ತವೆ. ಈ ತತ್ವವನ್ನನುಸರಿಸಿ ಎಲ್ಲ ಜಪಗಳ ರಚನೆ ಇರುತ್ತದೆ. ಈ ಪ್ರಣವಗಳನ್ನು ಆಯಾ ಲಿಂಗಗಳಿಗೆ ಸಂಬಂಧಿಸುವಲ್ಲಿ ಹ್ರಾಂ, ಹ್ರೀಂ ಹ್ರೂಂ, ಹ್ರೈಂ, ಹ್ರೌಂ, ಹ್ರಃ ಎಂಬ ಷಟ್ ಪ್ರಸಾದ ಮಂತ್ರವು ಅಥವಾ ಕೀಲಕಮಂತ್ರವು ಉಪಯೋಗಿಸಲ್ಪಡುತ್ತದೆ. ಈ ತತ್ವಗಳನ್ನು ಎಲ್ಲ ಮಂತ್ರಗಳಲ್ಲಿಯೂ ಕಾಣಬಹುದು. ಒಮ್ಮೊಮ್ಮೆ ಈ ಮಂತ್ರಾಕ್ಷರಗಳನ್ನು ಏಕಕಾಲಕ್ಕೆ ಗೋಚರಕ್ಕೆ ತಂದುಕೊಂಡು ಯಾವ ವಿಶಿಷ್ಟಲಿಂಗವನ್ನು ನಾವು ಉದ್ದೇಶಿಸಿಕೊಂ



ಡಿರುತ್ತೇವೆಯೋ ಅದನ್ನಷ್ಟೇ ಕಡೆಗೆ ಅಂದುಬಿಡುವ ಪದ್ಧತಿಯೂ ಉಂಟು. (ಸಂಖ್ಯೆ ೨೫೫-೨ನೇ ವಿಧ ನೋಡಿರಿ.) ಆದರೆ ಇದರಿಂದ ಮೂಲತತ್ವಕ್ಕೆ ಯಾವದೂ ವ್ಯತ್ಯಯ ಬರುವುದಿಲ್ಲ. ಜಪಗಳ ಸಂಖ್ಯೆಯು ಆಯಾ ಚಕ್ರಗಳ ದಳಗಳ ಮೇಲೆ ಅವಲಂಬಿಸಿರುತ್ತದೆ. ದಳಗಳಲ್ಲೆಲ್ಲ ರುದ್ರರೂ ಶಕ್ತಿಯರೂ ವಾಸಮಾಡುತ್ತಾರೆ. ಅವರ ಸಂಗದಿಂದ ಆಯಾ ಚಕ್ರಗಳಲ್ಲಿ ಕೆಲವೊಂದು ಲೈಂಗಿಕ ಶಕ್ತಿಯು ಉಂಟಾಗುತ್ತದೆ. ಈ ಶಕ್ತಿಯಲ್ಲಿಯೇ ಆಯಾ ಲಿಂಗಗಳು ನೆಲೆಗೊಂಡಿರುತ್ತವೆ. ಹೀಗೆ ಆಯಾ ಲಿಂಗಗಳು ನೆಲೆಗೊಳ್ಳಲು, ಆ ಲಿಂಗಗಳ ಅಧೀನದಲ್ಲಿಯೇ ಮನುಷ್ಯನ ಕಾರ್ಯಗಳು ಜರಗಹತ್ತುವವು. ಆಗ ಅವನಲ್ಲಿ ಒಂದು ಅಲೌಕಿಕ ಶಕ್ತಿಯು ಒಡಮೂಡುತ್ತದೆ. ಶಿವಶರಣರಲ್ಲಿ ಇಂಥ ಶಕ್ತಿಯು ಇರುತ್ತದೆ. ಆದರೆ ಅವರು ಅದನ್ನು ಆತ್ಮೋದ್ಧಾರಕ್ಕೆ ಮತ್ತು ಜನ ಸೇವೆಗೆ ಉಪಯೋಗ ಮಾಡತಕ್ಕದ್ದೇ ಹೊರ್ತು ಸ್ವಾರ್ಥಕ್ಕೆ ಅಥವಾ ದುಷ್ಟ ಕಾರ್ಯಗಳಿಗೆ ಉಪಯೋಗಿಸತಕ್ಕದ್ದಲ್ಲ. ಹೀಗೆ ಜಪಗಳು ಮನುಷ್ಯನ ಕ್ರಿಯೆಗಳಲ್ಲಿ, ನಡೆಯಲ್ಲಿ, ಕಾಯಕದಲ್ಲಿ, ಸಹಾಯಕವಾಗುತ್ತದೆ.

೨೯೮. **ಜಪದ ಕಟ್ಟಳೆ** : ಒಂದು ಉಶ್ವಾಸನಿಶ್ವಾಸಕ್ಕೆ ಒಂದು ಜಪವಿರುತ್ತದೆ. ಇಂಥ ಒಂಬತ್ತು ಉಶ್ವಾಸನಿಶ್ವಾಸಗಳಾದಲ್ಲಿ ಚಿಟ್ಟೆ ಎಂಬ ಹೆಸರಿದೆ. ತಾಸಿಗೆ ೯೦೦ ಜಪಗಳಾಗತಕ್ಕದ್ದು. ಅಂದರೆ ಒಂದು ಮಿನಿಟಿಗೆ ೧೫ ಜಪಗಳ ಪ್ರಮಾಣವಿರುತ್ತದೆ. ತಾಸಿಗೆ ೯೦೦ ಜಪದಂತೆ ೨೪ ತಾಸಿಗೆ ೨೧೬೦೦ ಜಪಗಳಾಗುತ್ತವೆ. ಇದು ಜಪದ ಕಟ್ಟಳೆ.

೨೯೯. **ಮಿಶ್ರಾರ್ಪಣವು** : ಅಂತರಂಗ ಬಹಿರಂಗದಲ್ಲೆಲ್ಲ ಲಿಂಗ ದೊಡಗೂಡಿರುವುದೇ ಮಿಶ್ರಾರ್ಪಣವು. ಅಷ್ಟಾವರಣಗಳನ್ನು ತಿಳಿದವರಿಗೆ ಮಾತ್ರ ಇದು ಸಾಧ್ಯವು. ಇದರಲ್ಲಿ ಕಾಯಾರ್ಪಣ, ಕರುಣಾರ್ಪಣ ಭಾವಾರ್ಪಣವೆಂದು ಮೂರು ವಿಭಾಗಗಳಿವೆ. ಕಾಯಾರ್ಪಣವು ಹಿಂದೆ ೧೬೦ (೧) ಇದರಲ್ಲಿ, ಕರಣಾರ್ಪಣವು ೧೬೦ (೨) ಇದರಲ್ಲಿ, ಭಾವಾರ್ಪಣವು ೧೬೦ (೩) ಇದರಲ್ಲಿ, ಹೇಳಲ್ಪಟ್ಟಿವೆ. ಕರಣಾರ್ಪಣದಲ್ಲಿ ಆಚಾರಲಿಂಗ ಮಿಶ್ರ ೬, ಗುರುಲಿಂಗ ಮಿಶ್ರ ೬, ಶಿವಲಿಂಗ ಮಿಶ್ರ ೬, ಜಂಗಮಲಿಂಗ ಮಿಶ್ರ ೬, ಪ್ರಸಾದಲಿಂಗ ಮಿಶ್ರ ೬, ಮಹಾಲಿಂಗ ಮಿಶ್ರ ೬, ಹೀಗೆ ೩೬

ವಿಭೇದಗಳಿವೆ. ಅವುಗಳ ವಿವರಗಳು ೧೬೦ (೨) ಇದರಲ್ಲಿ ಹೇಳಲ್ಪಟ್ಟವೆ. ಈ ಪ್ರಕಾರ ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳೊಳಗೆ ಷಡ್ವಿಧಲಿಂಗ ಮಿಶ್ರಾರ್ಪಣವು ಪಸರಿಸಿ ಆ ೩೬ ಮಿಶ್ರಾರ್ಪಣದೊಳಗೆ ೨೧೬ ಮಿಶ್ರಾರ್ಪಣವು ಪಸರಿಸಿ ಲಿಂಗ ಪರಿಪೂರ್ಣನಾಗಿ ಪಿಂಡಾಂಡದಲ್ಲಿ ಸದಾ ಸನ್ನಿಹಿತನಾಗಿರುತ್ತಾನೆ. ಈ ಷಡ್ವಿಧ ಲಿಂಗಗಳು ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ, ಸದ್ಭಾವ, ಎಂಬ ಹಸ್ತಗಳು ತನ್ನಲ್ಲಿ ಸ್ವಸ್ಥವಾಗಿ ನೆಲೆಗೊಂಡಲ್ಲದೆ ಸಾಧ್ಯವಾಗವು. ಷಡ್ವಿಧ ಲಿಂಗವು ಸಾಧ್ಯವಾದಲ್ಲದೆ ಷಡ್ವಿಧಲಿಂಗಸಂಯೋಗವಾಗದು. ಷಡ್ವಿಧಲಿಂಗ ಸಂಯೋಗವಾದಲ್ಲದೆ ಷಡ್ವಿಧಾರ್ಪಣದ ಮಿಶ್ರದೊಳಗಣ ಮಿಶ್ರಾರ್ಪಣದ ಛಾಯೆ ಕಾಣಿಸದು. ಆದ್ದರಿಂದ ಹಸ್ತಗಳು ತನ್ನಲ್ಲಿ ನೆಲೆಗೊಳ್ಳುವ ರೀತಿಗಳನ್ನು ಅರಿಯಬೇಕು. ಅದು ಹೇಗೆಂದರೆ—

೩೦೦. **ಸುಚಿತ್ತದ ನೆಲೆ :** ಕ್ರಿಯಾಶಕ್ತಿಯಮಥನದಲ್ಲಿ ಪ್ರಾಣವಾಯುವನ್ನು ನಿಲಿಸಿ ಆಧಾರ ಚಕ್ರದ ಕೆಂಪುವರ್ಣದ ನಾಲ್ಕು ಅಕ್ಷರದ ಅಧಿ ದೈವವಾದ ಬ್ರಹ್ಮನ ಜಾಗ್ರತಾವಸ್ಥೆಯನ್ನು ನಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ಈ ಷಡ್ವಿಧ ವಿಚಾರವಿಡಿದು ಸದ್ಭಕ್ತಿಯಿಂದ ಒಂದನೇ ತತ್ವದಾದಿಯ ಪಶ್ಚಿಮ ದಿಕ್ಕಿನ ಸದ್ಯೋಜಾತ ಮುಖವನ್ನರಿತು ಪೃಥ್ವಿಯ ಕಠಿಣವನ್ನು ಕಿಂಕುರ್ವಾಣ ಭಕ್ತಿಯಿಂದ ತಿಳಿದು ತನುಗುಣನಾಸ್ತಿಯಾಗಬೇಕು. ಹೀಗೆ ಭಕ್ತಸ್ಥಲವನಂಗಂಗೊಳ್ಳಬೇಕು. ಇದು ಸುಚಿತ್ತದ ನೆಲೆಯು. ಹೀಗೆ ಆಚಾರಲಿಂಗದ ಮಿಶ್ರವನ್ನರಿಯಬೇಕು.

೩೦೧. **ಸುಬುದ್ಧಿಯ ನೆಲೆ :** ಜ್ಞಾನ ಶಕ್ತಿಯ ಮಥನದಿಂದ ಅಪಾನವಾಯುವ ನಿಲಿಸಿ ಸ್ವಾಧಿಷ್ಠಾನ ಚಕ್ರದ ನೀಲವರ್ಣದ ಷಡ್ದಳದ ಆರಕ್ಷರದ ಅಧಿದೈವವಾದ ವಿಷ್ಣು ಆತನ ಸ್ವಪ್ನಾವಸ್ಥೆಯನ್ನು ಮಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ನೈಷ್ಠಿಕಾಭಕ್ತಿಯಿಂದ ಎರಡನೆಯ ತತ್ವದಾದಿಯ ಉತ್ತರ ದಿಕ್ಕಿನ ವಾಮದೇವಮುಖವನರಿತು ಅಪ್ಪುವಿನ ಮೃದುವನು ದೃಢವ್ರತದಿಂದ ತಿಳಿದು ಸಂಸಾರನಾಸ್ತಿಯಾಗಬೇಕು. ಹೀಗೆ ಮಹೇಶ್ವರ ಸ್ಥಲವನಂಗಂಗೊಳ್ಳಬೇಕು. ಇದು ಸುಬುದ್ಧಿಯ ನೆಲೆಯು. ಹೀಗೆ ಗುರುಲಿಂಗದ ಮಿಶ್ರವನ್ನರಿಯಬೇಕು.



೩೦೨. **ನಿರಹಂಕಾರದ ನೆಲೆ :** ಇಚ್ಛಾ ಶಕ್ತಿಯ ಮಥನದಿಂದ ವ್ಯಾನವಾಯುವ ನಿಲಿಸಿ ಮಣಿಪೂರಕ ಚಕ್ರದ ಕುಂಕುಮ ವರ್ಣದ ದಶದಳದ ಅಧಿದೈವ ರುದ್ರ ಆತನ ಸುಷುಪ್ತಾವಸ್ಥೆಯನ್ನು ಶಿಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿಡಿದು ಅವಧಾನ ಭಕ್ತಿಯಿಂದ ಮೂರನೆಯ ತತ್ವದಾದಿಯಾದ ದಕ್ಷಿಣ ದಿಕ್ಕಿನ ಅಘೋರ ಮುಖವನರಿದು ಅಗ್ನಿಯ ಉಷ್ಣವನ್ನು ಶಿವಯೋಗದಿಂದ ಕೆಡಿಸಿ ಕಾಮ್ಯನಾಸ್ತಿಯಾಗಬೇಕು. ಹೀಗೆ ಪ್ರಸಾದಿಸ್ಥಲವನಂಗಂಗೊಳ್ಳಬೇಕು. ಇದು ನಿರಹಂಕಾರದ ನೆಲೆಯು. ಈ ಪ್ರಕಾರ ಶಿವಲಿಂಗದ ಮಿಶ್ರವನ್ನರಿಯಬೇಕು.

೩೦೩. **ಸುಮನದ ನೆಲೆ :** ಆದಿಶಕ್ತಿಯ ಮಥನದಿಂದ ಉದಾನವಾಯುವ ನಿಲಿಸಿ ಅನಾಹತ ಚಕ್ರದ ಪೀತವರ್ಣದ ದ್ವಾದಶ ದಳದ ದ್ವಾದಶಾಕ್ಷರದ ಅಧಿದೈವ ಈಶ್ವರನ ತೂರ್ಯಾವಸ್ಥೆಯನ್ನು ವಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ಈ ಷಡ್ವಿಧ ವಿಚಾರವಿಡಿದು ಅನುಭಾವ ಭಕ್ತಿಯಿಂದ ನಾಲ್ಕನೆಯ ತತ್ವದಾದಿಯಾದ ಪೂರ್ವ ದಿಕ್ಕಿನ ತತ್ಪುರುಷ ಮುಖವನರಿದು ವಾಯುವಿನ ಚಲನೆಯನು ಪರಿಪೂರ್ಣದಿಂದ ಕೆಡಿಸಿ ಗಮನನಾಸ್ತಿಯಾಗಬೇಕು. ಹೀಗೆ ಪ್ರಾಣಲಿಂಗ ಸ್ಥಲವನಂಗೊಳ್ಳಬೇಕು. ಇದು ಸುಮನದ ನೆಲೆಯು. ಹೀಗೆ ಜಂಗಮಲಿಂಗದ ಮಿಶ್ರವನ್ನರಿಯಬೇಕು.

೩೦೪. **ಸುಜ್ಞಾನದ ನೆಲೆ :** ಪರಾಶಕ್ತಿಯ ಮಥನದಿಂದ ಸಮಾನವಾಯುವ ನಿಲಿಸಿ ವಿಶುದ್ಧಿ ಚಕ್ರದ ಶ್ವೇತವರ್ಣದ ಷೋಡಶದಳದ ಷೋಡಶಾಕ್ಷರದ ಅಧಿದೈವ ಸದಾಶಿವನ ಅತೀತಾವಸ್ಥೆಯನ್ನು ಯಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿಡಿದು ಆನಂದ ಭಕ್ತಿಯಿಂದ ಐದನೆಯ ತತ್ವದಾದಿಯ ಊರ್ಧ್ವದಿಕ್ಕಿನ ಈಶಾನ್ಯವನರಿದು ಆಕಾಶದ ಭ್ರಮೆಯನು ಪರಿಣಾಮದಿಂದ ತಿಳಿದು ಕರ್ಮನಾಸ್ತಿಯಾಗಬೇಕು. ಹೀಗೆ ಶರಣಸ್ಥಲವನಂಗಂಗೊಳ್ಳುವುದು ಸುಜ್ಞಾನದ ನೆಲೆಯು. ಈ ಪ್ರಕಾರ ಪ್ರಸಾದಲಿಂಗದ ಮಿಶ್ರವನ್ನರಿಯಬೇಕು.

೩೦೫. **ಸದ್ಭಾವದ ನೆಲೆ :** ಚಿತ್ ಶಕ್ತಿಯ ಮಥನದಿಂದ ನಾಗ ಕೂರ್ಮ ಕ್ರಕರ ದೇವದತ್ತ ಧನಂಜಯವೆಂಬ ಪಂಚವಾಯುಗಳನ್ನು ನಿಲಿಸಿ ಆಜ್ಞಾಚಕ್ರದ ಮಾಣಿಕ್ಯವರ್ಣದ ದ್ವಿದಳದ ಹಂ ಕ್ಷಂ ಎಂಬೆರಡು ಅಕ್ಷರದ

ಅಧಿದೈವ ಮಹಾಗುರುವಿನ ನಿರಾವಸ್ಥೆಯನ್ನು ಓಂಕಾರದಿಂದ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಶಬ್ದಿಸ ಬೇಕಾಗಿರುವುದು. ಸಮರಸ ಶಕ್ತಿಯಿಂದ ಅರನೆಯ ತತ್ವದಾದಿಯ ಗಂಭೀರ ದೀಕ್ಷಿಸ ಮಹಾತತ್ವದ ಮೂಲವನರಿದು ಆತ್ಮನ ಅಹಂ ಮಮತೆಯನು ಭಸ್ಮೀಕರಣದಿಂದ ತಿಳಿದು ಮೋಕ್ಷಾರ್ಥಿನಾಸ್ತಿಯಾಗಬೇಕು. ಇದು ಐಕ್ಯ ಸ್ಥಲವನರಿಗೊಳ್ಳುವದು. ಇದು ಸದ್ಭಾವದ ನೆಲೆಯು. ಹೀಗೆ ಮಹಾಲಿಂಗದ ಮಿಶ್ರವನ್ನರಿಯಬೇಕು.

೩೦೭. **ಪಂಚೀಕರಣ, ಮಿಶ್ರಾರ್ಪಣ, ಷಟ್‌ಸ್ಥಲಾಚರಣೆ, ಅಷ್ಟಾವರಣ, ಲಿಂಗಾಂಗಸಾಮರಸ್ಯ ಇವುಗಳ ಸಂಬಂಧವು:** ಪಂಚೀಕರಣದ ತತ್ವಕ್ಕನುಸರಿಸಿ ಮಿಶ್ರಾರ್ಪಣವಿರುತ್ತದೆ. ಮಿಶ್ರಾರ್ಪಣವು ಷಟ್‌ಸ್ಥಲಾಚರಣೆಗೆ ಸಂಬಂಧಿಸಿರುತ್ತದೆ. ಈ ಷಟ್‌ಸ್ಥಲಗಳ ಸಂಬಂಧವು ಹಿಂದೆ ಸಂಖ್ಯೆ ೩೦೦ರಿಂದ ಸಂಖ್ಯೆ ೩೦೫ ಇವುಗಳಲ್ಲಿ ಹೇಳಲ್ಪಟ್ಟಿದೆ. ಷಟ್‌ಸ್ಥಲಾಚರಣೆಯು ಅಷ್ಟಾವರಣಗಳಲ್ಲಿ ರೂಪುಗೊಳ್ಳುತ್ತದೆ. ಈ ಅಷ್ಟಾವರಣಗಳ ಆಚರಣೆಯ ಮೂಲಕ ಇಷ್ಟ ಪ್ರಾಣ ಭಾವಲಿಂಗಗಳು ತನ್ನಲ್ಲಿ ಕಳೆವಡುತ್ತವೆ. ತನ್ನಲ್ಲಿ ಅವು ಅಳವಟ್ಟಾಗಲೇ ಲಿಂಗಾಂಗ ಸಾಮರಸ್ಯವು ಒದಗುತ್ತದೆ. ಹೀಗೆ ಇವುಗಳ ಪರಸ್ಪರ ಸಂಬಂಧವಿದೆ. ಆದ್ದರಿಂದ ಪಂಚೀಕರಣವನ್ನು ಮೊದಲು ಅರಿಯುವುದು ಅವಶ್ಯವು.

೩೦೮. **ಪಂಚೀಕರಣದ ಜ್ಞಾನ:** ಪಂಚಮಹಾಭೂತಗಳಿಂದ ಶರೀರದಲ್ಲಿ ೨೫ ತತ್ವಗಳು ಉಂಟಾಗುತ್ತವೆ. ಈ ತತ್ವಗಳ ಮೂಲಕವೇ ಶರೀರದ ಕ್ರಿಯೆಗಳು ನಡೆಯುತ್ತವೆ. ಶರೀರದ ಕ್ರಿಯೆಗಳು ಲಿಂಗಕ್ರಿಯೆಗಳಾಗಬೇಕು. ಇದು ಮಿಶ್ರಾರ್ಪಣದ ಮೂಲಕ ಒದಗುತ್ತದೆ. ಈ ಲಿಂಗಕ್ರಿಯೆಗಳಿಂದ ಲಿಂಗಾಂಗಸಾಮರಸ್ಯವನ್ನು ಮುಂದೆ ಹೊಂದಬೇಕು. ೨೫ ತತ್ವಗಳ ಸಂಬಂಧದ ಜ್ಞಾನವೇ ಪಂಚೀಕರಣದ ಜ್ಞಾನವು. ಇದರ ಜ್ಞಾನದಿಂದ ಲಿಂಗಾಂಗಸಾಮರಸ್ಯದ ರೀತಿಯು ತಿಳಿಯುತ್ತದೆ.

**ಟೀಪು:** ಹಿಂದೆ ಸಂಖ್ಯೆ ೩೦೦ರಿಂದ ೩೦೫ರ ವರೆಗೆ ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ ಇವುಗಳ ನೆಲೆಗಳು ಹೇಳಲ್ಪಟ್ಟಿವೆ. ಷಟ್‌ಸ್ಥಲಗಳನ್ನು ಒಳಗೊಳ್ಳುವ ರೀತಿಗಳು ಇವುಗಳಲ್ಲಿ ವಿವರಿಸಲ್ಪಟ್ಟಿವೆ. ಮನುಷ್ಯನ ಕ್ರಿಯೆಗಳು ಹೇಗೆ ಉಂಟಾಗುತ್ತ



ವೆಂಬುದನ್ನು ಅರಿತಲ್ಲಿ ಇವುಗಳ ಜ್ಞಾನವಾಗುವುದು. ಇದು ಮಿಶ್ರಾರ್ಪಣಕ್ಕೂ ಅವಶ್ಯವಾದದ್ದು. ಈ ವಿವರವು ಹೇಗೆಂದರೆ—

ವಾಯುಗಳ ಮೂಲಕ ಶರೀರದ ಕ್ರಿಯೆಗಳು ನಡಿಯುತ್ತವಷ್ಟೇ. ಇವುಗಳ ಮೂಲಕವೇ ಚಾಲನೆಗಳು ಆಯಾ ಅವಯವಗಳಿಗೆ ಮುಟ್ಟುತ್ತವೆ. ಈ ಚಾಲನೆಗಳು ಮನುಷ್ಯನಲ್ಲಿ ಸರಿಯಾಗಿ ನಡೆಯುವುದಕ್ಕೋಸ್ಕರ ಸರಿಯಾದ ಶಕ್ತಿಗಳು ಈ ವಾಯುಗಳ ದ್ವಾರಾ ಸಂಚರಿಸಬೇಕು. ಇದರಿಂದ ಆ ವಾಯುಗಳು ಹರಿದಾಡುವ ತಪ್ಪು ದಾರಿಗಳು ಇಲ್ಲದಾಗುತ್ತವೆ. ಕ್ರಿಯಾಶಕ್ತಿಯ ಮಥನ ಅಂದರೆ ಹೊರಬೀಳುವಿಕೆಯಿಂದಪ್ರಾಣವಾಯುವೂ, ಜ್ಞಾನಶಕ್ತಿಯ ಮಥನದಿಂದ ಅಪಾನವಾಯುವೂ, ಇಚ್ಛಾಶಕ್ತಿಯ ಮಥನದಿಂದ ವ್ಯಾನವಾಯುವೂ, ಆದಿಶಕ್ತಿಯ ಮಥನದಿಂದ ಉದಾನವಾಯುವೂ, ಪರಾಶಕ್ತಿಯ ಮಥನದಿಂದ ಸಮಾನವಾಯುವೂ, ಚಿತ್‌ಶಕ್ತಿಯ ಮಥನದಿಂದ ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯ ವಾಯುಗಳೂ ಸರಿಪಡುವವು.

ಹೀಗೆ ಇವುಗಳನ್ನು ಸರಿಪಡಿಸಬೇಕಾದರೆ ನಕಾರಾದಿ ಮಂತ್ರಗಳ ಮೂಲಕವೇ ಶಕ್ಯವು. ಮಂತ್ರದಿಂದ ಜಾಗ್ರದಾದಿ ಅವಸ್ಥೆಗಳೂ ಕೂಡ ಪರಿಣಾಮಕ್ಕೆ ಬರುವವು. ಆಧಾರಚಕ್ರದಲ್ಲಿಯ ಬ್ರಹ್ಮನ ಜಾಗ್ರತಾವಸ್ಥೆಯನ್ನು ನಕಾರ ಬೀಜಾಕ್ಷರ ಮಂತ್ರದಿಂದಲೂ ಸ್ವಾಧಿಷ್ಠಾನ ಚಕ್ರದಲ್ಲಿಯ ವಿಷ್ಣುವಿನ ಸ್ವಪ್ನಾವಸ್ಥೆಯನ್ನು ಮಕಾರ ಬೀಜಾಕ್ಷರದಿಂದಲೂ ಮಣಿಪೂರಕ ಚಕ್ರದಲ್ಲಿಯ ರುದ್ರನ ಸುಷುಪ್ತಾವಸ್ಥೆಯನ್ನು ಶಿಕಾರ ಬೀಜಾಕ್ಷರದಿಂದಲೂ ಅನಾಹತ ಚಕ್ರದಲ್ಲಿಯ ಈಶ್ವರನ ತೂರ್ಯಾವಸ್ಥೆಯನ್ನು ವಕಾರ ಬೀಜಾಕ್ಷರದಿಂದಲೂ ವಿಶುದ್ಧಿ ಚಕ್ರದಲ್ಲಿರುವ ಸದಾಶಿವನ ಅತೀತಾವಸ್ಥೆಯನ್ನು ಯಕಾರ ಬೀಜಾಕ್ಷರದಿಂದಲೂ ಆಜ್ಞಾಚಕ್ರದಲ್ಲಿಯ ಮಹಾ ಗುರುವಿನ ನಿರಾವಸ್ಥೆಯನ್ನು ಓಂಕಾರ ಬೀಜಾಕ್ಷರದಿಂದಲೂ ತಿಳಿಯಬೇಕು. ಇದರಿಂದ ಆ ಅವಸ್ಥೆಗಳಲ್ಲಿಯ ಪ್ರಾಪಂಚಿಕಬಲವುಗಳು ನಷ್ಟವಾಗುವವು. ಆಗ ಅವುಗಳ ವ್ಯಾಪಾರಗಳು ಅವನ ಅಂಕೆಯಲ್ಲಿ ಉಳಿಯುವವು.

ಹೀಗೆ ಅವು ಉಳಿದಲ್ಲಿ ಸದ್ಭಕ್ತಿ, ನೈಷ್ಠಿಕಾ ಭಕ್ತಿ, ಅವಧಾನಭಕ್ತಿ, ಅನುಭಾವ ಭಕ್ತಿ, ಆನಂದ ಭಕ್ತಿ ಮತ್ತು ಸಮರಸಭಕ್ತಿಗಳು ನೆಲೆಗೊಳ್ಳುವವು. ಪೃಥ್ವಿ, ಅಪ್, ತೇಜ, ವಾಯು, ಆಕಾಶ, ಆತ್ಮ ಇವುಗಳ ಮೂಲಕ ಮನುಷ್ಯನಲ್ಲಿ ಅನುಕ್ರಮವಾಗಿ, ಉಂಟಾಗುವ ವ್ಯವಹಾರಿಕ ಗುಣಗಳು ಹೊರಟು ಹೋಗುವವು. ಅವು ಸಾಂಸಾರಿಕ ಒಲವುಗಳು, ಕಾಮ್ಯಗಳು, ನಾನಾ ಬಗೆಯ ಗಮನಾಗಮನಗಳು ಮತ್ತು ಕರ್ಮಗಳು ಮತ್ತು ಅಹಂ ಮಮತೆಗಳು ಇದ್ದು ಅವು ದೂರಾಗುತ್ತವೆ.

ಇವುಗಳನ್ನು ದೂರಮಾಡುವಲ್ಲಿ ಮನುಷ್ಯನು ಕಿಂಕುರ್ವಾಣತೆ, ದೃಢವ್ರತ, ಶಿವಯೋಗ ಇವುಗಳನ್ನು ಮೊದಲನೆಯ ಮೂರು ಸ್ಥಲಗಳಲ್ಲಿ ಉಪಯೋಗಿಸಬೇಕು. ಮತ್ತು ಪರಿಪೂರ್ಣತ್ವ, ಪರಿಣಾಮ, ಘನಪ್ರಕಾಶ, ಇವುಗಳ ಮೂಲಕ ಅನುಕ್ರಮವಾಗಿ ಕಡೆಯ ಮೂರು ಸ್ಥಲಗಳನ್ನು ಒಳಕೊಳ್ಳಬೇಕು.

ಹೀಗೆ ವರ್ತಿಸಿದಲ್ಲಿ ಭಕ್ತ, ಮಹೇಶ್ವರಾದಿ ಆರು ಸ್ಥಲಗಳು ಮನುಷ್ಯನಲ್ಲಿ ಅಳವಡುತ್ತವೆ. ಅವು ಹೀಗೆ ಅಳವಡಲು ಹಿಂದೆ ಸಂಖ್ಯೆ ೨೯೯ ಇದರಲ್ಲಿ ಹೇಳಿದಂತೆ ಆಯಾ ಲಿಂಗಗಳ ಮಿಶ್ರಗಳನ್ನು ತನ್ನಲ್ಲಿ ಉಂಟು ಮಾಡಿಕೊಳ್ಳುವ ಸಾಮರ್ಥ್ಯವು ಒದಗುತ್ತದೆ.

ಈ ರೀತಿಗಳನ್ನು ವೀರಶೈವರ ಪಂಚೀಕರಣದ ಜ್ಞಾನದಿಂದ ಅರಿಯುವುದು ಸುಲಭವು, ದೇಹದ ವ್ಯಾಪಾರಗಳನ್ನು ತಿಳಿಸುವುದೇ ಈ ಪಂಚೀಕರಣದ ಉದ್ದೇಶವಿರುತ್ತದೆ.

೩೦೮. **ಪಂಚವಿಂಶತಿ ತತ್ವದ ದೇಹವು** : ಆಕಾಶ ತತ್ವವು ಜ್ಞಾನ ಮೊದಲಾದ ಅಂತಃಕರಣ ಚತುಷ್ಟಯಗಳಲ್ಲಿರುತ್ತದೆ. ಈ ನಾಲ್ಕು ಮನ, ಬುದ್ಧಿ, ಚಿತ್ತ, ಅಹಂಕಾರಗಳಿವೆ. ವಾಯು ತತ್ವವು ಪಂಚಪ್ರಾಣವಾಯುಗಳಲ್ಲಿರುತ್ತದೆ. ಅವು ಸಮಾನ ವ್ಯಾನ ಉದಾನ ಅಪಾನ ಪ್ರಾಣವಾಯುಗಳಿರುತ್ತವೆ. ಅಗ್ನಿ ತತ್ವವು ಬುದ್ಧೀಂದ್ರಿಯಗಳಲ್ಲಿರುತ್ತದೆ. ಅವು ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣ ಇವುಗಳಿರುತ್ತವೆ. ಅಪ್ಪು ತತ್ವವು ಪಂಚ ವಿಷಯಗಳಲ್ಲಿರುತ್ತದೆ. ಅವು ಶಬ್ದ ಸ್ಪರ್ಶ ರೂಪ ರಸ ಗಂಧಗಳಿರುತ್ತವೆ. ಪೃಥ್ವೀ ತತ್ವವು ಕರ್ಮೇಂದ್ರಿಯಗಳಲ್ಲಿರುತ್ತವೆ. ಅವು ವಾಕ್ ಪಾಣಿ ಪಾದ



ಗುಹ್ಯ ವಾಯು ಇವುಗಳಿರುತ್ತವೆ. ( ಈ ತತ್ವಗಳ ವ್ಯಾಖ್ಯೆಗಳು ಹಿಂದೆ ಸಂಖ್ಯೆ ೪೫ರಿಂದ ೪೮ರಲ್ಲಿ ಹೇಳಲ್ಪಟ್ಟವೆ. )

೩೦೯. **ಜ್ಞಾನ ಮೊದಲ್ಗೊಂಡು ಅಂತಃಕರಣ ಚತುಷ್ಟಯಗಳ ಉತ್ಪತ್ತಿ** : ಆಕಾಶದ ಮೂಲತತ್ವವೇ ಜ್ಞಾನವು. ಈ ಆಕಾಶದೊಂದಂಶವು ವಾಯುವನ್ನು ಬೆರಿಸಲು ಮನಸ್ಸು, ಆಕಾಶದೊಂದಂಶವು ಅಗ್ನಿಯನ್ನು ಬೆರಿಸಲು ಬುದ್ಧಿಯು, ಆಕಾಶದೊಂದಂಶವು ಅಪ್ಪುವನ್ನು ಬೆರಿಸಲು ಚಿತ್ತು, ಆಕಾಶದೊಂದಂಶವು ಪೃಥ್ವಿಯನ್ನು ಬೆರಿಸಲು ಅಹಂಕಾರವು ಹುಟ್ಟುತ್ತವೆ.

೩೧೦. **ಪ್ರಾಣವಾಯುವುಗಳುತ್ಪತ್ತಿ** : ವಾಯುವಿನ ಒಂದಂಶವು ಆಕಾಶವನ್ನು ಬೆರಿಸಲು ಸಮಾನವಾಯುವು, ವಾಯುವಿನ ಮೂಲ ತತ್ವವೇ ಉದಾನವಾಯುವು, ವಾಯುವಿನೊಂದಂಶವು ಅಗ್ನಿಯನ್ನು ಬೆರಿಸಲು ವ್ಯಾನವಾಯುವು, ವಾಯುವಿನೊಂದಶವು ಅಪ್ಪುವನ್ನು ಬೆರಿಸಲು ಅಪಾನವಾಯುವು, ವಾಯುವಿನೊಂದಂಶವು ಪೃಥ್ವಿಯನ್ನು ಬೆರಿಸಲು ಪ್ರಾಣವಾಯುವು ಹುಟ್ಟುತ್ತವೆ.

೩೧೧. **ಬುದ್ಧೀಂದ್ರಿಯಗಳುತ್ಪತ್ತಿ**: ಅಗ್ನಿಯ ಒಂದಂಶವು ಆಕಾಶವನ್ನು ಬೆರಿಸಲು ಶ್ರೋತ್ರೇಂದ್ರಿಯವು, ಅಗ್ನಿಯ ಒಂದಂಶವು ವಾಯುವನ್ನು ಬೆರಿಸಲು ತ್ವಗಿಂದ್ರಿಯವು, ಅಗ್ನಿಯ ಮೂಲ ತತ್ವವೇ ನೇತ್ರೇಂದ್ರಿಯವು, ಅಗ್ನಿಯ ಒಂದಂಶವು ಅಪ್ಪುವನ್ನು ಬೆರಿಸಲು ಜಿಹ್ವೇಂದ್ರಿಯವು, ಅಗ್ನಿಯ ಒಂದಂಶವು ಪೃಥ್ವಿಯನ್ನು ಬೆರಿಸಲು ಘ್ರಾಣೇಂದ್ರಿಯವು ಹುಟ್ಟುತ್ತವೆ.

೩೧೨. **ಪಂಚವಿಷಯಗಳುತ್ಪತ್ತಿ** : ಅಪ್ಪುವಿನೊಂದಂಶವು ಆಕಾಶವನ್ನು ಬೆರಿಸಲು ಶಬ್ದ ವಿಷಯವು. ಅಪ್ಪುವಿನೊಂದಂಶವು ವಾಯುವನ್ನು ಬೆರಿಸಲು ಸ್ಪರ್ಶನ ವಿಷಯವು, ಅಪ್ಪುವಿನೊಂದಂಶವು ಅಗ್ನಿಯನ್ನು ಬೆರಿಸಲು ರೂಪು ವಿಷಯವು, ಅಪ್ಪುವಿನ ಮೂಲತತ್ವವೇ ರಸ ವಿಷಯವು, ಅಪ್ಪುವಿನೊಂದಂಶವು ಪೃಥ್ವಿಯನ್ನು ಬೆರಿಸಲು ಗಂಧ ವಿಷಯುವು ಹುಟ್ಟುತ್ತವೆ.

೩೧೩. **ಕರ್ಮೇಂದ್ರಿಯಗಳುತ್ಪತ್ತಿ** : ಪೃಥ್ವಿಯ ಒಂದಂಶವು ಆಕಾಶವನ್ನು ಬೆರಿಸಲು ವಾಗಿಂದ್ರಿಯವು, ಪೃಥ್ವಿಯ ಒಂದಂಶವು ವಾಯು

ವನ್ನು ಬೆರಿಸಲು ಪಾದೇಂದ್ರಿಯವು, ಪೃಥ್ವಿಯ ಒಂದಂಶವು ಅಗ್ನಿಯನ್ನು ಬೆರಿಸಲು ಪಾದೇಂದ್ರಿಯವು, ಪೃಥ್ವಿಯ ಒಂದಂಶವು ಅಪ್ಪುವನ್ನು ಬೆರಿಸಲು ಗುಹ್ಯೇಂದ್ರಿಯವು, ಪೃಥ್ವಿಯ ಮೂಲ ತತ್ವವೇ ಪಾಯುವಿಂದ್ರಿಯವು. ಹೀಗೆ ಇವು ಹುಟ್ಟುತ್ತವೆ

ಟೀಪು : ಆಯಾ ಭೂತಗಳ ಮೂಲಕ ಮೇಲೆ ಸಂಖ್ಯೆ ೩೦೮ ರಲ್ಲಿ ಹೇಳಿದಂತೆ ತತ್ವಗಳುಂಟಾಗುತ್ತವೆ. ಇವು ಆ ಭೂತಗಳು ಅವುಗಳಲ್ಲಿ ಹೆಚ್ಚಾಗಿ ವಾಸವಾಗಿರುವುದರಿಂದ ಅವು ಉಂಟಾಗುತ್ತವೆ. ಆದರೆ ಅವುಗಳ ಒಂದೊಂದಂಶದಲ್ಲಿ ಉಳಿದ ಭೂತಗಳು ಹೆಚ್ಚಾಗಿ ಬೆರೆದಲ್ಲಿ ಸಂಖ್ಯೆ ೩೦೯ ರಿಂದ ೩೧೩ ರ ವರೆಗೆ ಹೇಳಿದ ತತ್ವಗಳುಂಟಾಗುತ್ತವೆ. ಕೆಲವೊಂದು ಮಹಾಭೂತದ ಅಂಶವು ಮತ್ತೊಂದು ಮಹಾಭೂತದಲ್ಲಿ ಹೆಚ್ಚಾಗಿ ಬೆರೆಯಲು ಅವುಗಳಿಂದ ಉಂಟಾಗುವ ತತ್ವಗಳು ಕೆಳಗೆ ವಿವರವಾಗಿ ಹೇಳಲ್ಪಟ್ಟಿವೆ.

೩೧೪. **ಪಂಚವಿಂಶತಿ ತತ್ವಗಳು :** ಆಕಾಶ ತತ್ವವು ಉಳಿದ ತತ್ವಗಳಲ್ಲಿ ಹೆಚ್ಚಲು, ಜ್ಞಾನ, ಸಮಾನವಾಯು, ಶ್ರೋತ್ರ, ಶಬ್ದವಿಷಯ, ವಾಕ್ಕು ಇವುಗಳುಂಟಾಗುತ್ತವೆ. ವಾಯು ತತ್ವವು ಹೆಚ್ಚಲು ಮನ, ವ್ಯಾನ, ತ್ವಕ್ಕು, ಸ್ಪರ್ಶನ, ಪಾಣಿ ಇವುಗಳುಂಟಾಗುತ್ತವೆ. ತೇಜ ಅಥವಾ ಅಗ್ನಿ ತತ್ವವು ಹೆಚ್ಚಲು ಬುದ್ಧಿ, ಉದಾನ, ನೇತ್ರ, ರೂಪು, ಪಾದ ಇವುಗಳುಂಟಾಗುತ್ತವೆ. ಅಪ್ಪು ತತ್ವ ಹೆಚ್ಚಲು ಚಿತ್, ಅಪಾನವಾಯು, ಜಿಹ್ವೆ, ರಸ, ಗುಹ್ಯ ಇವುಗಳುಂಟಾಗುತ್ತವೆ. ಪೃಥ್ವಿ ತತ್ವ ಹೆಚ್ಚಲು ಅಹಂಕಾರ, ಪ್ರಾಣ, ಘ್ರಾಣ, ಗಂಧ, ಪಾಯು ಇವುಗಳುಂಟಾಗುತ್ತವೆ.

ಟೀಪು : ಪಂಚಾಕ್ಷರಗಳಿಂದ ಪಂಚಮಹಾಭೂತಗಳಾಗಿರುತ್ತವೆ. ಈ ಪಂಚಾಕ್ಷರಗಳೇ ಲಿಂಗಗಳಿಗೆ ಸ್ಥಾನಗಳಾಗಿವೆ. ಪಂಚಭೂತಗಳ ಗುಣಗಳನ್ನು ಕಳೆಯಲು ಮನುಷ್ಯನು ಲಿಂಗಮಯನಾಗುತ್ತಾನೆ. ಪಂಚಾಕ್ಷರಿಯ ಐದು ಅಕ್ಷರಗಳಿಂದಲೇ ಪಂಚ ವಾಯುಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಪಂಚವಿಷಯಗಳು, ಜ್ಞಾನ ಮೊದಲ್ಗೊಂಡು ಅಂತಃಕರಣ ಚತುಷ್ಟಯಗಳು, ಅನುಕ್ರಮವಾಗಿ ಆಯಾ ಲಿಂಗಗಳಿಗೆ ಅರ್ಪಿತವಾಗುತ್ತವೆ. ಅರ್ಪಿತದ ಕಡೆಯಲ್ಲಿ ಪಂಚಾಕ್ಷರಗಳು ಓಂಕಾರದಲ್ಲಿ, ಪಂಚಭೂತಗಳು ಆತ್ಮನಲ್ಲಿ, ಅಡಗುವವು. ಓಂಕಾರವು ಮಹಾಲಿಂಗವನ್ನು, ಈ ಲಿಂಗವು ಇವುಗಳನ್ನೆಲ್ಲ ಒಳಕೊಳ್ಳುತ್ತದೆ. ಆಗ ಭಕ್ತನು ಮಹಾಲಿಂ-



ಗದಲ್ಲಿ ಅವಿರಳ ಸಂಬಂಧಿಯಾಗಿ ಪ್ರಣವ ಸ್ವರೂಪನಾಗಿ ಐಕ್ಯ ಸ್ಥಿತಿಯನ್ನು ಹೊಂದುತ್ತಾನೆ.

ಆಗ ಪೃಥ್ವಿಯೆಂಬ ಭೂತವು ಭಕ್ತನಂಗವಾಗಿ ಭಕ್ತನಲ್ಲಿಯೇ ಅಡಗಿ, ಅಪ್ಪುವೆಂಬ ಭೂತವು ಮಹೇಶ್ವರನಿಗಂಗವಾಗಿ ಮಹೇಶ್ವರನಲ್ಲಿಯೇ ಅಡಗಿ, ಅಗ್ನಿಯು ಪ್ರಸಾದಿಯಂಗವಾಗಿ ಪ್ರಸಾದಿಯಲ್ಲಿಯೇ ಅಡಗಿ, ವಾಯುವು ಪ್ರಾಣಲಿಂಗಿಯಂಗವಾಗಿ ಪ್ರಾಣಲಿಂಗಿಯಲ್ಲಿಯೇ ಅಡಗಿ, ಆಕಾಶವೇ ಶರಣನಂಗವಾಗಿ ಶರಣನಲ್ಲಿಯೇ ಅಡಗಿ, ಆತ್ಮನೇ ಐಕ್ಯನಂಗವಾಗಿ ಐಕ್ಯನಲ್ಲಿಯೇ ಅಡಗುತ್ತವೆ.

ಹಾಗೆಯೇ ಆಚಾರಲಿಂಗದಂಗ ಭಕ್ತನಾಗಿ ಭಕ್ತನಲ್ಲಿಯೇ ಅಡಗಿ, ಗುರುಲಿಂಗದಂಗ ಮಹೇಶ್ವರನಾಗಿ ಮಹೇಶ್ವರನಲ್ಲಿಯೇ ಅಡಗಿ, ಶಿವಲಿಂಗದಂಗ ಪ್ರಸಾದಿಯಾಗಿ ಪ್ರಸಾದಿಯಲ್ಲಿಯೇ ಅಡಗಿ, ಜಂಗಮಲಿಂಗದಂಗ ಪ್ರಾಣಲಿಂಗಿಯಾಗಿ ಪ್ರಾಣಲಿಂಗಿಯಲ್ಲಿಯೇ ಅಡಗಿ, ಪ್ರಸಾದಲಿಂಗದಂಗ ಶರಣನಾಗಿ ಶರಣನಲ್ಲಿಯೇ ಅಡಗಿ, ಮಹಾಲಿಂಗದಂಗ ಐಕ್ಯನಾಗಿ ಐಕ್ಯನಲ್ಲಿಯೇ ಅಡಗುತ್ತವೆ.

ಈ ಸ್ಥಿತಿಯುಂಟಾಗಲು ಅಂಗವೇ ಕರ್ಪುರವಾಗಿ, ಲಿಂಗವೇ ಜ್ಯೋತಿಯಾಗಿ, ಉರಿಕರ್ಪುರ ಸಂಯೋಗವಾದಂತೆ ಶರಣನ ಅಂಗಕ್ಕೂ ಲಿಂಗಕ್ಕೂ ಅಭಿನ್ನತೆಯುಂಟಾಗಿ ಪರಮಾತ್ಮನಲ್ಲಿ ಭಕ್ತನು ಸಾಮರಸ್ಯವನ್ನು ಹೊಂದುತ್ತಾನೆ.

ಪಂಚೀಕರಣದ ಈ ಜ್ಞಾನದಿಂದ ಅರ್ಪಣದ ರೀತಿಯನ್ನು ತಿಳಿದು ಷಟ್‌ಸ್ಥಲಾಚರಣೆಗಳನ್ನು ಅಷ್ಟಾವರಣಗಳ ಮೂಲಕ ಜರಿಗಿಸುತ್ತ ಲಿಂಗಾಂಗ ಸಾಮರಸ್ಯವನ್ನು ಭಕ್ತನು ಹೊಂದಬೇಕು. ಇದು ಶಿವಶರಣರ ನಡೆಯು, ವಚನಕಾರರು ನಿರೂಪಿಸುವ ಪದ್ಧತಿಯು.

೩೧೫. **ಕಾರ್ಯಾರ್ಪಣದ ರೀತಿ :** ( ಹಿಂದೆ ಸಂಖ್ಯೆ ೧೬೦-೧ ಮತ್ತು ಸಂಖ್ಯೆ ೨೮೬ ಇವುಗಳನ್ನು ಸಹ ನೋಡುವುದು.

(೧) ಭೋಜ್ಯವೆಂಬ ರೂಪನ್ನು ಕಠಿಣವೆಂಬ ದ್ರವ್ಯವನ್ನು ಗಂಧವೆಂಬ ಪದಾರ್ಥವನ್ನು ಕ್ಷೀರಸ್ನಾನವನ್ನು ಓಂ ಹ್ರಾಂ ನಾಂ ನಮಃ ಶಿವಾಯ ಎಂಬ ಮಂತ್ರದಿಂದ ಪೀಠದಲ್ಲಿಯ ಆಚಾರಲಿಂಗಕ್ಕೆ ಅರ್ಪಿಸುವುದು.

(೨) ಪಾನ್ಯವೆಂಬ ರೂಪನ್ನು ಮೃದುವೆಂಬ ದ್ರವ್ಯವನ್ನು ರಸವೆಂಬ ಪದಾರ್ಥವನ್ನು ದಧಿಸ್ನಾನವನ್ನು ಓಂ ಹ್ರೀಂ ಮಾಂ ನಮಃ ಶಿವಾಯ ಎಂಬ ಮಂತ್ರದಿಂದ ಕಟಿಯಲ್ಲಿಯ ಗುರುಲಿಂಗಕ್ಕೆ ಅರ್ಪಿಸುವುದು.

(೩) ಭಕ್ಷ್ಯವೆಂಬ ರೂಪನ್ನು ಉಷ್ಣವೆಂಬ ದ್ರವ್ಯವನ್ನು ರೂಪು ಎಂಬ ಪದಾರ್ಥವನ್ನು ಘೃತಸ್ನಾನವನ್ನು ಓಂ ಹ್ರೂಂ ಶೀಂ ನಮಃ ಶಿವಾಯ ಎಂಬ ಮಂತ್ರದಿಂದ ವರ್ತುಳದಲ್ಲಿಯ ಶಿವಲಿಂಗಕ್ಕೆ ಸಮರ್ಪಿಸುವುದು.

(೪) ಚೋಷ್ಯವೆಂಬ ರೂಪನ್ನು ಶೈತ್ಯವೆಂಬ ದ್ರವ್ಯವನ್ನು ಸ್ಪರ್ಶನವೆಂಬ ಪದಾರ್ಥವನ್ನು ಇಕ್ಷು ಕ್ಷೀರ ಸ್ನಾನವನ್ನು ಓಂ ಹ್ರೈಂ ವಾಂ ನಮಃ ಶಿವಾಯ ಎಂಬ ಮಂತ್ರದಿಂದ ಗೋಮುಖದಲ್ಲಿಯ ಜಂಗಮಕ್ಕೆ ಸಮರ್ಪಿಸುವುದು.

(೫) ಲೇಹ್ಯವೆಂಬ ರೂಪನ್ನು ಮಿಶ್ರವೆಂಬ ದ್ರವ್ಯವನ್ನು ಶಬ್ದವೆಂಬ ಪದಾರ್ಥವನ್ನು ನಾರೀಕೇಳ ಕ್ಷೀರಸ್ನಾನವನ್ನು ಓಂ ಹ್ರೌಂ ಯಾಂ ನಮಃ ಶಿವಾಯ ಎಂಬ ಮಂತ್ರದಿಂದ ನಾಳದಲ್ಲಿಯ ಪ್ರಸಾದ ಲಿಂಗಕ್ಕೆ ಸಮರ್ಪಿಸುವುದು.

(೬) ಇಲ್ಲದಲ್ಲಿಯು ರೂಪನ್ನು ಪರಿಣಾಮವೆಂಬ ದ್ರವ್ಯವನ್ನು ತೃಪ್ತಿ ಎಂಬ ಪದಾರ್ಥವನ್ನು ಸ್ವಾದೋದಕ ಸ್ನಾನವನ್ನು ಓಂ ಹ್ರಃ ಓಂ ನಮಃ ಶಿವಾಯ ಎಂಬ ಮಂತ್ರದಿಂದ ಮಸ್ತಕದಲ್ಲಿಯ ಮಹಾಲಿಂಗಕ್ಕೆ ಸಮರ್ಪಿಸುವುದು.

೩೧೬. **ಕರಣಾರ್ಪಣದ ರೀತಿ** : ಇಲ್ಲಿ ಅಂಗ, ಲಿಂಗ, ಶಕ್ತಿ, ಭಕ್ತಿ, ಹಸ್ತ, ಮುಖ, ಪ್ರಸಾದ, ಪದಾರ್ಥ ಈ ಅಷ್ಟವಿಧ ಸಕೀಲಗಳಿವೆ. ಆಯಾ ಆರು ಲಿಂಗಗಳು ಪರಸ್ಪರ ಮಿಶ್ರವಾದಲ್ಲಿ ೩೬ ಆಗುವವು. ಈ ಮೂವತ್ತಾರುಗಳು ಪ್ರಾಣಲಿಂಗ ಸಂಬಂಧವಾಗಿವೆ. ಈ ೩೬ ಲಿಂಗಗಳಿಗೆ ಮನೋಸಂಬಂಧವಾದ ೩೬ ತೆರದ ರುಚಿ ಪದಾರ್ಥಗಳನ್ನು ೩೬ ತೆರದ ಭಕ್ತಿ ಸಕೀಲಗಳಿಂದ ಸಮರ್ಪಿಸುವುದು.

೩೧೭. **ಭಾವಾರ್ಪಣದ ರೀತಿ** : ಕರಣಾರ್ಪಣದ ಮಧ್ಯದಲ್ಲಿ ಭಾವಾರ್ಪಣ ಉಂಟು. ಆತ್ಮ ತತ್ವ ಸಂಬಂಧವಾದ ೨೧೬ ತೆರದ



ತೃಪ್ತಿ ಪದಾರ್ಥಗಳನ್ನು, ಭಾವಲಿಂಗದೊಡನೆ ಕೂಡಿದ ೨೧೬ ಲಿಂಗಗಳಿಗೆ ೨೧೬ ತೆರದ ಭಕ್ತಿ ಸಕೀಲಗಳಿಂದ ಸಮರ್ಪಿಸುವುದು. ಕರಣಾರ್ಪಣದ ಮಿಶ್ರವೇ ಭಾವಾರ್ಪಣವು.

೩೧೮. **ಮಾರ್ಗಕ್ರಿಯೆ, ಮೀರಿದ ಕ್ರಿಯೆ** : ಲಿಂಗಾಂಗ ಸಾಮರಸ್ಯದಲ್ಲಿ ಮೊದಲು ಮಾರ್ಗಕ್ರಿಯೆಗಳ ಪ್ರಗತಿಯು, ಆ ಮೇಲೆ ಮೀರಿದ ಕ್ರಿಯೆಗಳ ಪ್ರಗತಿಯು, ಈ ಮೇರೆಗೆ ಅನುಕ್ರಮವಾಗಿ ಉಂಟಾಗುತ್ತ ಕಡೆಗೆ ಈ ಉಚ್ಚ ಸ್ಥಿತಿಯು ಪ್ರಾಪ್ತವಾಗುತ್ತದೆ. ಮಾರ್ಗಕ್ರಿಯೆಗಳು ಸ್ಥೂಲವಾಗಿಯೂ ಮೀರಿದ ಕ್ರಿಯೆಗಳು ಸೂಕ್ಷ್ಮವಾಗಿಯೂ ಇರುತ್ತವೆ.

೩೧೯. **ಮಾರ್ಗಕ್ರಿಯೆಗಳು** : ಇವುಗಳಲ್ಲಿ ೧೨ ಭಾಗಗಳಿದ್ದು ಪ್ರತಿಯೊಂದರಲ್ಲಿ ೯ ಕ್ರಿಯೆಗಳಿವೆ. ಹೀಗೆ ಅವು ಒಟ್ಟು ೧೦೮ ಆಗುತ್ತವೆ. ಒಂದೊಂದು ಭಾಗದಲ್ಲಿ ಪುನಃ ೯ ಕ್ರಿಯೆಗಳಿದ್ದು ಅವು ಹೆಚ್ಚೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತವೆ. ಅವು (೧) ಬ್ರಹ್ಮವಿಷ್ಣ್ವಾದಿ ಪೂಜಾರಿಗಳು (೨) ಪೃಥಿವ್ಯಾದಿ ಅಂಗಗಳು (೩) ಸ್ಥೂಲ ಸೂಕ್ಷ್ಮಾದಿ ತನುಗಳು (೪) ಭಕ್ತಮಹೇಶ್ವರಾದಿ ಗಣಗಳು (೫) ಸುಚಿತ್ತ ಸುಬುದ್ಧ್ಯಾದಿ ಹಸ್ತಗಳು (೬) ಶ್ರದ್ಧಾನೈಷ್ಠಿಕಾದಿ ಭಕ್ತಿಗಳು (೭) ಕ್ರಿಯಾಶಕ್ತಿ ಜ್ಞಾನ ಶಕ್ತ್ಯಾದಿ ಶಕ್ತಿಗಳು (೮) ಆಧಾರ ಸ್ವಾಧಿಷ್ಠಾನಾದಿ ಚಕ್ರಗಳು (೯) ಪೀತ ಶ್ವೇತಾದಿ ವರ್ಣಗಳು (೧೦) ಬ್ರಹ್ಮವಿಷ್ಣ್ವಾದಿ ಅಧಿದೇವತೆಗಳು. (೧೧) ಆಚಾರ ಲಿಂಗ ಗುರುಲಿಂಗಾದಿ ಲಿಂಗಗಳು (೧೨) ಜೀವಾತ್ಮ ಅಂತರಾತ್ಮಾದಿ ಆತ್ಮರುಗಳು ಇದ್ದಾರೆ.

೩೨೦. **ಮೀರಿದ ಕ್ರಿಯೆಗಳು** : ಇವುಗಳಲ್ಲಿ ೧೨ ಭಾಗಗಳಿದ್ದು ಪ್ರತಿಯೊಂದರಲ್ಲಿ ೯ ಕ್ರಿಯೆಗಳಿವೆ. ಹೀಗೆ ಅವು ಸಹ ಒಟ್ಟು ೧೦೮ ಆಗುತ್ತವೆ. ಒಂದೊಂದು ಭಾಗದಲ್ಲಿ ಪುನಃ ೯ ಕ್ರಿಯೆಗಳಿದ್ದು ಅವು ಹೆಚ್ಚೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತವೆ. ಅವು (೧) ಕರ್ಮಸಾದಾಖ್ಯ ಕರ್ತೃಸಾದಾಖ್ಯಾದಿ ಸಾದಾಖ್ಯಗಳು, (೨) ನಕಾರ ಮಕಾರಾದಿ ಪ್ರಣವಗಳು (೩) ತಾರಕಾಕೃತಿ ದಂಡಕಾಕೃತ್ಯಾದಿ ಆಕೃತಿಗಳು, (೪) ಪೂರ್ವಪಶ್ಚಿಮಾದಿ ದಿಕ್ಕುಗಳು (೫) ಋಗ್ವೇದ ಯಜುರ್ವೇದಾದಿ ವೇದಗಳು, (೬) ನಿವೃತ್ತಿ ಕಲೆ ಪ್ರತಿಷ್ಠಾಕಲೆ ಮೊದಲಾದ ಕಲೆಗಳು, (೭) ಘ್ರಾಣೇಂದ್ರಿಯ ಜಿಹ್ವೇಂ

ದ್ರಿಯಾದಿ ಮುಖಗಳು, (೮) ಗಂಧ ರಸಾದಿ ಪದಾರ್ಥಗಳು, (೯) ಸುಗಂಧ ಸುರಸಾದಿ ಪ್ರಸಾದಗಳು, (೧೦) ಭ್ರಮರ ವೇಣ್ವಾದಿ ನಾದಗಳು, (೧೧) ಸತ್ ಚಿತ್ ಆನಂದಾದಿ ಲಕ್ಷಣಗಳು, (೧೨) ಪರಗೂಢ ಶರೀರಸ್ಥಾದಿ ಸಂಜ್ಞೆಗಳು ಇವೇ ಇರುತ್ತವೆ.

**ಟೀಪು :** ಪಂಚೀಕರಣಜ್ಞಾನದಿಂದ ಮಿಶ್ರಾರ್ಪಣದ ರೀತಿಗಳು, ಮಿಶ್ರಾರ್ಪಣದಿಂದ ಲಿಂಗದ ಅನುಭವವು, ಲಿಂಗದ ಅನುಭವದಿಂದ ಸಂಖ್ಯೆ ೩೧೯ ಮತ್ತು ೩೨೦ ಇವುಗಳಲ್ಲಿ ಹೇಳಿದ ಕ್ರಿಯೆಗಳ ಉಚ್ಚಸ್ಥಿತಿಗಳು ಪ್ರಾಪ್ತವಾಗುತ್ತವೆ. ಇವುಗಳ ಅಂತ್ಯಸ್ಥಿತಿಯೇ ಲಿಂಗಾಂಗ ಸಾಮರಸ್ಯವಾಗಿರುತ್ತದೆ.

೩೨೧. **ನವವಿಧ ಪೂಜಾರಿಗಳು :** ಇವರು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ, ಮಹಾದೇವರು ಇದ್ದಾರೆ. ಇವರು ಉತ್ಪತ್ತ್ಯಾದಿ ಸ್ಥಿತಿಲಯಗಳಿಗೆ ಕಾರಣರು.

೩೨೨. **ನವವಿಧ ಅಂಗಗಳು :** ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮಾಂಗ, ತ್ಯಾಗಾಂಗ, ಭೋಗಾಂಗ, ಯೋಗಾಂಗ ಇವು ಅಂಗಗಳು. ಇವು ಮನುಷ್ಯನ ಗುಣಗಳಿಗೆ ಕಾರಣವಾಗಿವೆ.

೩೨೩. **ತನುಗಳು :** ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಆನಂದ, ಶುದ್ಧ, ಚಿದ್ರೂಪ, ಚಿನ್ಮಯ, ನಿರ್ಮುಕ್ತ, ಇವು ತನುಗಳು. ಇವು ಮನುಷ್ಯನ ಅಂತರಂಗ ಬಹಿರಂಗ ಶರೀರಗಳು.

೩೨೪. **ಗಣಂಗಳು :** ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ, ನಿಷ್ಕಲಂಕ, ನಿಶ್ಶೂನ್ಯ, ನಿರಂಜನ ಇವು ಗಣಂಗಳು. ಇವು ಪ್ರಗತಿಯ ಸ್ಥಲಗಳು.

೩೨೫. **ಹಸ್ತಗಳು :** ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ, ನಿರ್ನಾಮ, ನಿಷ್ಕಳಂಕ, ನಿರಾಳ ಇವು ಹಸ್ತಗಳು. ಇವು ಸ್ಥಲಗಳ ಪ್ರಗತಿಗೆ ಸಾಧನಗಳು.

೩೨೬. **ಭಕ್ತಿಗಳು :** ಶ್ರದ್ಧಾ, ನೈಷ್ಠಿಕಾ, ಅವಧಾನ, ಅನುಭಾವ, ಆನಂದ, ಸಮರಸ, ಪರಿಪೂರ್ಣ, ಅಪ್ರಮಾಣ, ನಿರವಯ ಇವು ಭಕ್ತಿಯ ವಿಧಗಳು.



೩೨೭. **ಶಕ್ತಿಗಳು :** ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾಚಿತ್, ನಿರಾಲಂಬ, ನಿರ್ಭ್ರಾಂತ, ನಿರವಯ ಇವು ಶಕ್ತಿಯ ವಿಧಗಳು.

೩೨೮. **ಚಕ್ರಗಳು :** ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮ, ಶಿಖಾ, ಪಶ್ಚಿಮ ಇವು ಚಕ್ರಗಳು. ಇವು ಶಕ್ತಿಗೆ ಕೇಂದ್ರಸ್ಥಾನಗಳು.

೩೨೯. **ವರ್ಣಗಳು :** ಪೀತ, ಶ್ವೇತ, ಹರಿತ, ಮಾಂಜಿಷ್ಟ, ಕಪೋತ, ಮಾಣಿಕ್ಯ, ಜ್ಯೋತಿ, ಮಹಾಜ್ಯೋತಿ, ಅಗಣಿತ, ಇವು ವರ್ಣಗಳು. ಇವು ಯೌಗಿಕ ಚಿಹ್ನಗಳು.

೩೩೦. **ಅಧಿದೇವತೆಗಳು :** ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ, ಪರಮೇಶ್ವರ, ಸರ್ವೇಶ್ವರ, ಮಹಾದೇವ ಇವರು ಅಧಿದೇವತೆಗಳು. ಶರೀರಗಳ ಕಾರ್ಯಗಳ ಚಾಲನೆಗೆ ಇವರು ಕಾರಣರು.

೩೩೧. **ಲಿಂಗಗಳು :** ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹತ್, ನಿಃಕಲ, ನಿಃಶೂನ್ಯ, ನಿರಂಜನ ಇವು ಲಿಂಗಗಳು.

೩೩೨. **ಆತ್ಮರುಗಳು :** ಜೀವಾತ್ಮ, ಅಂತರಾತ್ಮ, ಪರಮಾತ್ಮ, ನಿರ್ಮಲಾತ್ಮ, ಶುದ್ಧಾತ್ಮ, ಜ್ಞಾನಾತ್ಮ, ಮಹಾತ್ಮ ದಿವ್ಯಾತ್ಮ, ಚಿನ್ಮಯಾತ್ಮ ಇವರು ಆತ್ಮರುಗಳು. ಆತ್ಮನ ಪ್ರಗತಿಯ ದ್ಯೋತಕವಾಗಿವೆ.

೩೩೩. **ಸಾದಾಖ್ಯಗಳು :** ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ, ಮಹಾ, ಅಗಮ್ಯ, ಅಗೋಚರ, ಅಪ್ರಮಾಣ ಇವು ಸಾದಾಖ್ಯಗಳು. ಇವು ಮನುಷ್ಯನಲ್ಲಿಯ ಪರಿಸ್ಥಿತಿಗಳು.

೩೩೪. **ಪ್ರಣವಗಳು :** ನಕಾರ, ಮಕಾರ, ಶಿಕಾರ, ವಕಾರ ಯಕಾರ, ಓಂಕಾರ, ಬಕಾರ, ಕ್ಷಕಾರ, ಹಕಾರ ಇವು ಪ್ರಣವಗಳು. ಪರಮಾತ್ಮನ ಭಾವವನ್ನುಂಟು ಮಾಡತಕ್ಕವುಗಳು.

೩೩೫. **ಆಕೃತಿಗಳು :** ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ದರ್ಪಣ, ಜ್ಯೋತಿ, ನಿಷ್ಕಳ, ನಿಃಶೂನ್ಯ, ನಿರಂಜನ ಇವು ಆಕೃತಿಗಳು. ಇವು ಆರೂ ಚಕ್ರಗಳಿಗೆ ಸಂಬಂಧಿಸಿದವುಗಳು.

ಸೂಕ್ಷ್ಮವಾದ ಎರಡನೆಯ ಮೂರು ಸ್ಥಲಗಳಿಗೆ, ಮತ್ತು ಕಡೆಯ ಮೂರು ಮೂರು ಶೂನ್ಯಸ್ಥಲಗಳಿಗೆ ಸಂಬಂಧಿಸುತ್ತವೆ. ಈ ಯಾವತ್ತು ಕ್ರಿಯೆಗಳು ಮನುಷ್ಯನಿಗೆ ಸಂಬಂಧಿಸುತ್ತವೆ, ವಿಶ್ವಕ್ಕೆ ಸಂಬಂಧಪಟ್ಟವುಗಳಲ್ಲ. ಈ ದೃಷ್ಟಿಯಿಂದಲೇ ಅವುಗಳ ಅರ್ಥವನ್ನು ತಿಳಿಯತಕ್ಕದ್ದು. ಪ್ರತಿಯೊಂದು ಗುಂಪಿನಲ್ಲಿ ಕಡೆಯದಾದ ೯ನೆಯದು ಅದರ ಅತ್ಯಂತ ಉಚ್ಚತಮ ಸ್ಥಿತಿಯು. ಈ ಕಡೆಯ ಎಲ್ಲವುಗಳು ತನ್ನಲ್ಲಿ ಉಂಟಾದ ಬಳಿಕ ಮನುಷ್ಯನಲ್ಲಿ ಪೂರ್ಣತ್ವವು ಪ್ರಾಪ್ತವಾಗುತ್ತದೆ.

೩೪೫. ಪರತತ್ವಲಿಂಗಪ್ರಕಾಶ : ಇದು ಐಕ್ಯ ಸ್ಥಿತಿಯು. ಪುಷ್ಪ ಪರಿಮಳವ ನುಂಗಿ ಕರಗೊಂಡಂತೆ, ಕರ್ಪುರವು ಉರಿಯನಪ್ಪಿದಂತೆ ಈ ಸ್ಥಿತಿಯು. ಆಗ ಧ್ಯಾನವು ಮೌನವನ್ನು, ಮೌನವು ಮುಗ್ಧತೆಯನ್ನು ನುಂಗಿ ಶರಣನು ಮಹಾಘನಲಿಂಗವಾಗುತ್ತಾನೆ.

೩೪೬. ಶಿವಾದ್ವೈತ ಶರಣ ಪ್ರಕಾಶ : ಅದು ಸೂರ್ಯನ ಪ್ರಭೆಯ ಬೆಳಗಿನಂತಿದೆ. ಈ ಸ್ಥಿತಿಯು ಹೇಗೆ ಮಾಲೆಯ ದಾರವನ್ನೂ ಮಣಿಯು ಮಾಲೆಯನ್ನೂ ನುಂಗುತ್ತವೆಯೋ ಆ ತೆರನಂತಿದೆ. ಇದು ಐಕ್ಯ ಸ್ಥಿತಿಯ ಪರಮಾವಧಿಯು.

೩೪೭. ಮಹಾಲಿಂಗೈಕ್ಯ : ಇದು ಐಕ್ಯಸ್ಥಿತಿಯ ಪೂರ್ಣತೆಯು. ಈ ಸ್ಥಿತಿಯಲ್ಲಿ ಪೂರ್ವ ಸ್ಥಿತಿಯು ಇಲ್ಲಬಾಗಿ ಶಾಂತಿಸ್ವರೂಪವಾದ ಪರಬ್ರಹ್ಮವು ಪ್ರಾದುರ್ಭಾವವಾಗುತ್ತದೆ. ಅದು ಮಹಾಜ್ಞಾನದ ಬೆಳಗು. ಆಗ ಉಲುಹು ಪೂರ್ಣವಾಗಿ ಅಡಗುತ್ತದೆ. ನಾಹಂ, ಕೋಹಂ, ಸೋಹಂ ಎಂಬ ವಾಗ್ಜಾಲವು ಇಲ್ಲದಾಗುತ್ತದೆ. ದ್ವೈತಾದ್ವೈತಗಳಿಲ್ಲ. ಈ ಸ್ಥಿತಿಯನ್ನು ಮನವು ಲಿಂಗದಲ್ಲಿ ಕೂಡಿ ಸಮರಸವಾಗುವಂಥ ಶರಣನೇ ಬಲ್ಲನು. ಆಗ ಆತ ನಿರಾಕಾರ ನಿಜಾರ್ಂತ ನಿರ್ದೇಹ ಕೇವಲ ಪರಶಿವಲಿಂಗವು.

೩೪೮. ಶೂನ್ಯ : ಇದು ಏನೂ ಇಲ್ಲದ ಕಡೆಯ ಸ್ಥಿತಿಯು. ನಿರವಯವು ಅಥವಾ ಬಯಲ.

೩೪೯. ಅಷ್ಟಾವರಣ ಭೇದಗಳು :

(ಅ) ಅಂತರಂಗ ಬಹಿರಂಗ ಅಷ್ಟಾವರಣಗಳು : ಬಹಿರಂಗ

ಅಷ್ಟಾವರಣಗಳು ಬಾಹ್ಯಕ್ರಿಯೆಗಳಿಗೆ ಸಂಬಂಧಪಟ್ಟವು. ಅಂತರಂಗ ಅಷ್ಟಾವರಣಗಳು ಸೂಕ್ಷ್ಮಶರೀರಕ್ಕೆ ಸಂಬಂಧಪಟ್ಟವುಗಳು. ಈ ಎರಡ ನೆಯವುಗಳು ಮನಕ್ಕೆ ಮತ್ತು ಜ್ಞಾನಕ್ಕೆ ಸಂಬಂಧಿಸಿದಂಥವುಗಳು ಇರುತ್ತವೆ.

(ಬ) **ತ್ರಿವಿಧ ಅಷ್ಟಾವರಣಗಳು :** ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣಶರೀರಗಳಿವೆಯಷ್ಟೇ. ಈ ಮೂರು ಶರೀರಗಳಿಗೆ ಅನುಸ ರಿಸಿ ಮೂರು ತರದ ಅಷ್ಟಾವರಣಗಳೂ ಆಗುತ್ತವೆ. ಅವುಗಳಿಗೆ ಅನು ಕ್ರಮವಾಗಿ ಕ್ರಿಯಾಗುರು, ಜ್ಞಾನಗುರು, ಮಹಾಜ್ಞಾನಗುರು; ಕ್ರಿಯಾ ಲಿಂಗ, ಜ್ಞಾನಲಿಂಗ, ಮಹಾಜ್ಞಾನಲಿಂಗ; ಕ್ರಿಯಾಜಂಗಮ ಜ್ಞಾನ ಜಂಗಮ, ಮಹಾಜ್ಞಾನಜಂಗಮ ಇತ್ಯಾದಿ ಹೆಸರುಗಳಿರುತ್ತವೆ. ಅಷ್ಟಾ ವರಣಗಳ ವ್ಯಾಪಾರಗಳು ಈ ಮೂರು ಶರೀರಗಳ ಮೇಲೆ ನಡೆಯುತ್ತವೆ.

**೩೫೦. ಅಷ್ಟಾವರಣಕ್ಕೂ ತನಗೂ ಇರುವ ಸಂಬಂಧ :**

**೧ನೇ ವಿಧ :** ತನುತ್ರಯಂಗಳಲ್ಲಿ ಕ್ರಿಯಾಗುರು ಜ್ಞಾನಗುರು ಮಹಾ ಜ್ಞಾನ ಗುರುವನ್ನು ಸಂಬಂಧಿಸುವುದು. ಮನತ್ರಯಂಗಳಲ್ಲಿ ಕ್ರಿಯಾಲಿಂಗ ಜ್ಞಾನಲಿಂಗ ಮಹಾಜ್ಞಾನಲಿಂಗವನ್ನು ಸಂಬಂಧಿಸುವುದು. ಭಾವತ್ರಯಂ ಗಳಲ್ಲಿ ಕ್ರಿಯಾಜಂಗಮ ಜ್ಞಾನಜಂಗಮ ಮಹಾಜ್ಞಾನಜಂಗಮವನ್ನು ಸಂಬಂಧಿಸುವುದು. ಅತ್ಮತ್ರಯಂಗಳಲ್ಲಿ ಕ್ರಿಯಾಪಾದೋದಕ, ಜ್ಞಾನ ಪಾದೋದಕ, ಮಹಾಜ್ಞಾನಪಾದೋದಕವನ್ನು ಸಂಬಂಧಿಸುವುದು. ಅವ ಸ್ಥಾತ್ರಯಂಗಳಲ್ಲಿ ಕ್ರಿಯಾಪ್ರಸಾದ, ಜ್ಞಾನಪ್ರಸಾದ, ಮಹಾಜ್ಞಾನಪ್ರಸಾದ ವನ್ನು ಸಂಬಂಧಿಸುವುದು. ಕರಣತ್ರಯಂಗಳಲ್ಲಿ ಕ್ರಿಯಾಭಸಿತ, ಜ್ಞಾನ ಭಸಿತ, ಮಹಾಜ್ಞಾನಭಸಿತವನ್ನು ಸಂಬಂಧಿಸುವುದು. ಜೀವತ್ರಯಂಗಳಲ್ಲಿ ಕ್ರಿಯಾರುದ್ರಾಕ್ಷಿ, ಜ್ಞಾನರುದ್ರಾಕ್ಷಿ, ಮಹಾಜ್ಞಾನ ರುದ್ರಾಕ್ಷಿಗಳನ್ನು ಸಂಬಂಧಿಸುವುದು. ಗುಣತ್ರಯಂಗಳಲ್ಲಿ ಕ್ರಿಯಾಮಂತ್ರ, ಜ್ಞಾನಮಂತ್ರ, ಮಹಾಜ್ಞಾನ ಮಂತ್ರವನ್ನು ಸಂಬಂಧಿಸುವುದು.

**೨ನೇ ವಿಧ :** ಅರುವಿನಲ್ಲಿ ಸುಜ್ಞಾನಗುರುವ ಸಂಬಂಧ ಮಾಡಿಕೊ ಳ್ಳುವದು. ಪ್ರಾಣದಲ್ಲಿ ಸುಜ್ಞಾನಲಿಂಗವ ಸಂಬಂಧ ಮಾಡಿಕೊಳ್ಳುವದು. ಆಚರಣೆಯ ಸಂಬಂಧಗಳಲ್ಲಿ ಸುಜ್ಞಾನಜಂಗಮವ ಸಂಬಂಧ ಮಾಡಿಕೊ



ಳ್ಳುವುದು. ನಡೆನುಡಿಗಳಲ್ಲಿ ಸುಜ್ಞಾನ ಪಾದೋದಕವ ಸಂಬಂಧವ ಮಾಡಿ ಕೊಳ್ಳುವುದು. ಜಿಹ್ವೆ ನಾಸಿಕಗಳಲ್ಲಿ ಸುಜ್ಞಾನ ಪ್ರಸಾದವ ಸಂಬಂಧ ಮಾಡಿ ಕೊಂಬುದು. ಸರ್ವಾಂಗ ಸುಮನಗಳಲ್ಲಿ ಸುಜ್ಞಾನ ಚಿದ್ವಿಭೂತಿಯ ಸಂಬಂ ಧಿಸುವುದು. ಚಿದ್ರುಕ್ಕಿನಲ್ಲಿ ಚಿದ್ರುದ್ರಾಕ್ಷಿಯ ಸಂಬಂಧವ ಮಾಡಿಕೊಳ್ಳು ವುದು. ಜ್ಞಾನಾಕಾಶದಲ್ಲಿ ಚಿನ್ಮಂತ್ರ ಸಂಬಂಧವ ಮಾಡಿಕೊಳ್ಳುವುದು.

**೩ನೇ ವಿಧ :** ದೀಕ್ಷಾತ್ರಯಂಗಳಲ್ಲಿ ನಿಜಗುರುವನ್ನು ಪೂಜಾತ್ರಯಂ ಗಳಲ್ಲಿ ನಿಜಲಿಂಗವನ್ನೂ ಭೋಗತ್ರಯಂಗಳಲ್ಲಿ ನಿಜಜಂಗಮವನ್ನೂ ಕ್ರಿಯಾ ತ್ರಯಂಗಳಲ್ಲಿ ನಿಜಪಾದೋದಕವನ್ನೂ ಜ್ಞಾನತ್ರಯಂಗಳಲ್ಲಿ ನಿಜಪ್ರಸಾದ ವನ್ನೂ ಆಚಾರತ್ರಯಂಗಳಲ್ಲಿ ನಿಜಚಿದ್ಭಸಿತವನ್ನೂ ಪಂಚಾಕ್ಷರ ಷಡಕ್ಷರ ಗಳೇ ನಡೆನುಡಿಯಾಗಿ ಎರಡೆಂಬತ್ತುಕೋಟಿ ವಚನಗಳೇ ಮಹಾಮಂಗಳ ವಾಗಿ ಸಂಬಂಧವ ಮಾಡಿಕೊಳ್ಳುವುದು.

**೩೫೧. ಅಷ್ಟಾಂಗ ಶಿವಯೋಗ :** (ಹಿಂದೆ ಸಂಖ್ಯೆ ೪೪ ನೋಡಿರಿ)

(೧) **ಯಮಯೋಗ :** ಇವು ಐದು ಇವೆ. ಯಾವವೆಂದರೆ— (೧) ಹಿಂಸೆಯನತಿಗಳೆಯಬೇಕು (೨) ಅನೃತವ ನುಡಿಯಬಾರದು. (೩) ಚೌರ್ಯವನ್ನು ಬಿಡಬೇಕು. (೪) ಭವಿಕರ್ಮವನಾಚರಿಸಕೂಡದು. (೫) ಪರಸ್ತ್ರೀ ವರ್ಜಿಸಬೇಕು.

(೨) **ನಿಯಮಯೋಗ :** ಇವು ಐದು ಇವೆ. ಯಾವವೆಂದರೆ- (೧) ಬ್ರಹ್ಮಚಾರಿಯಾಗಿರುವುದು. (೨) ನಿಃಸ್ವಾರ್ಥಿಯಾಗಿರುವುದು. (೩) ಧನಾ ಪೇಕ್ಷೆ ಇಲ್ಲದಿರುವುದು. (೪) ಶರಣರ ಮಾರ್ಗದಂತೆ ಆಚರಿಸುವುದು. (೫) ಪರತತ್ವವನ್ನರಿಯುವುದು.

(೩) **ಆಸನಯೋಗ :** ಇವು ಹತ್ತು ಇವೆ. ಯಾವವೆಂದರೆ— ವಜ್ರಾಸನ, ಪದ್ಮಾಸನ, ಸ್ವಸ್ತಿಕಾಸನ, ಗೋಮುಖಾಸನ, ಕುಕ್ಕುಟಾಸನ, ಅರ್ಧಾಸನ, ಮಂಡುಕಾಸನ, ಸಿಂಹಾಸನ, ಚಂದ್ರಾಸನ, ಸುಖಾಸನ ಹೀಗೆ ಇವೆ.

(೪) **ಪ್ರಾಣಾಯಾಮ :** ರೇಚಕ ಪೂರಕ ಭೇದವನ್ನು ತಿಳಿದು ಮನ ಪವನ ಪ್ರಾಣಗಳ ಮೇಲೆ ಲಿಂಗವನ್ನು ಸಂಬಂಧಿಸಿ ಹೃದಯಕಮಲ

ಮಧ್ಯದಲ್ಲಿ ಪ್ರಣವವನ್ನುಚ್ಚರಿಸುತ್ತ ಧ್ಯಾನಿಸುವುದು.

(೫) ಪ್ರತ್ಯಾಹಾರ : ಇಂದ್ರಿಯಗಳಿಗೆ ಒಡೆಯನಂತಿರುವ ಮನಸ್ಸು, ಮನಸ್ಸಿಗೆ ಒಡೆಯನಂತಿರುವ ಪವನ, ಇವೆರಡನ್ನು ಸಮಗೂಡಿಸಿ, ಇಂದ್ರಿಯಗಳನ್ನು ಸ್ಥಿರಪಡಿಸಿ, ಸ್ಥಿರಚಿತ್ತನಾಗಿರುವುದು.

(೬) ಧ್ಯಾನ : ಗುರುತತ್ತ್ವವನ್ನು ಭಾವಸ್ಥಲಕ್ಕೆ ತಂದು, ಭಾವಸ್ಥಲದ ಲಿಂಗವ ಮನಸ್ಥಲಕ್ಕೆ ತಂದು, ಮನಸ್ಥಲದ ಲಿಂಗವನ್ನು ದೃಷ್ಟಿಸ್ಥಲಕ್ಕೆ ತಂದು ದೃಷ್ಟಿಸ್ಥಲದ ಲಿಂಗವ ಕರಸ್ಥಲಕ್ಕೆ ತಂದು ಅದನ್ನು ಧ್ಯಾನಿಸುವುದು ಧ್ಯಾನಯೋಗ.

(೭) ಧಾರಣ : ಲಿಂಗಧ್ಯಾನದಲ್ಲಿ ಮನಸ್ಸನ್ನು ಅಚ್ಚಳಿಯದೇ ಇಡಲು ಲಿಂಗಗಳು ಚಕ್ರಗಳಲ್ಲಿ ಸ್ಪಷ್ಟವಾಗಿ ಭಾವ, ಕರಣ, ಮನದಲ್ಲಿ ಲಿಂಗವು ಬೆಳಗಹತ್ತಲು ಅದು ಧಾರಣಯೋಗವು.

(೮) ಸಮಾಧಿಯೋಗ : ಅಂತಃಕರಣ ಚತುಷ್ಟಯವನ್ನು ಸುಸ್ಥಿರವಾಗಿರಿಸಿ ಲಿಂಗಧ್ಯಾನದಲ್ಲಿ ತಲ್ಲೀನನಾಗಿರುವುದು ಸಮಾಧಿಯೋಗ.

೩೫೨. **ಷಡ್ವಿಧ ವ್ರತಗಳು :** (೧) ಗುರುವಾಜ್ಞೆಯನ್ನು ಪಾಲಿಸುವುದು ಗುರುವ್ರತ (೨) ಲಿಂಗಪೂಜೆಯಲ್ಲಿ ನಿಯತಾತ್ಮನಾಗಿರುವುದು ಲಿಂಗವ್ರತ (೩) ಜಂಗಮವೇ ಮಹಾಲಿಂಗವೆಂದರಿದು ಆತ್ಮಾರ್ಪಣಮಾಡುವುದು ಚರವ್ರತ (೪) ಪ್ರಸಾದಸೇವನೆಯು ಪ್ರಸಾದವ್ರತ (೫) ಪಾದೋದಕ ಸೇವನೆಯು ಪಾದೋದಕವ್ರತ (೬) ಅಷ್ಟಾವರಣಗಳಲ್ಲಿ ಲೀಯವಾದ ಭಕ್ತಿಯೇ ಭಾಕ್ತಿಕವ್ರತ.

೩೫೩. **ಷಡ್ವಿಧ ಶೀಲಗಳು :** ಅಕ್ರೋಧ, ಸತ್ಯವಚನ, ಕ್ಷಮೆ, ಭವಿಭಕ್ತಭೇದ, ಅನುಗ್ರಹ, ಸತ್ಪಾತ್ರ ದ್ರವ್ಯಾರ್ಪಣ, ಇವು ಆರು ಶೀಲಗಳು.

೩೫೪. **ಬಹಿರಂಗಾರ್ಚನೆ :** ಆಕಾರ ನಿರಾಕಾರ ಏಕವೆಂದೇ ಭಾವಿಸಿ ಆಕಾರವಿಡಿದು ಏಕೋಭಾವದಿಂದ ಅರ್ಚಿಸುವುದೂ ಪೂಜಿಸುವುದೂ ಬಹಿರಂಗಾರ್ಚನೆ.

೩೫೫. **ಪ್ರಾಣಲಿಂಗ ಪೂಜೆ :** ಲಿಂಗಾಂಗ ಸಂಯೋಗವೆಂಬ ಶಿವ



ಯೋಗದಲ್ಲಿ ವರ್ತಿಸುತ್ತ ಕರ್ಮಯೋಗವನ್ನು ನಿರಾಕರಿಸಿ ತನ್ನಿಷ್ಟ ಲಿಂಗದ ನಿಜಸ್ವರೂಪವನರಿದು ಆ ನಿಜಸ್ವರೂಪೆಂಬಂಥ ಪ್ರಾಣಲಿಂಗವನ್ನು ಅರ್ಚಿಸುವುದು ಪ್ರಾಣಲಿಂಗ ಪೂಜೆಯು.

೩೫೬. **ನವಲಿಂಗ ಪೂಜೆ :** ಪ್ರಾಣಲಿಂಗಾರ್ಚನೆಯನ್ನು ಮಾಡುತ್ತ ಲಿಂಗ ಸುಖದಲ್ಲಿದ್ದಂಥ ಶರಣನು ನವಚಕ್ರದೊಳಗೆ ಪ್ರಾಣಲಿಂಗವು ಪ್ರಕಾಶಿಸುತ್ತಿರಲು ಆ ನವಲಿಂಗಗಳನ್ನು ಅರ್ಚಿಸುತ್ತ ಬೆರಸುವುದು ನವಲಿಂಗ ಪೂಜೆಯು.

೩೫೭. **ತ್ರಿಲಿಂಗಗಳ ಪೂಜೆ :** ಇಷ್ಟ ಪ್ರಾಣ ಭಾವಗಳು ತ್ರಿಲಿಂಗಗಳು. ಅಷ್ಟವಿಧಾರ್ಚನೆ ಮಾಡುವುದು ಇಷ್ಟಲಿಂಗದ ಪೂಜೆ. ಲಿಂಗವನ್ನು ಮನಸ್ಸಿನಲ್ಲಿ ಧ್ಯಾನಿಸಿ ಮನೋಮಧ್ಯದಲ್ಲಿರುವ ನಿಷ್ಕಲ ಬ್ರಹ್ಮವನ್ನು ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಕರಸ್ಥಲದಲ್ಲಿರುವ ಇಷ್ಟಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆವುದು ಪ್ರಾಣಲಿಂಗ ಪೂಜೆ. ಮನಸ್ಸು ಲಿಂಗದಲ್ಲಿ ಲೀಯವಾಗಿ ಅಚ್ಚೊತ್ತಿ ಅಗಲದಿಪ್ಪುದು ಭಾವಲಿಂಗದ ಪೂಜೆ

೩೫೮. **ಷಟ್‌ಸ್ಥಲಾತ್ಮಕ ಲಿಂಗಪೂಜಾವಿಧಿ :** ಬಹಿರಂಗಾರ್ಚನೆಯಲ್ಲಿ ಷಟ್‌ಸ್ಥಲಗಳಿರುತ್ತವೆ. ಗದ್ದುಗೆಯ ಮೇಲೆ ಮೂರ್ತಮಾಡಿ ವಿಭೂತಿ ರುದ್ರಾಕ್ಷಿ ಧಾರಣದ ವರೆಗೆ ಭಕ್ತಸ್ಥಲ. ಮೂಲ ಪಂಚಾಕ್ಷರಿ ಮಂತ್ರಜಪವು ಮಾಹೇಶ್ವರಸ್ಥಲ. ಸುಯಿಧಾನದಿಂದ ಇಷ್ಟಲಿಂಗವನ್ನು ಕರಸ್ಥಲಕ್ಕೆ ಬಿಜಯಂಗೈಸಿಕೊಳ್ಳುವುದು ಪ್ರಸಾದಿಸ್ಥಲ. ಷೋಡಶೋಪಚಾರಗಳಿಂದ ಲಿಂಗವನ್ನು ಪೂಜಿಸಿ ಪರಮಾತ್ಮನನ್ನು ಸ್ತುತಿಸುವುದು ಪ್ರಾಣಲಿಂಗಿಸ್ಥಲ. ಲಿಂಗಪ್ರಸಾದವನ್ನು ಸವಿದು ಆನಂದಿಸುವುದು ಶರಣಸ್ಥಲ. ತಾನು, ಲಿಂಗ, ಎಂಬುಭಯಭಾವವಳಿದು ತಾನೇ ತಾನಾಗಿರುವುದು ಐಕ್ಯಸ್ಥಲ.

೩೫೯. **ಲಿಂಗಪೂಜಾವಿಧಿ :** ಮೇಲೆ ೩೫೩ ರಿಂದ ೩೫೮ರ ವರೆಗೆ ಹೇಳಿದ ಕ್ರಮಗಳು ಕೇವಲ ತಾತ್ವಿಕವಾದವುಗಳು. ಆದರೆ ಅವುಗಳ ತತ್ತ್ವಗಳನ್ನನುಸರಿಸಿ ಬಹು ವಿಶಾಲತರವಾಗಿ ಲಿಂಗಪೂಜಾಕ್ರಮಗಳು ಏರ್ಪಡಿಸಲ್ಪಟ್ಟಿರುತ್ತವೆ. ಅವುಗಳ ಅಂಗಗಳು ಅನೇಕವಿದ್ದು ಒಂದೊಂದಕ್ಕೆ ವಿಸಿಷ್ಟ

ಮಂತ್ರಗಳು ಇರುತ್ತವೆ. ಅವುಗಳ ತತ್ವಗಳು ಒಂದೇ ಇದ್ದರೂ ವ್ಯವಹಾರದಲ್ಲಿ ಬೇರೆಯಾಗಿರುತ್ತವೆ. ಅವುಗಳನ್ನೆಲ್ಲ ಇಲ್ಲಿ ವಿವರಿಸುವುದು ಶಕ್ಯವಲ್ಲ. ಆದ್ದರಿಂದ ಅವುಗಳ ಮುಖ್ಯಾಂಗಗಳು ಮಾತ್ರ ಇಲ್ಲಿ ಹೇಳಲ್ಪಟ್ಟಿವೆ. ಅವು ಯಾವುವೆಂದರೆ—

(೧) ಮನಶ್ಶುದ್ಧಿ, (೨) ಮುಖ ಪ್ರಕ್ಷಾಲನ (೩) ಪೂಜಾಗೃಹ ಪ್ರವೇಶ, (೪) ಸ್ಥಾನಶುದ್ಧಿ (೫) ಆಸನಾಸೀನನಾಗುವುದು. (೬) ವಿಭೂತಿ ಧಾರಣ, (೭) ರುದ್ರಾಕ್ಷಧಾರಣ.

(೮) ಕಲಾನ್ಯಾಸ (೯) ಪಂಚಾಕ್ಷರನ್ಯಾಸ (೧೦) ಸೃಷ್ಟಿನ್ಯಾಸ (೧೧) ಸಂಹಾರನ್ಯಾಸ (೧೨) ಸ್ಥಿತಿನ್ಯಾಸ (೧೩) ಕರನ್ಯಾಸ (೧೪) ದೇಹನ್ಯಾಸ (೧೫) ಷಡಂಗನ್ಯಾಸ (೧೬) ದಿಕ್ಕುಗಳಲ್ಲಿ ಅಕ್ಷರನ್ಯಾಸ

(೧೭) ಪುಷ್ಪಾಂಜಲಿ (೧೮) ಅರ್ಘ್ಯ (೧೯) ಪಾದ್ಯ (೨೦) ಆಚಮನ (೨೧) ಸ್ನಾನ (೨೨) ಗೋಮೂತ್ರ ಸಮರ್ಪಣ (೨೩) ಗೋಮಯ ಸ್ನಾನ (೨೪) ಗೋಕ್ಷೀರಸ್ನಾನ (೨೫) ಗೋದಧಿ ಸ್ನಾನ (೨೬) ಗೋಘೃತ ಸ್ನಾನ (೨೭) ಪಂಚಾಮೃತ ಸ್ನಾನ (೨೮) ಕ್ಷೀರಸ್ನಾನ (೨೯) ದಧಿಸ್ನಾನ (೩೦) ಘೃತಸ್ನಾನ (೩೧) ಮಧುಸ್ನಾನ (೩೨) ಶರ್ಕರಾಸ್ನಾನ.

(೩೩) ಗಂಗೋದಕ ಸ್ನಾನ (೩೪) ಪುಷ್ಪೋದಕ ಸ್ನಾನ (೩೫) ಸ್ವರ್ಣೋದಕ ಸ್ನಾನ (೩೬) ರತ್ನೋದಕಸ್ನಾನ (೩೭) ಮೂಲ ಮಂತ್ರೋದಕ ಸ್ನಾನ (೩೮) ಶಿಲೋದಕ ಸ್ನಾನ (೩೯) ತೀರ್ಥೋದಕ ಸ್ನಾನ (೪೦) ಮಹಾಭಿಷೇಕ.

(೪೧) ಪಾದ್ಯಾರ್ಘ್ಯಾಚಮನ (೪೨) ಲಿಂಗಕ್ಕೆ ವಿಭೂತಿಧಾರಣ (೪೩) ಉಪವೀತಧಾರಣ (೪೪) ಗಂಧಸಮರ್ಪಣ (೪೫) ಅಕ್ಷತಸಮರ್ಪಣ (೪೬) ಪುಷ್ಪಸಮರ್ಪಣ.

(೪೭) ಲಿಂಗಾವರಣದ ಪೂಜೆ (೪೮) ಶಿವಸಹಸ್ರನಾಮ ಪಠನ (೪೯) ಲಿಂಗದಲ್ಲಿ ಮಂತ್ರಾನುಸಂಧಾನ (೫೦) ಲಿಂಗದಲ್ಲಿ ಮಾತೃಕಾನ್ಯಾಸ (೫೧) ಲಿಂಗದಲ್ಲಿ ಕಲಾನ್ಯಾಸ.



(೫೨) ಧೂಪಸಮರ್ಪಣ (೫೩) ದೀಪಸಮರ್ಪಣ (೫೪) ಕರ್ಪೂರ ಸಮರ್ಪಣ (೫೫) ಪತಾಕಸಮರ್ಪಣ (೫೬) ಅರ್ಘ್ಯಸಮರ್ಪಣ (೫೭) ತಾಂಬೂಲ ಸಮರ್ಪಣ (೫೮) ಮುಖವಾಸನ ಸಮರ್ಪಣ (೫೯) ಆಚಮನಸಮರ್ಪಣ (೬೦) ಪಾದುಕಸಮರ್ಪಣ (೬೧) ಘಂಟಾನಾದ ಸಮರ್ಪಣ (೬೨) ಆದರ್ಶ ದರ್ಶನ (೬೩) ಚಾಮರ ಸಮರ್ಪಣ (೬೪) ವ್ಯಜನ ಸಮರ್ಪಣ (೬೫) ಛತ್ರಸಮರ್ಪಣ (೬೬) ಪುಷ್ಪಾಂಜಲಿ.

(೬೭) ನಮಸ್ಕಾರ (೬೮) ಪುರಾಣಶ್ರವಣ (೬೯) ಸ್ತೋತ್ರಸಮರ್ಪಣ (೭೦) ಮುಖ ಪಾದ್ಯ ಸಮರ್ಪಣ (೭೧) ನಾಮಸಂಕೀರ್ತನ (೭೨) ಪುಷ್ಪಸಮರ್ಪಣ (೭೩) ತರ್ಪಣ (೭೪) ಪುಷ್ಪಾಂಜಲಿ (೭೫) ಮಂತ್ರಪುಷ್ಪ ಸಮರ್ಪಣ (೭೬) ಪೂಜಾಸಮಾಪ್ತಿ.

೩೬೦. **ಷೋಡಶೋಪಚಾರಗಳು** : ಪಾದ್ಯ, ಅರ್ಘ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ರುದ್ರಾಕ್ಷನಾರಿಕೆ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ.

೩೬೧. **ಅಷ್ಟವಿಧಾರ್ಚನೆ** : ಜಲಾಭಿಷೇಕ, ಗಂಧಧಾರಣ, ಅಕ್ಷತಾರ್ಪಣ, ಪತ್ರಪುಷ್ಪಾರ್ಪಣ, ಧೂಪಸಮರ್ಪಣ, ದೀಪಸಮರ್ಪಣ, ನೈವೇದ್ಯ ಸಮರ್ಪಣ, ತಾಂಬೂಲ ಸಮರ್ಪಣ.

೩೬೨. **ಷಡಂಗನ್ಯಾಸಗಳು** : ಅವು ಅಂಗನ್ಯಾಸ, ಇಂದ್ರಿಯನ್ಯಾಸ, ಕರಾಂಗುಲಿನ್ಯಾಸ, ಚಕ್ರನ್ಯಾಸ, ಭೂತನ್ಯಾಸ, ಧಾತುನ್ಯಾಸ ಎಂದಿವೆ.

೩೬೩. **ಸಪ್ತೋದಕಗಳು** : ಇವು ಗಂಧೋದಕ, ಪುಷ್ಪೋದಕ, ಸುವರ್ಣೋದಕ, ರತ್ನೋದಕ, ಮಂತ್ರೋದಕ, ಶಿಲೋದಕ, ತೀರ್ಥೋದಕ ಎಂದಿವೆ.

೩೬೪. **ಪಂಚಾಮೃತ** : ಇವು ಕ್ಷೀರ, ಘೃತ, ದಧಿ, ಮಧು, ಶರ್ಕರ ಇವು ಕೂಡಿದರೆ ಪಂಚಾಮೃತ.

೩೬೫. **ದ್ವಾದಶವಿಧ ಪೂಜೆ** : ಅಭಿಷೇಕ, ಅಂಗಾರತಾಪನ, ಭಸ್ಮಧಾರಣ, ಗಂಧಧಾರಣ, ಅಕ್ಷತಧಾರಣ, ಪತ್ರಪುಷ್ಪಧಾರಣ, ಧೂಪ ಸಂವೀಜನ, ಧೂಪಪ್ರಸಾರಣ, ದೀಪಪ್ರಕಾಶನ, ನೈವೇದ್ಯಸಮರ್ಪಣ, ತಾಂಬೂಲ

೩೫ರ ವರೆಗೆ ಹೇಳಿದ ಲಿಂಗಪೂಜೆಯ ಕ್ರಮಗಳಿಗೆ ಮಹತ್ವ ಕೊಡುತ್ತಾರೆ. ಅವುಗಳನ್ನನುಸರಿಸುವಲ್ಲಿ ಶಿವಾನುಭವ ಶಾಸ್ತ್ರದ ಪೂರ್ಣ ಪರಿಚಯವು ಅವ ಶ್ಯವು. ಮುಂದೆ ೩೫೫ರಿಂದ ೩೭೩ರ ವರೆಗೆ ಹೇಳಿದ ಕ್ರಮಗಳು ಶೈವರಿಂದ ತೆಗೆದುಕೊಂಡಂಥವಿರುತ್ತವೆ. ಸ್ಥಾವರ ಲಿಂಗಪೂಜೆಗಳು ಆ ರೀತಿ ನಡೆಯು ವುದುಂಟು. ವ್ಯವಹಾರದಲ್ಲಿ ಅವುಗಳನ್ನೇ ಇಷ್ಟಲಿಂಗ ಪೂಜೆಯಲ್ಲಿಯೂ ನಡೆಸುವುದುಂಟು. ಆದರೆ ನಿಜವಾಗಿ ಅವುಗಳಲ್ಲಿ ಕೆಲವು ಮಾತ್ರ ಶಿವಾನು ಭವಕ್ಕೆ ಅನ್ವಯಿಸುತ್ತವೆ. ಅವು ಯಾವವೆಂದರೆ— ನ್ಯಾಸಗಳು, ಧಾರಣೆ ಗಳು, ಮುದ್ರೆಗಳು, ಆಸನಗಳು ಮತ್ತು ಮಂತ್ರ ಸಂಬಂಧ ಇವುಗಳು ಮುಖ್ಯವಾಗಿರುತ್ತವೆ.

೩೭೫. **ನ್ಯಾಸಗಳು :** ಇವು ಕಲಾನ್ಯಾಸ, ಷಡಂಗನ್ಯಾಸ, ಪಂಚ ಬ್ರಹ್ಮನ್ಯಾಸ, ಪಂಚಾಕ್ಷರ ನ್ಯಾಸ ಎಂದಿರುತ್ತವೆ. ದೇಹದ ಅವಯವಗಳ ಲ್ಲೆಲ್ಲ ಮಂತ್ರಗಳನ್ನು ನ್ಯಾಸಮಾಡುವುದು ಕಲಾನ್ಯಾಸ. ಹೃದಯ, ಶಿರಸ್ಸು, ಶಿಖಾ, ಕವಚ, ನೇತ್ರ, ಇವುಗಳಲ್ಲಿ ನಿಶ್ಚಿತಮಂತ್ರಗಳನ್ನು ನ್ಯಾಸಮಾಡು ವುದು ಷಡಂಗನ್ಯಾಸ. ಪಂಚಬ್ರಹ್ಮಗಳನ್ನು ಶಿರಸ್ಸು, ಮುಖ, ಹೃದಯ, ಗುಹ್ಯ, ಪಾದ ಇವುಗಳಲ್ಲಿ ನ್ಯಾಸಮಾಡುವುದು ಪಂಚಬ್ರಹ್ಮನ್ಯಾಸ. ಮೂರ್ಧ, ಲಲಾಟ, ಕಂಠ, ಹೃದಯ, ನಾಭಿಗಳಲ್ಲಿ ಯಕಾರಾದಿ ನಕಾರಾಂತಮಾಗಿ ಪಂಚಾಕ್ಷರಗಳನ್ನು ನ್ಯಾಸಮಾಡುವುದು ಪಂಚಾಕ್ಷರನ್ಯಾಸ. ಇವುಗಳಲ್ಲಿ ಕೆಲವು ಶೈವ ಪರಮಂತ್ರಗಳಿವೆ. ವೀರಶೈವಪರವಾದವುಗಳಲ್ಲ.

೩೭೬. **ಅಂಗನ್ಯಾಸಗಳು :** ಇವು ಸೃಷ್ಟಿನ್ಯಾಸ, ಸ್ಥಿತಿನ್ಯಾಸ, ಸಂಹಾರನ್ಯಾಸ ಎಂದಿವೆ. ಷಡಕ್ಷರ ಮಂತ್ರಗಳನ್ನು ದೇಹಕ್ಕೆ ಸಂಬಂಧಿ ಸುವ ವಿಧಗಳು ಇವು ಇವೆ.

೩೭೭. **ಅಂಗುಲಿನ್ಯಾಸಗಳು :** ಇವುಗಳ ಮೂಲಕ ಜಪಕಾಲದಲ್ಲಿ ಅಂಗುಲಿಗಳಲ್ಲಿ ಷಡಕ್ಷರವನ್ನು ಆಯಾ ಶಕ್ತಿಗಳೊಡನೆ ತನಗೆ ಸಂಬಂಧಪಡಿ ಸಿಕೊಳ್ಳುವುದು ಇರುತ್ತದೆ. ಇವುಗಳಲ್ಲಿ ಕರನ್ಯಾಸ, ದೇಹನ್ಯಾಸ, ಷಡಂಗ ನ್ಯಾಸ ಎಂಬ ಭೇದಗಳಿವೆ. ಪುನಃ ಪ್ರತಿಯೊಂದರಲ್ಲಿ ಸೃಷ್ಟಿ ಸ್ಥಿತಿ ಮತ್ತು ಸಂಹಾರ ಎಂಬ ಭಾಗಗಳಿವೆ. ಬೆರಳುಗಳಲ್ಲಿ ಮಾತ್ರ ಸಂಬಂಧಿಸುವುದು

ಕರನ್ಯಾಸವು. ಶಿರಸ್ಸು, ಮುಖ, ಹೃದಯ, ಗುಹ್ಯ, ಪಾದ, ಸರ್ವಾಂಗ ಇವುಗಳಿಗೆ ಸಂಬಂಧಿಸುವುದು ದೇಹನ್ಯಾಸ. ನೇತ್ರ ಕವಚ, ಶಿಖಾ, ಶಿರಸ್ಸು, ಹೃದಯ ಇವುಗಳಿಗೆ ಸಂಬಂಧಿಸುವುದು ಷಡಂಗನ್ಯಾಸ. ಸಂಬಂಧಿಸುವ ವಿಷಯವಾಗಿ ಬೇರೆ ಬೇರೆ ಕ್ರಮಗಳಿದ್ದು ಅವುಗಳ ಪ್ರಕಾರ ಅವು ಸೃಷ್ಟಿ ಸ್ಥಿತಿ ಸಂಹಾರ ಎಂದು ಹೇಳಲ್ಪಡುತ್ತವೆ. ಹೆಚ್ಚಿನ ವಿವರಣೆಗಳಿಗೆ ಮೂಲ ಗ್ರಂಥಗಳನ್ನು ನೋಡುವುದು ಇಲ್ಲವೆ ಬಲ್ಲವರಿಂದ ತಿಳಿದುಕೊಳ್ಳುವುದು.

೩೭೮. ಆಸನಗಳು : ೮೪ ಆಸನಗಳಿವೆ. ಅವುಗಳಲ್ಲಿ ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ವೀರಾಸನ, ಗೋಮುಖಾಸನ ಮತ್ತು ಸುಖಾಸನಗಳು ಜಪಸಿದ್ಧಿಗೆ ಯೋಗ್ಯವಾದ ಷಡಾಸನಗಳು.

೩೭೯. ಪಂಚಧಾರಣೆಗಳು : ಇವು ಅಗ್ನಿಧಾರಣೆ, ನಾಡಿಧಾರಣೆ, ವಾಯುಧಾರಣೆ, ಅಮೃತಧಾರಣೆ ಆಧಾರಧಾರಣೆ ಎಂದು ಐದು ಇವೆ. (೧) ಅಗ್ನಿಧಾರಣೆ, ಕಾಲಾಗ್ನಿಯನೆಬ್ಬಿಸಿ ಕಮಲನಾಳದ ತುದಿಯ ನಡರಿ ಮಹಾಜ್ಯೋತಿಯ ಪ್ರಭೆಯಲ್ಲಿರುವುದು. (೨) ನಾಡಿಧಾರಣೆ- ಮನುಷ್ಯನಲ್ಲಿ ಸುಷುಮ್ನಾ ನಾಡಿ ಇದ್ದು ಅದನ್ನು ಚೈತನ್ಯಗೊಳಿಸುತ್ತ ಮಹಾಜ್ಯೋತಿಯ ಪ್ರಕಾಶವ ಕಾಂಬುದು. (೩) ವಾಯುಧಾರಣೆ- ಮಹಾವಾಯುವನು ಪಿಡಿದು ಸಮಚಿತ್ತನಾಗಿ ಮೂಲ ಜ್ವಾಲೆಯನೆಬ್ಬಿಸುವುದು. (೪) ಅಮೃತ ಧಾರಣೆ- ಜ್ಞಾನಪ್ರಕಾಶವಾಗಿಹ ಮಹಾಜ್ಯೋತಿ ಎಂಬ ಅಮೃತವನುಂಡರೆ ಹಸಿವು ತೃಷೆಗಳಡಗಿ ಅನಂತ ಸ್ವರೂಪನಾಗಿರುವುದು. (೫) ಆಧಾರ ಧಾರಣೆ- ಪ್ರಾಣವೇ ಪೀಠಿಕೆಯಾಗಿ ಶಿವನೆಂಬ ಶಿವಲಿಂಗವ ನೆಲೆಗೊಳಿಸಿ ಅರ್ಪಿಸಿ ಭೇದವಿಲ್ಲದೆ ಬೆರೆವುದು.

೩೮೦. ದೀಕ್ಷಾವಿಧಿ, ೧ನೇ ವಿಧ : ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬುವನಿಗೆ ಮಾಡತಕ್ಕ ದೀಕ್ಷಾವಿಧಿಗಳ ಅಂಗಗಳು- (೧) ಕಾಯ ಶುದ್ಧಿ, ಜೀವಶುದ್ಧಿ, ಆತ್ಮಶುದ್ಧಿ ಮಾಡುವುದು. (೨) ವಾಕ್ಯ, ಪಾಣಿ, ಪಾದ, ಗುಹ್ಯ, ಪಾಯುವೆಂಬ ಕರ್ಮೇಂದ್ರಿಯಗಳ ಮೇಲಣ ಇಂದ್ರಿಯ ಲಿಖಿತವನ್ನು ತೊಡೆದು ಲಿಂಗಲಿಖಿತ ಮಾಡುವುದು. (೩) ಅಂತಃಕರಣ ಚತುಷ್ಟಯಗಳ ನಿವರ್ತನೆ. (೪) ಪಂಚಭೂತಸ್ಥಾನದ ಅಧಿದೇವತೆಗಳನ್ನು ತೋರುವುದು.



(೫) ಹೀಗೆ ಶುದ್ಧಾತ್ಮನ ಮಾಡಿದ ಬಳಿಕ ಗಣ ತಿಂಥಿಣಿಯ ಮುಂದೆ
ನಿಲ್ಲಿಸಿ ದಂಡಪ್ರಣಾಮವನ್ನು ಮಾಡಿಸುವುದು, ಮತ್ತು ಕೈವಿಡಿದೆತ್ತುವುದು.
(೬) ಭೂತಶುದ್ಧಿಯನ್ನು ಮಾಡುವುದು ಆಮೇಲೆ ಚೌಕಮಧ್ಯ
ದಲ್ಲಿ ಕುಳ್ಳಿರಿಸುವುದು. ಗುರುಕಲಶ ಸ್ಥಾಪನೆ ಮಾಡುವುದು.
(೭) ಜಲಶುದ್ಧಿಯನ್ನು ಮಾಡುವುದು. (೮) ಜಂಗಮಕ್ಕೆ ಪಾದಾ
ರ್ಚನೆಯನ್ನು ಮಾಡುವುದು. (೯) ಕುಮಾರ ಠಾವನ್ನು ಜಲಾಧಿವಾಸ
ಮಾಡುವುದು.
(೧೦) ಶಿಷ್ಯನ ಹಸ್ತವನ್ನು ಶೋಧಿಸುವುದು. (೧೧) ವಿಭೂತಿ
ಯನ್ನು ಧರಿಸುವುದು. (೧೨) ರುದ್ರಾಕ್ಷಿಧಾರಣ (೧೩) ಜಲಾಧಿವಾಸದೊ
ಳಗಣ ಕುಮಾರ ಠಾವನ್ನು ತೆಗೆಯುವುದು, ಶಿಲೆಯ ಪೂರ್ವಾಶ್ರಯವನ್ನು
ಕಳೆಯುವುದು, (೧೪) ಶಿಲೆಗೆ ಪ್ರಾಣಪ್ರತಿಷ್ಠೆ ಮಾಡುವುದು.
(೧೧) ದೇವರಿಗೆ ಸ್ನಪನ (೧೨) ದೇವರಿಗೆ ವಸ್ತ್ರಸಮರ್ಪಣ
(೧೩) ಗಂಧಸಮರ್ಪಣ (೧೪) ಅಕ್ಷತಸಮರ್ಪಣ (೧೫) ಪುಷ್ಪಸಮ
ರ್ಪಣ, (೧೬) ಧೂಪವನ್ನರ್ಪಿಸುವುದು (೧೭) ದೀಪಸಮರ್ಪಣ, (೧೮)
ನೈವೇದ್ಯಸಮರ್ಪಣ, (೧೯) ತಾಂಬೂಲ ಸಮರ್ಪಣ, (೨೦) ಮಂತ್ರ
ಪುಷ್ಪ ಸಮರ್ಪಣ (೨೧) ನಮಸ್ಕಾರ (೨೨) ಅನುಷ್ಠಾನ (೨೩) ಉರ
ಸ್ಥಲದ ಸೆಜ್ಜೆಯಲ್ಲಿ ಲಿಂಗವನ್ನು ಧರಿಸುವುದು.
(೨೩) ಶಿಷ್ಯನ ವಾಯು ಪ್ರಾಣಿತ್ವವ ಕಳೆದು, ಲಿಂಗ ಪ್ರಾಣಿಯ
ಮಾಡುವುದು (೨೪) ಅಗ್ರೋದಕವನ್ನು ಸರ್ವಾಂಗದ ಮೇಲೆ ತಳಿವುದು
(೨೫) ವಿಭೂತಿಯ ಪಟ್ಟವನ್ನು ಕಟ್ಟುವುದು, (೨೬) ಶಿಷ್ಯನ ದುರಕ್ಷರವ
ತೊಡೆವುದು (೨೭) ಲಲಾಟದಲ್ಲಿ ಲಿಂಗ ಲಿಖಿತವನ್ನು ಬರೆವುದು.
(೨೮) ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸುವುದು, (೨೯) ಶಿಷ್ಯನ
ಕರ್ಣದಲ್ಲಿ ಶಿವಮಂತ್ರವನ್ನು ನಿರೂಪಿಸುವುದು, (೩೦) ಶತಪತ್ರದೊಳ
ಗಣ ಕಳೆಯನ್ನು ಪ್ರಜ್ವಲಿಸಿ ಪ್ರಾಣದಲ್ಲಿ ಪ್ರಾಣಲಿಂಗವನ್ನು ನೆಲೆಗೊಳಿಸಿ
ಇಷ್ಟಲಿಂಗಸ್ಥಲವನ್ನು ತೋರಿಸಿ ಶಿಷ್ಯನನ್ನು ಕೃತಕೃತ್ಯನನ್ನು ಮಾಡುವುದು.
ಬೇರೆ ದೀಕ್ಷಾವಿಧಿಗಳು ಅನೇಕ ಇವೆ. ಆದರೆ ಅವುಗಳಲ್ಲಿ ಶೈವ

ಪದ್ಧತಿಗಳು ಬಹಳ ಸೇರಿಕೊಂಡಿವೆ. ಅವು ಅನೇಕ ಕಡೆಗೆ ಪ್ರಚಾರದಲ್ಲಿಯೂ ಇವೆ. ಆದರೆ ಅವು ವಚನಕಾರರ ತತ್ತ್ವಗಳಿಗೆ ಹೊಂದುವುದಿಲ್ಲ. ಹೇಗೆ ಶಿವ ಸೂಕ್ತಿಯಲ್ಲಿ ಶೈವಪದ್ಧತಿಗಳು ಕೂಡಿವೆಯೋ, ಹಾಗೆಯೇ ಇವುಗಳಲ್ಲಿಯೂ ಕೂಡಿವೆ. ಆದುದರಿಂದ ಅವುಗಳನ್ನು ನಾವು ಇಲ್ಲಿ ಉಲ್ಲೇಖಿಸುವುದಿಲ್ಲ.

೩೮೧. **ತ್ರಿವಿಧ ದೀಕ್ಷೆಗಳು :** ಇವು ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ಮತ್ತು ವೇಧಾದೀಕ್ಷೆ ಎಂದಿವೆ. ಕ್ರಿಯಾದೀಕ್ಷೆಯಿಂದ ಕಾಯಕ್ಕೆ, ಮಂತ್ರ ದೀಕ್ಷೆಯಿಂದ ಪ್ರಾಣಕ್ಕೆ, ಮತ್ತು ವೇಧಾದೀಕ್ಷೆಯಿಂದ ಮನಕ್ಕೆ ಉಪ ದೇಶ ಮಾಡುವುದು.

೩೮೨. **೨೧ ವಿಧ ದೀಕ್ಷೆಗಳು :** (೧) [illegible] ದೀಕ್ಷೆ, ಸ್ವಸ್ತಿಕಾರೋಹಣ, [illegible] ಲಿಂಗಸ್ವಾಯತ ಈ ಏಳನ್ನು ಕಾಯಕ್ಕೆ [illegible] (೨) ಸಮಯ, ನಿಶ್ಶಂಕಾ, [illegible] ಸತ್ಯಶುದ್ಧ ಈ ಏಳನ್ನು ಪ್ರಾಣಕ್ಕೆ [illegible] (೩) [illegible] ಚಿತ್ತ, ಧೃಢವ್ರತ, ಪಂಚೇಂದ್ರಿಯ [illegible] ಲಿಂಗಾಯತ, ಸದ್ಯೋನ್ಮುಕ್ತಿ ಈ ಏಳನ್ನು ಮನಕ್ಕೆ [illegible]

೩೮೩. **ಅಷ್ಟವಿಧ ಸಮಾಧಿಗಳು :** ಇವು [illegible] (೧) ನಿರ್ವಾಣ ಸಮಾಧಿ- ಇದು ನಿರವಯಸ್ಥಲಕ್ಕೆ ಕಾರಣವಾದ [illegible] ಲಿಂಗಾ ನುಭವವುಳ್ಳವರಿಗೆ ಸಂಬಂಧವು. (೨) [illegible] ಸಮಾಧಿ- [illegible] ಯಸ್ಥಲಕ್ಕೆ ಕಾರಣವಾದ ನಿರಾಳ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೩) ನಿರವಯ ಸಮಾಧಿ- ಐಕ್ಯಸ್ಥಲಕ್ಕೆ ಕಾರಣವಾದ ಮಹಾಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೪) ನಿಜಶಿವ ಸಮಾಧಿ- ಶರಣಸ್ಥಲಕ್ಕೆ ಕಾರಣವಾದ ಪ್ರಸಾದ ಲಿಂಗಾನುಭವವುಳ್ಳವರಿಗೆ ಸಂಬಂಧವು. (೫) ಬಯಲಸಮಾಧಿ- ಪ್ರಾಣಲಿಂಗಕ್ಕೆ ಕಾರಣವಾದ ಜಂಗಮ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೬) ಗೋ[illegible] ಸಮಾಧಿ- ಪ್ರಸಾದಿಸ್ಥಲಕ್ಕೆ ಕಾರಣವಾದ ಶಿವಲಿಂಗಾನುಭವವ ಹೊಂದಿದ ವರಿಗೆ ಸಂಬಂಧವು. (೭) ಗೋಮುಖ ಸಮಾಧಿ- ಮಹೇಶ್ವರಸ್ಥಲಕ್ಕೆ



ಕಾರಣವಾದ ಗುರುಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು. (೮) ಕ್ರಿಯಾಸಮಾಧಿ- ಸದ್ಭಕ್ತಿಕಾರಣವಾದ ಆಚಾರ ಲಿಂಗಾನುಭವವನ್ನು ಹೊಂದಿದವರಿಗೆ ಸಂಬಂಧವು.

೩೮೪. **ಸಮಾಧಿ ಕ್ರಿಯೆ :** ಇದು ಅಂತ್ಯವಿಧಿಯಾಗಿದೆ. ಇದರ ಲ್ಲಿಯ ಭಾಗಗಳು ಆವವೆಂದರೆ- (೧) ಲಿಂಗೈಕ್ಯಂಗೆ ಘನಮಾರ್ಗದ ಎಚ್ಚರವನ್ನು ಹುಟ್ಟಿಸುವುದು. (೨) ಗುರುವಾಕ್ಯ ಪ್ರಮಾಣವಾಗಿ ನಡೆದು ನುಡಿದು ಆಚರಿಸಿ ಬಯಲಾದ ಮಹಾಮಹಿಮರ ಕಥಾ ಪ್ರಸಂಗಗಳನು ಓದಿ ಅನುಭಾವವ ಮಾಡುವುದು. (೩) ರೋದನಗಳನ್ನು ಮಾಡದೆ ಮಂಗಳ ಮಹೋತ್ಸವದಂತೆ ವರ್ತಿಸುವುದು. (೪) ಸಮಾಧಿಯ ಮಾಡು ವುದು. (೫) ಪಂಚಾಭಿಷೇಕಗಳಿಂದ ಸ್ನಾನವ ಮಾಡಿಸಿ, ಮಂಟಪವ ರಚಿಸಿ, ಆಸನದಲ್ಲಿ ಮೂರ್ತ ಮಾಡಿಸುವುದು. (೬) ಪುಷ್ಪಾಂಜಲಿ ಯನ್ನು ಮಾಡುವುದು. (೭) ಸಮಾಧಿಸ್ಥಳಕ್ಕೆ ತರುವುದು. (೮) ಲಿಂಗೈಕ್ಯ ಶರಣನ ನಡೆನುಡಿಯಾಚರಣೆಯ ವೃತ್ತಾಂತವನ್ನು ಉಗ್ಘಡಿಸುವುದು. (೯) ಸಮಾಧಿಗೆ ಪಾದೋದಕ ಹಾಕುವುದು. (೧೦) ಸಮಾಧಿ ಮಂಟಪದಲ್ಲಿ ಮೂರ್ತವ ಮಾಡಿಸುವುದು. (೧೧) ಸರ್ವಾಂಗಕ್ಕೆ ಪ್ರಣವ ಸಂಬಂಧ ವಾದ ತಗಡು ಸಂಬಂಧಿಸುವುದು. (೧೨) ಪುಷ್ಪಾಂಜಲಿ. (೧೩) ಕವಾಟ ಬಂಧ. (೧೪) ಸಮಾಧಿಗೆ ವೃತ್ತಿಕೆಯ ತುಂಬುವುದು. (೧೫) ಮೇಲಿ ಗದ್ದುಗೆಯ ಮಾಡುವುದು.

**ಸೂಚನೆ :** ವೀರಶೈವಕ್ಕೆ ಸಂಬಂಧಿಸದೆ ಇದ್ದಂಥ ಅನೇಕ ಆಚಾರ ಗಳುಂಟು. ಅವುಗಳು ಶೈವ ಕರ್ಮಗಳಾಗಲಿ ಇಲ್ಲವೆ ವೈದಿಕ ಕರ್ಮಗಳಾ ಗಲಿ ಅಥವಾ ಮಿಶ್ರ ಕರ್ಮಗಳಾಗಲಿ ಇರುತ್ತವೆ. ಅವುಗಳನ್ನು ವಚನ ಕಾರರು ನಿರಾಕರಿಸಿದ್ದಾರೆ ಆದರೂ ರೂಢಿಯಲ್ಲಿ ಇಂಥ ಅನೇಕ ಆಚಾರ ಗಳು ವೀರಶೈವರಲ್ಲಿ ಬಂದಿವೆ. ಮತ್ತು ಅವುಗಳು ವೀರಶೈವ ಗ್ರಂಥಗಳಲ್ಲಿ ಆಗಿಂದಾಗ್ಗೆ ಉಲ್ಲೇಖಿಸಲ್ಪಡುತ್ತವೆ. ಆದ್ದರಿಂದ ಅವುಗಳು ಕೆಳಗೆ ಹೇಳ ಲ್ಪಟ್ಟಿರುತ್ತವೆ.

೩೮೫. **ಶೋಡಕ ಕರ್ಮಗಳು :** (೧) ಇವು ಗರ್ಭಾದಾನ, ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲ,

ಉಪನಯನ, (ದೀಕ್ಷಾ) ಉಪಾಕರ್ಮ, ಉತ್ಸರ್ಜನ, ವೇದವ್ರತ, ಗೌದಾನಿಕ, ಸ್ನಾತಕ, ವಿವಾಹ, ಸ್ಮಾರ್ತಾಗ್ನಿಹೋತ್ರ, ಔರ್ಧ್ವದೇಹಿಕ, ಇವು ಇರುತ್ತವೆ. (ಬ) (೧) ಗರ್ಭಾದಾನ (೨) ಪುಂಸವನ (೩) ಸೀಮಂತೋನ್ನಯನ (೪) ಅನವಲೋಮನ (೫) ಜಾತಕರ್ಮ (೬) ನಾಮಕರಣ (೭) ದುಗ್ಧಪ್ರಾಶನ (೮) ಸೂರ್ಯಚಂದ್ರಾವಲೋಕನ (೯) ನಿಷ್ಕ್ರಮಣ (೧೦) ಕರ್ಣವೇಧ (೧೧) ಅನ್ನಪ್ರಾಶನ (೧೨) ಚೌಲ (೧೩) ವಿದ್ಯಾರಂಭ (೧೪) ದೀಕ್ಷಾ (೧೫) ವಿವಾಹ (೧೬) ಅಂತ್ಯೇಷ್ಟಿ ಹೀಗೆ ಎರಡು ಪ್ರಕಾರವಾಗಿ ಉಲ್ಲೇಖಗಳಿವೆ.

೩೮೬. **ಷಟ್ಕರ್ಮಗಳು** : ಇವು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ. ಎಂದಿವೆ.

೩೮೭. **ದಶಕರ್ಮಗಳು** : ಗರ್ಭಾದಾನ, ಸೀಮಂತ, ಜಾತಕರ್ಮ (ಲಿಂಗಧಾರಣ), ನಾಮಕರಣ, ಕರ್ಣವೇಧ, ಚೌಲ, ವಿದ್ಯಾರಂಭ, ದೀಕ್ಷಾ, ವಿವಾಹ, ಅಂತ್ಯೇಷ್ಟಿ.

೩೮೮. **ನವವಿಧ ಭಕ್ತಿಗಳು** : ಇವು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖಿತ್ವ, ಆತ್ಮಾರ್ಪಣ, ಎಂದಿವೆ.

೩೮೯. **ನವಶಕ್ತಿಗಳು** : ಕಾಕಿನಿ, ದಾಕಿನಿ, ಲಾಕಿನಿ, ಶಾಕಿನಿ, ಡಾಕಿನಿ, ಆಕಿನಿ, ನಿರ್ಮಾಯಶಕ್ತಿ, ನಿಭ್ರಾಂತಶಕ್ತಿ, ನಿರ್ಭಗ್ನ ಶಕ್ತಿ ಎಂದಿವೆ.

೩೯೦. **೨೮ ಆಗಮಗಳು** : ಕಾಮಿಕಾಗಮ, ಯೋಗಜಾಗಮ, ಚಿಂತ್ಯಾಗಮ, ಕಾರಣಾಗಮ, ಅಜಿತಾಗಮ, ದೀಪ್ತಾಗಮ, ಸೂಕ್ಷ್ಮಾಗಮ, ಸಹಸ್ರಾಗಮ, ಅಂಶುಮಾನಾಗಮ, ಸುಪ್ರಭೋದಾಗಮ, ವಿಜಯಾಗಮ, ನಿಶ್ವಾಸಾಗಮ, ಸ್ವಯಂಭುವಾಗಮ, ಅನಿಲಾಗಮ, ವೀರಾಗಮ, ರೌರವಾಗಮ, ಮಕುಟಾಗಮ, ವಿಮಲಾಗಮ, ಚಂದ್ರಜ್ಞಾನಾಗಮ, ಬಿಂಬಾಗಮ, ಪ್ರೋದ್ಗಿತಾಗಮ, ಲಲಿತಾಗಮ, ಸಿದ್ಧಾಗಮ, ಸಂತಾನಾಗಮ, ಸರ್ವೋಕ್ತಾಗಮ, ಪಾರಮೇಶ್ವರಾಗಮ, ಕಿರಣಾಗಮ, ವಾತುಲಾಗಮ, ಎಂದು ೨೮ ಆಗಮಗಳಿವೆ.

೩೯೧. **ಹದಿನೆಂಟು ಪುರಾಣಗಳು** : ಬ್ರಹ್ಮಪುರಾಣ, ಪದ್ಮಪುರಾಣ ವಿಷ್ಣುಪುರಾಣ, ಶೈವಪುರಾಣ, ಭಾಗವತಪುರಾಣ, ನಾರದೀಯ ಪುರಾಣ, ಮಾರ್ಕಂಡೇಯ ಪುರಾಣ, ಆಗ್ನೇಯ ಪುರಾಣ, ಭವಿಷ್ಯತ್ಪುರಾಣ, ಬ್ರಹ್ಮ



ವೈವರ್ತಪುರಾಣ, ಲೈಂಗಪುರಾಣ, ವರಾಹಪುರಾಣ. ಸ್ಕಾಂದಪುರಾಣ, ವಾಮನಪುರಾಣ, ಕೂರ್ಮಪುರಾಣ, ಮತ್ಸ್ಯಪುರಾಣ, ಗಾರುಡಪುರಾಣ, ಬ್ರಹ್ಮಾಂಡಪುರಾಣ, ಎಂದಿವೆ. ಇವುಗಳಲ್ಲಿ ಸ್ಕಂದ, ಶೈವ, ಲೈಂಗ, ಕೂರ್ಮ, ವಾಮನ, ವರಾಹ, ಭವಿಷ್ಯತ್ತು, ಮತ್ಸ್ಯ, ಮಾರ್ಕಂಡೇಯ, ಬ್ರಹ್ಮಾಂಡ ಇವು ಹತ್ತು ಶಿವಪುರಾಣಗಳು.

೩೯೨. ಆರು ದರ್ಶನಗಳು : ಶೈವ, ಶಾಕ್ತ, ವೈಷ್ಣವ, ಸೌರ, ಗಾಣಾಪತ್ಯ, ಮಾಯಾವಾದಿ, ಇವು ಆರು ದರ್ಶನಗಳು.

೩೯೩. **ಪಂಚ ಸೂತಕಗಳು** :

೧ನೇ ವಿಧ : ಇವು ಜಾತಿಸೂತಕ, ಜನನ ಸೂತಕ, ಪ್ರೇತಸೂತಕ, ರಜಸೂತಕ. ಉಚ್ಛಿಷ್ಟ ಸೂತಕ, ಇವು ಐದು ಸೂತಕಗಳು.

೨ನೇ ವಿಧ : ಆರುಸ್ಥಲಗಳ ಪ್ರಕಾರ ಆರು ಸೂತಕಗಳು ಇವೆ- ಅವು ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ನೆನಹುಸೂತಕ, ಭಾವಸೂತಕ ಎಂದಿವೆ ಇವು ಭಕ್ತ ಮಹೇಶಾದಿ ಸ್ಥಲಗಳಿಗೆ ಅನುಕ್ರಮವಾಗಿ ಸಂಬಂಧಿಸಿವೆ.

೩೯೪. **ಶೈವವಿಧಗಳು** :

(ಅ) ಶೈವ, ಪಾಶುಪತ, ಸೋಮ, ದಕ್ಷಿಣ, ಕಾಳಾಮುಖ, ಲಾಕುಳ, (ಯಾಮಳ)

(ಬ) ಆದಿಶೈವ, ಮಹಾಶೈವ, ಅನುಶೈವ, ಅವಾಂತರಶೈವ, ಅಂತ್ಯಶೈವ, ಪ್ರವರಶೈವ, ಆದಿಶೈವರು ಶಿವದ್ವಿಜರು. ದೀಕ್ಷೆಹೊಂದಿದ ಶಿವದ್ವಿಜರು ಮಹಾಶೈವರು. ನೃಪರಿಗೂ ವೈಶ್ಯರಿಗೂ ದೀಕ್ಷೆಯನ್ನಿತ್ತರೆ, ಅವರು ಅನುಶೈವರು. ಶೂದ್ರರಿಗೆ ದೀಕ್ಷೆಯನ್ನಿತ್ತರೆ ಅವರು ಅವಾಂತರ ಶೈವರು. ಬ್ರಾಹ್ಮಣನಿಂದ ಶೂದ್ರಸ್ತ್ರೀಯರಲ್ಲಿ ಹುಟ್ಟಿದವರು ಪ್ರವರಶೈವರು. ಅಂತ್ಯಜರಿಗೆ ದೀಕ್ಷೆಯನ್ನಿತ್ತರೆ ಅವರು ಅಂತ್ಯಶೈವರು.

(ಕ) ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ. ಶಕ್ತಿಪರವಾದುದು ವಾಮವು ಭೈರವಪರವಾದುದು ದಕ್ಷಿಣವೆನಿಸುವುದು. ಸಪ್ತಮಾತೃಕಾಪರವಾದುದು ಮಿಶ್ರವು ವರಶಿವ ಪರವಾದುದು ಸಿದ್ಧಾಂತವು ಹೀಗೆ ಶೈವ ಭೇದಗಳಿವೆ.

(೮) ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ ಶಿವನನ್ನು ಪೂಜಿಸುವವರು ಸಾಮಾನ್ಯರು. ಶಿವ, ವಿಷ್ಣು, ಬ್ರಹ್ಮ, ಷಣ್ಮುಖ, ಗಣಪತಿ ಇಂಥ ದೇವತೆಗಳನ್ನೆಲ್ಲ ಪೂಜಿಸುವವರು ಮಿಶ್ರಶೈವರು. ಶಿವನನ್ನೊಬ್ಬನನ್ನೇ ಪೂಜಿಸುವವರು ಶುದ್ಧ ಶೈವರು. ಇವರಿಗೆ ಲಿಂಗಧಾರಣ ಇದೆ. ಸಂಕಲ್ಪ ವಿಕಲ್ಪಗಳನ್ನು ದೂರಮಾಡಿ ಆತ್ಮತತ್ವದ ವಿಚಾರ ಮಾಡುವವರು ವೀರಶೈವರು.

ಟೀಪು : ಶಿವಶರಣರು ಮತ್ತು ವಚನಕಾರರು ಇಂಥ ಯಾವ ಭೇದವನ್ನೂ ಎಣಿಸುವುದಿಲ್ಲ. ಅವರು ಭವಿ, ಭಕ್ತ ಎಂಬ ಎರಡೇ ಭೇದಗಳನ್ನು ಎಣಿಸುತ್ತಾರೆ. ವೀರಶೈವ ದೀಕ್ಷೆಹೊಂದಿದವರಲ್ಲಿ ಯಾವ ತರದ ಭೇದವನ್ನು ಅವರು ಎಣಿಸುವುದಿಲ್ಲ.

೩೯೫. ಐಕ್ಯದ ಭೇದಗಳು : ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಇವು ಆಯಾ ಧರ್ಮದವರ ಧ್ಯೇಯಗಳಾಗಿವೆ.

೩೯೬. ಕಾಂಡಗಳು : ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡಗಳು ಎಂದಿವೆ.

೩೯೭. ಗೋತ್ರಗಳು : ವೀರ, ನಂದಿ, ವೃಷಭ, ಭೃಂಗೀ, ಸ್ಕಂದ ಇವು ೫ ಗೋತ್ರಗಳು. ಇವು ಅನುಕ್ರಮವಾಗಿ ಪಡ್ಡಿಡಿ, ವೃಷ್ಟಿ, ಮುಕ್ತಾಗುಚ್ಛ, ಲಂಬನ, ಪಂಚವರ್ಣ ಇದ್ದು ಇವುಗಳ ಕನ್ನಡ ಹೆಸರುಗಳು ಪಾಡಿಕೆಯಲ್ಲಿವೆ. ಅವು ಪಡಪಿಡಿ ಬಗೆ, ಮಳೆ ಬಗೆ, ಮುತ್ತಿನ ಕಂತೆಯ ಬಗೆ, ಲಂಬನ ಬಗೆ ಮತ್ತು ಪಂಚವಣ್ಣಿಗೆಯ ಬಗೆ ಎಂದಿವೆ. ಇವುಗಳಿಗೆ ರೇವಣಸಿದ್ಧ, ಮರುಳಾರಾಧ್ಯ, ಏಕೋರಾಮ, ಪಂಡಿತಾರಾಧ್ಯ, ವಿಶ್ವಾರಾಧ್ಯ ಇವರು ಅನುಕ್ರಮವಾಗಿ ಮೂಲ ಗುರುಗಳು.

೩೯೮. ಏಕಾದಶ ರುದ್ರರು : ವೀರಭದ್ರ, ಶಂಭು, ಗಿರೀಶ, ಅಜೈಕಪಾತ್, ಅಹಿರ್ಬುಧ್ನ್ಯ, ಪಿನಾಕಿ, ಸ್ಥಾಣು, ಪಶುಪತಿ, ಭವ, ಉಗ್ರ, ತ್ರಿಪುರಾಂತಕ ಪತಿ.

೩೯೯. ಅಷ್ಟದಿಕ್ಪಾಲಕರು : ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ, ಈಶಾನ.



೪೦೦. **ಸಪ್ತಸಾಗರಗಳು** : ಲವಣ ಸಮುದ್ರ, ಕ್ಷೀರಸಮುದ್ರ, ದಧಿಸಮುದ್ರ, ಘೃತಸಮುದ್ರ, ಇಕ್ಷುಸಮುದ್ರ, ಸುರಾಸಮುದ್ರ, ಸ್ವಾದೂದಕಸಮುದ್ರ

೪೦೧. **ಹದಿನಾಲ್ಕು ವರ್ಷಗಳು** : ಅತಳ, ವಿತಳ, ಸುತಳ, ಮಹೀತಳ, ತಳಾತಳ, ರಸಾತಳ, ಪಾತಾಳ; ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ.

೪೦೨. **ಪಂಚ ಯಜ್ಞಗಳು** : ದೇವಯಜ್ಞ, ಪಿತೃಯಜ್ಞ,
ಮನುಷ್ಯಯಜ್ಞ. ಭೂತಯಜ್ಞ, ಬ್ರಹ್ಮಯಜ್ಞ, ಎಂದಿವೆ.
ಮನುಷ್ಯಯಜ್ಞ. ಭೂತಯಜ್ಞ, ಬ್ರಹ್ಮಯಜ್ಞ, ಎಂದಿವೆ.

೪೦೩. **ಉದ್ಧರಣೆಗಳು** : ವೀರಶೈವ ತತ್ವಗಳ ಮರ್ಮವನ್ನು ತಿಳಿಯಲಿಕ್ಕೆ ಉದ್ಧರಣೆಗಳು ಸಾಧನವಾಗಿವೆ. ಅವು ೩೨ ಇವೆ. ಅವುಗಳ ಹೆಸರುಗಳು— ಅನಾದಿ ಭಕ್ತೋದ್ಧರಣೆ, ಅಷ್ಟಾವರಣೋದ್ಧರಣೆ,
ಅನಾದಿ ಜಂಗಮೋದ್ಧರಣೆ, ಗೋಮುಖೋದ್ಧರಣೆ, ಪ್ರಣವೋದ್ಧರಣೆ,
ಮಕುಟೋದ್ಧರಣೆ, ಶೂನ್ಯಲಿಂಗೋದ್ಧರಣೆ, ಚಿದಂಬರೋದ್ಧರಣೆ, ಷಟ್ಪ್ರ
ಹೋದ್ಧರಣೆ, ಪಂಚಮೂರ್ತಿ ಲಿಂಗೋದ್ಧರಣೆ, ಶಾಂಭವೀಚಕ್ರೋದ್ಧ
ರಣೆ, ವೃಷಭೋದ್ಧರಣೆ, ನವಚಕ್ರೋದ್ಧರಣೆ, ತತ್ವಪಂಚೀಕರಣೋದ್ಧರಣೆ,
ಮಂತ್ರಪಂಚೀಕರಣೋದ್ಧರಣೆ, ಲಿಂಗಪಂಚೀಕರಣೋದ್ಧರಣೆ, ಮಹಾಲಿಂ
ಗೋದ್ಧರಣೆ, ಷಡಕ್ಷರೋದ್ಧರಣೆ, ಬಸವೋದ್ಧರಣೆ, ನೂರೆಂಟು ಪ್ರಣವೋ
ದ್ಧರಣೆ, ಅಧಃಕುಂಡಲಿ ಶಕ್ತಿಪ್ರಣವೋದ್ಧರಣೆ, ನೂರೆಂಟು ತೆರದ ಅರ್ಗಣೋ
ದ್ಧರಣೆ, ಆರುವತ್ತಾರು ತೆರದ ಕರಣಾರ್ಪಣೋದ್ಧರಣೆ, ನಾಲ್ವತ್ತೆಂಟು
ತೆರದ ಅರ್ಪಣೋದ್ಧರಣೆ, ಇನ್ನೂರು ಹದಿನಾರು ತೆರದ ಅರ್ಪಣೋದ್ಧರಣೆ,
ಮೂವತ್ತಾರು ತೆರದ ಮಿಶ್ರಾರ್ಪಣೋದ್ಧರಣೆ, ಕಾಯಾರ್ಪಣೋದ್ಧರಣೆ,
ಅಂಗಷಡಕ್ಷರೋದ್ಧರಣೆ, ಲಿಂಗಷಡಕ್ಷರೋದ್ಧರಣೆ, ಲಯಯೋಗ
ಸಮಾಧಿ ಎಂದಿವೆ.

# ಶಬ್ದಾನುಕ್ರಮಣಿಕೆ

(ಟೀಪು:—ಶಬ್ದಗಳ ಮುಂದಿನ ಅಂಕಿಗಳು ಗ್ರಂಥದಲ್ಲಿಯ ಗುಂಪುಗಳ ಸಂಖ್ಯೆಗಳನ್ನು ನಿರ್ದೇಶಿಸುತ್ತವೆ.)


ಅ, ಉ, ಮ ಪ್ರಣವುಗಳು ೨೪, ೧೯೦-೧೯೩, ೨೦೪, ೨೩೨, ೨೩೩

ಅಕಾಯ ೧೦೪

ಅಕಾರ ಪ್ರಣವ ೨೪, ೧೯೧

ಅಗ್ನಿ ೨೯, ೪೮

ಅಗ್ನಿಧಾರಣೆ ೩೭೯

ಅಗ್ನಿಯ ಪಂಚೀಕೃತಿ ೨೮

ಅಘೋರಮುಖ ೨೫, ೨೫೭

ಅಘೋರಾಸ್ತ್ರಮಂತ್ರ ೨೬೩

ಅಚ್ಚಪ್ರಸಾದಿ ೧೫೭, ೧೬೬

ಅಜಪಗಾಯತ್ರೀ ೨೬೫

ಅದ್ವೈತ ೨೧

ಅದ್ವೈತಾಚಾರ ೨೧

ಅಧ್ವಗಳು ೨೬

ಅಧಿದೇವತೆಗಳು ೩೩೦

ಅನ್ನಮಯಕೋಶ ೩೬

ಅನಂತಶಕ್ತಿ ೫೫

ಅನಾದಿಕಲೆ ೩೮

ಅನಾದಿ ಗುರುಸ್ವರೂಪ ೧೬೫

ಅನಾದಿ ಜಂಗಮಸ್ವರೂಪ ೧೬೫

ಅನಾದಿ ಪರಿಪೂರ್ಣ ನಿಜವಸ್ತು ೧೬೫

ಅನಾದಿ ಪ್ರಣವ ೧೮೬

ಅನಾದಿ ಬೋಧ ೫೫

ಅನಾದಿ ಭಕ್ತಸ್ವರೂಪ ೧೬೫

ಅನಾದಿ ನಿರಂಜನ ಜಂಗಮ ಸ್ವರೂಪ ೧೬೫

ಅನಾದಿ ಲಿಂಗಸ್ವರೂಪ ೧೬೫

ಅನಾದಿ ಶರಣ ಪ್ರಸನ್ನಮೂರ್ತಿ ೧೬೫

ಅನಾದಿ ಸಂಜ್ಞೆ ೩೧

ಅನಾಹತ ಚಕ್ರ ೩೮

ಅನಿರ್ವಾಚ್ಯ ೧೮, ೨೦

ಅನಿರ್ವಾಚ್ಯ ಕಲೆ ೩೮

ಅನುಗ್ರಹಲಿಂಗ ೧೦೫

ಅನುಭವ ೭

ಅನುಭಾವ ೭, ೫೮

ಅನುಭಾವಗೋಷ್ಠಿ ೭

ಅನುಭಾವಿ ೭

ಅನುಭಾವಭಕ್ತಿ ೧೩, ೫೧, ೫೬

ಅಪಾನವಾಯು ೨೮, ೪೦

ಅರ್ಪಿತ ಪ್ರಸಾದಿ ೬೫

ಅಪ್ಪುತತ್ತ್ವ ೨೭, ೨೯, ೪೮

ಅಮೂರ್ತಿ ಸಾದಾಖ್ಯ ೨೩

ಅಮೃತಧಾರಣೆ ೩೭೯

ಅರಿವು ೬
ಅರುವತ್ತುನಾಲ್ಕು ಶೀಲಗಳು ೧೯೯
ಅಲಂಬು ೩೯
ಅಲುಪ್ತಾಶಕ್ತಿ ೫೫
ಅವಧಾನ ಪ್ರಸಾದಿ ೬೫
ಅವಧಾನ ಭಕ್ತಿ ೧೩, ೫೧, ೫೬
ಅವಧಾನೋದಕ ೧೪೧
ಅವಸ್ಥೆಗಳು ೪೧
ಅವಾಗ್ಜ ೧೪೨
ಅಕ್ಷರಗಳು ೩೮
ಅರ್ಧಚಂದ್ರಾಕೃತಿ ೩೮
ಅರ್ಪಣ ೧೪೨
ಅರ್ಪಿತಪ್ರಸಾದೋದಕ ೧೪೦
ಅರ್ಪಿತಲಿಂಗ ೧೦೫
ಅರ್ಪಿತಾವಧಾನ ೧೪೬
ಅಷ್ಟತನುಮೂರ್ತಿನಿರಸನ ಸ್ಥಲ ೯೮
ಅಷ್ಟದಳ ಜಪ ೨೯೬ /
ಅಷ್ಟವಿಧಾರ್ಚನೆ ೩೬೧
ಅಷ್ಟಾವರಣಗಳು ೩೮, ೧೨೪, ೩೪೯, ೩೫೦
ಅಷ್ಟಾಕ್ಷರಗಳು ೨೦೪
ಅಷ್ಟೋಪಚಾರಗಳು ೩೬೮
ಅಸ್ತ್ರಮಂತ್ರ ೨೫೬
ಅಹಂಕಾರ ೨೮, ೩೬, ೪೮, ೫೬
ಅಂಗ ೨, ೧೨, ೧೬, ೫೫, ೩೨೨
ಅಂಗನ್ಯಾಸಗಳು ೩೬೬
ಅಂಗಲಿಂಗಸ್ಥಲ ೧೦೦
ಅಂಗಲೇಪನಸ್ಥಲ ೧೦೮
ಅಂಗಸ್ಥಲಗಳು ೫೩, ೯೬
ಅಂಗುಲಿನ್ಯಾಸ ೩೬೭
ಅಂಡಜ ೬೨
ಅಂತರಾತ್ಮ ೩೫, ೩೮, ೧೦೬
ಅಂತ್ಯಪ್ರಸಾದಿ ೧೦೪, ೧೫೬
ಅಂತಃಕರಣ ಚತುಷ್ಟಯಗಳು ೩೯
ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ ೧೬೨
ಆಕಾಶ ೨೯, ೪೮, ೭೫
ಆಕಾಶದ ಪಂಚೀಕೃತಿ ೨೮
ಆಕಾಶ ಲಿಂಗ ೧೦೭
ಆಕೃತಿಗಳು ೩೮, ೩೩೫
ಆಗಮಗಳು ೩೯೦
ಆಗಮಲಿಂಗ ೧೦೪
ಆಚಾರತೃಪ್ತಿ ೮೩
ಆಚಾರ ನಿಷ್ಠೆ ೭೯
ಆಚಾರ ಪ್ರಾಣಿ ೬೬
ಆಚಾರಲಿಂಗ ೧೬, ೩೮, ೫೬, ೫೭, ೭೦, ೮೬, ೮೭, ೧೦೩, ೧೦೪
ಆಚಾರಾವಧಾನಿ ೮೦
ಆಚಾರಾಂಗ ೭೮
ಆತ್ಮ ೨೫, ೩೪, ೩೮, ೪೮, ೫೬, ೩೩೨
ಆತ್ಮತತ್ವಗಳು ೨೯
ಆತ್ಮತ್ರಯಗಳು ೩೫
ಆತ್ಮವಿದ್ಯಾಲಿಂಗ ೨೭೩
ಆದಿಪ್ರಣವ ೨೦೨



ಆದಿಪ್ರಸಾದಿ ೧೦೬, ೧೫೬
ಆದಿಶಕ್ತಿ ೧೨, ೩೭
ಆಧಾರಚಕ್ರ ೩೮
ಆಧಾರಧಾರಣೆ ೩೭೯
ಆಪ್ಯಾಯನ ಪ್ರಸಾದ ೧೬೨
ಆನಂದ ೩೨, ೭೪
ಆನಂದಮಯಕೋಶ ೩೬
ಆಯತ ೮೨
ಆಸನಗಳು ೩೭೮
ಆಸನಯೋಗ ೪೪
ಆಹ್ವಾನ ನಿರಸನಸ್ಥಲ ೯೮
ಆಜ್ಞಾ ಚಕ್ರ ೩೮
ಇಚ್ಛಾ ಶಕ್ತಿ ೧೨, ೩೭
ಇನ್ನೂರು ಹದಿನಾರು ತೆರದ ಅರ್ಪಣಗಳು ೧೬೦
ಇನ್ನೂರು ಹದಿನಾರು ಸ್ಥಲಗಳು ೭೭, ೮೮
ಇಲ್ಲವೆ ೧
ಇಷ್ಟಲಿಂಗ ೧೬, ೩೮, ೪೯, ೫೦, ೫೯, ೧೨೭, ೧೨೮, ೧೩೬, ೧೬೧ ೧೬೬
ಇಷ್ಟಲಿಂಗಾರ್ಚನ ೬೭
ಇಷ್ಟಲಿಂಗಾರ್ಪಣ ೧೪೩, ೧೪೭
ಇಷ್ಟಲಿಂಗಾರ್ಪಣ ಜಪ ೨೮೮
ಇಷ್ಟಲಿಂಗಾರ್ಪಿತ ೧೪೭, ೧೬೫
ಇಹಲೋಕವೀರ ೬೪
ಇಂದ್ರಿಯಗಳು ೨೯, ೩೩, ೩೬, ೪೫, ೩೧೩
ಇಂದ್ರಿಯಾನಂದ ೭೪
ಇಂದ್ರಿಯಾನುಗ್ರಹ ೧೦೫
ಈಡಾ ೩೯
ಈಶ್ವರ ೩೮
ಈಶಾನ ೨೫, ೨೫೭
ಈಳನ ೭೦
ಉಕಾರ ಪ್ರಣವ ೧೯೨
ಉದಕದ ಪಂಚೀಕೃತಿ ೨೮
ಉದ್ಧರಣೆಗಳು ೩೩, ೪೦೩
ಉದಾನವಾಯು ೨೮, ೪೦
ಉಪಚಾರಗಳು ೩೬೬, ೩೬೭, ೩೬೮, ೩೭೯, ೩೭೦
ಉಪಾಧಿಭಕ್ತರು ೧೭೦, ೧೭೧, ೨೭೦
ಉಪಾಧಿ ಮಾಟಸ್ಥಲ ೯೭, ೧೭೧
ಉಪಾಂಗಗಳು ೫೪
ಉಭಯಸ್ಥಲ ೯೭
ಏಕಭಾಜನಸ್ಥಲ ೧೦೨, ೧೯೫
ಏಕಾದಶ ಪ್ರಸಾದಗಳು ೧೬೨, ೧೬೩, ೧೬೪
ಏಕೋತ್ತರ ಶತಸ್ಥಲಗಳು ೯೬, ೧೬೬
ಐಕ್ಯ ೧೬, ೨೧, ೮೩, ೩೯೫
ಐಕ್ಯಸ್ಥಲ ೫೧, ೫೩, ೫೬, ೬೮, ೧೦೨
ಐವತ್ತಾರು ತೆರದ ಆಚಾರಗಳು ೧೯೯
ಐವತ್ತೆರಡಕ್ಷರಗಳು ೨೦೫
ಐವತ್ತೆರಡು ವಿಧದ ಇರವು ೧೯೯
ಒಲವು ಲಿಂಗ ೧೦೬
ಓಂಕಾರ ಪ್ರಣವ ೧೯, ೨೨, ೨೪, ೩೩, ೧೮೦, ೨೭೯

ಕರಣ ಚತುಷ್ಟಯಗಳು ೪೮
ಕರಣಾರ್ಪಣ ೧೪೦, ೧೪೪, ೧೫೪, ೧೬೦, ೩೧೬
ಕರಣಾರ್ಪಣ ಜಪ ೨೮೭, ೨೯೦
ಕರಣಾರ್ಪಿತ ೧೦೫
ಕರನ್ಯಾಸ ೩೭೭
ಕರಸ್ಥಲ ೭೨
ಕರ್ತೃಸಾದಾಖ್ಯ ೨೩
ಕರ್ಮಸಾದಾಖ್ಯ ೨೩
ಕರ್ಮಕ್ಷಯ ೫೪
ಕರ್ಮೇಂದ್ರಿಯಗಳು ೨೯, ೩೬, ೩೭, ೪೫, ೩೧೩
ಕರುಣಜಲ ೧೩೯, ೧೪೦, ೧೬೬
ಕಲಾಧ್ವ ೨೩
ಕಲಾಪ್ರಣವ ೧೮೫
ಕಲಾಬ್ರಹ್ಮ ೨೫
ಕಲೆ ೧೧, ೧೯, ೨೩, ೨೯, ೩೦, ೩೯, ೩೩೮
ಕವಚಮಂತ್ರ ೨೫೬
ಕಳಾಗ್ರಾಹಕ ೮೨
ಕಳಾನ್ಯಾಸ ೩೭೫
ಕಾಯಲಿಂಗ ೧೦೪
ಕಾಯಲಿಂಗೈಕ್ಯ ೭೮
ಕಾರ್ಯಾನುಗ್ರಹ ೧೦೫
ಕಾಯಾರ್ಪಣ ೧೪೩, ೧೫೪, ೧೬೦, ೩೧೫
ಕಾಯಾರ್ಪಣ ಜಪ ೨೮೬
ಕಾರಣಾನಾಮಗಳು ೩೧
ಕಾರಣ ಶರೀರ ೫, ೧೬, ೪೯
ಕಾಂಡಗಳು ೩೯೬
ಕ್ರಿ ೪
ಕ್ರಿಯಾಗಮ ೧೦೪
ಕ್ರಿಯಾಚಾರ ೧೧೦, ೧೧೭
ಕ್ರಿಯಾಜಂಗಮ ೧೨೯
ಕ್ರಿಯಾದೀಕ್ಷೆ ೭೧, ೩೮೧
ಕ್ರಿಯಾನಿಷ್ಪತ್ತಿ ೧೦೭
ಕ್ರಿಯಾಪ್ರಕಾಶ ೧೦೭
ಕ್ರಿಯಾಪಾದೋದಕ ೧೩೯
ಕ್ರಿಯಾಭಸಿತ ೧೭೦, ೧೭೨
ಕ್ರಿಯಾಲಿಂಗ ೧೦೩, ೧೨೮
ಕ್ರಿಯಾಶಕ್ತಿ ೧೨, ೩೭
ಕ್ರಿಯಾಸಮಾಧಿ ೩೮೩
ಕ್ರಿಯೆ ೪, ೬, ೧೨, ೭೦
ಕೀಲಕಮಂತ್ರ ೨೫೩, ೨೫೫
ಕುಂಡಲಾಕೃತಿ ೩೮
ಕೂರ್ಮವಾಯು ೪೦
ಕೃಕರವಾಯು ೪೦
ಕೈಲಾಸ ೨೧
ಕೈವಲ್ಯ ೨೧
ಕೊಂಡುದುಪ್ರಸಾದಿಸ್ಥಲ ೧೦೮
ಕೋಶಗಳು ೩೬
ಖೇಚರಿ ಮುದ್ರೆ ೪೩
ಗಣಾಂಗಗಳು ೩೨೪
ಗಣಾಚಾರ ೫೬, ೭೦, ೧೧೦, ೧೧೪
ಗಂಧ ೨೪, ೪೬, ೧೬೦
ಗಾಂಧಾರೀನಾಡಿ ೨೯
ಗುದ ೪೫



ಗುರು ೧೨೫, ೧೩೨, ೧೩೩, ೧೩೭, ೧೪೯, ೧೫೨, ೧೫೩
ಗುರುಕರುಣಸ್ಥಲ ೯೭
ಗುರುನಿಷ್ಠೆ ೭೯
ಗುರುಪ್ರಸಾದ ೧೪೮, ೧೫೪, ೧೬೫
ಗುರುಪಾದೋದಕ ೧೩೯, ೧೪೧
ಗುರುಭಕ್ತ ೬೩
ಗುರುಮಹಾತ್ಮ್ಯಸ್ಥಲ ೯೯
ಗುರುಮಂತ್ರ ೨೬೦, ೨೬೧
ಗುರುಲಿಂಗ ೧೬, ೩೮, ೫೬, ೫೮, ೭೧, ೮೬, ೮೭, ೧೦೩, ೧೦೪
ಗುಹ್ಯೇಂದ್ರಿಯ ೨೮, ೪೫
ಗೂಢಸಂಜ್ಞೆ ೩೧
ಗೋತ್ರಗಳು ೩೯೭
ಗೋಮುಖ ಸಮಾಧಿ ೩೮೩
ಗೋಳಕ ಸಮಾಧಿ ೩೮೩
ಗೋಳಕಾಕಾರ ಪ್ರಣಮ ೨೨, ೨೦೨
ಗೌರವ ತೃಪ್ತಿ ೮೩
ಗೌರವಾವಧಾನಿ ೮೦
ಗೌರವಾಂಗ ೭೮
ಘನಸಾಮರಸ್ಯ ೮೨
ಘ್ರಾಣೇಂದ್ರಿಯ ೨೮, ೪೬, ೪೭, ೫೬
ಚಕ್ರ ೩೬, ೧೬೭, ೩೨೮
ಚತುರ್ವಿಧ ಬಿಂದು ಲಿಂಗ ೧೨೦, ೨೭೩
ಚತುರ್ವಿಧ ಸಾರಾಯಸ್ಥಲ ೯೭
ಚತುರ್ವಿಂಶೋಪಚಾರಗಳು ೩೯೯
ಚರ ೬೦, ೭೩, ೧೦೩
ಚರತೃಪ್ತಿ ೮೩
ಚರನಿಷ್ಠೆ ೭೯
ಚರಾಚರನಾಸ್ತಿಸ್ಥಲ ೧೦೮
ಚರಾವಧಾನಿ ೨೮೦
ಚರಾಂಗ ೭೮
ಚಿತ್ ೧೯, ೩೨
ಚಿತ್ಕಲಾಪ್ರಣಮ ೧೮೫
ಚಿತ್ಕಲೆ ೧೯
ಚಿತ್ತ ೨೮, ೩೬, ೪೮, ೫೬
ಚಿತ್ತು ೧೧, ೧೯
ಚಿತ್ಪ್ರಕಾಶ ೧೯
ಚಿತ್ಪ್ರಣಮ ೧೭೯
ಚಿತ್ಶಕ್ತಿ ೧೨, ೩೭, ೧೭೯
ಚಿತ್ಸ್ವರೂಪು ೧೯
ಚಿದಾನಂದ ೧೯
ಚಿದಾನಂದ ಸಮಾಧಿ ೩೮೩
ಚಿದ್ಬ್ರಹ್ಮಾಂಡ ೧೯
ಚಿದ್ರುದ್ರಾಕ್ಷಿ ೧೭೭, ೨೭೩
ಚಿದ್ರೂಪ ೧೯
ಚಿನ್ಮಯ ೧೯
ಚಿನ್ನಾದ ೧೯
ಚಿದ್ಬಿಂದು ೧೯
ಚಿನ್ಮಯಾತ್ಮ ೩೮
ಜಗತ್ತು ೨, ೧೯
ಜಪ ೨೭೧, ೨೭೨, ೨೯೮
ಜಂಗಮ ೧೮, ೨೫, ೧೨೯, ೧೩೧, ೧೩೩, ೧೩೪, ೧೩೫, ೧೩೭, ೧೫೧, ೧೫೨, ೧೫೩
ಜಂಗಮಪ್ರಸಾದ ೧೪೯, ೧೫೪, ೧೬೫
ಜಂಗಮಪಾದೋದಕ ೧೩೯, ೧೪೧
ಜಂಗಮಪ್ರಾಣಿ ೬೬

ದೀಕ್ಷೆ ೫೮, ೬೧, ೩೮೧, ೩೮೨
ದೇವದತ್ತವಾಯು ೪೦
ದೇಹ ೩೦೮
ದೇಹನ್ಯಾಸ ೩೬೬
ಧನಂಜಯವಾಯು ೪೦
ಧರ್ಮಾಚಾರ ೧೦೪, ೧೧೦, ೧೨೨
ಧಾರಣಯೋಗ ೪೪
ಧಾರಣೆಗಳು ೩೬೯
ಧ್ಯಾನಮುದ್ರೆ ೪೩
ಧ್ಯಾನಯೋಗ ೪೪
ಧೂಪ ೩೬೩
ಧೂಳಪಾದೋದಕ ೧೩೯
ನಕಾರಮಂತ್ರ ೧೮೦
ನಯನಸ್ಥಲ ೬೨
ನವಪ್ರಣಮಗಳು ೨೩೨
ನವಲಿಂಗಪೂಜೆ ೩೫೭
ನಷ್ಟಾಗಮ ೧೦೭
ನಾಗವಾಯು ೪೦
ನಾಡಿಗಳು ೩೮, ೩೯
ನಾಡಿಧಾರಣೆ ೩೬೯
ನಾದ ೧೧, ೧೯, ೧೩೫, ೧೭೦, ೩೪೨
ನಾಸಿಕೇಂದ್ರಿಯ ೫೭
ನ್ಯಾಸಗಳು ೨೯೧, ೩೭೨, ೩೬೫, ೩೬೭, ೩೬೬
ನ್ಯಾಸಾಕ್ಷರಮಂತ್ರ ೨೫೩, ೨೫೭
ನಿಚ್ಚಪ್ರಸಾದಿ ೧೫೬, ೧೭೭
ನಿಜ ೧೮
ನಿಜತತ್ತ್ವ ೧೮
ನಿಜಶಿವಸಮಾಧಿ ೩೮೩
ನಿತ್ಯ ೩೨
ನಿತ್ಯಾಚಾರ ೧೧೦, ೧೨೧
ನಿಯತಾಚಾರ ೫೬
ನಿಯಮಯೋಗ ೪೪
ನಿರವಯ ೧, ೧೫, ೯೩, ೧೨೩
ನಿರವಯಸಮಾಧಿ ೩೮೩
ನಿರಹಂಕಾರದ ನೆಲೆ ೩೦೨
ನಿರಹಂಕಾರ ಹಸ್ತ ೫೨, ೬೨
ನಿರಂಜನ ಪ್ರಣಮ ೧೬೯, ೧೮೧
ನಿರಂಜನಲಿಂಗ ೩೮
ನಿರಂಜನ ಷಟ್‌ಸ್ಥಲ ೯೨
ನಿರಂಜನ ಹಕಾರ ೧೮೨
ನಿರಂಜನಾಕೃತಿ ೩೮
ನಿರಂಜನಾತೀತ ಷಟ್‌ಸ್ಥಲ ೯೩
ನಿರ್ಮಲಾತ್ಮ ೩೮
ನಿಷ್ಕಳಾಕೃತಿ ೩೮
ನಿಷ್ಪತ್ತಿಲಿಂಗ ೧೦೬
ನಿರಾಭಾರಿ ಜಂಗಮ ಶರಣಗಣಂಗಳು ೨೭೨
ನಿರಾಮಯ ಷಟ್‌ಸ್ಥಲ ೯೧
ನಿರಾಲಂಬ ೧೦, ೧೮
ನಿರಾಳ ೧೮
ನಿರ್ನಾಮೋದಕ ೧೪೧
ನಿರ್ಭಾವ ತೃಪ್ತಿ ೮೩
ನಿರ್ಭಾವಾಗಮ ೮೦೭
ನಿರ್ಮಾಯಕಲೆ ೩೮
ನಿರ್ವಾಣ ದೀಕ್ಷೆ ೬೧
ನಿರ್ವಾಣ ಭಕ್ತ ೧೬೧
ನಿರ್ವಾಣ ಸಮಾಧಿ ೩೮೩
ನಿಷ್ಠಾಭಕ್ತಿ ೧೩, ೫೧, ೫೭

ನಿರೀಕ್ಷಣ ೭೦
ನಿರುಪಾಧಿಕ ೭೩
ನಿರುಪಾಧಿಭಕ್ತ ೧೭೦, ೧೭೧, ೨೬೦
ನಿರುಪಾಧಿ ಮಾಟಸ್ಥಲ ೯೭
ನಿರೂಪಲಿಂಗ ೧೦೬
ನಿಶ್ಶೂನ್ಯ ೨೦
ನಿಶ್ಶೂನ್ಯಲಿಂಗ ೩೮
ನಿವೃತ್ತಿ ೧೫, ೩೦, ೩೮, ೯೪
ನಿರ್ದೇಹಾಗಮ ೧೦೬
ನಿಂದುದೋಗರಸ್ಥಲ ೧೦೮
ನಿಃಕಲಲಿಂಗ ೨೦, ೩೮
ನೂರುಮೂವತ್ತಾರು ವರ್ಣಗಳು ೨೭೦
ನೂರೆಂಟು ಪ್ರಣವಗಳು ೨೬೯
ನೆನಹು ೧೯
ನೆಲೆಗಳು ೩೦೦–೩೦೫
ನೇತ್ರಮಂತ್ರ ೨೫೬
ನೇತ್ರೇಂದ್ರಿಯ ೨೮, ೪೬, ೪೭, ೫೬
ಪದಾಧ್ವ ೨೬
ಪಯಸ್ವಿನೀ ೩೯
ಪರಕಾಯ ೧೦೪
ಪರತತ್ವ ೧೮
ಪರಬ್ರಹ್ಮವಸ್ತು ೧೮, ೨೫
ಪರಮಾತ್ಮ ೧೮, ೩೧, ೩೨, ೩೫, ೩೮, ೧೦೬, ೨೦೭
ಪರಮೇಶ್ವರ ೩೮
ಪರಲೋಕವೀರ ೬೪
ಪರವಸ್ತು ೧೮
ಪರಶಕ್ತಿ ೧೨, ೩೭
ಪರಶಿವ ೧೮, ೨೫
ಪರಸಂಜ್ಞೆ ೩೧, ೬೦, ೭೩, ೧೦೩
ಪರಂಜ್ಯೋತಿರ್ಲಿಂಗ ೨೨
ಪರಿಣಾಮಪ್ರಸಾದಿ ೬೫
ಪರಿಣಾಮಿ ೭೩
ಪರಿಪೂರ್ಣ ೭೩
ಪರಿಪೂರ್ಣ ಪ್ರಕಾಶ ೭೫
ಪರಿಪೂರ್ಣ ಸಂಜ್ಞೆ ೩೨
ಪರೆ ೨೪೧
ಪಶ್ಯತಿ ೨೪೧
ಪಶ್ಚಿಮಚಕ್ರ ೩೮
ಪಂಚಕಲಶ ೩೩
ಪಂಚಕೋಶಗಳು ೩೬
ಪಂಚಗವ್ಯ ೩೭೧
ಪಂಚಧಾರಣೆಗಳು ೩೭೯
ಪಂಚಪಂಚಾಕ್ಷರಗಳು ೨೩೧
ಪಂಚಪ್ರಸಾದಮಂತ್ರ ೨೪೬
ಪಂಚಬ್ರಹ್ಮನ್ಯಾಸ ೩೭೫
ಪಂಚಬ್ರಹ್ಮಮಂತ್ರ ೨೫೭
ಪಂಚಮಹಾಭೂತಗಳು ೨೭, ೪೬
ಪಂಚಮುಖಗಳು ೩೩
ಪಂಚವಿಷಯಗಳು ೪೭, ೩೧೨
ಪಂಚವಿಂಶತಿ ತತ್ವಗಳು ೪೫–೪೮, ೩೦೮, ೩೧೪
ಪಂಚಾಚಾರಗಳು ೧೧೦–೧೧೫
ಪಂಚಾಮೃತ ೩೬೪
ಪಂಚಾಸ್ತ್ರ ಮಹಾಮಂತ್ರಗಳು ೨೬೩
ಪಂಚಾಕ್ಷರಗಳು ೩೦, ೩೩, ೨೦೩, ೨೦೬, ೨೦೮
ಪಂಚಾಕ್ಷರನ್ಯಾಸ ೩೭೫
ಪಂಚಾಕ್ಷರಿಮಂತ್ರ ೧೭೮, ೧೭೯, ೨೪೭



ಪಂಚಾಕ್ಷರಿಯ ಮಿಶ್ರ ಪಂಚೀಕರಣ ೨೩೬
ಪಂಚಾಕ್ಷರಿ ಸ್ಥಲ ೯೭
ಪಂಚೀಕರಣ ಅಥವಾ ಪಂಚೀಕೃತಿ ೨೮, ೩೦೬, ೩೦೭
ಪಂಚೇಂದ್ರಿಯ ವಿರಹಿತ ಪ್ರಸಾದ ೧೬೨
ಪಂಚೋಪಚಾರಗಳು ೩೬೭
ಪ್ರಕಾಶಲಿಂಗ [illegible]೦೭
ಪ್ರಕೃತಿ ೧೮
ಪ್ರಣವಗಳು ೨೪, ೩೦, ೩೩, ೩೮, ೧೯೫, ೧೯೬, ೧೯೭, ೧೯೮, ೧೯೯, ೨೦೦, ೨೦೧, ೨೬೭, ೩೩೮
ಪ್ರಣವಪಂಚಾಕ್ಷರಿ ೧೮೦
ಪ್ರಣವಸಂಬಂಧಗಳು ೨೦೯–೨೩೦
ಪ್ರಣವೋಚ್ಚರಣೆ ೨೮೨
ಪ್ರತ್ಯಾಹಾರ ೪೪
ಪ್ರತಿಷ್ಠಾಕಲೆ ೩೧, ೩೮
ಪ್ರಯೋಜನ ನಾಡಿಗಳು ೩೯
ಪ್ರವೃತ್ತಿ ೧೪
ಪ್ರಸನ್ನದೀಕ್ಷೆ ೭೧
ಪ್ರಸಾದಕ್ಕೆ ಮಂತ್ರಸಂಬಂಧ ೧೬೨
ಪ್ರಸಾದ ತೃಪ್ತಿ ೮೩
ಪ್ರಸಾದನಿಷ್ಠೆ ೭೯
ಪ್ರಸಾದಪಂಚಾಕ್ಷರ ೨೩೧, ೨೫೨, ೨೬೮
ಪ್ರಸಾದಭೋಜನ ೧೫೮
ಪ್ರಸಾದ ಮಹಾತ್ಮ್ಯಸ್ಥಲ ೯೯
ಪ್ರಸಾದ ೧೪, ೧೫೧, ೧೫೨, ೧೫೩, ೧೬೩, ೧೬೪, ೧೬೫, ೧೬೬, ೧೬೭, ೩೪೧
ಪ್ರಸಾದಲಿಂಗ ೧೬, ೩೮, ೫೬, ೬೧, ೭೪, ೮೬, ೮೭, ೧೦೬, ೧೦೭
ಪ್ರಸಾದಾವಧಾನಿ ೮೦
ಪ್ರಸಾದಾಂಗ ೭೮
ಪ್ರಸಾದಿ ೮೬, ೧೪೪, ೧೬೮
ಪ್ರಸಾದಿಯ ಪ್ರಸಾದ ೧೬೨
ಪ್ರಸಾದಿಸ್ಥಲ ೫೧, ೫೩, ೫೬, ೬೫, ೮೦, ೯೯
ಪ್ರಸಾದೋದಕ ೧೪೦
ಪಾಣಿ ೪೫
ಪಾದೇಂದ್ರಿಯ ೨೮, ೪೫
ಪಾದೋದಕ ೧೩೮, ೧೪೦, ೧೪೧, ೧೫೩, ೧೬೪, ೧೬೫, ೧೬೬, ೧೬೭
ಪಾದೋದಕ ಲಿಂಗ ೧೦೬
ಪಾಯು ೨೮, ೪೮
ಪಾಶುಪತಾಸ್ತ್ರಮಂತ್ರ ೨೬೩
ಪ್ರಾಣಭಾಜನ ೧೯೪
ಪ್ರಾಣಮಯಕೋಶ ೩೬
ಪ್ರಾಣಲಿಂಗ ೧೬, ೩೮, ೪೨, ೪೯, ೫೦, ೫೯
ಪ್ರಾಣಲಿಂಗ ಪೂಜೆ ೩೫೫
ಪ್ರಾಣಲಿಂಗಾರ್ಚಕ ೬೭
ಪ್ರಾಣಲಿಂಗಾರ್ಚನೆಯಸ್ಥಳ ೧೦೦
ಪ್ರಾಣಲಿಂಗಾರ್ಪಣ ೧೪೩
ಪ್ರಾಣಲಿಂಗಾರ್ಪಿತ ೧೪೭, ೧೬೫
ಪ್ರಾಣಲಿಂಗಸ್ಥಲ ೫೧, ೫೩, ೫೬, ೬೬, ೧೦೦

ಪ್ರಾಣವಾಯು ೨೫, ೨೯, ೪೦, ೩೧೦
ಪ್ರಾಣಾನಂದ ೭೪
ಪ್ರಾಣಾನುಗ್ರಹ ೧೦೫
ಪ್ರಾಣಾಯಾಮ ೪೪
ಪ್ರಾಣೇ ೪೬
ಪಿಂಗಳ ೩೯
ಪಿಂಡ ೩, ೯೭
ಪಿಂಡಜ ೬೨
ಪಿಂಡಬ್ರಹ್ಮ ೨೫
ಪಿಂಡಭಾಜನಸ್ಥಲ ೯೭
ಪಿಂಡಾಕಾಶ ೭೫, ೧೦೭
ಪುರಾಣಗಳು ೩೯೧
ಪುರುಷ ೧೮
ಪೂಜಾರಿಗಳು ೩೨೧
ಪೂರ್ವಾಶ್ರಯ ನಿರಸನಸ್ಥಲ ೯೮
ಪೂಷ ೩೯
ಪೃಥ್ವಿ ೨೭, ೪೮
ಪೃಥ್ವಿಯ ಪಂಚೀಕೃತಿ ೨೮
ಬಕಾರಪ್ರಣವ ೨೪, ೧೮೭
ಬಯಲಸಮಾಧಿ ೩೮೩
ಬಯಲು ೧, ೯೩
ಬಸವಾಕ್ಷರಗಳು ೧೯೦, ೨೦೪
ಬಹಿರಂಗಾರ್ಚನೆ ೩೫೪
ಬ್ರಹ್ಮ ೨೫, ೩೮
ಬ್ರಹ್ಮಚಕ್ರ ೩೮
ಬ್ರಹ್ಮರಂಧ್ರ ೩೯
ಬ್ರಹ್ಮಾಂಡ ೨
ಬ್ರಹ್ಮಾನಂದಬ್ರಹ್ಮ ೨೫
ಬಿಂದ್ವಾಕಾಶ ೭೫, ೧೦೭
ಬಿಂದು ೧೧, ೧೯, ೬೨, ೧೫೫
ಬಿಂಬಜ ೬೨
ಬೀಜಾಕ್ಷರಗಳು ೨೪, ೧೯೪, ೨೦೫, ೨೬೮
ಬೀಜಾಕ್ಷರಮಂತ್ರ ೨೫೩, ೨೫೪, ೨೬೭
ಬುದ್ಧಿ ೨೮, ೩೬, ೪೮, ೫೪, ೫೬
ಬುದ್ಧೀಂದ್ರಿಯ ೪೬, ೩೧೧
ಬೆಳಗು ೧೯, ೬೮
ಬೋಧಾದೀಕ್ಷೆ ೭೧
ಭಕ್ತ ೪೧, ೬೩, ೮೭, ೧೩೧, ೧೩೫, ೧೪೯, ೧೫೦, ೨೩೯, ೨೪೦
ಭಕ್ತದೇಹಿಕಲಿಂಗಸ್ಥಲ ೯೮
ಭಕ್ತನಿಗೆ ಮಂತ್ರಸಂಬಂಧ ೨೩೭
ಭಕ್ತಪ್ರಸಾದ ೧೫೦
ಭಕ್ತಮಹಾತ್ಮೆಸ್ಥಲ ೯೯
ಭಕ್ತಸ್ಥಲ ೫೧, ೫೩, ೫೬, ೭೮, ೯೭
ಭಕ್ತಿ ೧೩, ೫೪, ೭೭, ೮೫, ೩೨೬, ೩೮೮
ಭಕ್ತಿಸ್ಥಲ ೯೭
ಭರಿತಾರ್ಪಣ ೧೪೫
ಭಸ್ಮ ೧೬೩
ಭಸಿತ ೧೬೩
ಭಾಜನಸ್ಥಲ ೧೦೮
ಭಾವ ೫೬
ಭಾವಗಮ್ಯ ೭೫
ಭಾವನಿಸ್ಪತ್ತಿ ೧೦೭
ಭಾವಪ್ರಕಾಶ ೧೦೭
ಭಾವಲಿಂಗ ೧೬, ೩೮, ೪೨, ೪೯, ೫೦, ೫೯, ೮೩, ೧೦೩
ಭಾವಲಿಂಗಾರ್ಪಣ ೧೪೩
ಭಾವಲಿಂಗಾರ್ಪಿತ ೧೪೭, ೧೬೫
ಭಾವಲಿಂಗೈಕ್ಯ ೬೮
ಭಾವಾಗಮ ೧೦೪



ಭಾವಾಚಾರ ೧೦೪, ೧೧೦, ೧೧೯
ಭಾವಾನಂದ ೭೪
ಭಾವಾರ್ಪಣ ೧೪೩, ೧೫೪, ೧೬೦, ೩೧೭
ಭಾವಾರ್ಪಿತ ೧೦೫
ಭಾವಾಭಾವ ನಷ್ಟಸ್ಥಲ ೧೦೮, ೧೬೬
ಭಾಂಡಸ್ಥಲ ೧೦೮
ಭಿನ್ನಭೋಜನ ೧೫೮
ಭುವನಾಧ್ವ ೨೬
ಭೂತಿ ೧೭೩
ಭೃತ್ಯಾಚಾರ ೨೦, ೧೧೦, ೧೧೫
ಭೇದ್ಯ ೮೧
ಭೋಗಾಂಗ ೪೯
ಮಕಾರ ಪ್ರಣವ ೨೪, ೧೮೦, ೧೯೦
ಮಣಿಪೂರಕಚಕ್ರ ೩೮
ಮಧ್ಯಮೆ ೨೪೧
ಮನಭೋಜನ ೧೫೯
ಮನಸ್ಸು ೨೮, ೪೮, ೫೬
ಮನೋಮಗ್ನತೆ ೮೨
ಮನೋಮಯಕೋಶ ೩೩
ಮಹದಂಗ ೭೮
ಮಹದಾಕಾಶ ೭೫, ೧೦೭
ಮಹದಾನಂದ ೭೪
ಮಹದಾವಧಾನಿ ೮೦
ಮಹನ್ನಿಷ್ಠೆ ೭೯
ಮಹಾಘನಲಿಂಗ ೧೫೪
ಮಹಾತ್ಮ ೩೮
ಮಹಾನುಭಾವಿ ೮೧
ಮಹಾಪ್ರಸಾದಿ ೧೫೫
ಮಹಾಲಿಂಗ ೧೬, ೧೯, ೨೨, ೩೮, ೫೬, ೬೨, ೭೫, ೧೦೮, ೧೫೪
ಮಹಾಲಿಂಗೈಕ್ಯ ೩೪೭
ಮಹಾಶೂನ್ಯ ೨೦
ಮಹಾಸಾದಾಖ್ಯ ೨೩
ಮಹಾಜ್ಞಾನ ಜಂಗಮ ೧೨೯
ಮಹಾಜ್ಞಾನಲಿಂಗ ೧೨೮
ಮಹೇಶ್ವರ ೩೮
ಮಹೇಶ್ವರಸ್ಥಲ ೫೧, ೫೩, ೫೬, ೬೪, ೯೭, ೯೮
ಮಂತ್ರ ೭೦, ೧೭೮
ಮಂತ್ರದೀಕ್ಷೆ ೭೧, ೩೮೧
ಮಂತ್ರಸ್ಥಲ ೭೨
ಮಂತ್ರಾಧ್ವ ೨೬
ಮಾರ್ಗಕ್ರಿ ೮, ೭೩, ೩೧೮, ೩೧೯
ಮಾಟ ೪
ಮಾಯಾಖ್ಯ ಪಂಚಾಕ್ಷರಿ ೩೩೨, ೨೫೧, ೨೬೮
ಮಾಯೆ ೯
ಮಿಶ್ರಅಂಗಲಿಂಗಸಂಗ ೨೩೮
ಮಿಶ್ರಷಟ್‌ಸ್ಥಲಜಪ ೨೯೫
ಮಿಶ್ರಾರ್ಪಣ ೧೬೦, ೨೯೯
ಮೀರಿದಕ್ರಿ ೮, ೭೩, ೧೬೨, ೩೧೮
ಮೀರಿದಸ್ಥಲ ೧೬೨, ೩೨೦
ಮುಕ್ತಿ ೨೧
ಮುಖಗಳು ೩೩೯
ಮುದ್ರೆಗಳು ೪೩
ಮೂರ್ತಿಬ್ರಹ್ಮ ೨೫
ಮೂರ್ತಿಸಾದಾಖ್ಯ ೨೩
ಮೂಲಚಿತ್ತು ೧೧, ೧೯
ಮೂಲಪಂಚಾಕ್ಷರಮಂತ್ರ ೨೦೭, ೨೩೧, ೨೪೮, ೨೬೮
ಮೂಲಪ್ರಣವ ೩೩, ೨೦೨

ಮೂವತ್ತಾರು ಅಂಗಸ್ಥಲಗಳು ೭೭, ೮೮, ೮೫
ಮೂವತ್ತಾರು ತೆರದ ಕರಣಾರ್ಪಣಗಳು ೧೬೦
ಮೂವತ್ತೆರಡು ಕಲೆಗಳು ೧೮೯
ಮೋಹೀ ೮೬
ಮೋಕ್ಷ ೧೬, ೨೧
ಮಕಾರ ಪ್ರಣಮ ೧೪೦
ಯಜನ ೭೦
ಯಮಯೋಗ ೪೪
ಯೋಗ್ಯ ೮೧
ಯೋಗಾಂಗ ೪೯
ರಸ ೨೮, ೪೭
ರಕ್ಷೆ ೧೭೧
ರುಚಿ ೧೬೦
ರುದ್ರ ೨೫, ೩೮, ೨೭೩, ೨೭೪, ೨೭೫, ೨೭೬, ೨೭೭, ೨೭೮, ೨೭೯, ೩೯೮
ರುದ್ರಾಕ್ಷಿ ೧೭೪, ೧೭೫, ೧೭೬
ರುದ್ರಾಕ್ಷಿಸ್ಥಲ ೯೭
ರೂಪು ೨೮, ೪೭
ಲಕುಹ ೩೯
ಲಯಸ್ಥಲ ೭೨
ಲಕ್ಷಣಗಳು ೩೨, ೩೪೩
ಲಿಂಗ ೧೬, ೨೧, ೩೦, ೩೩, ೫೦, ೧೨೭, ೧೩೨, ೧೩೪, ೧೩೫, ೧೩೬, ೧೩೭, ೧೪೮, ೧೪೯, ೧೫೧, ೧೫೨, ೧೫೩, ೩೩೧
ಲಿಂಗಜಪ ೨೭೨, ೨೮೦, ೨೮೧, ೨೯೪
ಲಿಂಗತತ್ವಗಳು ೨೯
ಲಿಂಗತೃಪ್ತಿ ೮೩
ಲಿಂಗಧಾರಕ ಭಕ್ತ ೧೩೯, ೧೭೦, ೧೭೧
ಲಿಂಗಧಾರಣಸ್ಥಲ ೯೭
ಲಿಂಗನಿಜಸ್ಥಲ ೧೦೦
ಲಿಂಗನಿಷ್ಠಾಸ್ಥಲ ೯೮
ಲಿಂಗನಿಷ್ಠೆ ೭೯
ಲಿಂಗಪ್ರಸಾದ ೧೫೪, ೧೬೫
ಲಿಂಗಪಾದೋದಕ ೧೩೯, ೧೪೧
ಲಿಂಗಪ್ರಾಣಿ ೯೬
ಲಿಂಗಪೂಜೆ ೩೮, ೩೫೮, ೩೯೯
ಲಿಂಗಭಕ್ತ ೬೩
ಲಿಂಗಭೋಗೋಪಭೋಗ ೧೪೪
ಲಿಂಗಭೋಗೋಪಭೋಗಿ ೪೯
ಲಿಂಗಮಹಾತ್ಮ್ಯಸ್ಥಲ ೯೯
ಲಿಂಗಮಂತ್ರ ೨೬೦, ೨೬೧
ಲಿಂಗವೀರ ೬೪
ಲಿಂಗಷಡಕ್ಷರ ಮಂತ್ರ ೨೫೩, ೨೫೯
ಲಿಂಗಸನ್ನಿಹಿತ ೮೨, ೧೨೮
ಲಿಂಗಸ್ಥಲಗಳು ೯೬
ಲಿಂಗಸ್ವಾಯತ ೮೨, ೧೨೮
ಲಿಂಗಕ್ಷೇತ್ರ ಸಂಜ್ಞೆ ೩೧
ಲಿಂಗಾಚಾರ ೭೦, ೧೧೦, ೧೧೧
ಲಿಂಗಾನುಭಾವಿ ೬೩
ಲಿಂಗಾರ್ಪಣ ಜಪಗಳು ೨೮೩, ೨೮೪, ೨೮೫
ಲಿಂಗಾಯತ ೮೨, ೧೨೮
ಲಿಂಗಾವಧಾನಿ ೨೮೦
ಲಿಂಗಾಂಗಕೂಟ ೨೪೨
ಲಿಂಗಾಂಗಸಾಮರಸ್ಯ ೧೬, ೨೧, ೨೯, ೩೦, ೩೮
ಲೀಲೆ ೧೯



ಲೋಕಗಳು ೪೦೧
ವಕಾರಪ್ರಣಮ ೨೪, ೧೪೦, ೧೪೮
ವಚನಗಳು ೭
ವದನಾಕ್ಷರಮಂತ್ರ ೨೫೩, ೨೫೭
ವರ್ಣಗಳು ೩೮, ೧೬೦, ೩೨೯
ವರ್ಣಾಧ್ವ ೨೬
ವಾಕ್ ೪೫
ವಾಗದ್ವೈತನಿರಸನಸಲ ೯೮
ವಾಗ್ಜ ೧೪೩
ವಾಗಿಂದ್ರಿಯ ೨೮
ವಾಚ್ಯಪ್ರಣಮ ೧೪೩
ವಾಮದೇವಮುಖ ೨೫, ೨೫೭
ವಾಯು ೨೯, ೪೦, ೪೮
ವಾಯುಧಾರಣೆ ೩೭೯
ವಾಯುವಿನ ಪಂಚೀಕೃತಿ ೨೮
ವ್ಯಾನವಾಯು ೨೮, ೪೦
ವ್ಯಾಪಕಾಕ್ಷರಗಳು ೨೦೫
ವಿಕಲಾಕ್ಷರಗಳು ೨೦೫
ವಿಚಾರ ೫೪
ವಿದ್ಯಾಕಲೆ ೩೦, ೩೮
ವಿದ್ಯಾತತ್ವ ೨೯
ವಿನಯಜಲ ೧೩೯, ೧೬೬
ವಿಭೂತಿ ೧೬೯, ೧೭೦, ೧೭೧, ೧೭೨, ೧೭೩
ವಿಭೂತಿಸ್ಥಲ ೯೭
ವಿಶುದ್ಧಿಚಕ್ರ ೩೮
ವಿಷಯಗಳು ೨೯
ವಿಷ್ಣು ೨೫, ೩೮
ವಿಜ್ಞಾನಬ್ರಹ್ಮ ೨೫
ವಿಜ್ಞಾನಮಯಕೋಶ ೩೬
ವೀರ ೮೬
ವೇದಗಳು ೩೩೭
ವೇದ್ಯ ೮೧
ವೇಧಾ ೭೦
ವೇಧಾದೀಕ್ಷೆ ೭೧, ೩೭೧
ವೈಖರೀ ೨೪೧
ವ್ಯೋಮಾಸ್ತ್ರಮಂತ್ರ ೨೬೩
ಶಕ್ತಿ ೧, ೯, ೨೩, ೩೦, ೨೭೮ರಿಂದ ೨೮೯ ವರೆಗೆ ೩೨೭, ೩೪೯
ಶಕ್ತಿಪ್ರಣಮ ಮಂತ್ರಗಳು ೨೬೧
ಶಕ್ತಿಷಡಂಗಮಂತ್ರ ೨೫೩, ೨೫೮
ಶಂಕಿನೀ ೩೯
ಶತಮಂತ್ರಾಕ್ಷರಗಳು ೨೬೮
ಶ್ರದ್ಧಾಭಕ್ತಿ ೧೩, ೫೧, ೫೬
ಶಬ್ದ ೨೮, ೪೭
ಶಬ್ದ ಚತುಷ್ಟಯ ಸಂಬಂಧ ೨೪೧
ಶರಣ ೧೮, ೨೫, ೮೨
ಶರಣಮಹಾತ್ಮ್ಯಸ್ಥಲ ೯೯
ಶರಣಸ್ಥಲ ೫೧, ೫೩, ೫೬, ೬೭, ೧೧೧
ಶರೀರ ೩
ಶರೀರಸ್ಥ ೩೧
ಶಾಂತ್ಯತೀತಕಲೆ ೩೦, ೩೮
ಶಾಂತಿಕಲೆ ೩೦, ೩೮
ಶಾಂಭವಮುದ್ರೆ ೪೩
ಶಾಂಭವಯೋಗ ೮೨
ಶಿಕಾರಮಂತ್ರ ೧೪೦
ಶಿಖಾಚಕ್ರ ೩೮

ಶಿಖಾಮಂತ್ರ ೨೫೬
ಶಿರೋಮಂತ್ರ ೨೫೬
ಶಿವ ೧೮, ೨೫
ಶಿವಜಗನ್ಮಯಸ್ಥಲ ೯೮
ಶಿವಜಪ ೨೭೨
ಶಿವತತ್ವ ೧೮, ೨೯
ಶಿವಪ್ರಣವ ಮಂತ್ರಗಳು ೨೬೧
ಶಿವಯೋಗ ೩೮, ೪೪, ೩೫೧
ಶಿವಯೋಗ ಸಮಾಧಿಸ್ಥಲ ೧೦೦
ಶಿವಯೋಗಿ ೬೬
ಶಿವಲಿಂಗ ೧೬, ೩೮, ೫೬, ೫೯, ೭೨, ೮೬, ೮೭, ೧೦೩, ೧೦೫
ಶಿವಶಕ್ತಿರಹಿತ ಪ್ರಣವಮಂತ್ರಗಳು ೨೬೧
ಶಿವಸಾದಾಖ್ಯ ೨೩
ಶಿವಾಚಾರ ೭೦, ೧೧೦, ೧೧೩
ಶಿವಾದ್ವೈತಶರಣಪ್ರಕಾಶ ೩೪೬
ಶಿವಾನುಭವ ೭
ಶಿವಾನುಭವಿಗಳು ೭
ಶಿವಾಸ್ತ್ರಮಂತ್ರ ೨೬೩
ಶಿವಾಂಗ ೭೮
ಶಿವಾಂಗಮಂತ್ರ ೨೪೩, ೨೪೪
ಶಿವೈಕ್ಯ ೧೬
ಶಿಷ್ಯ ೧೦೫
ಶಿಕ್ಷಾ ೫೮
ಶಿಕ್ಷಾಗುರು ೧೦೩, ೧೨೪
ಶಿಕ್ಷಾಪಾದೋದಕ ೧೦೬, ೧೩೯
ಶಿಕ್ಷಾಭಸಿತ ೧೭೦, ೧೭೨
ಶೀಲಸಂಪಾದನೆಯ ಸ್ಥಲ ೧೦೧
ಶುದ್ಧ ಪ್ರಣವ ೧೭೯
ಶುದ್ಧ ಪ್ರಸಾದ ೬೧, ೧೪೩, ೧೫೪, ೧೬೨, ೧೬೬
ಶುದ್ಧ ಪ್ರಸಾದಪ್ರಣವ ೨೬೨
ಶುದ್ಧಾತ್ಮ ೩೮
ಶುಶ್ರೂಷಾ ೧೦೫
ಶೂನ್ಯ ೧, ೪೬, ೩೪೮
ಶೂನ್ಯಲಿಂಗ ೨೦, ೪೧
ಶೈವವಿಧಗಳು ೩೯೪
ಶ್ರೋತ್ರೇಂದ್ರಿಯ ೨೮, ೪೬, ೪೭, ೫೬
ಷಟ್ ಚಕ್ರಗಳು ೩೩
ಷಟ್ ತ್ರಿಂಶನ್ಮಂತ್ರಗಳು ೨೫೩
ಷಟ್ ಪ್ರಸಾದ ಮಂತ್ರಗಳು ೨೪೫, ೨೫೫
ಷಟ್ ಶಕ್ತಿಗಳು ೩೭
ಷಟ್ ಸಮ್ಮಾರ್ಜನೆ ೩೭೨
ಷಟ್ ಸ್ಥಲಗಳಿಗೆ ೧೦೧ ಸ್ಥಲಗಳ ಸಂಬಂಧ ೨೯೭
ಷಟ್ ಸ್ಥಲಗಳು ೧೭, ೩೮
ಷಟ್ ಸ್ಥಲ ಬ್ರಹ್ಮಮೂರ್ತಿಗಳು ೨೫
ಷಟ್ ಸ್ಥಲಶಾಸ್ತ್ರ ೯೦, ೯೧, ೯೨, ೯೩
ಷಟ್ ಸಾದಾಖ್ಯಲಿಂಗಗಳು ೨೪೪
ಷಡಕ್ಷರಮಂತ್ರ ೩೩, ೧೮೦, ೨೦೮, ೨೩೨, ೨೬೮
ಷಡಂಗನ್ಯಾಸಗಳು ೩೬೨, ೩೭೫, ೩೭೭
ಷಡಂಗಮಂತ್ರ ೨೫೬, ೨೫೭
ಷಡ್ಲಿಂಗಗಳಿಗೆ ಅರ್ಪಣ ೧೬೧
ಷಡ್ಲಿಂಗಗಳು ೧೬, ೩೩, ೪೧, ೫೬, ೧೨೮, ೧೩೦, ೧೪೪, ೧೬೦, ೧೬೫



ಷಡ್ಲಿಂಗ ಸಾಧನೆ ೮೬, ೮೭
ಷಡ್ವಿಧ ಐಕ್ಯ ೮೩
ಷಡ್ವಿಧ ಧಾತುಲಿಂಗ ೧೩೦, ೨೭೩
ಷಡ್ವಿಧ ಪ್ರಣವಗಳು ೨೦೩
ಷಡ್ವಿಧ ಪ್ರಸಾದಿ ೮೦
ಷಡ್ವಿಧ ಪ್ರಾಣಲಿಂಗಿ ೮೧
ಷಡ್ವಿಧ ಭಕ್ತ ೭೮
ಷಡ್ವಿಧ ಮಹೇಶ್ವರ ೭೯
ಷಡ್ವಿಧಲಿಂಗಜಪ ೨೯೩
ಷಡ್ವಿಧ ವ್ರತಗಳು ೧೦೯, ೩೫೨
ಷಡ್ವಿಧ ಶರಣ ೮೨
ಷಡ್ವಿಧ ಶೀಲಗಳು ೩೫೩
ಷಣ್ಮುಖಿ ಮುದ್ರೆ ೪೩
ಷೋಡಶ ಕರ್ಮಗಳು ೩೮೫
ಷೋಡಶ ಕಳಾಲಿಂಗ ೧೩೦, ೨೭೩
ಷೋಡಶೋಪಚಾರಗಳು ೩೬೦
ಸಕಾಯ ೧೦೪
ಸಕಾರ ಪ್ರಣವ ೨೪, ೧೮೮
ಸಕೀಲಗಳು ೯೫
ಸತ್ ೩೨
ಸತ್ಯಾಚಾರ ೧೧೦
ಸತ್ಯೋದಕ ೧೪೧
ಸದಾಚಾರ ೫೭, ೬೩, ೭೦, ೧೧೦, ೧೧೨
ಸದಾಶಿವ ೨೫, ೩೮
ಸದ್ಭಾವದ ನೆಲೆ ೩೦೫
ಸದ್ಭಾವ ಪ್ರಸಾದ ೧೬೨
ಸದ್ಭಾವ ಹಸ್ತ ೫೨, ೭೨
ಸದ್ಯೋಜಾತ ಮುಖ ೨೫, ೨೫೭
ಸನ್ನಿಹಿತ ೮೧, ೮೨
ಸಪ್ತಾಚಾರಗಳು ೧೧೦, ೧೧೬ ರಿಂದ ೧೨೩ ವರೆಗೆ
ಸಪ್ತೋದಕಗಳು ೩೬೩
ಸಮತಾಪ್ರಸಾದ ೧೬೨
ಸಮತೆಜಲ ೧೩೯, ೧೬೬
ಸಮಯ ಪ್ರಸಾದಿ ೧೫೭, ೧೬೬
ಸಮರಸ ೨೧
ಸಮರಸ ಭಕ್ತಿ ೧೩, ೫೧, ೫೬
ಸಮರಸ ಭಾವ ೨೧
ಸಮ್ಯಜ್ಞಾನ ೫೪
ಸಮಾಧಿ ಕ್ರಿಯೆ ೩೪೪
ಸಮಾಧಿಗಳು ೩೮೩
ಸಮಾಧಿ ಯೋಗ ೪೪
ಸಮಾನವಾಯು ೨೮, ೪೦
ಸರ್ವಗತ ನಿರಸನಸ್ಥಲ ೯೮
ಸರ್ವತತ್ವಾಶ್ರಯ ೭೫
ಸರ್ವಶೂನ್ಯ ೨೦, ೨೯
ಸರ್ವಶೂನ್ಯನಿರಾಲಂಬ ೧೦
ಸರ್ವಜ್ಞತಾ ೫೫
ಸರ್ವಾಂಗಲಿಂಗಿಸ್ಥಲ ೮೯, ೧೩೮
ಸರ್ವಾಚಾರಸಂಪತ್ತಿನಾಚರಣೆ ೭೦, ೧೧೦, ೧೨೩
ಸರ್ವಾಚಾರ ಸಂಪತ್ತುಸ್ಥಲ ೧೦೨, ೧೭೨
ಸರ್ವೇಶ್ವರ ೩೮
ಸಹಜಭಕ್ತ ೧೭೦, ೨೬೦
ಸಹಜ ಮಾಟಸ್ಥಲ ೯೭
ಸಹಭೋಜನಸ್ಥಲ ೧೦೨, ೧೫೮, ೧೫೯
ಸಹಸ್ರಶಿವಕಳಾಲಿಂಗ ೧೩೦

ಸಂಸಾರ ೧೧
ಸಂಸಾರಹೇಯಸ್ಥಲ ೯೭
ಸಂಜ್ಞೆಗಳು ೨೧, ೩೪೪
ಸ್ಥಲಗಳು ೧೭
ಸ್ಪರ್ಶನೆ ೨೮, ೪೭, ೧೭೦
ಸ್ಪರ್ಶನೋದಕ ೧೪೧
ಸ್ವತಂತ್ರತಾ ೫೫
ಸ್ವಪ್ನಾವಸ್ಥೆ ೪೧
ಸ್ವಯ ೬೦, ೭೩, ೧೦೩
ಸ್ವಯಚರಪರವರಿಯದಸ್ಥಲ ೧೦೮, ೧೬೬
ಸ್ವಯಪ್ರಸಾದಿ ೧೫೫
ಸ್ವರಾಕ್ಷರಗಳು ೨೦೫
ಸಾಗರಗಳು ೪೦
ಸಾದಾಖ್ಯಗಳು ೨೩, ೨೫, ೨೯, ೩೮, ೩೩೩
ಸಾಧ್ಯ ೮೧
ಸಾಮರಸ್ಯ ೨೩
ಸ್ಥಾವರಲಿಂಗ ೧೭
ಸ್ವಾಧಿಷ್ಠಾನ ಚಕ್ರ ೩೮
ಸ್ವಾಯತ್ತ
ಸಿದ್ಧ ೬೧, [illegible] ೫೪, ೧೬೨, ೧೬೬
ಸಿದ್ಧಪ್ರಸಾದ ಪ್ರಣವ ೨೬೨
ಸಿದ್ಧಿಮಂತ್ರಗಳು ೨೬೪
ಸುಚಿತ್ತದ ನೆಲೆ ೩೦೦
ಸುಚಿತ್ತಹಸ್ತ ೫೨
ಸುಬುದ್ಧಿಯ ನೆಲೆ ೩೦೧
ಸುಬುದ್ಧಿ ಹಸ್ತ ೫೨, ೬೨
ಸುಮನದ ನೆಲೆ ೩೦೩
ಸುಮನಹಸ್ತ ೫೨, ೬೨
ಸುರಾಳ ೧೮
ಸುಷುಪ್ತ್ಯಾವಸ್ಥೆ ೪೧
ಸುಷುಮ್ನಾನಾಡಿ ೩೯
ಸುಜ್ಞಾನದ ನೆಲೆ ೩೦೪
ಸುಜ್ಞಾನಭಕ್ತಿ ೧೩, ೫೧, ೫೭
ಸುಜ್ಞಾನಹಸ್ತ ೫೨, ೬೨
ಸೂತಕಗಳು ೩೯೩
ಸೂಕ್ಷ್ಮಪಂಚಾಕ್ಷರ ೨೩೧, ೨೪೯, ೨೬೮
ಸೂಕ್ಷ್ಮಶರೀರ ೫, ೧೨, ೪೯
ಸ್ಥೂಲಪಂಚಾಕ್ಷರ ೨೩೧, ೨೪೯, ೨೬೮
ಸ್ಥೂಲಶರೀರ ೫, ೧೨, ೩೪, ೪೯
ಸೇವ್ಯ ೧೦೫
ಸೇವ್ಯ ಪ್ರಸಾದಿ ೧೦೭, ೧೫೭

0051—9237